# ೧೦ ನೇ ತರಗತಿ ಪ್ರಥಮಭಾಷೆ ಕನ್ನಡ ಪ್ರಶ್ನೋತ್ತರ ಮತ್ತು ವ್ಯಾಕರಣ ಪ್ರಶ್ನೆಗಳು

## ಗದ್ಯ ಪಾಠ -ಶಬರಿ

-ಪು.ತಿ.ನ.

ಲೇಖಕರ ಪರಿಚಯ :ಪು.ತಿ.ನ. ಕಾವ್ಯನಾಮದಿಂದ ಪ್ರಸಿದ್ಧರಾಗಿರುವ ಪುರೋಹಿತ ತಿರುನಾರಾಯಣಯ್ಯಂಗಾರ್ಯ ನರಸಿಂಹಾಚಾರ್ಯ ಕ್ರಿ.ಶ.೧೯೦೫ ರಲ್ಲಿ ಮಂಡ್ಯ ಜಿಲ್ಲೆಯ ಮೇಲುಕೋಟೆಯಲ್ಲಿ ಜನಿಸಿದರು. ಇವರು ಅಹಲ್ಯೆ, ಶಬರಿ ವಿಕಟಕವಿವಿಜಯ,ಹಂಸದಮಯಂತಿಮತ್ತುಇತರರರೂಪಕಗಳು, ಹಣತೆ,ರಸಸರಸ್ವತಿ,ಗಣೇಶದರ್ಶನಶಾರದಯಾಮಿನಿ,ಶ್ರೀಹರಿಚರಿತೆ,ರಥಸಪ್ತಮಿ ಮೊದಲಾದ ಕೃತಿಗಳನ್ನುಬರೆದಿದ್ದಾರೆ.

ಇವರ ಹಂಸದಮಯಂತಿ ಮತ್ತು ಇತರ ರೂಪಕಗಳು ಕೃತಿಗೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ,ಶ್ರೀ ಹರಿಚರಿತೆ ಕಾವ್ಯಕೃತಿಗೆ ಪಂಪ ಪ್ರಶಸ್ತಿ ಲಭಿಸಿದೆ .ಮೈಸೂರು ವಿಶ್ವವಿದ್ಯಾಲಯ ಇವರಿಗೆ ಗೌರವ ಡಿ.ಲಿಟ್ ಪದವಿ ನೀಡಿ ಗೌರವಿಸಿದೆ.

ಒಂದೊಂದು ವಾಕ್ಯದಲ್ಲಿ ಉತ್ತರಿಸಿ.

೧. ಶ್ರೀರಾಮನ ತಂದೆಯ ಹೆಸರೇನು ?

ಶ್ರೀರಾಮನ ತಂದೆಯ ಹೆಸರು ದಶರಥ .

೨. ಲಕ್ಷ್ಮಣನ ತಾಯಿ ಯಾರು ?

ಲಕ್ಷ್ಮಣನ ತಾಯಿ ಸುಮಿತ್ರೆ

೩.ಮತಂಗಾಶ್ರಮದಲ್ಲಿ ವಾಸವಿದ್ದ ತಪಸ್ವಿನಿ ಯಾರು?

ಮತಂಗಾಶ್ರಮದಲ್ಲಿ ವಾಸವಿದ್ದ ತಪಸ್ವಿನಿ ಶಬರಿ.

೪.ರಾಮ ಲಕ್ಷ್ಮಣರಿಗೆ ಮತಂಗಾಶ್ರಮಕ್ಕೆಹೋಗಲು ಸೂಚಿಸಿದವರು ಯಾರು?

ರಾಮಲಕ್ಷ್ಮಣರಿಗೆ ಮತಂಗಾಶ್ರಮಕ್ಕೆಹೋಗಲು ಸೂಚಿಸಿದವರು ಧನು.

೫. ಶಬರಿ ಗೀತ ನಾಟಕದ ಕರ್ತೃ ಯಾರು ?

ಶಬರಿ ಗೀತ ನಾಟಕದ ಕರ್ತೃ ಪು.ತಿ.ನರಸಿಂಹಾಚಾರ್

mamatabhagwat1@gmail.com

ಮೂರು -ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿ.

೧.ರಾಮನು ಗಿರಿವನವನ್ನು ಏನೆಂದು ಪ್ರಾರ್ಥಿಸಿದನು ?

ದೊರೆವಳೇ ಸೀತೆ| ಭೂಮಿಜಾತೆ ಆತ್ಮಕಾಮಕಲ್ಪಲತೆ ದೊರೆವಳೇಚೆಲುವೆ ?ಎರೆವೆ ಎರೆವೆ ಗಿರಿವನವೇ, ಪೇಳಿರಿ ನಾನೆರೆವೆ ದೊರೆವಳೇ? ದೊರೆಯಳೇ ?ಅವಳ ನೆಲೆ ಯಾರು ಅರಿಯಿರೇ, ಪೇಳಿ ಎನ್ನರಸಿ ದೊರೆಯಳೇ ?ಈ ಬೇಗೆ ಕೆಡದಲಾ| ನನ್ನೆದೆಯ ಬಿಡದಲಾ ಈ ಜಗವ ಸುಡದಲಾ |ಹಾ !ಹಾ! ಹಾ! ಎಂದು ರಾಮನು ಗಿರಿವನವನ್ನುಪ್ರಾರ್ಥಿಸಿದನು .

೨.ಲಕ್ಷ್ಮಣನು ಅಣ್ಣನನ್ನು ಹೇಗೆ ಸಂತೈಸಿದನು ?

ತಾಳಿಕೋ ಅಣ್ಣ ತಾಳಿಕೋ |ಸೂರ್ಯನೇ ತೇಜಗೆಡೆ ತೇಜಕೆಡೆಯಾರು ?ರಾಮನೇ ಧೈರ್ಯಗೆಡೆ ಸ್ಥೈರ್ಯಕೆಡೆಯಾರು ? ಚಿತ್ರ ಕೂಟದಲ್ಲಿದ್ದ ಸಂದರ್ಭದಲ್ಲಿ ನಾನು ಆಕೆಯನ್ನು ಒಂಟಿಯಾಗಿ ಬಿಟ್ಟು ಹೋಗಿದ್ದರಿಂದ ಈ ಗತಿ ಒದಗಿತು. ನಾನು ಹಾಗೆ ಮಾಡಬಾರದಾಗಿತ್ತು ಎಂದು ಹೇಳುತ್ತ ಲಕ್ಷ್ಮಣನು ರಾಮನನ್ನು ಸಂತೈಸಿದನು.

೩.ರಾಮನ ಸ್ವಾಗತಕ್ಕಾಗಿ ಶಬರಿ ಮಾಡಿಕೊಂಡಿದ್ದ ಸಿದ್ಧತೆಗಳೇನು ?

ಶಬರಿ ಪ್ರತಿದಿನವೂ ರಾಮ ಬರುವನೆಂದು ಅವನಿಗಾಗಿ ಒಳ್ಳೆಯ ಸಿಹಿಯಾದ ಹಣ್ಣುಗಳನ್ನು ಆಯ್ದು ತರುವಳು.ಒಳ್ಳೆಯ ಸುವಾಸನೆಭರಿತ ಹೂವುಗಳನ್ನು ಹುಡುಕಿ ತಂದು ರಾಮನಿಗಾಗಿ ಮಾಲೆಯನ್ನು ಸಿದ್ಧಪಡಿಸುವಳು. ಮಧುಪರ್ಕವನ್ನು ರಾಮನಿಗಾಗಿ ಅಣಿಗೊಳಿಸುವಳು. ರಾಮನಿಗೆ ಅರ್ಪಿಸಲು ಅಣಿಗೊಳಿಸಿದ ಹೂ ಹಣ್ಣುಗಳು ಅವನಿಗೆ ಅರ್ಪಿಸಲಾಗದೇ ವ್ಯರ್ಥವಾದುದರ ಕುರಿತು ಚಿಂತಿಸುತ್ತ ಮತ್ತೆ ಅವನಿಗೆ ಅರ್ಪಿಸಲು ಪ್ರತಿದಿನವೂ ಹೊಸತನ್ನು ಆಯ್ದುತರುವಳು.ರಾತ್ರಿಯ ಕತ್ತಲನ್ನು ಹೋಗಲಾಡಿಸುವ ಚಂದ್ರನೇ ರಾಮಾ ಬಾ ,ನೀನು ಬಂದು ಈಹಣ್ಣುಗಳನ್ನು ಸೇವಿಸದೇ ನನಗೇನೂ ಸೇರದು ಎಂದು ರಾಮನ ಸ್ವಾಗತಕ್ಕಾಗಿ ಕಾಯುವಳು.

೪.ಶಬರಿಯು ರಾಮಲಕ್ಷ್ಮಣರನ್ನು ಉಪಚರಿಸಿದ ರೀತಿಯನ್ನು ವಿವರಿಸಿ.

ರಾಮಲಕ್ಷ್ಮಣರನ್ನು ನೋಡಿದ ಶಬರಿಯು ಕ್ಷಣಹೊತ್ತು ಬೆರಗಾದಳು.ಬೆರಗು ಕಳೆದ ಬಳಿಕ ಅವನ ಸನಿಹ ಹೋಗಿ ಮೈಯನ್ನು ಸ್ಪರ್ಷಿಸಿ ,ಪಾದಕ್ಕೆರಗಿ ಕೈಯನ್ನು ಕಣ್ಣಿಗೊತ್ತಿಕೊಂಡು ಕಂಬನಿಗರೆದಳು.ಬನ್ನಿರಿ ಎಂದು ಗದ್ಗದಿಸುತ್ತ ಅವನನ್ನು ಉಪಚರಿಸಲು ಅವಳು ಮಾಡಿದ ಸಿದ್ಧತೆ ಸಾಲದೆಂದು ಮರುಗಿದಳು.ಪರಿಮಳವನ್ನು ಸೂಸುವ ವಿವಿಧ ಹೂವುಗಳಿಂದ ಕಟ್ಟಲಾದ ವನಮಾಲೆಯನ್ನು ಕೊರಳಿಗಿಟ್ಟು ಹಿಗ್ಗಿದಳು.ತಾನು ರಾಮನಿಗೆಂದು ತಂದಿರುವ ಹಣ್ಣಿನಷ್ಟು ರುಚಿಯಾದ ಹಣ್ಣು ಈ

ಜಗದಲ್ಲಿಯೇ ಇಲ್ಲವೆಂದು ,ನಿಮಗಾಗಿಯೇ ಇದನ್ನು ತಂದಿರುವೆನೆಂದು ಅವರಿಗಿತ್ತು ಉಪಚರಿಸುವಳು.
೫.ಆತಿಥ್ಯ ಸ್ವೀಕರಿಸಿದ ರಾಮಲಕ್ಷ್ಮಣರು ಶಬರಿಗೆ ಏನು ಹೇಳಿದರು ?
ನಿನ್ನ ಆದರಾತಿಥ್ಯದಿಂದ ನಾವು ಸಂತೃಪ್ತರು.ನಿನ್ನ ಸುಖದಲ್ಲಿಯೇ ನಾವು ಸುಖಿಗಳು.ಈ ಕಾಡಿನಲ್ಲಿಯೇ ಜೀವನದ ಸಂತೃಪ್ತಿ ಕಾಣುವ ನಿನ್ನ ಪುಣ್ಯಕ್ಕೆ ನಾವೂ ನಿನಗೆ ಋಣಿಗಳಾಗಿದ್ದೇವೆ ಎಂದು ತಮ್ಮನ್ನು ಉಪಚರಿಸಿದ ಶಬರಿಗೆ ರಾಮನು ನುಡಿದಾಗ ಈ ಬಡವಿಯ ಬಗ್ಗೆ ಮರುಕವೇ ಎಂದು ಶಬರಿ ಪ್ರಶ್ನಿಸುವಳು.ಆಗ ರಾಮನು ನಿನ್ನ ಸೇವೆಯಲ್ಲಿ ಸ್ವಲ್ಪವೂ ಕೊರತೆಯಿಲ್ಲ.ಅಯೋಧ್ಯೆಯ ಅರಮನೆಯಲ್ಲಿ ಪಡೆದದ್ದಕ್ಕಿಂತ ಹೆಚ್ಚಿನ ಸತ್ಕಾರ ನಿನ್ನಿಂದ ದೊರೆಯಿತು.ಇದರಿಂದ ನಾವು ಕಾಡನ್ನೇ ಮರೆತು ಇದೇ ಮನೆಯೆಂದು ತಿಳಿದು ಇಷ್ಟು ಆದರ ಪ್ರೀತಿ ತೋರಿದ ನಿನ್ನಲ್ಲೇ ಮಾತೃಸ್ವರೂಪವನ್ನು ನೋಡಿದೆವು ಎಂದು ಹೇಳಿದನು.

ಎಂಟು ಹತ್ತು ವಾಕ್ಯಗಳಲ್ಲಿ ಉತ್ತರಿಸಿ.
೧.ಶಬರಿಯ ಚಿಂತೆ ಹಿಂಗಿಹೋದ ಸಂದರ್ಭದ ಸ್ವಾರಸ್ಯವನ್ನು ವಿವರಿಸಿ.
ಮತಂಗ ಮಹರ್ಷಿಗಳಿಂದ ರಾಮನ ದರ್ಶನದಿಂದಲೇ ಮೋಕ್ಷಸಿದ್ಧಿ ಎಂಬ ವರವನ್ನು ಪಡೆದಿದ್ದ ಶಬರಿ ರಾಮನ ಬರುವಿಕೆಗಾಗಿ ಕಾದಿದ್ದಳು.ಶಬರಿಯ ಎಷ್ಟೋ ವರ್ಷಗಳ ಕಾಯುವಿಕೆಯ ತಪಸ್ಸು ಕೊನೆಗೂ ಈಡೇರುವಂತೆ ರಾಮನ ದರ್ಶನದ ದಿನ ಸಮೀಪಿಸಿತು.ರಾಮ ಬರುವನೆಂದು ಶಬರಿ ಹೂ ಹಣ್ಣುಗಳನ್ನು ತಂದು ದಿನವೂ ಕಾಯುತ್ತಿದ್ದಳು.ಅಂತೂ ಶಬರಿಯ ಆಸೆ ಪೂರೈಸಲೋ ಎಂಬಂತೆ ಸೀತೆಯನ್ನರಸುತ್ತ ರಾಮ ಲಕ್ಷ್ಮಣ ಸಮೇತನಾಗಿ ಮತಂಗಾಶ್ರಮಕ್ಕೆ ಬಂದನು.ಅಲ್ಲಿ ತನಗಾಗಿ ಕಾದಿದ್ದ ಶಬರಿಯು ನೀಡಿದ ಹೂ ಹಣ್ಣುಗಳ ಸೇವೆ ಉಪಚಾರದಿಂದ ರಾಮ ಸಂತಸಭರಿತನಾದನು..ರಾಮನ ದರ್ಶನದಿಂದ ಶಬರಿಗೆ ಪರಮಾನಂದವಾಯಿತು.ನಾನು ಸುಖಿ ಪರಮ ಸುಖಿ ,ಇಂದೆನಗೆ ಬಲು ಸಂತಸವಾಗಿದೆ ಎಂದು ಹಿಗ್ಗಿಹಾಡುವಳು .ರಾಮನ ದಿವ್ಯದರ್ಶನ , ವಿನಯಾದರ ತುಂಬಿದ ಮಾತುಗಳನ್ನು ಕೇಳಿ ಶಬರಿ ತಾನು ಧನ್ಯಳಾದೆನೆಂದು,ರಾಮನ ದರ್ಶನದ ಪುಣ್ಯ ಲಭಿಸಿ ತನ್ನ ಚಿಂತೆಯೆಲ್ಲ ಇಂಗಿ ಹೋಯಿತೆಂದು ಧನ್ಯತಾಭಾವವನ್ನು ತಾಳಿದಳು.
೨. ಶಬರಿಯ ಸಡಗರ , ಸಂತೋಷವು ಮೇಳದವರ ಹಾಡಿನಲ್ಲಿ ಹೇಗೆ ವರ್ಣಿತವಾಗಿದೆ ?
ಸೀತೆಯನ್ನರಸುತ್ತ ರಾಮಲಕ್ಷ್ಮಣರು ಮತಂಗಾಶ್ರಮದ ಬಳಿ ಶಬರಿಯಿರುವಲ್ಲಿಗೆ ಬರುತ್ತಾರೆ.ರಾಮ ಬಂದು ಎದುರಿಗೆ ನಿಂತಿರುವುದನ್ನು ನೋಡಿದ ಶಬರಿ ಬೆರಗಾದಳು.ಬಳಿಕ ಸಾವರಿಸಿಕೊಂಡು ಅವನ ಸನಿಹಬಂದು ಅವನ ಮೈಯನ್ನು ಸ್ಪರ್ಷಿಸಿದಳು.ಅವನ ಕಾಲಿಗೆ ಬಿದ್ದು ನಮಸ್ಕರಿಸಿದಳು.ರಾಮನ

ಕೈಗಳನ್ನು ಕಣ್ಣಿಗೊತ್ತಿಕೊಂಡು ಕಣ್ಣೀರು ಸುರಿಸಿದಳು .ಬನ್ನಿರಿ ಎಂದು ಗದ್ಗದಿಸುತ್ತ ಒಳಕರೆದು ಆದರಿಸಿದಳು.ಅಯ್ಯೋ,ಏನೂ ಸಿದ್ಧತೆಯೇ ಇಲ್ಲ ,ನಿನ್ನೆಯಷ್ಟು ಚೆನ್ನಾಗಿರುವ ಹೂ ಹಣ್ಣುಗಳು ದೊರೆತೇ ಇಲ್ಲ ಎಂದು ತಳಮಳಿಸಿದಳು.ತನ್ನ ಮನದ ಬಯಕೆಯಂತೆ ಸುಮಧುರ ಪರಿಮಳ ಬೀರುವ ಹೂಗಳ ಮಾಲೆಯನ್ನು ರಾಮನ ಕೊರಳಿಗೆ ಹಾಕಿ ನಲಿದಳು.ಇಷ್ಟು ರುಚಿಯಾಗಿರುವ ಹಣ್ಣು ಜಗತ್ತಿನಲ್ಲಿಯೇ ಇಲ್ಲ ಎಂದು ನಿಮಗೋಸ್ಕರವಾಗಿಯೇ ತಂದೆನೆಂದು ಅವರ ಕೈಯೋಳಗಿತ್ತು ಆದರಿಸಿದಳು.ರಾಮ ಲಕ್ಷ್ಮಣರು ಶಬರಿಯ ಆತಿಥ್ಯದಿಂದ ಸಂತೃಪ್ತರಾದಾಗ ಅವಳಲ್ಲಿ ಧನ್ಯತಾಭಾವ ಮೂಡುವುದು.

೩. ನಂಬಿ ಕೆಟ್ಟವರಿಲ್ಲ ಎಂಬ ಮಾತು ಶಬರಿಯ ಪಾಲಿಗೆ ಹೇಗೆ ನಿಜವಾಗಿದೆ ?

ಮತಂಗರ ಆಶ್ರಮದಲ್ಲಿದ್ದ ಶಬರಿಯು ನಿಷ್ಠೆಯಿಂದ ಅವರಿಗೆ ಸಲ್ಲಿಸಿದ ಸೇವೆಯ ಫಲವಾಗಿ,ಶ್ರೀರಾಮನ ದರ್ಶನದಿಂದ ಅವಳಿಗೆ ಮುಕ್ತಿ ಎಂಬ ವರವನ್ನು ಅವರಿಂದ ಪಡೆದಿದ್ದಳು.ಶ್ರೀರಾಮನ ಗುಣ ಸ್ವಭಾವಗಳ ಸೆಳೆತಕ್ಕೆಸಿಕ್ಕಿ ಅವನನ್ನುಕಾಣುವುದೇ ಜೀವನದ ಏಕೈಕ ಗುರಿ ಎಂದು ಭಾವಿಸಿದ್ದ ಅಸಂಖ್ಯಾತ ಭಕ್ತರಲ್ಲಿ ಇವಳೂ ಒಬ್ಬಳಾಗಿದ್ದಳು.ಮತಂಗರು ದಿವ್ಯ ಲೋಕವನ್ನು ಸೇರಿದ ಬಳಿಕ ರಾಮಧ್ಯಾನದಲ್ಲಿ ತೊಡಗಿ ರಾಮನ ದರ್ಶನಕ್ಕಾಗಿ ಕಾದಿದ್ದಳು.ಪ್ರತಿದಿನವೂ ಹೊಸ ಹೂ ಹಣ್ಣುಗಳನ್ನು ತಂದು ರಾಮನು ಬಂದಾಗ ಅವನಿಗೆ ಅರ್ಪಿಸಬೇಕೆಂದು ಕಾಯುತ್ತಿದ್ದಳು.ರಾಮ ಬಾರದೇ ತನಗೇನೂ ತೋರದೆಂದು ,ಅವನು ಸವಿದಲ್ಲದೇ ಈ ಹಣ್ಣುಗಳು ಸವಿಯಾಗದೆಂದು ಪರಿತಪಿಸುತ್ತಿದ್ದಳು.ಸೀತಾಪಹರಣದ ನಂತರ ಶೋಕತಪ್ತರಾದ ರಾಮಲಕ್ಷ್ಮಣರು ಸೀತೆಯನ್ನು ಹುಡುಕುತ್ತಿರುವಾಗ ತಪಸ್ವಿಗಳಾದ ಧನು ಎಂಬುವರ ಸೂಚನೆಯಂತೆ ಮತಂಗಾಶ್ರಮವನ್ನು ಪ್ರವೇಶಿಸುತ್ತಾರೆ.ಅಲ್ಲಿ ಶ್ರೀರಾಮನ ಬರುವಿಕೆಗಾಗಿ ಕಾದು ಕಾದು ಕಾತರಿಸಿ ಮುಪ್ಪಾಗಿ ಭಕ್ತಿಯೇ ರೂಪುಗೊಂಡಂತಿದ್ದ ಶಬರಿಯನ್ನು ದರ್ಶಿಸುತ್ತಾರೆ.ತನ್ನ ಆರಾಧ್ಯ ದೈವ ಶ್ರೀರಾಮನನ್ನು ಕಂಡು ಆನಂದಿಸಿ ಧನ್ಯತೆಯ ಭಾವನೆಯಿಂದ ಮುಕ್ತಿಯನ್ನು ಬಯಸಿದ ಶಬರಿಗೆ ಶ್ರೀರಾಮನು ಮುಕ್ತಿಯನ್ನು ಕರುಣಿಸುವನು.ಹೀಗೆ ನಂಬಿ ಕೆಟ್ಟವರಿಲ್ಲ ಎಂಬ ಮಾತು ಶಬರಿಯ ಪಾಲಿಗೆ ನಿಜವಾಗಿ ಪರಿಣಮಿಸಿತು.

ಸಂದರ್ಭದೊಡನೆ ಸ್ವಾರಸ್ಯವನ್ನು ಬರೆಯಿರಿ.

೧. ಆವುದೀ ಮರುಳು ? ನಮ್ಮೆಡೆಗೆ ಬರುತಿಹುದು.

ಈ ಮೇಲಿನ ವಾಕ್ಯವನ್ನು ಪು.ತಿ.ನರಸಿಂಹಾಚಾರರು ಬರೆದಿರುವ 'ಶಬರಿ' ಎನ್ನುವ ಗದ್ಯಪಾಠದಿಂದ ಆಯ್ದುಕೊಳ್ಳಲಾಗಿದೆ.ಈ ಮಾತನ್ನು ಶಬರಿಯನ್ನು ನೋಡಿದ ಲಕ್ಷ್ಮಣನು ರಾಮನಿಗೆ ಹೇಳಿದನು.

ಸಂದರ್ಭ: ಮತಂಗಾಶ್ರಮದಲ್ಲಿ ರಾಮನ ದರ್ಶನಕ್ಕಾಗಿ ಶಬರಿ ಕಾಯುತ್ತಿರುತ್ತಾಳೆ.ಅದೇ

ಸಂದರ್ಭದಲ್ಲಿಯೇ ಸೀತೆಯನ್ನು ಕಳೆದುಕೊಂಡಿದ್ದ ರಾಮನು ಲಕ್ಷ್ಮಣನೊಂದಿಗೆ ಅವಳನ್ನು ಅರಸುತ್ತ ಆ ಆಶ್ರಮದ ಸಮೀಪಕ್ಕೆ ಬರುತ್ತಾನೆ. ರಾಮನು ಸೀತೆಗಾಗಿ ಹಂಬಲಿಸುತ್ತ ಶೋಕಿಸುತ್ತಿರುವಾಗ ಲಕ್ಷ್ಮಣನು ಅವನನ್ನು ಸಮಾಧಾನಿಸುವನು .ತನ್ನಿಂದಲೇ ಸೀತೆಗೆ ಈ ದುರ್ಗತಿ ಬಂತೆಂದೂ ತಾನೂ ದುಃಖಿಸುವನು.ಆಗ ರಾಮನು ಅವನನ್ನು ಸಮೀಪಿಸುತ್ತ ಧನು ಹೇಳಿದ ದಾರಿಯಲ್ಲಿಯೇ ನಾವು ಬಂದಿರುವೆವೋ ಇಲ್ಲವೋ ,ಇದು ಶ್ರಮಣಿಯಾಶ್ರಮವೇ ಎಂದು ಆಲೋಚಿಸುತ್ತಿರುವಾಗ ತಮ್ಮೆಡೆಗೆ ಬರುತ್ತಿರುವ ಶಬರಿಯನ್ನು ನೋಡಿ ಮೇಲಿನಂತೆ ಹೇಳುವನು.

ಶಬರಿಯು ಕೇವಲ ರಾಮನ ಹಂಬಲದಲ್ಲಿ ಪರಿತಪಿಸುತ್ತಿರುವ ಅವಳ ಸ್ಥಿತಿಯನ್ನು ದೂರದಿಂದ ಗಮನಿಸಿದ ರಾಮನ ಕೂತೂಹಲದ ಪ್ರಶ್ನೆ ಇದಾಗಿದೆ.

೨. ನಾಚುತಿಹೆನೀ ಪೂಜ್ಯೆಯಿೀ ನಲುಮೆಯಿಂದ .

ಈ ಮೇಲಿನ ವಾಕ್ಯವನ್ನು ಪು.ತಿ.ನರಸಿಂಹಾಚಾರರು ಬರೆದಿರುವ 'ಶಬರಿ' ಎನ್ನುವ ಗಧ್ಯಪಾಠದಿಂದ ಆಯ್ದುಕೊಳ್ಳಲಾಗಿದೆ.ಈ ಮಾತನ್ನು ಶಬರಿಯನ್ನುನೋಡಿದ ಲಕ್ಷ್ಮಣನು ರಾಮನಿಗೆ ಹೇಳಿದನು.

ಸಂದರ್ಭ: ಮತಂಗಾಶ್ರಮದಲ್ಲಿ ಶಬರಿ ರಾಮನ ಆಗಮನಕ್ಕಾಗಿ ಕಾಯುತ್ತಿರುತ್ತಾಳೆ. ಹೂಹಣ್ಣು ಹಂಪಲುಗಳನ್ನು ತಂದು ರಾಮನನ್ನು ಸತ್ಕರಿಸಬೇಕೆಂಬ ಅಪೇಕ್ಷೆಯಲ್ಲಿ ಶಬರಿ ಕಾತರಿಸುತ್ತಿದ್ದ ಸಂದರ್ಭದಲ್ಲಿಯೇ ಧನುವಿನ ಹೇಳಿಕೆಯಂತೆ ಸೀತೆಯನ್ನು ಅರಸುತ್ತ ರಾಮಲಕ್ಷ್ಮಣರು ಆಶ್ರಮದ ಸಮೀಪ ಬರುತ್ತಾರೆ .ಶಬರಿ ರಾಮನನ್ನು ಉಪಚರಿಸುವ ಉತ್ಸುಕತೆಯಿಂದ ಕಾದಿರುವುದನ್ನು ನೋಡಿ ರಾಮನು ಲಕ್ಷ್ಮಣನಿಗೆ ದನುವು ಹೇಳಿದ ಶಬರಿ ಇವಳೇ ಇರಬಹುದೆಂದು ಈಕೆಗೆ ನನ್ನಿಂದ ಯಾವುದೇ ಉಪಕಾರವಿಲ್ಲದಿದ್ದರೂ ನನ್ನನ್ನು ನೆನೆಯುತಿಹಳೆಂದು ,ಇವಳ ಪ್ರೀತಿಗೆ ನಾಚುತಿಹೆನೆಂದು ಮೇಲಿನಂತೆ ನುಡಿಯುತ್ತಾನೆ.

ಸ್ವಾರಸ್ಯ : ವೃದ್ಧಾಪ್ಯದ ಉತ್ತುಂಗ ಸ್ಥಿತಿಯಲ್ಲಿದ್ದರೂ ,ಕಾಡಿನ ಮಧ್ಯೆ ರಾಮಲಕ್ಷ್ಮಣರನ್ನು ಉಪಚರಿಸಿದ ಶಬರಿಯ ಭಕ್ತಿಭಾವ ನೋಡಿ ಸಂಕೋಚ ತಾಳುವ ರಾಮನ ಮನಸ್ಥಿತಿ ಇಲ್ಲಿ ವ್ಯಕ್ತವಾಗಿದೆ.

೩. ತಾಯಿ,ದಾರಿಗರಿಗೆ ಬೀಡಿಲ್ಲಿ ದೊರೆಯುವುದೇ ?

ಈ ಮೇಲಿನ ವಾಕ್ಯವನ್ನು ಪು.ತಿ.ನರಸಿಂಹಾಚಾರರು ಬರೆದಿರುವ 'ಶಬರಿ' ಎನ್ನುವ ಗಧ್ಯಪಾಠದಿಂದ ಆಯ್ದುಕೊಳ್ಳಲಾಗಿದೆ.ಈ ಮಾತನ್ನು ಶಬರಿಯನ್ನು ನೋಡಿದ ಲಕ್ಷ್ಮಣನು ರಾಮನಿಗೆ ಹೇಳಿದನು.

ಸಂದರ್ಭ : ಮತಂಗಋಷಿಯ ಆಶ್ರಮದಲ್ಲಿ ರಾಮನ ದರ್ಶನಕ್ಕಾಗಿ ಹಂಬಲಿಸುತ್ತ ಶಬರಿ ರಾಮನಿಗೆ ಕೊಡಲು ತಂದಿರಿಸಿದ ಹೂ ಹಣ್ಣುಗಳು ಅವನನ್ನು ತಲುಪದೇ ಹೋದುದಕ್ಕೆ ಬೇಸರಿಸುತ್ತ ಪುನಃಪುನಃ

ಹೊಸತನ್ನು ಆರಿಸಿ ತಂದು ರಾಮನಿಗೆ ಕೊಡಲು ಕಾತರಿಸುತ್ತಿರುತ್ತಾಳೆ.ರಾಮನ ಗುಣಗಾನ ಮಾಡುತ್ತ ಅವನಿಗಾಗಿ ಕಟ್ಟಿದ್ದ ಮಾಲೆಗೆ ಮುದ್ದಿಕ್ಕುತ್ತಿದ್ದ ಸಂದರ್ಭದಲ್ಲಿ ಅಲ್ಲಿಗೆ ಆಗಮಿಸಿದ ರಾಮನು ಶಬರಿಯನ್ನು ಕುರಿತು ಮೇಲಿನಂತೆ ಪ್ರಶ್ನಿಸುವನು.

ಸ್ವಾರಸ್ಯ : ರಾಮನ ವಿನಯದಿಂದ ಕೂಡಿದ ನಡುವಳಿಕೆ ಈ ವಾಕ್ಯದಲ್ಲಿ ಮೂಡಿರುವುದನ್ನು ಗಮನಿಸಬಹುದು.

೪. ರೂಪಿನಂತೆ ಮಾತು ಕೂಡ ಎನಿತುದಾರವಾಗಿದೆ.

ಈ ಮೇಲಿನ ವಾಕ್ಯವನ್ನು ಪು.ತಿ.ನರಸಿಂಹಾಚಾರರು ಬರೆದಿರುವ 'ಶಬರಿ' ಎನ್ನುವ ಗದ್ಯಪಾಠದಿಂದ ಆಯ್ದುಕೊಳ್ಳಲಾಗಿದೆ.ಈ ಮಾತನ್ನು ಶಬರಿ ರಾಮನ ಕುರಿತು ಹೇಳಿದ್ದಾಳೆ.

ಸಂದರ್ಭ:ತನ್ನ ಆಶ್ರಮಕ್ಕೆ ಆಗಮಿಸಿದ ರಾಮಲಕ್ಷ್ಮಣರನ್ನು ಅತ್ಯಾದರದಿಂದ ಬರಮಾಡಿಕೊಂಡ ಶಬರಿಯು ಹೂಹಣ್ಣುಗಳನ್ನಿತ್ತು ಉಪಚರಿಸಿದಳು. ಅವಳ ಉಪಚಾರದಿಂದ ರಾಜಕುಮಾರರು ಪ್ರಸನ್ನರಾದರು.ಆಗ ಶಬರಿಯು ತನ್ನ ಎಷ್ಟೋ ವರ್ಷಗಳ ತಪಸ್ಸು ಫಲಿಸಿತು .ರಾಮನ ದರ್ಶನದಿಂದ ತಾನು ಸುಖಿಯಾದೆನು ಎಂದು ಹಾಡುವಳು.ರಾಮನು ನಿನ್ನ ಪ್ರೀತಿಗೆ ನಾವು ಋಣಿಯಾಗಿದ್ದೇವೆ.ಅಯೋಧ್ಯೆಯ ಅರಮನೆಯಲ್ಲಿ ಸಿಗುವ ಆದರಕ್ಕಿಂತಲೂ ಮಿಗಿಲಾದ ಆದರ ಇಲ್ಲಿ ಸಿಕ್ಕಿತು , ನಿನ್ನಲ್ಲೇ ತಾಯಿಯನ್ನು ಕಾಣುತ್ತಿದ್ದೇವೆ ಎಂದಾಗ ಶಬರಿ ರಾಮನ ಭವ್ಯ ವ್ಯಕ್ತಿತ್ವವನ್ನು ಮೇಲಿನಂತೆ ಕೊಂಡಾಡುವಳು.

ಸ್ವಾರಸ್ಯ : ಬಾಹ್ಯ ಮತ್ತು ಅಂತರಂಗದ ಸೊಬಗು ರಾಮನಲ್ಲಿ ಮೇಳೈಸಿತ್ತು ಎಂಬುದು ಶಬರಿಯ ಮಾತಿನಿಂದ ವ್ಯಕ್ತವಾಗುತ್ತದೆ.

೫. ಬೆಳಕಿಗೊಲಿದವರ್ ಉರಿವ ಬತ್ತಿಯ ಕರುಕ ಕಾಣರು .

ಈ ಮೇಲಿನ ವಾಕ್ಯವನ್ನು ಪು.ತಿ.ನರಸಿಂಹಾಚಾರರು ಬರೆದಿರುವ 'ಶಬರಿ' ಎನ್ನುವ ಗದ್ಯಪಾಠದಿಂದ ಆಯ್ದುಕೊಳ್ಳಲಾಗಿದೆ.ಈ ಮಾತನ್ನು ರಾಮನು ಶಬರಿಯನ್ನು ಕುರಿತು ಲಕ್ಷ್ಮಣನಿಗೆ ಹೇಳುವನು.

ರಾಮನ ದರ್ಶನಕ್ಕಾಗಿ ಕಾಯುತ್ತಿದ್ದ ಶಬರಿಯು ಅವನಿಂದ ಮೋಕ್ಷವನ್ನು ಪಡೆದು ಧನ್ಯಳಾದಳು.ಅವಳನ್ನು ಕುರಿತು ಲಕ್ಷ್ಮಣನು ಅವಳದು ಮಗುವಿನ ರೀತಿಯ ಪ್ರೀತಿ.ನಿನ್ನನ್ನು ನೋಡಿ ನಲಿಯುತ್ತ ಕೊನೆಗೆ ನಮ್ಮನ್ನೇ ಮರೆತಳುಎಂದು ರಾಮನಿಗೆ ಹೇಳಿದಾಗ ಬೆಳಕಿನ ನಿರೀಕ್ಷೆ ಇರುವವರಿಗೆ ಬತ್ತಿ ತಾನು ಉರಿದು ಕಪ್ಪಾಗಿ ಲೋಕಕ್ಕೆ ಬೆಳಕು ನೀಡುವುದು ಅರ್ಥವಾಗುವುದಿಲ್ಲ.ಆದರೆ ಬೆಳಕು ನೀಡುವವರು ಶಬರಿಯ ರೀತಿ ಇರುವರುಎಂದು ಹೇಳುವನು.

ಸ್ವಾರಸ್ಯ :ಶಬರಿಯ ಜೀವನವು ಉರಿವ ದೀಪದ ಹಾಗೆ,ಬೇರೆಯವರಿಗೆ ಉಪಕಾರ ಮಾಡುವುದರಲ್ಲಿಯೇ ತೃಪ್ತವಾಗುವುದು.ಆದರೆ ಸಾಮಾನ್ಯರು ಮಹಾತ್ಮರ ತ್ಯಾಗವನ್ನು ಗಮನಿಸಲಾರರು.ತಮಗೆ ದೊರೆತದ್ದನ್ನುಪಡೆದುಕೊಳ್ಳುವರಷ್ಟೇ,ದೀಪದ ಬೆಳಕನ್ನು ಪಡೆದುಕೊಳ್ಳುವವರು ಬತ್ತಿಯ ತ್ಯಾಗವನ್ನು ಅರಿಯಲಾರರುಎಂಬುದು ಮೇಲಿನ ವಾಕ್ಯದ ಸ್ವಾರಸ್ಯವಾಗಿದೆ.

ಹೊಂದಿಸಿ ಬರೆಯಿರಿ.

೧. ಮತಂಗ ಸೀತೆ

೨. ಪು.ತಿ.ನ. ಆಶ್ರಮ

೩. ದಶರಥ ಮೇಲುಕೋಟೆ

೪.ಚಿತ್ರ ಕೂಟ ಪರ್ವತ

೫.ಭೂಮಿಜಾತೆ ರಾಮ

ಅರಣ್ಯ

ಉತ್ತರ: ಮತಂಗ-ಆಶ್ರಮ, ಪು.ತಿ.ನ. -ಮೇಲುಕೋಟೆ, ದಶರಥ- ರಾಮ, ಚಿತ್ರ ಕೂಟ-ಪರ್ವತ, ಭೂಮಿಜಾತೆ- ಸೀತೆ

ವ್ಯಾಕರಣ ಪ್ರಶ್ನೆಗಳು

1.ಕೆಳಗೆ ಕೊಟ್ಟಿರುವ ಪ್ರಶ್ನೆಗಳಿಗೆ ನಾಲ್ಕು ಆಯ್ಕೆಗಳನ್ನು ನೀಡಲಾಗಿದೆ.ಅವುಗಳಲ್ಲಿ ಸರಿಯಾದ ಉತ್ತರವನ್ನು ಆರಿಸಿ ಬರೆಯಿರಿ.

೧. 'ಚೀರ 'ಪದದ ತದ್ಭವ ರೂಪವಿದು ____

ಎ) ಸೀರೆ ಬಿ) ಧೀರ ಸಿ)ಚೀರು ಡಿ) ಚಿರ

೨.'ಪಂಚ ಭೂತ' ಪದವು ಈ ಸಮಾಸದ ಉದಾಹರಣೆಯಾಗಿದೆ.

ಎ) ದ್ವಂದ್ವ ಸಮಾಸ ಬಿ)ದ್ವಿಗು ಸಮಾಸ ಸಿ)ಗಮಕ ಸಮಾಸ

೩.'ಭೂಮಿ 'ಪದದ ತದ್ಭವ ರೂಪವಿದು _

ಎ) ಬುವಿ ಬಿ)ನೆಲ ಸಿ )ಧರೆ ಡಿ) ಭುವಿ

೪. 'ರಕ್ಷೆಯಿಡಲಿ' ಪದವು ಈ ಕ್ರಿಯಾಪದ ರೂಪಕ್ಕೆ ಉದಾಹರಣೆಯಾಗಿದೆ.

ಎ) ಸಂಭಾವನಾರ್ಥಕ ಬಿ) ವಿಧ್ಯರ್ಥಕ ಸಿ)ನಿಷೇಧಾರ್ಥಕ ಡಿ)ಸಾಮಾನ್ಯಾರ್ಥಕ

೫. ಹೆಣ್ಣ ರೀತಿಯನರಿಯಬಹುದೇ ಅವರ ಬಗೆಬಲು ಸೋಜಿಗ ಈ ವಾಕ್ಯದಲ್ಲಿರಬೇಕಾದ ಲೇಖನ ಚಿಹ್ನೆಯಿದು _

ಎ) ಪ್ರಶ್ನಾರ್ಥಕ ಬಿ) ಉದ್ಧರಣ ಸಿ) ಭಾವಸೂಚಕ ಡಿ) ಅರ್ಧವಿರಾಮ

೬.'ಎರೆವೆ ಎರೆವೆ' ಪದವು ಈ ವ್ಯಾಕರಣಾಂಶದ ಉದಾಹರಣೆಯಾಗಿದೆ ___

ಎ) ಜೋಡುನುಡಿ ಬಿ) ದ್ವಿರುಕ್ತಿ ಸಿ)ನುಡಿಗಟ್ಟು ಡಿ) ಅನುಕರಣಾವ್ಯಯ

೭. ' ಧೈರ್ಯಗೆಡೆ' ಪದದಲ್ಲಿರುವ ಸಂಧಿಯಿದು _

ಎ) ಲೋಪ ಬಿ) ಆಗಮ ಸಿ) ಆದೇಶ ಡಿ )ಯಣ್

೮. 'ವರ್ಣ 'ಪದದ ತದ್ಭವ ರೂಪವಿದು ___

ಎ) ವರುಣ ಬಿ) ಬಣ್ಣ ಸಿ) ವರಣ ಡಿ)ಅರುಣ

೯. 'ಕೊನೆಕೊನೆಗೆ' ಪದವು ಈ ವ್ಯಾಕರಣಾಂಶದ ಉದಾಹರಣೆಯಾಗಿದೆ----

ಎ)ದ್ವಿರುಕ್ತಿ ಬಿ)ನುಡಿಗಟ್ಟು ಸಿ)ಜೋಡುನುಡಿ ಡಿ)ಅನುಕರಣಾವ್ಯಯ

೧೦. 'ಪೂಜೆಯಿಂದ' ಪದದಲ್ಲಿರುವ ವಿಭಕ್ತಿ ---

ಎ)ಸಪ್ತಮಿ ಬಿ)ಪ್ರಥಮಾ ಸಿ)ತೃತೀಯಾ ಡಿ)ಚತುರ್ಥಿ

೧೧. 'ರಾಮಲಕ್ಷ್ಮಣರು' ಪದದಲ್ಲಿರುವ ಸಮಾಸವಿದು ____

ಎ)ದ್ವಂದ್ವ ಬಿ)ದ್ವಿಗು ಸಿ)ಕ್ರಿಯಾ ಡಿ) ತತ್ಪುರುಷ

೧೨.'ಚೆಂದಳಿರು ' ಪದವು ಈ ಸಮಾಸದ ಉದಾಹರಣೆಯಾಗಿದೆ.

ಎ)ಅಂಶಿ ಬಿ)ಗಮಕ ಸಿ)ಕರ್ಮಧಾರಯ ಡಿ)ತತ್ಪುರುಷ

2.ಮೊದಲೆರಡು ಪದಗಳಿಗೆ ಇರುವ ಸಂಬಂಧದಂತೆ ಮೂರನೆಯ ಪದಕ್ಕೆ ಸರಿ ಸಂಬಂಧ ಹೊಂದುವ ಪದ ಬರೆಯಿರಿ.

೧.ತವಸಿ : ತಪಸ್ವಿ:: ದಿಟ್ಟಿ: _____

೨.ಅಹುದಹುದು :ದ್ವಿರುಕ್ತಿ :: ಹಣ್ಣುಹಂಪಲು : _______

**GOVT HIGH SCHOL BEGUR BANGALURU -68**

೩.ಅಗ್ನಿ:ಅಗ್ಗಿ:: ಮುಖ : _

೪. ಹೊಗೆಯಾಡು : ಆಗಮ ಸಂಧಿ : : ತೇಜಗೆಡೆ : __

೫. ಪ್ರಾಣಾಹುತಿ : ಸವರ್ಣ ದೀರ್ಘ ಸಂಧಿ : : ಸಪ್ತಾಂಗಳ : ___

೬. ಬನ :ವನ :: ಕಬ್ಬ :__

೭.ನಿತ್ಯ :ನಿಚ್ಚ : ಸ್ಪರ್ಷ : ____

೮.ತುಂಬಿ: ದುಂಬಿ :: ಮಾಲೆ: ___

೯.ದಿವ್ :ದಿವ :: ದಿಕ್ :___

೧೦.ನಾನೆರೆವೆ : ಲೋಪಸಂಧಿ :: ಹಸುಳೆಯಂದದಿ :___

೧೧. ಅಗ್ನಿಯನ್ನು: ಆಗಮಸಂಧಿ :: ನಿನ್ನೆಡೆ : ____

೧೨. ರಾಮ :ಅಂಕಿತ ನಾಮ : : ತಪಸ್ವಿ: ____

೧೩. ಅರಮನೆ : ತತ್ಪುರುಷ ಸಮಾಸ :: ಹೂಹಣ್ಣುತಳಿರುಗಳು : ______

೧೪. ಸದ್ಗುಣ : ಜಶ್ತ್ವಸಂಧಿ : : : ಪ್ರಾಣಾಹುತಿ : ________

೧೫. ಪ್ರಾಣ : ಹರಣ : ಮೂರ್ತಿ :

## ಉತ್ತರಗಳು

1. ೧. ಎ)ಸೀರೆ ೨. ಬಿ)ದ್ವಿಗು ಸಮಾಸ ೩. ಎ)ಬುವಿ ೪. ಬಿ)ವಿಧ್ಯರ್ಥಕ ೫.ಸಿ)ಭಾವಸೂಚಕ ೬. ಸಿ)ದ್ವಿರುಕ್ತಿ ೭. ಸಿ)ಆದೇಶ ೮. ಬಿ)ಬಣ್ಣ ೯. ಎ)ದ್ವಿರುಕ್ತಿ ೧೦. ಸಿ)ತೃತೀಯಾ ೧೧. ಎ)ದ್ವಂದ್ವ ೧೨. ಸಿ)ಕರ್ಮಧಾರಯ

2. ೧. ದೃಷ್ಟಿ ೨.ಜೋಡುನುಡಿ ೩.ಮೊಗ ೪. ಆದೇಶ ಸಂಧಿ ೫. ಅನುನಾಸಿಕ ಸಂಧಿ ೬.ಕಾವ್ಯ ೭.ಪರುಷ ೮.ಮಾಲಾ ೯.ದಿಕ್ಕು ೧೦. ಆಗಮಸಂಧಿ ೧೧. ಲೋಪಸಂಧಿ ೧೨. ಅನ್ವರ್ಥಕ ನಾಮ ೧೩. ದ್ವಂದ್ವ ಸಮಾಸ ೧೪. ಸವರ್ಣದೀರ್ಘಸಂಧಿ ೧೫. ಮೂರುತಿ

***ಅಲಂಕಾರ ಹೆಸರಿಸಿ ಸಮನ್ವಯಿಸಿ***

**ಹಸುಳೆಯಂದದಿ ಒಲಿದಳು**

mamatabhagwat1@gmail.com

ಉಪಮೇಯ : ಲುಪ್ತವಾಗಿದೆ (ಶಬರಿ)

ಉಪಮಾನ : ಹಸುಳೆ

ಉಪಮಾವಾಚಕ : ಅಂದದಿ

ಸಮಾನಧರ್ಮ : ಒಲಿಯುವುದು

ಅಲಂಕಾರ : ಉಪಮಾ

ಉಪಮೇಯವಾದ ರಾಮನಿಗೆ ಹಂಬಲಿಸಿ ಒಲಿದ ಶಬರಿಯನ್ನು ಉಪಮಾನವಾದ ಹಸುಳೆಗೆ ಹೋಲಿಸಿ ಉಪಮೇಯವು ಉಪಮಾನದಂತಿದೆ ಎಂದು ಹೇಳಿರುವುದರಿಂದ ಇದು ಉಪಮಾ ಅಲಂಕಾರವಾಗಿದೆ.

## ಗದ್ಯಪಾಠ - ಅಮೆರಿಕದಲ್ಲಿ ಗೊರೂರು.

- ಗೊರೂರು ರಾಮಸ್ವಾಮಿ ಅಯ್ಯಂಗಾರ್

### ಲೇಖಕರ ಪರಿಚಯ

ಗೊರೂರು ರಾಮಸ್ವಾಮಿ ಅಯ್ಯಂಗಾರರು ಕ್ರಿ.ಶ.೧೯೦೪ ರಲ್ಲಿ ಹಾಸನ ಜಿಲ್ಲೆಯ ಗೊರೂರಿನಲ್ಲಿ ಜನಿಸಿದರು.ಇವರು ಗರುಡಗಂಬದ ದಾಸಯ್ಯ,ಮೆರವಣಿಗೆ,ಹೇಮಾವತಿ,ಪುನರ್ಜನ್ಮ ಮೊದಲಾದ ಕೃತಿಗಳನ್ನು ಬರೆದಿದ್ದಾರೆ. ಅಮೆರಿಕದಲ್ಲಿ ಗೊರೂರು ಎನ್ನುವುದು ಇವರ ಪ್ರವಾಸ ಕಥನವಾಗಿದೆ. ಮೈಸೂರು ವಿಶ್ವವಿದ್ಯಾಲಯದ ಗೌರವ ಡಿ.ಲಿಟ್ ಪದವಿ ಪಡೆದಿರುವ ಇವರು ೧೯೬೭ ರಲ್ಲಿ ತರೀಕೆರೆಯಲ್ಲಿ ನಡೆದ ಜಾನಪದ ಸಮ್ಮೇಳನದ ಅಧ್ಯಕ್ಷರಾಗಿದ್ದರು ಮತ್ತು ೧೯೮೨ರಲ್ಲಿ ಶಿರಸಿಯಲ್ಲಿ ಸಮಾವೇಶಗೊಂಡಿದ್ದ ಅಖಿಲ ಭಾರತ ಕನ್ನಡ ಸಾಹಿತ್ಯಸಮ್ಮೇಳನದ ಅಧ್ಯಕ್ಷರಾಗಿದ್ದರು.

### ಒಂದು ವಾಕ್ಯದಲ್ಲಿ ಉತ್ತರಿಸಿ.

೧.ಪಾಶ್ಚಾತ್ಯರಲ್ಲಿ ಮಕ್ಕಳಾದಿಯಾಗಿ ತಿಳಿದುಕೊಂಡಿರುವ ಅಂಶಗಳು ಯಾವುವು ?

ಯಾಂತ್ರೀಕರಣ, ವಿದ್ಯುದೀಕರಣ,ಔದ್ಯೋಗೀಕರಣ, ಅಣುಶಕ್ತಿ ಇವೇ ಮೋದಲಾದ ವಿಷಯಗಳ ಕುರಿತಾದ ಜ್ಞಾನವನ್ನು ಪಾಶ್ಚಾತ್ಯರಲ್ಲಿ ಮಕ್ಕಳಾದಿಯಾಗಿ ಎಲ್ಲರೂ ತಕ್ಕಮಟ್ಟಿಗೆ ತಿಳಿದಿರುತ್ತಾರೆ.

೨. ಅಮೆರಿಕ ,ಕೆನಡಾ ದೇಶಗಳಲ್ಲಿ ಬೆಂಕಿಯ ಅಪಾಯ ಹೆಚ್ಚು ಏಕೆ ?

ಅಮೆರಿಕ ಕೆನಡಾಗಳಲ್ಲಿ ಮನೆಗಳನ್ನು ಸಾಧಾರಣವಾಗಿ ಮರದಿಂದಲೇ ಕಟ್ಟಿರುವುದರಿಂದ ಅಲ್ಲಿಯ ಬೆಂಕಿಯ ಅಪಾಯ ಹೆಚ್ಚು

೩. ಗೊರೂರು ರಾಮಸ್ವಾಮಿ ಅಯ್ಯಂಗಾರ್ ಸ್ಕೂಲಿನತ್ತ ಹೆಜ್ಜೆ ಹಾಕಲು ಕಾರಣವೇನು ?
ಅಮೆರಿಕದ ಮಗಳ ಮನೆಯಲ್ಲಿ ಗೊರೂರು ದಂಪತಿಗಳು ಉಳಿದಿದ್ದ ಂತಹ ಸಮಯದಲ್ಲಿ ಒಂದುದಿನ ವಿದ್ಯುತ್ ಒಲೆಯು ಒಂದೇ ಸಮನೆ ಕೊಯ್ ಎಂಬ ಶಬ್ದ ಮಾಡಲಾರಂಭಿಸಿದಾಗ ಅದನ್ನು ಆಫ್ ಮಾಡುವುದು ಹೇಗೆಂದು ಗೊತ್ತಿರದ ಗೊರೂರರು ಅದನ್ನು ಆಫ್ ಮಾಡಲು ಯಾರನ್ನಾದರೂ ಕರೆತರುವ ಸಲುವಾಗಿ ಅಲ್ಲೇ ಸಮೀಪದಲ್ಲಿ ಇದ್ದ ಸ್ಕೂಲಿನತ್ತ ಹೆಜ್ಜೆ ಹಾಕಿದರು.
೪.ಅಮೆರಿಕದ ವಿದ್ಯಾರ್ಥಿಗಳನ್ನುರಂಜಿಸಿದ ಕನ್ನಡಸಾಹಿತ್ಯಭಾಗಗಳು ಯಾವುವು ?
ಅಮೆರಿಕದ ವಿದ್ಯಾರ್ಥಿಗಳನ್ನುರಂಜಿಸಿದ ಕನ್ನಡ ಸಾಹಿತ್ಯ ಭಾಗಗಳು ಕನ್ನಡ ನಾಡಿನ ಅನೇಕ ಜಾನಪದ ಹಾಸ್ಯ ಕಥೆಗಳು, ಗಾದೆಗಳುಮತ್ತು ಪಂಚತಂತ್ರದ ಕಥೆಗಳು.
೫.ಶಾಲೆಗೆ ಹೋದ ಕೆಲಸದ ಬಗ್ಗೆ ಗೊರೂರರಿಗೆ ಯಾವಾಗ ಜ್ಞಾನೋದಯವಾಯಿತು ?
ಶಾಲೆಗೆ ಹೋದ ಗೊರೂರರು ಅಲ್ಲಿನ ವಿದ್ಯಾರ್ಥಿಗಳು ಮತ್ತು ಉಪಾಧ್ಯಾಯರೊಂದಿಗೆ ಸಂಭಾಷಿಸುತ್ತಿದ್ದಾಗ ಅವರ ಹೆಂಡತಿ ಬಂದು ಅವರ ಮುಂದೆ ನಿಂತು ಬಂದ ಕೆಲಸವನ್ನೇ ಮರೆತಿರಿ ,ಈಗಲೋ ಆಗಲೋ ಮನೆ ಹೊತ್ತಿ ಉರಿದು ಹೋಗುತ್ತೆ ಎಂದಾಗ ಗೊರೂರರಿಗೆ ಜ್ಞಾನೋದಯವಾಯಿತು.
ಎರಡು- ಮೂರು ವಾಕ್ಯಗಳಲ್ಲಿ ಉತ್ತರಿಸಿ.
೧. ವಿದ್ಯಾರ್ಥಿಗಳು ಗೊರೂರರನ್ನುಕಂಡು ಭಯಗೊಳ್ಳಲು ಕಾರಣವೇನು ?
ವಿದ್ಯಾರ್ಥಿಗಳು ಗೊರೂರರನ್ನುದುರುದುರನೆ ನೋಡುತ್ತ ಹೊರಟೇ ಹೋದರು.ಉಪಾಧ್ಯಾಯರುಗಳೂ ಕೂಡ ಗೊರೂರರನ್ನೇ ಕುತೂಹಲದಿಂದದೃಷ್ಟಿಸಿದರು.ಇದಕ್ಕೆಲ್ಲ ಕಾರಣವಾಗಿದ್ದುದು ಗೊರೂರರ ವೇಷಭೂಷಣ .ಅವರು ಧರಿಸಿದ್ದ ಎಂಟೂವರೆ ಉದ್ದದ ಖಾದಿ ಪಂಚೆ ,ಕೆಂಪು ಉಣ್ಣೆಯ ಶಾಲು, ಮಫ್ಲರ್,ಕಾವಿ ಬಣ್ಣದ ನೀಳವಾದ ಜುಬ್ಬ ,ಹಣೆಯಲ್ಲಿ ಥಾಳಾದ ಕೆಂಪು ನಾಮ, ತಲೆ ಮೇಲೆ ಕೆದರಿನಿಂತಿದ್ದ ಬಿಳಿ ಕೂದಲು ,ಬಿಳಿ ಗಡ್ಡ ,ಮೀಸೆ,ಕಾಲಿಗೆದಪ್ಪನಾದ ಎಕ್ಕಡ ಇವೇ ಮೊದಲಾದ ಅಮೆರಿಕದಲ್ಲಿ ವಿಚಿತ್ರ ವೆನ್ನಿಸುವ ಇವರ ವೇಷಭೂಷಣ ನೋಡಿದ ವಿದ್ಯಾರ್ಥಿಗಳು ಭಯಗೊಂಡರು.
೨. ಶಾಲೆಗೆ ಹೋದ ಉದ್ದೇಶವನ್ನು ಗೊರೂರರು ಮರೆತದ್ದು ಏಕೆ ?
ವಿದ್ಯುತ್ ಒಲೆಯಿಂದ ಉಂಟಾದ ಸಮಸ್ಯೆಯನ್ನು ನಿವಾರಿಸಲು ಲೇಖಕರು ಅಲ್ಲೇ ಹತ್ತಿರದ ಶಾಲೆಯಿಂದ ವಿದ್ಯಾರ್ಥಿಯನ್ನು ಕರೆತರಲು ಹೋದಾಗ ಗೊರೂರರ ವೇಷಭೂಷಣವನ್ನು ನೋಡಿದ

ಉಪಾಧ್ಯಾಯರು ,ವಿದ್ಯಾರ್ಥಿಗಳು ನಕ್ಕರು.ಹುಡುಗರೆಲ್ಲ ಅವರನ್ನು ನೋಡಿ ಪೈಡ್ ಪೈಪರ್ ,ಸಾಂತಾಕ್ಲಾಸ್ ಎಂದೆಲ್ಲ ಕೂಗಿದರು.ಉಪಾಧ್ಯಾಯರು ನಿಮ್ಮ ಉಡುಪು ಸ್ವಲ್ಪ ವಿಚಿತ್ರ ವಾಗಿದೆ,ದಯವಿಟ್ಟು ಕುಳಿತುಕೊಳ್ಳಿ,ನಿಮಗೆ ಏನಾಗಬೇಕು ? ಎಂದು ಕುರ್ಚಿತೋರಿಸಿದರು.ಅಷ್ಟರಲ್ಲಿಯೇ ಮತ್ತೊಬ್ಬ ಉಪಾಧ್ಯಾಯಿನಿ ನಿಮಗೆ ಚಳಿಯಾಗುವುದಿಲ್ಲವೇ ? ನೀವು ಎಲ್ಲಿಂದ ಬಂದಿರುವಿರಿ ಎಂದರು.ಈ ಅವಾಂತರದಲ್ಲಿ ಗೊರೂರರರು ಸ್ಕೂಲಿಗೆ ಹೋದ ಉದ್ದೇಶವನ್ನೇ ಮರೆತರು.

೩. ಗೊರೂರು ರಾಮಸ್ವಾಮಿ ಅಯ್ಯಂಗಾರರಿದ್ದ ಮನೆಯಲ್ಲಿ ಬೆಂಕಿ ಹೊತ್ತಿಕೊಂಡೀತು ಎಂದು ಆತಂಕ ಪಟ್ಟಿದ್ದು ಏಕೆ ?

ಗೊರೂರು ದಂಪತಿಗಳು ಒಮ್ಮೆ ಅಮೆರಿಕದ ಮಗಳ ಮನೆಯಲ್ಲಿ ಉಳಿದುಕೊಂಡಿದ್ದ ಸಮಯದಲ್ಲಿ ಒಂದು ದಿನ ಅವರ ಮಗಳು ಮತ್ತು ಅಳಿಯ ಕೆಲಸಕ್ಕೆ ಹೋಗಿದ್ದರು.ಹೋಗುವ ಮೊದಲು ವಿದ್ಯತ್ ಒಲೆಯನ್ನು ಹೊತ್ತಿಸಿ ಅಡುಗೆ ಮಾಡಿ ಆಫ್ ಮಾಡಿ ಹೋದರು.ಇದ್ದಕ್ಕಿದ್ದಂತೆ ಮನೆಯ ಯಾವುದೋ ಮೂಲೆಯಲ್ಲಿ ಕೊಯ್ ಶಬ್ದ ಪ್ರಾರಂಭವಾಯಿತು.ಎಲ್ಲ ಕಡೆ ಹುಡುಕಿದಾಗ ಅದು ಅಡುಗೆ ಮನೆಯ ವಿದ್ಯುತ್ ಒಲೆಯ ಕಡೆಯಿಂದಲೇ ಬರುತ್ತಿತ್ತು. ಆದರೆ ಅದನ್ನು ಹೇಗೆ ನಿಲ್ಲಿಸುವುದು ಎಂಬುದು ಇಬ್ಬರಿಗೂ ಗೊತ್ತಿರಲಿಲ್ಲ .ಹಾಗಾಗಿ ಮನೆಯಲ್ಲಿ ಬೆಂಕಿ ಹೊತ್ತಿಕೊಂಡೀತು ಎಂದು ಆತಂಕಪಟ್ಟರು.

ಎಂಟು ಹತ್ತು ವಾಕ್ಯಗಳಲ್ಲಿ ಉತ್ತರಿಸಿ.

೧. ಗೊರೂರು ರಾಮಸ್ವಾಮಿ ಅಯ್ಯಂಗಾರರ ವೇಷಭೂಷಣಗಳು ಹೇಗಿದ್ದವು ?

ಗೊರೂರರರು ಅಗಲವಾದ ಎಂಟೂವರೆ ಮೊಳ ಉದ್ದದ ಖಾದಿ ಕಚ್ಚೆಪಂಚೆಯನ್ನು ಉಟ್ಟಿದ್ದರು.ಅದು ಖಾದಿಯಲ್ಲಿ ಸಹ ದಪ್ಪ ನೂಲಿನ ಬಟ್ಟೆಯೆ.ಅದಕ್ಕೆ ಅಗಲವಾದ ಕೆಂಪು ಕಂಬಿ,ಕಂಬಿಯ ತುದಿಯಲ್ಲಿ ನಾಲ್ಕು ಜರಿಗೆರೆಗಳು.ಭಾರತದಲ್ಲಿರುವಾಗ ಅತಿ ಜಬರ್ಾಗಿ ಕಾಣುತ್ತೆ ಎಂದು ಅದನ್ನು ಅವರು ಉಡುತ್ತಿರಲಿಲ್ಲ.ಹೊರದೇಶಕ್ಕೆ ಹೋದಾಗ ಧಡೂತಿಯಾಗಿದೆ,ಬೆಚ್ಚಗಿರುತ್ತೆ ಎಂದು ತೆಗೆದುಕೊಂಡಿದ್ದರು.ಚಳಿಗಾಗಿ ಒಂದು ಕೆಂಪು ಉಣ್ಣನೆಯ ಶಾಲು,ಮಫ್ಲರ್ ಕಟ್ಟಿದ್ದರು.ಸ್ಕೂಲಿಗೆ ಹೋಗುವ ದಾರಿಯಲ್ಲಿ ಅದು ಸಡಿಲವಾದುದರಿಂದ ಹೆಗಲ ಮೇಲೆ ಹಾಕಿಕೊಂಡಿದ್ದರು.ಕಾವಿಬಣ್ಣದ ನೀಳವಾದ ಜುಬ್ಬ ,ಹಣೆಯಲ್ಲಿ ಥಾಳಾದ ಕೆಂಪು ನಾಮ ,ತಲೆ ಮೇಲೆ ಕೆದರಿ ನಿಂತಿದ್ದ ಬಿಳಿ ಕೂದಲು,ಬಿಳಿ ಗಡ್ಡ ,ಮೀಸೆ, ಕಾಲಿಗೆ ದಪ್ಪನಾದ ಎಕ್ಕಡ ಒಟ್ಟಾರೆ ಗೊರೂರರ ಮೈ ಉಡುಪುಗಳಲ್ಲಿ ಏಳೆಂಟು ಬಣ್ಣಗಳು ಹೊಳಪು ತುಂಬಿತ್ತು.

೨. ಖಾದಿಬಟ್ಟೆಯ ವೈಶಿಷ್ಟ್ಯವನ್ನು ಗೊರೂರರರು ಅಮೆರಿಕದ ಉಪಾಧ್ಯಾಯರು ಮತ್ತು ವಿದ್ಯಾರ್ಥಿಗಳಿಗೆ

ಹೇಗೆ ಪರಿಚಯಿಸಿದರು ?
ಗೊರೂರರ ಅಮೆರಿಕದಲ್ಲಿ ವಿಚಿತ್ರವೆನ್ನಿಸಬಹುದಾದ ವೇಷಭೂಷಣವನ್ನು ನೋಡಿದ ಅಮೆರಿಕದ ಶಾಲೆಯ ವಿದ್ಯಾರ್ಥಿಗಳು ಮತ್ತು ಉಪಾಧ್ಯಾಯರು ಕ್ಷಣ ಕಾಲ ಗಾಬರಿಗೊಂಡರು.ವಿದ್ಯಾರ್ಥಿಗಳು ಅವರನ್ನು ನೋಡಿ ಪೈಡ್ ಪೈಪರ್ , ಸಾಂತಾಕ್ಲಾಸ್ ಎಂದೆಲ್ಲ ಕೂಗಿದರು.ಉಪಾಧ್ಯಾಯರೊಬ್ಬರು ನಿಮ್ಮ ಉಡುಪು ಸ್ವಲ್ಪ ವಿಚಿತ್ರವಾಗಿದೆ ಒಬ್ಬ ಉಪಾಧ್ಯಾಯಿನಿ ನಿಮಗೆ ಚಳಿಯಾಗುವುದಿಲ್ಲವೇ ? ಎಂದರು . ಶಾಲೆಗೆ ತಾವು ಹೋದ ಉದ್ದೇಶವನ್ನೇಮರೆತ ಗೊರೂರರರು ಅವರ ಜೊತೆ ಗಾಂಧೀಜಿಯವರ ಹೆಸರು ಕೇಳಿದ್ದೀರಾ ಎನ್ನುತ್ತ ತಾವು ಧರಿಸಿದ ಖಾದಿ ಬಟ್ಟೆಯ ಕುರಿತು ವಿವರಿಸಿದರು.ತಾವು ಗಾಂಧೀ ಭಾರತದಲ್ಲಿ ಜನಿಸಿದವರು,ಭಾರತದ ಹವೆ ಬಹಳ ಹಿತವಾಗಿರುತ್ತದೆ.ಅಲ್ಲಿ ಕಡಿಮೆ ಬಟ್ಟೆಗಳಿಂದಲೇ ಜೀವಿಸಬಹುದು.ಭಾರತದಲ್ಲಿ ಈ ಖಾದಿ ಬಟ್ಟೆಯನ್ನು ಪ್ರಚುರ ಪಡಿಸಿದವರು ಗಾಂಧೀಜಿ.ಇದು ಪೂರ್ಣವಾಗಿ ಕೈಯಿಂದಲೇ ತಯಾರಾದ ಬಟ್ಟೆ ಇದಕ್ಕೆ ಯಾವ ರೀತಿಯಿಂದಲೂ ಯಂತ್ರದ ಸೋಂಕು ಉಂಟಾಗಿಲ್ಲಎಂದರು. ಕೈಯಿಂದಲೇ ಇದನ್ನು ಮಾಡಿದ್ದು ಎಂದಾಗ ಉಪಾಧ್ಯಾಯರೂ ಹುಡುಗರೂ ಅದನ್ನು ಮುಟ್ಟಿ ನೋಡಿದರು.ಕೈಯಿಂದ ಇದನ್ನು ಮಾಡುವುದು ಹೇಗೋ ಎಂದು ಉಪಾಧ್ಯಾಯರೊಬ್ಬರು ಅಪನಂಬಿಕೆ ವ್ಯಕ್ತಪಡಿಸಿದರು.ಆಗ ಗೊರೂರರರು ರಾಟೆಯಿಂದ ನೂಲುವುದು ,ಮಗ್ಗದಿಂದ ನೇಯುವುದು ಈ ವಿಷಯಗಳನ್ನು ವಿವರಿಸಿದರು.

೩. ವಿದ್ಯುತ್ ಒಲೆಯಿಂದ ಉಂಟಾದ ಗೊಂದಲವನ್ನು ಗೊರೂರರರು ಹೇಗೆ ಪರಿಹರಿಸಿಕೊಂಡರು ?
ಗೊರೂರರರು ಅಮೆರಿಕದ ಮಗಳ ಮನೆಯಲ್ಲಿದ್ದಾಗ ಒಂದು ದಿನ ಅವರ ಮಗಳು ಅಳಿಯ ಕೆಲಸಕ್ಕೆ ಹೋಗಿದ್ದರು.ಅವರ ಅಡುಗೆ ಮನೆಯಿಂದ ಇದ್ದಕ್ಕಿದ್ದಂತೆ ಕೊಯ್ ಎಂಬ ಶಬ್ದ ಬರಲಾರಂಭಿಸಿತು. ಅದು ಎಲ್ಲಿಂದ ಬರುತ್ತಿದೆ ಎಂದು ಹುಡುಕಾಡಿ ಕೊನೆಗೆ ವಿದ್ಯುತ್ ಒಲೆ ಮಾಡುತ್ತಿರುವ ಶಬ್ದ ಎಂಬುದನ್ನು ಅರಿತ ಗೊರೂರು ದಂಪತಿಗಳು ಅದನ್ನು ಆರಿಸುವುದು ಹೇಗೆ ಎಂದು ತಿಳಿಯದೇ ಅಕ್ಕಪಕ್ಕದ ಮನೆಗಳವರ ಸಹಾಯಕ್ಕಾಗಿ ಹುಡುಕಾಡಿದರು.ಆದರೆ ಯಾರ ಸುಳಿವೂ ಇರಲಿಲ್ಲ .ಆಗ ಅವರ ಪತ್ನಿ ಅಲ್ಲೇ ಹತ್ತಿರವಿದ್ದ ಶಾಲೆಗೆ ಹೋಗಿ ಯಾವುದಾದರೂ ವಿದ್ಯಾರ್ಥಿಯನ್ನಾಗಲೀ ಅಥವಾ ಉಪಾಧ್ಯಾಯರನ್ನಾಗಲೀ ಕರೆತರುವಂತೆ ಸೂಚಿಸಿದರು.ಆಗ ಗೊರೂರರರು ಸಮೀಪದ ಶಾಲೆಗೆ ಹೋದರು.ಮೊದಲು ಇವರನ್ನು ನೋಡಿದ ಅಲ್ಲಿನ ವಿದ್ಯಾರ್ಥಿಗಳು ಮತ್ತು ಉಪಾಧ್ಯಾಯರು ಗಾಬರಿಯಾದರು.ಅದಕ್ಕೆ ಕಾರಣವಾಗಿದ್ದುದು ಗೊರೂರರ ವಿಚಿತ್ರವಾದ ವೇಷಭೂಷಣ. ಆನಂತರ ಅವರೊಂದಿಗೆ ಸ್ನೇಹದಿಂದ ವರ್ತಿಸಿದ ಅಲ್ಲಿನ ವಿದ್ಯಾರ್ಥಿಗಳು ಮತ್ತು ಉಪಾಧ್ಯಾಯರು ಅವರ ವೇಷಭೂಷಣದ ಕುರಿತು

ವಿಚಾರಿಸಿದರು. ಆ ಸಂದರ್ಭದಲ್ಲಿ ತಮ್ಮ ಖಾದಿ ಬಟ್ಟೆ ಮತ್ತು ಅದನ್ನು ಭಾರತದಲ್ಲಿ ಪ್ರಚುರಪಡಿಸಿದ ಗಾಂಧೀಜಿ ಮತ್ತು ಅವರ ಚರಕ, ರಾಟೆಯಿಂದ ನೂಲುವುದು ಇತ್ಯಾದಿ ಮಾಹಿತಿ ವಿವರಿಸುತ್ತ ತಾವು ಹೋದ ಉದ್ದೇಶವನ್ನೇ ಕೆಲ ಕಾಲ ಮರೆತರು. ಕೊನೆಗೆ ಇವರಿಗೆ ನೆನಪಿಸಲು ಅವರ ಪತ್ನಿಯೇ ಬರಬೇಕಾಯಿತು. ಆಗ ಗೊರೂರರು ತಾವು ಬಂದ ಕಾರಣವನ್ನು ವಿವರಿಸಿ ಒಬ್ಬ ವಿದ್ಯಾರ್ಥಿಯನ್ನು ತಮ್ಮ ಜೊತೆ ಕಳಿಸುವಂತೆ ಕೇಳಿಕೊಂಡರು.ಉಪಾಧ್ಯಾಯರಿಂದ ಕಳಿಸಿಕೊಡಲ್ಪಟ್ಟ ಬಲಿಷ್ಠ ವಿದ್ಯಾರ್ಥಿಯು ಇವರ ಮನೆಗೆ ಬಂದು ಆ ಶಬ್ದ ಎಲ್ಲಿಂದ ಬರುತ್ತಿದೆ ಎಂದು ನೋಡಿ ಅದನ್ನು ನಿಲ್ಲಿಸಲು ನೆರವಾದನು. ಹೀಗೆ ಗೊರೂರರು ವಿದ್ಯುತ್ ಒಲೆಯಿಂದ ಉಂಟಾದ ಸಮಸ್ಯೆಯನ್ನು ನಿವಾರಿಸಿಕೊಂಡರು.

ಸಂದರ್ಭ ಸಹಿತ ಸ್ವಾರಸ್ಯವನ್ನು ವಿವರಿಸಿ.

೧. ''ನನಗೆ ಇಂಗ್ಲಿಷ್ ಬಂದಿದ್ದರೆ ನಾನು ಇಷ್ಟು ಹೊತ್ತಿಗೆ ಬೆಂಕಿ ಆರಿಸುವವರನ್ನೇ ಕರೆಸಿಬಿಡುತ್ತಿದ್ದೆ.''
ಈ ಮೇಲಿನ ವಾಕ್ಯವನ್ನು ಗೊರೂರು ರಾಮಸ್ವಾಮಿ ಅಯ್ಯಂಗಾರ್ ಅವರು ಬರೆದ ಅಮೆರಿಕದಲ್ಲಿ ಗೊರೂರು ಎನ್ನುವ ಗದ್ಯಭಾಗದಿಂದ ಆಯ್ದುಕೊಳ್ಳಲಾಗಿದೆ. ಈ ಮಾತನ್ನು ಗೊರೂರರ ಪತ್ನಿ ಹೇಳಿದ್ದಾಳೆ. ಗೊರೂರರು ಅಮೆರಿಕದ ಮಗಳ ಮನೆಯಲ್ಲಿ ಉಳಿದುಕೊಂಡಿದ್ದ ದಿನಗಳಲ್ಲಿ ಒಂದು ದಿನ ಅವರ ಮಗಳು ಮತ್ತು ಅಳಿಯ ಕೆಲಸಕ್ಕೆ ಹೊರಗೆ ಹೋಗಿದ್ದ ಸಂದರ್ಭದಲ್ಲಿ ವಿದ್ಯುತ್ ಒಲೆಯು ಇದ್ದಕ್ಕಿದ್ದಂತೆ ಕೊಯ್ ಎಂಬ ಶಬ್ದ ಮಾಡಲು ಪ್ರಾರಂಭಿಸಿತು. ಆ ಸದ್ದನ್ನು ನಿಲ್ಲಿಸಲು ಗೊತ್ತಿಲ್ಲದೇ ಗೊರೂರರ ದಂಪತಿ ಪೇಚಿಗೆ ಸಿಲುಕುವಂತಾಯಿತು.ಪಕ್ಕದ ಮನೆಗಳಲ್ಲಿ ಯಾರ ಸುಳಿವೂ ಇರಲಿಲ್ಲ. ಹತ್ತಿರದಲ್ಲೇ ಇದ್ದ ಶಾಲೆಗೆ ಹೋಗಿ ಯಾರಾದರನ್ನಾದರೂ ಕರೆತನ್ನಿ ಎಂದ ಅವರ ಪತ್ನಿಗೆ ವಿದ್ಯುಚ್ಛಕ್ತಿ ,ಯಂತ್ರದ ಏಣಿ ಇವುಗಳ ಅರಿವಿರದ ಗೊರೂರರ ಮೇಲೆ ಕೋಪಿಸಿಕೊಳ್ಳುತ್ತ ಮೇಲಿನ ಮಾತನ್ನು ಹೇಳಿದಳು.
ಸ್ವಾರಸ್ಯ :ಅಮೆರಿಕದ ವೈಜ್ಞಾನಿಕತೆ ತಾಂತ್ರಿಕತೆಯ ಅರಿವು ಅವರಿಗಿರಲಿಲ್ಲ ಅದರ ಅರಿವೂ ಅತಿ ಅಗತ್ಯವಾಗಿತ್ತು ಎಂಬ ಮನೋಭಾವನೆಯನ್ನು ಮೇಲಿನ ಮಾತು ಸೂಚಿಸುತ್ತದೆ.

೨. ''ನಮ್ಮ ಪುಸ್ತಕದಲ್ಲಿ ಗಾಂಧಿ ಮೇಲೆ ಒಂದು ಪಾಠವಿದೆಯಲ್ಲ.''
ಸ್ವಾರಸ್ಯ : ಈ ಮೇಲಿನ ವಾಕ್ಯವನ್ನು ಗೊರೂರು ರಾಮಸ್ವಾಮಿ ಅಯ್ಯಂಗಾರ್ ಅವರು ಬರೆದ ಅಮೆರಿಕದಲ್ಲಿ ಗೊರೂರು ಎನ್ನುವ ಗದ್ಯಭಾಗದಿಂದ ಆಯ್ದುಕೊಳ್ಳಲಾಗಿದೆ.
ಅಮೆರಿಕದ ಶಾಲೆಯ ವಿದ್ಯಾರ್ಥಿಯು ಗೊರೂರರಿಗೆ ಮೇಲಿನ ಮಾತನ್ನು ಹೇಳಿದನು.
ವಿದ್ಯುತ್ ಒಲೆಯಿಂದ ಬರುವ ಸದ್ದು ನಿಲ್ಲಿಸಲು ಅರಿಯದ ಗೊರೂರರು ಹತ್ತಿರದ ಶಾಲೆಯಿಂದ ಯಾರಾದರನ್ನು ಕರೆತರಬೇಕೆಂದು ಶಾಲೆಗೆ ಹೋದಾಗ ಅವರ ವಿಚಿತ್ರವಾದ ವೇಷಭೂಷಣವನ್ನು

ನೋಡಿ ಅಲ್ಲಿನ ವಿದ್ಯಾರ್ಥಿಗಳು ಮತ್ತು ಉಪಾಧ್ಯಾಯರು ಕ್ಷಣಕಾಲ ಗಾಬರಿಯಾದರು.ಆನಂತರ ಅವರನ್ನು ಕುಳಿತುಕೊಳ್ಳಲು ಹೇಳಿ ಅವರು ಎಲ್ಲಿಂದ ಬಂದಿರುವರೆಂದು ವಿಚಾರಿಸಿದರು.ಅವರ ಉಡುಪು ವಿಚಿತ್ರ ವಾಗಿದೆ ಎಂದರು.ಎಲ್ಲವನ್ನು ಕೇಳಿಸಿಕೊಂಡ ಗೊರೂರರು ತಾವು ಅಲ್ಲಿಗೆ ಹೋದ ಉದ್ದೇಶವನ್ನೇ ಮರೆತರು. ವಿದ್ಯಾರ್ಥಿಗಳು ಮತ್ತು ಶಿಕ್ಷಕರನ್ನು ಕುರಿತು ನೀವು ಗಾಂಧಿ ಹೆಸರು ಕೇಳಿರುವಿರಾ ಎಂದರು.ಆಗ ಒಬ್ಬ ವಿದ್ಯಾರ್ಥಿಯು ಮೇಲಿನಂತೆ ಹೇಳಿದನು.

ಸ್ವಾರಸ್ಯ : ಗಾಂಧೀಜಿಯವರು ಕೇವಲ ಭಾರತದಲ್ಲಿ ಮಾತ್ರ ವಲ್ಲದೆ ಅಮೆರಿಕದಂತಹ ದೇಶಗಳಲ್ಲಿಯೂ ಪರಿಚಿತರು ಅಲ್ಲಿನ ಪಠ್ಯಪುಸ್ತಕದಲ್ಲಿಯೂ ಗಾಂಧೀಜಿಯವರ ವಿಷಯವನ್ನು ಅಳವಡಿಸಿದ್ದರು ಎಂಬುದನ್ನು ಇದು ಸೂಚಿಸುತ್ತದೆ.

೩. ''ಇದು ಪೂರ್ಣವಾಗಿ ಕೈಯಿಂದಲೇ ತಯಾರಾದ ಬಟ್ಟೆ''.

ಈ ಮೇಲಿನ ವಾಕ್ಯವನ್ನು ಗೊರೂರು ರಾಮಸ್ವಾಮಿ ಅಯ್ಯಂಗಾರ್ ಅವರು ಬರೆದ ಅಮೆರಿಕದಲ್ಲಿ ಗೊರೂರರು ಎನ್ನುವ ಗದ್ಯ ಭಾಗದಿಂದ ಆಯ್ದುಕೊಳ್ಳಲಾಗಿದೆ.

ಅಮೆರಿಕದ ಮಗಳ ಮನೆಯಲ್ಲಿ ವಿದ್ಯುತ್ ಒಲೆ ಉಂಟು ಮಾಡಿದ ಧ್ವನಿಯ ಕಿರಿಕಿರಿ ನಿವಾರಣೆಗಾಗಿ ಅಲ್ಲೇ ಹತ್ತಿರದ ಶಾಲೆಯ ವಿದ್ಯಾರ್ಥಿ ಅಥವಾ ಉಪಾಧ್ಯಾಯರನ್ನು ಕರೆತರಲು ಹೋದ ಗೊರೂರನ್ನು ನೋಡಿ ಅಲ್ಲಿನ ವಿದ್ಯಾರ್ಥಿಗಳು ಭಯಗೊಂಡರು.ಉಪಾಧ್ಯಾಯರೂ ಕುತೂಹಲದಿಂದ ಇವರನ್ನೇ ನೋಡಿದರು. ಅದಕ್ಕೆಕಾರಣವಾಗಿದ್ದುದು ಗೊರೂರರ ವೇಷಭೂಷಣ .ಅವರನ್ನು ಕುಳಿತುಕೊಳ್ಳಲು ಹೇಳಿದ ಉಪಾಧ್ಯಾಯರೊಬ್ಬರು ನಿಮ್ಮ ಉಡುಪು ವಿಚಿತ್ರ ವಾಗಿದೆ ಎಂದರು.ಮತ್ತೊಬ್ಬ ಉಪಾಧ್ಯಾಯಿನಿ ನಿಮಗೆ ಚಳಿಯಾಗುವುದಿಲ್ಲವೇ ಎಂದರು.ಆಗ ಗೊರೂರರು ತಾವು ಧರಿಸಿದ ಖಾದಿ ಬಟ್ಟೆ ಮತ್ತು ಅದನ್ನು ಭಾರತದಲ್ಲಿ ಪ್ರಚುರ ಪಡಿಸಿದ ಗಾಂಧೀಜಿಯವರ ಕುರಿತು ವಿವರಿಸುತ್ತ ಇದು ಪೂರ್ಣವಾಗಿ ಕೈಯಿಂದಲೇ ತಯಾರಾದ ಬಟ್ಟೆ ಇದಕ್ಕೆ ಯಾವ ರೀತಿಯಿಂದಲೂ ಯಂತ್ರದ ಸೋಂಕು ಉಂಟಾಗಿಲ್ಲ ಎಂದರು.

ಸ್ವಾರಸ್ಯ: ಯಂತ್ರದ ಸೋಂಕಿಲ್ಲದೆ ಕೈಯಿಂದಲೇ ಖಾದಿ ಬಟ್ಟೆಯನ್ನು ತಯಾರಿಸಬಹುದು ಎಂಬುದನ್ನು ಮೇಲಿನ ವಾಕ್ಯ ಸೂಚಿಸುತ್ತದೆ.

೪. ''ಸ್ವಲ್ಪ ಹೋಗಿ ಇವರಿಗೆ ಸಹಾಯ ಮಾಡಿ ಬಾ''.

ಈ ಮೇಲಿನ ವಾಕ್ಯವನ್ನು ಗೊರೂರು ರಾಮಸ್ವಾಮಿ ಅಯ್ಯಂಗಾರ್ ಅವರು ಬರೆದ ಅಮೆರಿಕದಲ್ಲಿ ಗೊರೂರರು ಎನ್ನುವ ಗದ್ಯ ಭಾಗದಿಂದ ಆಯ್ದುಕೊಳ್ಳಲಾಗಿದೆ.

ಅಮೆರಿಕದ ಮಗಳ ಮನೆಯಲ್ಲಿದ್ದಾಗ ವಿದ್ಯುತ್ ಒಲೆ ಉಂಟು ಮಾಡಿದ ಕಿರಿಕರಿ ನಿವಾರಿಸಲು ಗೊತ್ತಾಗದೇ ಗೊರೂರರು ಅಲ್ಲೆ ಹತ್ತಿರವಿದ್ದ ಶಾಲೆಗೆ ಹೋದರು .ಅಲ್ಲಿನ ವಿದ್ಯಾರ್ಥಿಗಳು ಮತ್ತು ಉಪಾಧ್ಯಾಯರು ಇವರ ವೇಷಭೂಷಣವನ್ನು ನೋಡಿ ವಿಚಾರಿಸಿದಾಗ ಗೊರೂರರು ಖಾದಿ ಬಟ್ಟೆ ಮತ್ತು ಅದನ್ನು ಪ್ರಚಾರಕ್ಕೆ ತಂದ ಗಾಂಧೀಜಿಯವರ ಕುರಿತು , ಭಾರತದ ಕುರಿತು ವಿವರಿಸುತ್ತ ತಾವು ಹೋದ ಉದ್ದೇಶವನ್ನೇ ಮರೆತರು.ಅದನ್ನು ನೆನಪಿಸಲು ಅಲ್ಲಿಗೆ ಅವರ ಪತ್ನಿಯೇ ಬರಬೇಕಾಯಿತು.ಆಗ ಗೊರೂರರು ಒಬ್ಬ ವಿದ್ಯಾರ್ಥಿಯನ್ನು ತಮ್ಮ ಜೊತೆ ಕಳಿಸಿಕೊಡುವಂತೆ ಉಪಾಧ್ಯಾಯರಿಗೆ ಮನವಿ ಮಾಡಿದರು.ಆಗ ಉಪಾಧ್ಯಾಯರು ಒಬ್ಬ ಬಲಿಷ್ಠ ವಿದ್ಯಾರ್ಥಿಯನ್ನು ಕರೆದು ಮೇಲಿನಂತೆ ಹೇಳಿದರು. ಅಮೆರಿಕದ ವಿದ್ಯಾರ್ಥಿಗಳೂ ಕೂಡ ಅಲ್ಲಿನ ವೈಜ್ಞಾನಿಕತೆಯ ಅರಿವು ಹೊಂದಿದ್ದರು ಎಂಬುದನ್ನು ಮೇಲಿನ ವಾಕ್ಯ ಸೂಚಿಸುತ್ತದೆ.

೫. ''ಕೈಯಿಂದ ಇದನ್ನು ಮಾಡುವುದು ಹೇಗೋ ''.

ಈ ಮೇಲಿನ ವಾಕ್ಯವನ್ನು ಗೊರೂರು ರಾಮಸ್ವಾಮಿ ಅಯ್ಯಂಗಾರ್ ಅವರು ಬರೆದ ಅಮೆರಿಕದಲ್ಲಿ ಗೊರೂರರು ಎನ್ನುವ ಗದ್ಯ ಭಾಗದಿಂದ ಆಯ್ದುಕೊಳ್ಳಲಾಗಿದೆ.

ಅಮೆರಿಕದ ಮಗಳ ಮನೆಯಲ್ಲಿದ್ದಾಗ ವಿದ್ಯುತ್ ಒಲೆಯಿಂದ ಉಂಟಾದ ಕಿರಿಕಿರಿಯ ನಿವಾರಣೆಗೆ ಸಹಾಯಕ್ಕಾಗಿ ಒಬ್ಬ ವಿದ್ಯಾರ್ಥಿಯನ್ನು ಕರೆತರಲು ಹೋದ ಗೊರೂರರ ವಿಚಿತ್ರವಾದ ವೇಷಭೂಷಣ ನೋಡಿ ಅಲ್ಲಿನ ವಿದ್ಯಾರ್ಥಿಗಳು ಮತ್ತು ಉಪಾಧ್ಯಾಯರು ಆಶ್ಚರ್ಯಪಟ್ಟರು.ಅವರ ಉಡುಪಿನ ಕುರಿತು ವಿಚಾರಿಸತೊಡಗಿದರು.ಆಗ ಗೊರೂರರು ಗಾಂಧೀಜಿಯವರ ಕುರಿತು ಹೇಳುತ್ತ ಈ ಬಟ್ಟೆಯನ್ನು ಭಾರತದಲ್ಲಿ ಪ್ರಚಾರಕ್ಕೆ ತಂದವರು ಗಾಂಧಿ,ಇದು ಪೂರ್ಣವಾಗಿ ಕೈಯಿಂದಲೇ ತಯಾರಾದ ಬಟ್ಟೆ ಇದಕ್ಕೆ ಯಾವ ರೀತಿಯಿಂದಲೂ ಯಂತ್ರದ ಸೋಂಕು ಉಂಟಾಗಿಲ್ಲ ಎಂದರು.ಅವರ ಬಟ್ಟೆಯನ್ನು ಮುಟ್ಟಿ ನೋಡಿದ ಉಪಾಧ್ಯಾಯರು ಮೇಲಿನಂತೆ ಹೇಳಿದರು.

ಸ್ವಾರಸ್ಯ : ಖಾದಿ ಬಟ್ಟೆಯನ್ನು ಯಂತ್ರದ ಸಹಾಯವಿಲ್ಲದೇ ಹೇಗೆ ತಯಾರಿಸುವುದು ಎಂಬ ಪ್ರಶ್ನೆ ಅದರ ಅರಿವಿಲ್ಲದ ಅಮೆರಿಕದ ಉಪಾಧ್ಯಾಯರಿಗೆ ಮೂಡಿತು ಎಂಬುದನ್ನು ಮೇಲಿನ ವಾಕ್ಯ ಸೂಚಿಸುವುದಲ್ಲದೇ ಖಾದಿ ಬಟ್ಟೆ ತಯಾರಿಕೆಯ ವೈಶಿಷ್ಟ್ಯವನ್ನೂ ಕೂಡ ಸೂಚಿಸುತ್ತದೆ.

## ವ್ಯಾಕರಣ ಪ್ರಶ್ನೆಗಳು

1.ಕೆಳಗಿನ ಪ್ರಶ್ನೆಗಳಿಗೆ ನಾಲ್ಕು ಆಯ್ಕೆಗಳನ್ನು ನೀಡಲಾಗಿದೆ. ಅವುಗಳಲ್ಲಿ ಸರಿಯಾದ ಉತ್ತರವನ್ನು ಆರಿಸಿ ಬರೆಯಿರಿ.

೧. 'ಜ್ಞಾನೋದಯ' ಪದವು ಈ ಸಂಧಿಗೆ ಉದಾಹರಣೆಯಾಗಿದೆ----

ಎ) ಸವರ್ಣ ದೀರ್ಘ  ಬಿ)ಗುಣ  ಸಿ)ಆದೇಶ  ಡಿ)ಜಶ್ತ್ವ

೨.'ಪಂಚತಂತ್ರ' ಪದವು ಈ ಸಮಾಸಕ್ಕೆ ಉದಾಹರಣೆಯಾಗಿದೆ.

ಎ) ಕರ್ಮಧಾರಯ  ಬಿ)ದ್ವಿಗು  ಸಿ)ದ್ವಂಧ್ವ  ಡಿ)ಗಮಕ

೩.'ಭಾರತದಲ್ಲಿ' ಪದದಲ್ಲಿರುವ ವಿಭಕ್ತಿ -----

ಎ) ಸಪ್ತಮಿ  ಬಿ)ಪ್ರಥಮಾ ಸಿ)ದ್ವಿತೀಯಾ  ಡಿ)ತೃತೀಯಾ

೪.'ಜ್ಞಾನವನ್ನು'  ಈ ಪದಲ್ಲಿರುವ ಸಂಧಿ ------

ಎ) ಲೋಪ  ಬಿ)ಆದೇಶ  ಸಿ)ಆಗಮ  ಡಿ)ವೃದ್ಧಿ

೫.'ಕೊಯ್' ಪದದಲ್ಲಿರುವ ವ್ಯಾಕರಣಾಂಶವಿದು ----

ಎ) ಜೋಡುನುಡಿ  ಬಿ) ನುಡಿಗಟ್ಟು ಸಿ) ಅನುಕರಣಾವ್ಯಯ  ಡಿ)ದ್ವಿರುಕ್ತಿ

೬.'ಹೊತ್ತಿಕೊಂಡೀತು'  ಪದವು ಈ ಮಾದರಿಯ ಕ್ರಿಯಾಪದಕ್ಕೆ ಉದಾಹರಣೆಯಾಗಿದೆ

ಎ) ವಿಧ್ಯರ್ಥಕ  ಬಿ)ಸಾಮಾನ್ಯಾರ್ಥಕ  ಸಿ) ನಿಷೇಧಾರ್ಥಕ  ಡಿ ) ಸಂಬಾವನಾರ್ಥಕ

೭.'ವಿದ್ಯುಚ್ಛಕ್ತಿ' ಪದವು ಈ ಸಂಧಿಗೆ ಉದಾಹರಣೆಯಾಗಿದೆ

ಎ)ಶ್ಚುತ್ವ  ಬಿ)ಜಶ್ತ್ವ  ಸಿ)ಅನುನಾಸಿಕ  ಡಿ) ಯಣ್

೮.'ಅಲ್ಪಸ್ವಲ್ಪ'  ಪದದಲ್ಲಿರುವ ವ್ಯಾಕರಣಾಂಶವಿದು ---

ಎ) ಅನುಕರಣಾವ್ಯಯ  ಬಿ)ಜೋಡುನುಡಿ  ಸಿ) ದ್ವಿರುಕ್ತಿ  ಡಿ) ನುಡಿಗಟ್ಟು

೯.'ದೊಡ್ಡ ಹುಡುಗ'   ಪದದಲ್ಲಿರುವ ದೊಡ್ಡ ಎನ್ನುವುದು  ಈ ವ್ಯಾಕರಣಾಂಶದ ಉದಾಹರಣೆಯಾಗಿದೆ ---

ಎ) ಧಾತು  ಬಿ)ಕೃದಂತ  ಸಿ)ಗುಣವಾಚಕ   ಡಿ) ಜೋಡುನುಡಿ

೧೦.ತಲೆ ಮೇಲೆ ಕೆದರಿ ನಿಂತಿದ್ದ ಬಿಳಿ ಕೂದಲು  ಈ ವಾಕ್ಯದಲ್ಲಿರುವ  ವಿಶೇಷಣ -----

ಎ) ತಲೆ  ಬಿ) ಕೆದರಿ  ಸಿ)ಕೂದಲು  ಡಿ) ಬಿಳಿ

೧೧.ನಮ್ಮ ಮನೆ ನೋಡಿ ಆ ಎದುರು ಸಾಲಿನಲ್ಲಿದೆ  ಈ ವಾಕ್ಯದಲ್ಲಿರುವ ಸರ್ವನಾಮ ಪದವಿದು -----

ಎ)ನಮ್ಮ  ಬಿ) ನೋಡಿ  ಸಿ)ಮನೆ  ಡಿ)ಎದುರು

೧೨.'ಗರ' ಪದದ ತತ್ಸಮ ರೂಪವಿದು ----

ಎ)ಗೆರೆ    ಬಿ)ಗ್ರಹ   ಸಿ) ಗೃಹ    ಡಿ)ಗಾರೆ

೧೩.'ಅತ್ಯಂತ' ಪದವು ಈ ಸಂಧಿಗೆ ಉದಾಹರಣೆಯಾಗಿದೆ

ಎ) ಗುಣ ಬಿ)ಆದೇಶ ಸಿ)ವೃದ್ಧಿ ಡಿ)ಯಣ್

೧೪.'ಕಾರ್ಯ' ಪದದ ತದ್ಭವ ರೂಪ---

ಎ)ಕಾಯಕ ಬಿ)ಕೆಲಸ ಸಿ) ಕಜ್ಜ ಡಿ)ಕ್ರಿಯೆ

೧೫.'ದುರುದುರನೆ' ಪದದಲ್ಲಿರುವ ವ್ಯಾಕರಣ ವಿಶೇಷ -----

ಎ) ಜೋಡುನುಡಿ ಬಿ) ಅನುಕರಣಾವ್ಯಯ ಸಿ)ನುಡಿಗಟ್ಟು ಡಿ) ದ್ವಿರುಕ್ತಿ

೧೬.ನಾನು ಬಲಗಡೆಯ ಮೊದಲನೆಯ ಮನೆಗೆ ಹೋಗಿ ನೋಡಿದೆ ಈ ವಾಕ್ಯದಲ್ಲಿರುವ ಮೊದಲನೆಯ ಎನ್ನುವುದು ಈ ವ್ಯಾಕರಣ ವಿಶೇಷಕ್ಕೆ ಉದಾಹರಣೆಯಾಗಿದೆ .

ಎ) ದ್ವಿರುಕ್ತಿ ಬಿ)ಸಂಖ್ಯೇಯ ವಾಚಕ ಸಿ)ಸಂಖ್ಯಾವಾಚಕ ಡಿ )ಗುಣವಾಚಕ

೧೭.'ಮನೆಗೆ' ಪದದಲ್ಲಿರುವ ವಿಭಕ್ತಿಯಿದು ----

ಎ) ದ್ವಿತೀಯಾ ಬಿ) ಸಪ್ತಮಿ ಸಿ) ಚತುರ್ಥಿ ಡಿ)ಪಂಚಮಿ

೧೮.'ಪುಸ್ತಕ' ಪದದ ತದ್ಭವ ರೂಪವಿದು -----

ಎ) ಹೊತ್ತಗೆ ಬಿ) ಮಸ್ತಕ ಸಿ)ಹೊತ್ತುಗೆ ಡಿ)ಹೊತ್ತಿಗೆ

೧೯.'ಗುಜುಗುಜು' ಪದದಲ್ಲಿರುವ ವ್ಯಾಕರಣಾಂಶವಿದು ------

ಎ)ಅನುಕರಣಾವ್ಯಯ ಬಿ)ದ್ವಿರುಕ್ತಿ ಸಿ)ಜೋಡುನುಡಿ ಡಿ)ನುಡಿಗಟ್ಟು

೨೦.'ಮನೆಯಿಂದ' ಪದದಲ್ಲಿರುವ ಸಂಧಿಯಿದು -----

ಎ)ಲೋಪ ಸಂಧಿ ಬಿ)ಆಗಮ ಸಂಧಿ ಸಿ)ಆದೇಶ ಸಂಧಿ ಡಿ)ಗುಣ ಸಂಧಿ

೨೧.'ದೃಷ್ಟಿಯಿಂದ' ಪದದಲ್ಲಿರುವ ಸಂಧಿಯಿದು –---

ಎ)ಆಗಮಸಂಧಿ ಬಿ)ಆದೇಶ ಸಂಧಿ ಸಿ)ಗುಣಸಂಧಿ ಡಿ) ವೃದ್ಧಿಸಂಧಿ

೨೨.'ಧ್ವನಿ' ಪದದ ತದ್ಭವ ರೂಪವಿದು

ಎ)ದಾನಿ ಬಿ)ದನಿ ಸಿ)ಸ್ವರ ಡಿ)ಧನ

೨೩.'ಮತ್ತೊಂದು' ಪದದಲ್ಲಿರುವ ಸಂಧಿಯಿದು

ಎ)ಗುಣ ಬಿ)ಆಗಮ ಸಿ)ಯಣ್ ಡಿ)ಲೋಪ

೨೪.'ಏಳೆಂಟು' ಪದವು ಈ ಸಂಧಿಗೆ ಉದಾಹರಣೆಯಾಗಿದೆ.

ಎ) ಲೋಪ ಬಿ)ಗುಣ ಸಿ)ಸವರ್ಣದೀರ್ಘ ಡಿ)ಜಶ್ತ್ವ

೨೫.'ದಿಗ್ಗಜ' ಪದವು ಈ ಸಂಧಿಗೆ ಉದಾಹರಣೆಯಾಗಿದೆ
ಎ)ಆದೇಶ ಬಿ)ಆಗಮ ಸಿ)ಜಶ್ತ್ವ ಡಿ)ಅನುನಾಸಿಕ

ಉತ್ತರಗಳು

೧. (ಬಿ) ಗುಣಸಂಧಿ ೨.(ಬಿ)ದ್ವಿಗುಸಮಾಸ ೩.(ಎ)ಸಪ್ತಮಿ ೪. (ಸಿ)ಆಗಮ ೫. (ಸಿ)ಅನುಕರಣಾವ್ಯಯ ೬.(ಡಿ)ಸಂಭಾವನಾರ್ಥಕ ೭.(ಎ)ಶ್ಚುತ್ವ ೮.(ಬಿ)ಜೋಡುನುಡಿ ೯. (ಸಿ)ವಿಶೇಷಣ ೧೦.(ಡಿ)ಬಿಳಿ ೧೧.(ಎ)ನಮ್ಮ ೧೨.(ಬಿ)ಗ್ರಹ ೧೩.(ಡಿ)ಯಣ್೧೪(ಸಿ)ಕಜ್ಜ ೧೫. (ಬಿ)ಅನುಕರಣಾವ್ಯಯ ೧೬.(ಬಿ)ಸಂಖ್ಯೇಯವಾಚಕ ೧೭. (ಸಿ)ಚತುರ್ಥಿ ೧೮. (ಡಿ)ಹೊತ್ತಿಗೆ ೧೯. (ಎ)ಅನುಕರಣಾವ್ಯಯ ೨೦.(ಬಿ)ಆಗಮಸಂಧಿ
೨೧. (ಎ)ಆಗಮಸಂಧಿ ೨೨.(ಬಿ)ದನಿ ೨೩.(ಡಿ)ಲೋಪ ೨೪.(ಎ)ಲೋಪ ೨೫.ಸಿ)ಜಶ್ತ್ವ

ಕೊಟ್ಟಿರುವ ನಾಲ್ಕು ಉತ್ತರಗಳಲ್ಲಿ ಸರಿಯಾದ ಉತ್ತರವನ್ನು ಆರಿಸಿ ಬರೆಯಿರಿ.

೧. ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಪಡೆದ ಗೊರೂರರ ಕೃತಿ ---- ಅಮೆರಿಕದಲ್ಲಿ ಗೊರೂರು -
( ಅಮೆರಿಕದಲ್ಲಿ ಗೊರೂರು, ಹೇಮಾವತಿ ತೀರದಲ್ಲಿ ,ಹಳ್ಳಿಯ ಚಿತ್ರ ಗಳು, ಬೈಲಹಳ್ಳಿಸರ್ವೆ )

೨. ದುರ್ಯೋಧನನು ಪಾಂಡವರಿಗಾಗಿ ಕಟ್ಟಿದ ಮನೆ ---- ಅರಗಿನಮನೆ
(ಮಣ್ಣಿನ ಮನೆ,ಇಟ್ಟಿಗೆಮನೆ ,ಅರಗಿನಮನೆ, ಕಲ್ಲಿನಮನೆ )

೩. ಗೊರೂರರನ್ನು ಕಂಡ ವಿದ್ಯಾರ್ಥಿಗಳು ಸ್ಕೂಲಿನ ಒಳಗಡೆ ಇದ್ದ ------ಬ್ಯಾಡ್ ಮಿಂಟನ್ ಟೆನ್ನಿಸ್ ಕೋರ್ಟ್ ಹಾಲ್ ಗೆ ನುಗ್ಗಿದರು.(ಡಿಸ್ಟ್ರಿಕ್ಟ್ ಕೋರ್ಟ್ ,ಬ್ಯಾಡ್ ಮಿಂಟನ್ ಕೋರ್ಟ್, ಹೈಕೋರ್ಟ್, ಕಬಡ್ಡಿಕೋರ್ಟ್ )

೪. ಅಮೆರಿಕದವರ ----ಜೀವನ ಕ್ರಮವನ್ನು ಹತ್ತಿರದಿಂದ ನೋಡುವುದು ಗೊರೂರರ ಉದ್ದೇಶವಾಗಿತ್ತು.
(ಜೀವನ , ಪಥ್ಯ, ಶಿಕ್ಷಣ,ಬೋಧನ )

*ಅಲಂಕಾರ ಹೆಸರಿಸಿ ಸಮನ್ವಯಿಸಿ*

೧. ಕಣ್ಣಿನ ತೋರಣ
ಉಪಮೇಯ :ಕಣ್ಣು

**ಉಪಮಾನ : ತೋರಣ**

**ಅಲಂಕಾರ :ರೂಪಕ**

**ಉಪಮೇಯವಾದ ಕಣ್ಣು ಇದು ಉಪಮಾನವಾದ ತೋರಣ ಎಂದು ಅಬೇಧ ಕಲ್ಪಿಸಿ ಹೇಳಿರುವದರಿಂದ ಇದು ರೂಪಕ ಅಲಂಕಾರವಾಗಿದೆ.**

**೨.ದುರ್ಯೋಧನನು ಅರಗಿನ ಮನೆ ಕಟ್ಟಿದಂತೆ**

**ಉಪಮೇಯ : ಅಮೆರಿಕ, ಕೆನಡಾಗಳಲ್ಲಿ ಕಟ್ಟುವ ಮರದ ಮನೆ (ಲುಪ್ತವಾಗಿದೆ)**

**ಉಪಮಾನ : ದುರ್ಯೋಧನನು ಕಟ್ಟಿದ ಅರಗಿನಮನೆ**

**ಉಪಮಾವಾಚಕ : ಅಂತೆ**

**ಅಲಂಕಾರ : ಉಪಮಾ**

**ಸಮನ್ವಯ : ಉಪಮೇಯವಾದ ಅಮೆರಿಕ ಕೆನಡಗಳಲ್ಲಿ ಕಟ್ಟುವ ಮರದ ಮನೆಯನ್ನು (ಇಲ್ಲಿ ಲುಪ್ತವಾಗಿದೆ) ದುರ್ಯೋಧನನು ಕಟ್ಟಿದ ಅರಗಿನ ಮನೆಗೆ ಹೋಲಿಸಿ ವರ್ಣಿಸಿರುವುದರಿಂದ ಇದು ಉಪಮಾ ಅಲಂಕಾರವಾಗಿದೆ.**

## ಗದ್ಯ ಪಾಠ ೩ ಜೀವನ ದೃಷ್ಟಿ

**- ವಿ. ಕೃ. ಗೋಕಾಕ**

***ಲೇಖಕರ ಪರಿಚಯ***

**ವಿನಾಯಕ ಕಾವ್ಯನಾಮದಿಂದ ಪ್ರಸಿದ್ಧರಾಗಿರುವ ಡಾ| ವಿನಾಯಕ ಕೃಷ್ಣ ಗೋಕಾಕರು ೧೯೦೯ರಲ್ಲಿ ಹಾವೇರಿ ಜಿಲ್ಲೆಯ ಸವಣೂರಿನಲ್ಲಿ ಜನಿಸಿದರು.**

**ಸಮುದ್ರ ಗೀತೆಗಳು ,ಪಯಣ,ಉಗಮ,ಇಜ್ಜೋಡು ,ಸಮರಸವೇ ಜೀವನ,ಭಾರತ ಸಿಂಧೂ ರಶ್ಮಿ ಇತ್ಯಾದಿ ಇವರು ಬರೆದಿರುವ ಪ್ರಮುಖ ಕೃತಿಗಳು .**

**ಇವರ ದ್ಯಾವ ಪೃಥಿವೀ ಕೃತಿಗೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ,ಕರ್ನಾಟಕ ವಿಶ್ವವಿದ್ಯಾಲಯದ ಗೌರವ ಡಾಕ್ಟರೇಟ್ , ಬೆಂಗಳೂರು ವಿಶ್ವವಿದ್ಯಾಲಯದ ಗೌರವ ಡಿ.ಲಿಟ್ ಪದವಿ ದೊರೆತಿದೆ .ಸಮಗ್ರಸಾಹಿತ್ಯಕ್ಕಾಗಿ ಜ್ಞಾನಪೀಠಪ್ರಶಸ್ತಿ ,ಭಾರತ ಸರ್ಕಾರದ ಪದ್ಮಶ್ರೀ ಪುರಸ್ಕಾರ ನೀಡಿ ಗೌರವಿಸಿದೆ.**

**ಕೆಳಗಿನ ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರಿಸಿ.**

೧.ಜೀವನದಲ್ಲಿ ಯಾವುದಕ್ಕೆ ಹೆಚ್ಚಿನ ಸ್ಥಾನವಿದೆ ?

ನಮ್ಮ ಜೀವನದಲ್ಲಿ ಅನ್ಯರ ದೃಷ್ಟಿಕೋನಕ್ಕೂ ಅನ್ಯರ ಜೀವನದಲ್ಲಿ ನಮ್ಮ ದೃಷ್ಟಿಕೋನಕ್ಕೂ ಒಂದು ಹೆಚ್ಚಿನ ಸ್ಥಾನವಿದೆ.

೨.ಅಂತರ್ ಜೀವಿಗೆ ಯಾವುದು ದೊಡ್ಡ ಸಮಸ್ಯೆಯಾಗುತ್ತದೆ?

ಅಂತರ್ಜೀವಿಗೆ ಉಳಿದವರ ಯೋಗಕ್ಷೇಮವನ್ನು ನೋಡಿಕೊಳ್ಳುವುದು ಒಂದು ದೊಡ್ಡ ಸಮಸ್ಯೆಯಾಗುತ್ತದೆ.

೩.ಅಂತರ್ಜೀವಿಯ ಶಕ್ತಿ ಹೇಗೆ ವೆಚ್ಚವಾಗುತ್ತದೆ?

ತನ್ನ ಮನದ ಮೊಗಸಾಲೆಯನ್ನು ಓರಣವಾಗಿಸುವುದರಲ್ಲಿಯೇ ಅಂತರ್ ಜೀವಿಯ ಎಲ್ಲ ಶಕ್ತಿಯೂ ವೆಚ್ಚವಾಗುತ್ತದೆ.

೪.ಧರ್ಮಗಳು ಹಾಕಿಕೊಟ್ಟಿರುವ ರತ್ನಪಾಠ ಏನು ?

ಸಾಧಕನಿಗೆ,ಅಂತರ್ಜೀವಿಗೆ ಯಾವ ತೊಂದರೆಯೂ ಆಗಬಾರದೆಂದು ಅವನನ್ನು ಸಮಾಜವೇ ನೋಡಿಕೊಳ್ಳಬೇಕೆಂಬುದೇ ಧರ್ಮಗಳು ಹಾಕಿಕೊಟ್ಟಿರುವ ಧರ್ಮಗಳು ಹಾಕಿಕೊಟ್ಟಿರುವ ರತ್ನಪಾಠ.

೫.ಗೃಹಸ್ಥಾಶ್ರಮವು ಧನ್ಯ ಎಂದು ಹೇಳಿದವರು ಯಾರು ?

ಕಾಳಿದಾಸನು ಕಲ್ಪಿಸಿದ ಋಷಿ -ಅರಣ್ಯಕ ಗೃಹಸ್ಥಾಶ್ರಮವು ಧನ್ಯವೆಂದು ಹೇಳಿದ್ದಾನೆ.

ಮೂರು -ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿ.

೧.ಅಂತರ್ಜೀವಿಗೆ ಸುಲಭವಾಗಿ ರಕ್ತಗತವಾಗದ ಸಂಗತಿ ಯಾವುದು ?

ಅಂತರ್ಜೀವಿಗೆ ಉಳಿದವರ ಯೋಗಕ್ಷೇಮವನ್ನು ನೋಡಿಕೊಳ್ಳುವುದು ಒಂದು ದೊಡ್ಡ ಸಮಸ್ಯೆಯಾಗುತ್ತದೆ.ತನ್ನ ಯೋಗಕ್ಷೇಮವನ್ನು ಭಗವಂತನ ಮೇಲೆ ಹೊರಿಸಲು ಕಲ್ಪನೆಯ ಧ್ಯೇಯಗಳ ಜಗತ್ತಿನಲ್ಲಿ ಹೊಳೆಯುವುದು ಸುಲಭವಾಗಿ ರಕ್ತಗತವಾಗುವುದಿಲ್ಲ.

೨.ಕಲೋಪಾಸಕನ ಕರ್ತವ್ಯವೇನು ?

ಕಲೋಪಾಸಕನೂ ಒಬ್ಬ ವ್ಯಕ್ತಿ .ಸಮಾಜದ- ಮನುಕುಲದ-ಒಂದು ಘಟಕ. ಕಲಾಸೇವೆಯನ್ನು ಸಲ್ಲಿಸುವುದಲ್ಲದೆ ಪರಾಂತಃಕರಣ ಪ್ರವೇಶಿಯಾಗಿ ಜನತೆಯ ಮನವನ್ನೂ ,ಅಂತಃಕರಣವನ್ನೂ ಅವನು ತಿದ್ದಬಹುದು . ಆದರೆ ಯಾವ ವ್ಯಕ್ತಿಗಳೊಡನೆ ಅವನ ಸಂಬಂಧ ಬರುವುದೋ ಅವರ ಅಂತಃಕರಣವನ್ನು

ನೋಯಿಸದಂತೆ ತನ್ನನ್ನು ಅಲಕ್ಷಿಸಿಯಾದರೂ ಉಳಿದವರ ಹಿತ ಚಿಂತನೆ ಹಾಗೂ ಹಿತಸಾಧನೆಯಲ್ಲಿ ತೊಡಗುವುದು ಎಲ್ಲ ವ್ಯಕ್ತಿಗಳಂತೆ ಅವನ ಕರ್ತವ್ಯವೂ ಆಗಿದೆ.

ಸಾಧಕನ ಯೋಗಕ್ಷೇಮವನ್ನು ಸಮಾಜ ಹೇಗೆ ನಿರ್ವಹಿಸು ತ್ತಿತ್ತು ?

ಸಾಧಕನಿಗೆ,ಅಂತರ್ಜೀವಿಗೆ-ಯಾವ ತೊಂದರೆಯೂ ಆಗಬಾರದೆಂದು ಎಲ್ಲ ಧರ್ಮಗಳೂ ಅವನನ್ನು ಸಮಾಜವೇ ನೋಡಿಕೊಳ್ಳಬೇಕೆಂದು ಹೇಳಿವೆ. ಧರ್ಮಶಾಲೆಗಳು,ವಿಹಾರಗಳು,ಅನ್ನಛತ್ರ ಗಳು-ಇವು ಏರ್ಪಟ್ಟಿರುವುದು ಇಂಥವರಿಗಾಗಿ ಹಾಗೂ ನಿರ್ಗತಿಕರಿಗಾಗಿ.ಅನೇಕ ದೇವಸ್ಥಾನಗಳಲ್ಲಿಯೂ ,ಮಠಗಳಲ್ಲಿಯೂ ಇಂಥ ಏರ್ಪಾಟಿದೆ.ಇಂಥ ಸಾಧಕರನ್ನು ಮನೆಯಲ್ಲಿಟ್ಟುಕೊಂಡು ಅವರ ಯೋಗಕ್ಷೇಮವನ್ನು ನೋಡಿಕೊಂಡವರೂ ಉಂಟು. ಹೀಗೆ ಸಮಾಜವು ಸಾಧಕನ ಯೋಗಕ್ಷೇಮವನ್ನು ನಿರ್ವಹಿಸುತ್ತಿತ್ತು.

೪.ಸಹಾನು ಭೂತಿಗಾಗಿ ಇರಬೇಕಾದ ಎರಡು ಕಣ್ಣುಗಳು ಯಾವುವು ?

ಸಹಾನುಭೂತಿಗಾಗಿ ಇರಬೇಕಾದ ಎರಡು ಕಣ್ಣುಗಳು ಯಾವಾಗಲೂ ತೆರೆದಿರ ಬೇಕಾಗು ತ್ತದೆ.ಅವುಗಳೆಂದರೆ-ಒಂದು ತನ್ನಿಂದ ಹೆರವರಿಗೆ ಯಾವ ತೊಂದರೆಯೂ ಮಾನಸಿಕ ವ್ಯಥೆಯೂ ಆಗದಂತೆ ಎಚ್ಚರ ಪಡುವ ಕಣ್ಣು; ಇನ್ನೊಂದು ತನ್ನ ಅಳವಿನಲ್ಲಿ ಹೆರವರ ಐಹಿಕ, ಮಾನಸಿಕ ಇಲ್ಲವೆ ಆತ್ಮಿಕ ಹಿತಚಿಂತನೆ ಎಲ್ಲೆಲ್ಲಿ ಸಾಧ್ಯ ಎಂದು ಸದಾ ಅಭ್ಯಸಿಸುವ ಕಣ್ಣು.

೩.ಸಂದರ್ಭದೊಂದಿಗೆ ವಿವರಿಸಿ.

೧."ತನ್ನಂತೆ ಪರರ ಬಗೆದೊಡೆ ಕೈಲಾಸ ಬಿನ್ನಾಣಮಕ್ಕು "

ಈ ಮೇಲಿನ ವಾಕ್ಯವನ್ನು ವಿ.ಕೃ. ಗೋಕಾಕರು ಬರೆದ ಜೀವನ ದೃಷ್ಟಿ ಎನ್ನುವ ಗದ್ಯಪಾಠದಿಂದ ಆಯ್ದು ಕೊಳ್ಳಲಾಗಿದೆ.

ಈ ಮಾತನ್ನು ಸರ್ವಜ್ಞ ಕವಿ ಹೇಳಿದ್ದಾನೆ.

ಸಂದರ್ಭ:'' ಆತ್ಮಾನಂ ಸರ್ವ ಭೂ ತೇಷು, ಸರ್ವ ಭೂತಾನಿಚಾತ್ಮನಿ "ಎಂದು ಗೀತೆಯಲ್ಲಿ ಹೇಳಿದೆ.ಇದನ್ನೇ ಸರ್ವಜ್ಞನು ತನ್ನಂತೆ ಪರರ ಬಗೆದೊಡೆ ಕೈಲಾಸ ಬಿನ್ನಾಣವಕ್ಕು ಎಂದಿದ್ದಾನೆ.ಉಳಿದವರ ಕಣ್ಣಿನಲ್ಲಿ ಹೊಕ್ಕು ಅವರು ನಮ್ಮನ್ನು ಯಾವ ದೃಷ್ಟಿಯಿಂದ ಕಾಣುವರೋ ಆ ದೃಷ್ಟಿಯಿಂದ ನಮ್ಮನ್ನು ನಾವು ಕಂಡುಕೊಳ್ಳಬೇಕು ಎಂದು ಬರ್ನ್ಸ ಕವಿ ಹೇಳಿದ್ದಾನೆ. ಆದ್ದರಿಂದ ನಮ್ಮ ಜೀವನದಲ್ಲಿ ಅನ್ಯರ ದೃಷ್ಟಿಕೋನಕ್ಕೂ ,ಅನ್ಯರ ಜೀವನದಲ್ಲಿ ನಮ್ಮ ದೃಷ್ಟಿಕೋನಕ್ಕೂ ಒಂದು ಹೆಚ್ಚಿನ ಸ್ಥಾನವಿದೆ ಎಂದು ಲೇಖಕರು ವಿವರಿಸುವಾಗ ಸರ್ವಜ್ಞನ ಮಾತಿನ ಉದಾಹರಣೆ ನೀಡಿದ್ದಾರೆ.

ಸ್ವಾರಸ್ಯ:ನಮ್ಮಂತೆಯೇ ಇತರರು ಎಂದು ಅರಿತು ನಡೆಯಬೇಕು .ನನ್ನನ್ನು ಎಲ್ಲರಲ್ಲಿ ನೋಡು.ಎಲ್ಲರನ್ನು ನನ್ನಲ್ಲಿ ನೋಡು ಎನ್ನುವುದು ಮೇಲಿನ ವಾಕ್ಯದ ಅರ್ಥವಾಗಿದೆ.

೨.'' ತನ್ನ ಗುಂಗಿನಲ್ಲಿದ್ದ ಈ ಅಂತರಜೀವಿಗೆ ಪರರ ಹಂಗೆಲ್ಲಿ" ?

ಈ ಮೇಲಿನ ವಾಕ್ಯವನ್ನು ವಿ.ಕೃ. ಗೋಕಾಕರು ಬರೆದ ಜೀವನ ದೃಷ್ಟಿ ಎನ್ನುವ ಗದ್ಯಪಾಠದಿಂದ ಆಯ್ದು ಕೊಳ್ಳಲಾಗಿದೆ.

ಈ ಮಾತನ್ನು ಲೇಖಕರು ಹೇಳಿದ್ದಾರೆ.

ಸಂದರ್ಭ:ಅಂತರ್ಜೀವಿಯು ಸಾಹಿತ್ಯಕ ದೃಷ್ಟಿಯಿಂದ ಪರಾಂತಃಕರಣವನ್ನು ಪ್ರವೇಶಿಸಿ ಅದನ್ನು ತಿಳಿದು ಕೊಳ್ಳಬಲ್ಲ.ಆದರೆ ಉಳಿದ ಹೃದಯಗಳ ಆಸೆಯನ್ನು ಅಭ್ಯಸಿಸಿ ಅವುಗಳನ್ನು ಕಳೆಯಲು ಹವಣಿಸುವುದು ಅವನ ಸಹಜ ಸಿದ್ಧಿಯಾಚೆಗಿನ ಮಾತು .ಏಕೆಂದರೆ ತನ್ನ ಮನದ ಮೊಗಸಾಲೆಯನ್ನು ಓರಣವಾಗಿಸುದರಲ್ಲೇ ಅವನ ಎಲ್ಲ ಶಕ್ತಿಯೂ ವ್ಯಯವಾಗುತ್ತಿರುತ್ತದೆ.ತನ್ನ ಅಂತರಂಗದ ಭವ್ಯತೆಯು ಅವನನ್ನು ಕರೆಯುತ್ತಿರುತ್ತದೆ ಎಂದು ವಿವರಿಸುವಾಗ ಲೇಖಕರು ಮೇಲಿನಂತೆ ಹೇಳಿದ್ದಾರೆ.

ಸ್ವಾರಸ್ಯ: ಅಂತರ್ಜೀವಿಯು ಮೊದಲು ತನ್ನ ದೋಷಗಳನ್ನು ಸರಿಪಡಿಸಿಕೊಳ್ಳುವುದರಲ್ಲಿ,ತನ್ನನ್ನು ತಾನು ತಿದ್ದಿಕೊಳ್ಳುವುದರಲ್ಲಿ ತನ್ನ ಸಾಧನಾ ಲೋಕದಲ್ಲಿ ಹೆಚ್ಚಿನ ಸಮಯವನ್ನು ಕಳೆಯುವುದರಿಂದ ಬೇರೆಯವರ ಕುರಿತು ಆಲೋಚಿಸುವುದು ಅವನಿಗೆ ಸಾಧ್ಯವಿಲ್ಲದ ಮಾತು ಎಂಬುದು ಮೇಲಿನ ವಾಕ್ಯದ ಸ್ವಾರಸ್ಯವಾಗಿದೆ.

೩.''ಕಲೋಪಾಸಕನಿಗೆ ಸಮಾಜದಲ್ಲಿ ಯಾವ ಹೊಣೆಯೂ ಇರಬಾರದು ''.

ಈ ಮೇಲಿನ ವಾಕ್ಯವನ್ನು ವಿ.ಕೃ. ಗೋಕಾಕರು ಬರೆದ 'ಜೀವನ ದೃಷ್ಟಿ' ಎನ್ನುವ ಗದ್ಯಪಾಠದಿಂದ ಆಯ್ದು ಕೊಳ್ಳಲಾಗಿದೆ.

ಈ ಮಾತನ್ನು ಹಿರಿಯ ಸಾಹಿತಿಯೊಬ್ಬರು ಹೇಳಿದ್ದಾರೆ.

ಕಲೋಪಾಸಕನಲ್ಲಿ ಸಮಾಜದ ಕಲ್ಯಾಣವನ್ನು ಪೋಷಿಸು ವ ಶಕ್ತಿಯು ಇರುತ್ತದೆ .ಆದ್ದರಿಂದ ಸಮಾಜದಲ್ಲಿ ಅವನಿಗೆ ಯಾವ ಹೊಣೆಯೂ ಇರಬಾರದು .ಬದಲಾಗಿ ಸಮಾಜವೇ ಅವನನ್ನು ಪೋಷಿಸುವ ಹೊಣೆಯನ್ನು ಹೊರಬೇಕು .ಅವನು ಎಲ್ಲ ಕಡೆ ಹೋದಾಗ ಅವನು ಕಲೋಪಾಸಕನೆಂದು ತಿಳಿದವರು ಅವನ ಅವಶ್ಯಕತೆಗಳನ್ನು ಪೂ ರೈಸಬೇಕು ಎಂದು ಹಿರಿಯ ಸಾಹಿತಿಯೊಬ್ಬರು ಅಭಿಪ್ರಾಯ ಪಟ್ಟಿದ್ದಾರೆ ಎಂದು ವಿವರಿಸುವಾಗ ಮೇಲಿನ ಮಾತು ಬಂದಿದೆ.

ಸ್ವಾರಸ್ಯ:ಕಲೋಪಾಸಕನು ತನ್ನ ಕಲೆಯ ಮೂಲಕ ಸಮಾಜಕ್ಕೆ ಕೊಡುಗೆಯನ್ನು ನೀಡುವುದರಿಂದ ಅವನಿಂದ ಕಲೆಯ ಮೌಲ್ಯವನ್ನು ಪಡೆದ ಜನರು ಅವನನ್ನು ನೋಡಿಕೊಳ್ಳುವುದು ಅವನ ಕಲೆಗೆ ಸಲ್ಲುವ ಗೌರವ ಎಂಬುದು ಮೇಲಿನ ವಾಕ್ಯದ ಸ್ವಾರಸ್ಯವಾಗಿದೆ.

೪."ದಾತೃವಿನ ಮನವನ್ನು ಹತ್ತು ಸಲ ಪರೀಕ್ಷಿಸಿ ದಾನವನ್ನು ಸ್ವೀಕರಿಸಬೇಕು ." .

ಈ ಮೇಲಿನ ವಾಕ್ಯವನ್ನು ವಿ.ಕೃ. ಗೋಕಾಕರು ಬರೆದ 'ಜೀವನ ದೃಷ್ಟಿ' ಎನ್ನುವ ಗದ್ಯಪಾಠದಿಂದ ಆಯ್ದು ಕೊಳ್ಳಲಾಗಿದೆ.

ಈಮಾತನ್ನು ಲೇಖಕರು ಹೇಳಿದ್ದಾರೆ.

ಸಂದರ್ಭ: ಸಾಧಕನಿಗೆ ಅಂತರ್ಜೀವಿಗೆ ಯಾವ ತೊಂದರೆಯೂ ಆಗಬಾರದೆಂದು ಎಲ್ಲ ಧರ್ಮಗಳೂ ಅವನನ್ನು ಸಮಾಜವೇ ನೋಡಿಕೊಳ್ಳಬೇಕೆಂದು ಹೇಳಿವೆ.ಇದು ಸಮಾಜದ ಕರ್ತವ್ಯವಾದರೆ ಸಾಧಕನಿಗೂ ತನ್ನದೇ ಕರ್ತವ್ಯವಿದೆ.ಇನ್ನೊಬ್ಬರಿಗೆ ಅವನು ಹೊರೆಯಾಗಬಾರದು.. ದಾತೃವಿನ ಮನವನ್ನು ಹತ್ತು ಸಲ ಪರೀಕ್ಷಿಸಿ ದಾನವನ್ನು ಸ್ವೀಕರಿಸಬೇಕು ..ಕೇಳಿ ದೊರಕಿಸಿಕೊಂಡ ಸಾಮಗ್ರಿ-ಸೌಕರ್ಯಗಳ ಮೇಲೆ ನಿಂತ ಸಾಧನೆ -ತಪಸ್ಸು,ಮರವನ್ನು ಆಶ್ರಯಿಸಿ ಬೆಳೆದ ಬಳ್ಳಿಯಂತೆ ಅದಕ್ಕೆ ಸ್ವಯಂಪೂರ್ಣತೆ ಇಲ್ಲ ಎಂದು ವಿವರಿಸುವಾಗ ಈ ಮಾತು ಬಂದಿದೆ.

ಸ್ವಾರಸ್ಯ:ಕಲೋಪಾಸಕನ ಕಲೆಯನ್ನು ಮೆಚ್ಚಿದ ದಾನಿಗಳು ಅವನಿಗೆ ದಾನವನ್ನು ಕೊಡುವುದು ಸಹಜವೇ ಆಗಿದ್ದರೂ ಅವನು ಹಾಗೆ ತೆಗೆದುಕೊಳ್ಳುವುದು ಸರಿಯಲ್ಲ.ಅವರ ದಾನದ ಹಿಂದೆ ಯಾವ ಉದ್ದೇಶವಿದೆ ,ದಾನಕ್ಕೆ ತಾನು ಅರ್ಹನೇ ಎಂಬುದನ್ನು ಪರಿಶೀಲಿಸಿ ತೆಗೆದುಕೊಳ್ಳಬೇಕೆಂಬುದು ಮೇಲಿನ ವಾಕ್ಯದ ಸ್ವಾರಸ್ಯವಾಗಿದೆ.

೫.''ಜೀವನ ರಥಕ್ಕೆ ಒಗ್ಗಾಲಿಯ ಭೀತಿ ಇದೆ."

ಈ ಮೇಲಿನ ವಾಕ್ಯವನ್ನು ವಿ.ಕೃ. ಗೋಕಾಕರು ಬರೆದ 'ಜೀವನ ದೃಷ್ಟಿ' ಎನ್ನುವ ಗದ್ಯಪಾಠದಿಂದ ಆಯ್ದು ಕೊಳ್ಳಲಾಗಿದೆ.

ಈಮಾತನ್ನು ಲೇಖಕರು ಹೇಳಿದ್ದಾರೆ.

ಸಂದರ್ಭ:ಸಾಮಾಜಿಕ ಪುನರ್ಘಟನೆಯಲ್ಲಿ ರಶ್ಯದ ಸಮತಾವಾದವೂ ಭಾರತದ ಆಧ್ಯಾತ್ಮವಾದವೂ ರೂಪುಗೊಂಡು ಬೆರೆಯಬೇಕಾಗಿದ್ದಂತೆ ಇಂದಿನ ಓರ್ವ ವ್ಯಕ್ತಿಯ ಜೀವನದಲ್ಲಿ ಆಂತರಿಕ ದೃಷ್ಟಿಯು ಹಾಗು ಅನ್ಯರ ಹಿತದೃಷ್ಟಿಗಳ ಪ್ರಜ್ಞೆಯ ಸಮ್ಮಿಲನವಾಗಬೇಕಿದೆ. ರಸವೇ ಜೀವನ. ರಸದ ಸೂಕ್ಷ್ಮತೆ ವಿಶಾಲತೆಗಳ ವ್ಯತ್ಯಯ ರಹಿತ ವಿಕಾಸವೇ ವ್ಯಕ್ತಿಜೀವನ.ಸಮರಸವೇ ಸಹಜೀವನ.ಬರೀ

ಸ್ವಾನುಭೂತಿಯಿಂದ ಸಾಗುವ ಜೀವನ ರಥಕ್ಕೆ ಒಗ್ಗಾಲಿಯ ಭೀತಿ ಇದೆ.ಸಹಾನುಭೂತಿಯೂ ಆದರ ಜೋಡಣೆಗೆ ಅವಶ್ಯವಾದುದು ಎಂಬುದು ಲೇಖಕರ ಅಭಿಪ್ರಾಯವಾಗಿದೆ.
ಸ್ವಾರಸ್ಯ:ಸಾಮರಸ್ಯದ ಜೀವನವು ಮಹತ್ವಪೂರ್ಣವಾದುದು.ಜೀವನ ರಥವು ಸರಿಯಾಗಿ ಸಾಗಲು ಎರಡೂ ಚಕ್ರ ಗಳ ಅವಶ್ಯಕತೆ ಇದೆಸ್ವ ಅನುಭೂತಿಯಿದ್ದರೆ ಸಾಲದು.ಸಹಾನುಭೂತಿಯೂ ಬೇಕು ಎನ್ನುವುದು ಮೇಲಿನ ವಾಕ್ಯದ ಸ್ವಾರಸ್ಯವಾಗಿದೆ.

<u>೪.ಹೊಂದಿಸಿ ಬರೆಯಿರಿ.(ಬರೆದಿದೆ.)</u>

೧.ಕಲೋಪಾಸಕ-ಗುಣಸಂಧಿ

೨.ವಿನಾಯಕ-ವಿ.ಕೃ.ಗೋಕಾಕ್

೩.ಅಂತರಂಗ -ಬಹಿರಂಗ

೪.ದೂರದ ಗುಡ್ಡ -ಕಣ್ಣಿಗೆ ನುಣ್ಣಗೆ

೫.ಆರಣ್ಯಕ-ಋಷಿ

೫.ಕೊಟ್ಟಿರುವ ಸೂಚನೆಯಂತೆ ಉತ್ತರಿಸಿ.

ಅ.ಕಲ್ಪನೆಯು ಧ್ಯೇಯಗಳ ಜಗತ್ತಿನಲ್ಲಿ ಹೊಳೆಯುತ್ತದೆ. (ಭವಿಷ್ಯತ್ ಕಾಲಕ್ಕೆಪರಿವರ್ತಿಸಿ)
ಉತ್ತರ- ಕಲ್ಪನೆಯು ಧ್ಯೇಯಗಳ ಜಗತ್ತಿನಲ್ಲಿ ಹೊಳೆಯುವುದು .

ಆ.ಕಲ್ಯಾಣವನ್ನು ಪೋಷಿಸುವ ಒಂದು ಶಕ್ತಿಯು ಅವನಲ್ಲಿರುವುದು ..(ವರ್ತಮಾನಕಾಲಕ್ಕೆ ಪರಿವರ್ತಿಸಿ.)
ಉತ್ತರ-ಕಲ್ಯಾಣವನ್ನು ಪೋಷಿಸುವ ಒಂದು ಶಕ್ತಿಯು ಅವನಲ್ಲಿರುತ್ತದೆ.

ಇ.ಅವನು ಹೆಚ್ಚಾಗಿ ಸಮಾಜದ ಮಧ್ಯದಲ್ಲಿಯೇ ಬಾಳುತ್ತಾನೆ.(ಭೂತಕಾಲಕ್ಕೆಪರಿವರ್ತಿಸಿ)
ಉತ್ತರ-ಅವನು ಹೆಚ್ಚಾಗಿ ಸಮಾಜದ ಮಧ್ಯದಲ್ಲಿಯೇ ಬಾಳಿದನು ..

೬.ಕೆಳಗಿನ ಪ್ರಶ್ನೆಗಳಿಗೆ ಎಂಟು -ಹತ್ತು ವಾಕ್ಯಗಳಲ್ಲಿ ಉತ್ತರಿಸಿ.

ಜೀವನ ದೃಷ್ಟಿ ಗದ್ಯದಲ್ಲಿ ಅಂತರ್ಜೀವಿಯ ವ್ಯಕ್ತಿತ್ವ ಹೇಗೆ ವರ್ಣಿತ ವಾಗಿದೆ ?
ಅಂತರ್ಜೀವಿಗೆ ಉಳಿದವರ ಯೋಗಕ್ಷೇಮವನ್ನು ನೋಡಿಕೊಳ್ಳುವುದು ಒಂದು ದೊಡ್ಡ ಸಮಸ್ಯೆಯಾಗುತ್ತದೆ.ತನ್ನ ಯೋಗಕ್ಷೇಮವನ್ನೇ ಭಗವಂತನ ಮೇಲೆ ಹೊರಿಸಲು ಕಲ್ಪನೆಯು ಧ್ಯೇಯಗಳ ಜಗತ್ತಿನಲ್ಲಿ ಹೊಳೆಯುವುದು ಸು ಲಭವಾಗಿ ರಕ್ತಗತವಾಗುವುದಿಲ್ಲ.ಉಳಿದವರನ್ನು ಪ್ರೀತಿಯಿಂದ

ಅವನು ಕಾಣಬಲ್ಲ.ತನ್ನಿಂದ ಆದಷ್ಟು ಯಾರಿಗೂ ತೊಂದರೆಯಾಗಬಾರದೆಂದು ಅವನು ಎಚ್ಚರಪಡಬಲ್ಲ.ಸಾಹಿತ್ಯಕ ದೃಷ್ಟಿಯಿಂದ ಪರಾಂತಃಕರಣವನ್ನು ಪ್ರವೇಶಿಸಿ ಅದನ್ನು ತಿಳಿದುಕೊಳ್ಳಲೂ ಬಲ್ಲ.ಆದರೆ ಉಳಿದ ಹೃದಯಗಳ ಆಸೆಗಳನ್ನು ತಾನಾಗಿಯೇ ಅಭ್ಯಸಿಸಿ ಅವುಗಳನ್ನು ಕಳೆಯಲು ಹವಣಿಸುವುದು ಅವನ ಸಹಜ ಸಿದ್ಧಿಯಾಚೆಗಿನ ಮಾತು .ಏಕೆಂದರೆ ತನ್ನ ಮನದ ಮೊಗಸಾಲೆಯನ್ನು ಓರಣವಾಗಿಸುವುದರಲ್ಲಿಯೇ ಅವನ ಎಲ್ಲ ಶಕ್ತಿಯೂ ವೆಚ್ಚವಾಗುತ್ತಿರುತ್ತದೆ.ತನ್ನ ಅಂತರಂಗದ ಭವ್ಯತೆಯು ಅವನನ್ನು ಕರೆಯುತ್ತಿರುತ್ತದೆ.ಈ ಗುಂಗಿನಲ್ಲಿದ್ದ ಅಂತರ್ಜೀವಿಗೆ ಪರರ ಹಂಗಿಲ್ಲ.ಹೀಗೆ ಜೀವನ ದೃಷ್ಟಿ ಗದ್ಯದಲ್ಲಿ ಅಂತರ್ಜೀವಿಯ ವ್ಯಕ್ತಿತ್ವ ವರ್ಣಿತವಾಗಿದೆ.

೨ ಸಮಾಜದಲ್ಲಿ ಕಲೋಪಾಸಕನ ಮಹತ್ವವನ್ನು ಲೇಖಕರು ಹೇಗೆ ವಿಶ್ಲೇಷಿಸಿದ್ದಾರೆ.?

ಕಲೋಪಾಸಕನೂ ಒಬ್ಬ ವ್ಯಕ್ತಿ.;ಸಮಾಜದ ಮನುಕುಲದ ಒಂದು ಘಟಕ.ಮುಖ್ಯವಾಗಿ ಕಲೋಪಾಸಕನೆಂದು ಕಲಾಸೇವೆಯನ್ನು ಸಲ್ಲಿಸುವುದಲ್ಲದೆ ಓರ್ವ ವ್ಯಕ್ತಿಯೆಂದು ಅವನ ವ್ಯಕ್ತಿತ್ವ ವಿಕಾಸವೂ ಕಾಲನಿಯತಿಗನುಸರಿಸಿ ಆಗಬೇಕು .. ಪರಾಂತಃಕರಣಪ್ರವೇಶಿಯಾಗಿ ಜನತೆಯ ಮನವನ್ನೂ ಅಂತಃಕರಣವನ್ನೂ ಅವನು ತಿದ್ದಬಹುದು .ಆದರೆ ಯಾವ ವ್ಯಕ್ತಿಗಳೊಡನೆ ಅವನ ಸಂಬಂಧ ಬರುವುದೋ ಅವರ ಅಂತಃಕರಣವನ್ನು ನೋಯಿಸದಂತೆ ತನ್ನನ್ನು ಅಲಕ್ಷಿಸಿಯಾದರೂ ಉಳಿದವರ ಹಿತಚಿಂತನೆ ಹಾಗು ಹಿತ ಸಾಧನೆಯಲ್ಲಿ ತೊಡಗುವುದು ಎಲ್ಲ ವ್ಯಕ್ತಿಗಳಂತೆ ಅವನ ಕರ್ತವ್ಯವೂ ಆಗಿದೆ.ಅವನು ಯೋಗಸ್ಥನೂ ,ಗೃಹಸ್ಥನೂ ಕೂಡಿಯೇ ಆಗಿ ಸಮಾಜದಲ್ಲಿ ಬಾಳಬೇಕಿದೆ.ಸಮ್ಯಕ್ ದರ್ಶನದ ಸಮತೂಕವನ್ನು ಅವನು ಪಡೆದಿರಬೇಕು..

## ಜೀವನ ದೃಷ್ಟಿ......ನನಗೆ ಹೊಳೆದಷ್ಟು

---

ಮನುಷ್ಯ ಸಮಾಜ ಜೀವಿ .ಸಮಾಜದಲ್ಲಿ ಜೀವಿಸು ವಾಗ ಕೇವಲ ತನಗಾಗಿ ಜೀವಿಸದೆ ಕೆಲವೊಮ್ಮೆ ತನ್ನವರಿಗಾಗಿಯೂ ಇನ್ನೂ ಕೆಲವೊಮ್ಮೆ ಬೇರೆಯವರಿಗಾಗಿಯೂ ಬದುಕುವುದು, ಆಲೋಚಿಸುವುದು ಅನಿವಾರ್ಯ ಹೇಗೋ ಅಗತ್ಯ ಕೂಡ.

ಸಮಾಜದಲ್ಲಿ ಜೀವಿಸುವಾಗ ಪ್ರತಿಯೊಬ್ಬನೂ ಇಲ್ಲಿ ಇರುವುದು ತಾನೊಬ್ಬನೇ ಅಲ್ಲ, ನನ್ನ ಸುತ್ತ ಸಮಾಜದ ಸದಸ್ಯರಿದ್ದಾರೆ ಎನ್ನುವುದನ್ನು ಮನಗಂಡಿರಬೇಕು .. ಮನಗಂಡಿರುತ್ತಾನೆ ಕೂಡ. ಹಾಗಾಗಿ ಅವನ ಆಲೋಚನೆಗಳು ,ವರ್ತನೆಗಳು ಅವನ ಸುತ್ತ ಅಥವಾ ಅವನಿಗೆ ಮಾತ್ರ ಕೇಂದ್ರೀಕೃತವಾಗಿರದೇ

ಬೇರೆಯವರಿಗಾಗಿಯೂ ರೂಪಿಸಲ್ಪಡುತ್ತವೆ.ಸಮಾಜ ತನ್ನನ್ನು ಗಮನಿಸುತ್ತಿದೆ ಎಂದಾಗ ಸಮಾಜಕ್ಕೋಸ್ಕರವೇ ಕೆಲವೊಮ್ಮೆ ನಮ್ಮ ನಡುವಳಿಕೆಗಳು ವ್ಯಕ್ತಿತ್ವ ನಿರ್ದೇಶಿಸ್ಪಡುತ್ತವೆ.ಈ ಎಲ್ಲ ದೃಷ್ಟಿಯಿಂದ ಅವಲೋಕಿಸಿದಾಗ ನಮ್ಮ ಜೀವನದಲ್ಲಿ ನಮ್ಮ ಕುರಿತಾದ ಅನ್ಯರ ದೃಷ್ಟಿಕೋನ ಪ್ರಧಾನ ಪಾತ್ರ ವಹಿಸುತ್ತದೆ..ಹಾಗೆಯೇ ಅನ್ಯರಿಗೂ ..

ಅಂತರ್ಜೀವಿಯು ಮೊದಲಿಗೆ ತನ್ನನ್ನು ತಾನು ಪರಿಪೂರ್ಣಗೊಳಿಸಿಕೊಳ್ಳಬಯಸುವುದರಿಂದ ಅವನ ವಿಚಾರವು ಕೆಲವೊಮ್ಮೆ ಅವನ ಸುತ್ತಲೇ ಸುತ್ತುತ್ತಿರುತ್ತದೆ..ತನ್ನ ವ್ಯಕ್ತಿತ್ವವನ್ನು ರೂಪಿಸಿಕೊಳ್ಳುವುದರಲ್ಲೇ , ತನ್ನ ದೋಷವನ್ನು ಗುರುತಿಸಿ ಅದನ್ನು ಸರಿಪಡಿಸಿಕೊಳ್ಳವುದರಲ್ಲೇ ಅವನ ಜೀವನದ ಸಮಯ ಕಳೆದು ಹೋಗುತ್ತಿರುತ್ತದೆ.ಅದರಲ್ಲೆ ಅವನ ಶಕ್ತಿ ವ್ಯಯವಾಗುತ್ತಿರುತ್ತದೆ. ಏಕೆಂದರೆ ಅಂತರಂಗದ ಭವ್ಯತೆಯ ಸಾಧನೆ ಅವನ ಗುರಿ. ಅದರ ಸಂತೃಪ್ತಿಯ ತುಡಿತ ಅವನಲ್ಲಿ ಮುಖ್ಯವಾಗಿರುತ್ತದೆ.ಹಾಗಾಗಿ ಇತರರ ಬಗ್ಗೆ ಪ್ರೀತಿ ಇದ್ದರೂ , ,ಅವನು ಪರಾಂತಃಕರಣಪ್ರವೇಶಿಯಾಗಿ ಅವರ ಭಾವನೆಗಳು , ಆಸೆಗಳು ,ದುಗುಡ ದುಮ್ಮಾನಗಳು ಅರ್ಥೈಸಿಕೊಂಡರೂ ಅದನ್ನು ಬಗೆಹರಿಸಲು ಅವನಿಗೆ ಸಾಧ್ಯವಾಗುವುದಿಲ್ಲ.ಅಷ್ಟೇ ಅಲ್ಲ ತನ್ನ ಯೋಗಕ್ಷೇಮವನ್ನೂ ಕೂಡ ಅವನು ದೇವರ ಮೇಲೆ ಹೊರಿಸಲಾರ.ಈ ರೀತಿಯಾಗಿ ತನ್ನ ಗುಂಗಿನಲ್ಲಿಯೇ ಇರುವ ಅವನಿಗೆ ಪರರ ಹಂಗಿಲ್ಲ.

ಹಿರಿಯ ಸಾಹಿತಿಯೊಬ್ಬರು ಹೇಳುವ ಹಾಗೆ ಕಲೋಪಾಸಕನಲ್ಲಿ ಸಮಾಜದ ಕಲ್ಯಾಣವನ್ನು ಪೋಷಿಸುವ ಶಕ್ತಿ ಇದೆ.ಸಮಾಜದಲ್ಲಿ ಅವನಿಗೆ ಇನ್ನು ಯಾವುದೇ ಹೊಣೆ ಹೊರಿಸಬಾರದು .ಬದಲಾಗಿ ಅವನನ್ನು ಸಮಾಜವೇ ಪೋಷಿಸಬೇಕು ..

ಆದರೆ ಕಲೋಪಾಸಕನೂ ಸಮಾಜದ ಘಟಕ.ಸಮಾಜಕ್ಕೆ ಅವನು ಸಲ್ಲಿಸಬೇಕಾದ ಜವಾಬ್ದಾರಿಯಿದೆ.ಕಲಾಸೇವೆಯನ್ನು ಮಾಡಿದ ಮಾತ್ರಕ್ಕೆ ಅವನು ತನ್ನವರಿಗಾಗಲಿ ಅಥವಾ ಸಮಾಜಕ್ಕೇ ಆಗಲಿ ಸಲ್ಲಿಸಬೇಕಾದ ಸೇವೆಯಿಂದ ಮುಕ್ತನಾಗುವುದು ಸರಿಯೇ? ಅವನ ವ್ಯಕ್ತಿತ್ವ ವಿಕಾಸವಾಗುವುದು ಸಮಾಜದಿಂದಲೇ ಆಗಿರುವುದರಿಂದ ತನಗೆ ಸಂಬಂಧಿಸಿದ ವ್ಯಕ್ತಿಗಳ ಅಥವಾ ಸಮಾಜದ ಅಂತಃಕರಣವನ್ನು ಅರಿತು ಅವರಿಗೆ ನೋವಾಗದಂತೆ , ತನ್ನ ವ್ಯಕ್ತಿತ್ವವಿಕಸನಕ್ಕೆ ಕಾರಣರಾದವರಿಗೆ ತನ್ನಿಂದಾದ ಸಹಾಯ ಸಲ್ಲಿಸುವುದು ಅವನ ಕರ್ತವ್ಯವೇ ಆಗಿದೆ.

ಧರ್ಮಗಳಲ್ಲಿ ಸೂಚಿಸಿದ ಹಾಗೆ ಅಂತರ್ಜೀವಿಗಳನ್ನು , ಸಾಧಕರನ್ನು ಸಮಾಜವೇ ಸಲಹಬೇಕು

.ಪೋಷಿಸಬೇಕು .ಹಿಂದೆ ರಾಜಾಶ್ರಯವಿದ್ದಂತೆ ಇಂದು ಧರ್ಮಶಾಲೆಗಳು,ಮಠಗಳು ,ಅನ್ನಛತ್ರಗಳು ಸಾಧಕರನ್ನು ಕಲಾವಿದರನ್ನು ಪೋಷಿಸುವ ಕಾರ್ಯವನ್ನು ಮಾಡುತ್ತಿವೆ.ಆದರೆ ಸಮಾಜದಿಂದ ಉಪಕೃತನಾದ ಸಾಧಕನಿಗೂ ಅವನದೇ ಆದ ಕರ್ತವ್ಯವಿದೆ.ಅವನು ಇನ್ನೊಬ್ಬರಿಗೆ ಹೊರೆಯಾಗಬಾರದಲ್ಲವೇ?ತಾನಾಗಿಯೇ ಇನ್ನೊಬ್ಬರಿಂದ ಏನನ್ನೂ ತೆಗೆದುಕೊಳ್ಳಬಾರದು. ಬಯಸಬಾರದು. . ದಾನ ಕೊಡುತ್ತಿರುವವರ ಅಂತರಂಗ ಪರೀಕ್ಷಿಸಿ ತೆಗೆದುಕೊಳ್ಳಬೇಕು . ಬೇರೆಯವರ ಮೇಲೆ ಅವಲಂಬಿತವಾದ ಸಾಧನೆ, ಬದುಕು 'ಮರವನ್ನು ಆಶ್ರಯಿಸಿ ಬೆಳೆದ ಬಳ್ಳಿಯಂತೆ' ..ಆಶ್ರಯ ತಪ್ಪಿದಾಗ ನೆಲ ಕಚ್ಚಬಹುದು..

ಹಿಂದೆ ಅಂತರ್ಜೀವಿಗಳು ಸಮಾಜದಿಂದ , ಕುಟುಂಬದಿಂದ (ಉದಾಹರಣೆಗೆ ಬುದ್ಧ) ಪ್ರತ್ಯೇಕವಾಗಿ ಜೀವಿಸಿದಂತೆ ಇಂದಿನ ದಿನಗಳಲ್ಲಿ ಸಾಧಕರಿಗೆ ಪ್ರತ್ಯೇಕವಾಗಿ (ಬೇರೆಯಾಗಿ) ಬದುಕುಕುವುದು ಸಾಧ್ಯವಿಲ್ಲ.ಅವನು ಸಮಾಜದ ಮಧ್ಯೆಯೇ ಬದುಕಬೇಕು. ಜೀವನ ನಿರ್ವಹಣೆಗಾಗಿ ಪ್ರವೃತ್ತಿಯೊಂದೇ ಸಾಲದು ಅವನಿಗೆ ವೃತ್ತಿಯೂ ಬೇಕು . ಯೋಗಸ್ಥನಾಗಿರುವುದರ ಜೊತೆ ಗೃಹಸ್ಥನೂ ಆಗಿಯೆ ಬದುಕುವ ಅನಿವಾರ್ಯತೆ ಇದೆ.ಗೃಹಸ್ಥಾಶ್ರಮವು ಧನ್ಯವೆಂದು ಕಾಳಿದಾಸನೂ ಸ್ವತಃ ಹೇಳದಿದ್ದರೂ ಅವನಿಂದ ಸೃಷ್ಟಿಸಲ್ಪಟ್ಟ ಆರಣ್ಯಕನೆಂಬ ಋಷಿ ಈ ಮಾತನ್ನು ಹೇಳಿದ್ದಾನೆ.ದೂರದ ಬೆಟ್ಟ ಕಣ್ಣಿಗೆ ನುಣ್ಣಗೆ ಎನ್ನುವಂತೆ ಗೃಹಸ್ಥಾಶ್ರಮದ ಅನುಭವವೇ ಇಲ್ಲದ ಆರಣ್ಯಕರಿಗೆ ಗೃಹಸ್ಥಾಶ್ರಮದ ಸಾಧಕ ಬಾಧಕಗಳು ಅರ್ಥವಾಗುವುದು ಹೇಗೆ ಸಾಧ್ಯ?

ಹಾಗೆ ನೋಡಿದರೆ ಗೃಹಸ್ಥಾಶ್ರಮದಿಂದ ಧನ್ಯತೆ ಸಾಧ್ಯ.ಗೃಹಸ್ಥಾಶ್ರಮದಲ್ಲಿದ್ದುಕೊಂಡೇ ಕಾರ್ಯ ಮಾಡುವ ಸಾಧಕನಿಗೆ ಅವನ ಸಾಧನೆಯನ್ನು ಪುನಃ ಪರೀಕ್ಷಿಸುವ ,ವಿಮರ್ಶಿಸುವ ರತ್ನರಸಿಕರು (ವಿಮರ್ಶಕರು, ಪರೀಕ್ಷಕರು )ಸುತ್ತ ಇದ್ದೇ ಇರುತ್ತಾರೆ.ಹೆಜ್ಜೆ ಹೆಜ್ಜೆಗೂ ಅವನ ಪರೀಕ್ಷೆಯಾಗುವುದರಿಂದ ಅವನು ಯೋಚಿಸಿ ಹೆಜ್ಜೆಯಿಡಬೇಕಾಗುತ್ತದೆ. ಇಲ್ಲವಾದಲ್ಲಿ ತಪ್ಪಡಿಯಿಟ್ಟರೂ ದಂಡ , ಕೆಲವೊಮ್ಮೆ ತಪ್ಪಿಲ್ಲದೆಯೂ ದಂಡ ತೆರಬೇಕಿರುವ ಸಾಧ್ಯತೆಯಿದೆ.ಹಾಗಾಗಿ ಏನನ್ನು ಮಾಡಬೇಕಿದ್ದರೂ ಯೋಚಿಸಿಯೇ ಮಾಡಬೇಕಾದ ಅನಿವಾರ್ಯತೆ ಇದೆ.ಇದು ಅವನ ವ್ಯಕ್ತಿತ್ವ ವಿಕಸನಕ್ಕೆ ಅನುಕೂಲ ಕೂಡ.

ಪರೋಪಕಾರಾರ್ಥಂ ಇದಂ ಶರೀರಂ ಎನ್ನುವಂತೆ ..ಅನ್ಯರ ಹಿತಚಿಂತನೆ ಪರಮಾತ್ಮನ ಉಪಾಸನೆಯ ಒಂದು ಭಾಗ.ತನ್ನಂತೆ ಪರರು ಎಂದು ಬಗೆದ ಮಾತ್ರಕ್ಕೆ ಆ ಮಟ್ಟದ ಉದಾರತೆಯಿಂದ ಮಾತ್ರವೇ ಬದು

ಕಲು ಸಾಧ್ಯವಿದೆಯೇ?ಮನುಷ್ಯನಲ್ಲಿ ತನ್ನನ್ನುರೂಪಿಸಿಕೊಳ್ಳುವ , ಬೆಳೆಸಿಕೊಳ್ಳುವ ಮತ್ತು ಬದುಕಲು ಅತೀ ಅವಶ್ಯವಾಗಿ ಬೇಕಿರುವ ವ್ಯವಹಾರ ಕು ಶಲತೆಯೂ ಬೇಕಲ್ಲವೇ?ಸಮಾಜದ ಪುನರ್ಘಟನೆಗೆ ಪರಿಶ್ರಮ ಮತ್ತು ಭಕ್ತಿ(ಸಮತಾವಾದ ಮತ್ತು ಆಧ್ಯಾತ್ಮವಾದ)ಹೇಗೆ ಅವಶ್ಯವೋ ಹಾಗೆಯೆ ಸಾಧಕನಲ್ಲೆ ಆಗಲಿ ಸಾಮಾನ್ಯನಲ್ಲೆ ಆಗಲಿ ಸ್ವಹಿತ ಮತ್ತು ಪರಹಿತ ಈ ಎರಡರ ಅಗತ್ಯವೂ ಇದೆ.'ಶಕ್ತಿಯೇ ಜೀವನ ;ಸತ್ವವೇ ಜೀವನ'.ಆದರೆ ಇದು ಅಹಂಆಗಿ ಪರಿಣಮಿಸಬಾರದು. ಅದರ ಸೂ ಕ್ಷ್ಮತೆ ವಿಶಾಲತೆಗಳ ಅರಿವು ನಮಗೆ ಬೇಕು.. ಸಮರಸವೇ ಸಹ ಜೀವನ..ಜೀವನದ ರಥ ಸರಾಗವಾಗಿ ಸಾಗಲು ಕೇವಲ ನಮ್ಮ ಅನುಭವಗಳಷ್ಟೇ ಸಾಲದು ..ಸಹಾನುಭೂ ತಿಯೂ ಬೇಕು. ಪರಸ್ಪರ ಸಹಕಾರ , ಹೊಂದಾಣಿಕೆ ಪ್ರೀತಿ, ಕರುಣೆ ಈ ಎಲ್ಲವುಗಳ ಅಗತ್ಯತೆ ಇದೆ.

ಪರರ ಅನುಭವವಗಳನ್ನು ನಮ್ಮ ಅನುಭವಗಳೊಂದಿಗೆ ಹೊಂದಿಸಿಕೊಂಡು ಬಾಳಲು ಎರಡು ಚಿಂತನೆಗಳು ಅಗತ್ಯ.ಒಂದು ತನ್ನಿಂದ ಬೇರೆಯವರಿಗೆ ಯಾವುದೇ ತೊಂದರೆ ಆಗದಂತೆ ನೋಡಿಕೊಳ್ಳುವುದು .(ನಿರುಪದ್ರವಿಯಾಗಿರು ವುದು ) ಎರಡನೆಯದು ಸಾಧ್ಯವಾದಷ್ಟೂ ಸಂದರ್ಭಗಳಲ್ಲಿ ಅನ್ಯರಿಗೆ ಉಪಕಾರಿಯಾಗಿರಬೇಕು ಎಂಬ ಮನೋಭಾವ ಹೊಂದುವುದು..ಆದ್ದರಿಂದಲೇ ದೇವರು ಈ ಎರೆಡೂ ವಿಚಾರಗಳನ್ನೂ ಮಾನವನಿಗೆ ನೀಡಿ ಅವನ ಆಂತರಿಕ ವಿಕಾಸಕ್ಕಾಗಿ ಸಂದರ್ಭ ಬಂದಾಗ ನಿರ್ಧಾರ ತೆಗೆದು ಕೊಳ್ಳುವ ಒಳಗಣ್ಣನ್ನು ಆಜ್ಞಾಚಕ್ರ(ಮೆದುಳು , ಮೇಧಾ ಶಕ್ತಿ)ದಲ್ಲಿ ನೀಡಿದ್ದಾನೆ.

## ವ್ಯಾಕರಣಗಳು

1.ಮೊದಲಿನ ಎರಡು ಪದಗಳಿಗೆ ಇರುವ ಸಂಬಂಧದಂತೆ ಮೂರನೆಯ ಪದಕ್ಕೆ ಸರಿಸಂಬಂಧ ಹೊಂದಿರುವ ಪದ ಬರೆಯಿರಿ.

೧. ರಕ್ತ : ರಕುತ : : ಶಕ್ತಿ : ____

೨. ರತ್ನ : ರತುನ : : ಅಗ್ನಿ: ----

೩.ಕಲೋಪಾಸಕ : ಗುಣಸಂಧಿ : : ಗೃಹಸ್ಥಾಶ್ರಮ: ------------

೪.ಮೊಗಸಾಲೆ : ಮುಖಶಾಲೆ : : ಬಿನ್ನಾಣ : –----

೫.ದಾತೃ : ದಾತಾರ : : ಋಷಿ___

೬. ಒಗ್ಗಾಲಿ : ದ್ವಿಗು ಸಮಾಸ : : ಕಲೋಪಾಸಕ : -----

೭.ಮರವನ್ನು : ದ್ವಿತೀಯಾ ವಿಭಕ್ತಿ : : ಭಗವಂತನ : ---

೮. ಹೇಳಿದ್ದಾನೆ : ಭೂತಕಾಲ : : ಹೇಳುವನು : ----

೯.ಹೋಗಲಿ : ವಿಧ್ಯರ್ಥಕ : : ಹೋಗದು : ___

೧.ಶಕುತಿ ೨)ಅಗ್ಗಿ ೩)ಸವರ್ಣದೀರ್ಘ ೪)ವಿಜ್ಞಾಪನೆ ೫)ರಿಸಿ ೬. ತತ್ಪುರುಷ ೭. ಷಷ್ಠಿ

೮.ಭವಿಷ್ಯತ್ ೯.ನಿಷೇಧಾರ್ಥಕ

2.. ಕೆಳಗೆ ನೀಡಿದ ಪ್ರಶ್ನೆಗಳಿಗೆ ನಾಲ್ಕು ಆಯ್ಕೆಗಳನ್ನು ನೀಡಲಾಗಿದೆ. ಅವುಗಳಲ್ಲಿ ಸರಿಯಾದ ಉತ್ತರವನ್ನು ಆರಿಸಿ ಬರೆಯಿರಿ.

೧.'ದಾನವನ್ನು' ಈ ಪದದಲ್ಲಿರುವ ಸಂಧಿಯಿದು ___

ಎ) ಆದೇಶ ಬಿ)ಗುಣ ಸಿ)ಆಗಮ ಡಿ)ಲೋಪ

೨.'ಕಲ್ಯಾಣವನ್ನು'ಈ ಪದದಲ್ಲಿರುವ ವಿಭಕ್ತಿ ----

ಎ)ದ್ವಿತೀಯಾ ಬಿ)ಸಪ್ತಮಿ ಸಿ)ತೃತೀಯಾ ಡಿ)ಪಂಚಮಿ

೩.'ಹೆಜ್ಜೆಹೆಜ್ಜೆಗೆ' ಪದವು ಈ ವ್ಯಾಕರಣಾಂಶದ ಉದಾಹರಣೆಯಾಗಿದೆ ----

ಎ)ಜೋಡುನುಡಿ ಬಿ)ದ್ವಿರುಕ್ತಿ ಸಿ)ಅನುಕರಣಾವ್ಯಯ ಡಿ)ನುಡಿಗಟ್ಟು

೪.'ತಪ್ಪಡಿ' ಪದದಲ್ಲಿರುವ ಸಂಧಿಯಿದು -----

ಎ) ಆಗಮ ಬಿ)ಲೋಪ ಸಿ)ಆದೇಶ ಡಿ)ಯಣ್

೫.ಆದರೆ ಸಾಧಕನ ಕರ್ತವ್ಯವೇನು ಈ ವಾಕ್ಯದಲ್ಲಿರಬೇಕಾದ ಲೇಖನ ಚಿಹ್ನೆ----

ಎ)ಪ್ರಶ್ನಾರ್ಥಕ ಬಿ)ಅರ್ಧವಿರಾಮ ಸಿ) ಅಲ್ಪವಿರಾಮ ಡಿ)ಭಾವಸೂಚಕ

೬.'ನೆರೆಹೊರೆ 'ಈ ಪದದಲ್ಲಿರುವ ವ್ಯಾಕರಣಾಂಶವಿದು –

ಎ)ನುಡಿಗಟ್ಟು ಬಿ)ಜೋಡುನುಡಿ ಸಿ)ದ್ವಿರುಕ್ತಿ ಡಿ)ಅನುಕರಣಾವ್ಯಯ

೭.'ಧರ್ಮಶಾಲೆ 'ಪದವು ಈ ಸಮಾಸದ ಉದಾಹರಣೆಯಾಗಿದೆ.

ಎ)ತತ್ಪುರುಷ ಬಿ)ಕರ್ಮಧಾರಯ ಸಿ)ದ್ವಿಗು ಸಮಾಸ ಡಿ)ದ್ವಂದ್ವ

೮.'ದಿವ್ಯ' ಪದದ ತಧ್ಬವ ರೂಪವಿದು

ಎ)ದಿನ್ನೆ ಬಿ)ಶ್ರೇಷ್ಠ ಸಿ)ದಿಬ್ಬ ಡಿ)ದಿವ

೯.'ಒಳಗಣ್ಣು' ಪದವು ಈ ಸಂಧಿಗೆ ಉದಾಹರಣೆಯಾಗಿದೆ –

ಎ)ಜಶ್ತ್ವ ಬಿ)ಆದೇಶ ಸಿ)ಗುಣ ಡಿ)ವೃದ್ಧಿ

೧೦.'ಒಳಗಣ್ಣು ' ಪದದಲ್ಲಿರುವ ಸಮಾಸ

ಎ)ಅಂಶಿ ಬಿ)ಗಮಕ ಸಿ)ದ್ವಂದ್ವ ಡಿ)ಕ್ರಿಯಾ

೧೧.'ಬ್ರಹ್ಮ' ಪದದ ತದ್ಭವ ರೂಪ ----

ಎ) ಬ್ರಹ್ಮಾ ಬಿ)ಪರಬ್ರಹ್ಮ ಸಿ)ಬೊಮ್ಮ ಡಿ)ಬ್ರಾಹ್ಮಣ

೧೨.'ಕೈಯೆತ್ತು' ಪದವು ಈ ಸಮಾಸದ ಉದಾಹರಣೆಯಾಗಿದೆ

ಎ)ಕರ್ಮಧಾರಯ ಬಿ)ದ್ವಂದ್ವ ಸಿ)ಕ್ರಿಯಾ ಡಿ)ಅಂಶಿ

೧೩.'ಎಲ್ಲೆಲ್ಲಿ' ಪದವು ಈ ಸಂಧಿಗೆ ಉದಾಹರಣೆಯಾಗಿದೆ ----

ಎ)ಲೋಪ ಬಿ)ಗುಣ ಸಿ)ಸವರ್ಣದೀರ್ಘ ಡಿ)ಆದೇಶ

## ಉತ್ತರಗಳು

೧. ಸಿ)ಆಗಮ ೨. ಎ)ದ್ವಿತೀಯಾ ೩.ಬಿ)ದ್ವಿರುಕ್ತಿ ೪.ಬಿ)ಲೋಪ ೫.ಎ)ಪ್ರಶ್ನಾರ್ಥಕ ೬. ಬಿ)ಜೋಡುನುಡಿ ೭.ಎ)ತತ್ಪುರುಷ

೮.ಸಿ)ದಿಬ್ಬ ೯. ಬಿಆದೇಶ ೧೦.ಎ)ಅಂಶಿ ೧೧. ಸಿ)ಬೊಮ್ಮ ೧೨.ಸಿ)ಕ್ರಿಯಾ ೧೩.ಎ)ಲೋಪ

## ಅಲಂಕಾರ ಹೆಸರಿಸಿ ಸಮನ್ವಯಿಸಿ

1 ಮರವನ್ನು ಆಶ್ರಯಿಸಿ ಬೆಳೆದ ಬಳ್ಳಿಯಂತೆ

ಉಪಮೇಯ : ಲುಪ್ತವಾಗಿದೆ

ಉಪಮಾನ : ಮರವನ್ನು ಆಶ್ರಯಿಸಿ ಬೆಳೆದ ಬಳ್ಳಿ

ಉಪಮಾವಾಚಕ : ಅಂತೆ

ಸಮಾನಧರ್ಮ : ಲುಪ್ತವಾಗಿದೆ

ಅಲಂಕಾರ : ಉಪಮಾ

ಕೇಳಿದೊರಕಿಸಿಕೊಂಡ ಸಾಮಗ್ರಿ ಸೌಕರ್ಯಗಳ ಮೇಲೆನಿಂತ ಸಾಧನೆ -ತಪಸ್ಸು ಉಪಮಾನವಾದ ಮರವನ್ನು ಆಶ್ರಯಿಸಿ ಬೆಳೆದ ಬಳ್ಳಿಯಂತೆ ಎಂದು ಹೇಳಿರುವುದರಿಂದ ಇದು ಉಪಮಾ ಅಲಂಕಾರವಾಗಿದೆ.

**2.ರಸವೇ ಜೀವನ**

**ಉಪಮೇಯ : ಜೀವನ**

**ಉಪಮಾನ : ರಸ**

**ಉಪಮೇಯವಾದ ಜೀವನವು ಉಪಮಾನವಾದ ರಸ ಎಂದು ಹೇಳಿರುವುದರಿಂದ (ಅಬೇಧ ಕಲ್ಪಿಸಿರುವುದರಿಂದ ) ಇದು ರೂಪಕ ಅಲಂಕಾರವಾಗಿದೆ.**

**3.ಜೀವನ ರಥ**

**ಉಪಮೇಯ : ಜೀವನ**

**ಉಪಮಾನ : ರಥ**

**ಉಪಮೇಯವಾದ ಜೀವನವು ಉಪಮಾನವಾದ ರಥ ಎಂದು ಹೇಳಿರುವುದರಿಂದ ತಾದ್ರೂಪ್ಯ ಕಲ್ಪಿಸಿರುವುದರಿಂದ ಇದು ರೂಪಕ ಅಲಂಕಾರವಾಗಿದೆ.**

## *ಗದ್ಯಪಾಠ ಧರ್ಮ ಸಮದೃಷ್ಟಿ*

***_ಕನ್ನಡ ಎಂ.ಎ (ಅಂತಿಮ) ಕ.ರಾ.ಮು.ವಿ. ಕನ್ನಡ ಶಾಸನ ಅಧ್ಯಯನ ಕೋರ್ಸ್೧೦, ಬ್ಲಾಕ್ ೩೫, ಪುಟ ೩೨-೩೩,೨೮-೨೯ ನಲ್ಲಿರುವಂತೆ ಬರೆಯಲಾಗಿದೆ.***

**ಶಾಸನದ ಪಠ್ಯ-ಅರ್ಥ**

**ಒಳ್ಳೆಯದಾಗಲಿ, ನಾಸ್ತಿಕರೆಂಬ ಸಮುದ್ರವನ್ನು ಬತ್ತಿಸುವ ಬಡವಾಗ್ನಿಯಾಗಿ ,ಶ್ರೀರಂಗನಾಥನ ಪಾದಕಮಲಗಳ ಸೇವಕರಾಗಿ ,ಶ್ರೀ ವಿಷ್ಣು ಸನ್ನಿಧಿಯೆಂಬ ರತ್ನ ಮಂಟಪಕ್ಕೆ ಮಾರ್ಗದಾಯಕರಾಗಿ ಇರುವ ಯತಿರಾಜರಾಜರಾದ ರಾಮಾನುಜಾಚಾರ್ಯರಿಗೆ ಜಯವಾಗಲಿ.**
**ಶಕವರ್ಷ ೧೨೯೦ ನೆಯ ಕೀಲಕನಾಮ ಸಂವತ್ಸರಸದ ಭಾದ್ರಪದ ಮಾಸದ ಶುಕ್ಲಪಕ್ಷದ ದಶಮಿಯ ಗುರುವಾರದಂದು ಶ್ರೀ ಮನ್ ಮಹಾಮಂಡಳೇಶ್ವರನೂ ಶತ್ರು ರಾಜರನ್ನೂ ಸದೆಬಡಿಯುವವನೂ , ನುಡಿದಂತೆ ನಡೆಯದ ರಾಜರ ದರ್ಪವನ್ನು ಮುರಿಯುವವನೂ ಆದ ಶ್ರೀ ಬುಕ್ಕ ರಾಯನು ರಾಜ್ಯಭಾರ ಮಾಡುತ್ತಿರುವಾಗ ಜೈನರಿಗೂ ಶ್ರೀವೈಷ್ಣವರಿಗೂ ( ಒಂದು ಸಲ) ವಾಗ್ವಾದವಾಯಿತು. ಆಗ ಆನೆಯಗೊಂದಿ ,ಹೊಸಪಟ್ಟಣ ,ಪೆನುಗೊಂಡೆ,ಕಲ್ಲೆಹ -ಇವುಗಳನ್ನು ಒಳಗೊಂಡ ಎಲ್ಲ ನಾಡುಗಳ**

ಜೈನ ಮತೀಯರು (ಭವ್ಯಜನಂಗಳು )ಬು ಕ್ಕರಾಯನಿಗೆ ಶ್ರೀವೈಷ್ಣವರು (ಭಕ್ತರು ) ಮಾಡು ವ ಅನ್ಯಾಯಗಳನ್ನು ವಿಜ್ಞಾಪಿಸಿಕೊಂಡರು . .ಕೋವಿಲ್ ,ತಿರು ಮಲೆ,ಪೆರು ಮಾಳ್,ಕೋಯಿಲ್,ತಿರು ನಾರಾಯಣಪುರ -ಇವೇ ಮು ಖ್ಯವಾದ (ಕ್ಷೇತ್ರ ಗಳ) ಸಕಲಾಚಾರ್ಯರು , ಸಕಲಮಯಿಗಳು, ಸಕಲ ಸಾತ್ವಿಕರು ,ಮೋಷ್ಠಿಕರು , ತಿರು ಪಣಿ, ತಿರು ವಿಡಿ , ತಣ್ಣೀರವರು ನಾಲ್ವತ್ತೆಂಟು ಜನಗಳು ಸಾಮಂತ ಬೋವರು ಗಳು ತಿರಿಕು ಲ ಜಾಮಬವ ಕು ಲ ಒಳಗೊಂಡ ಹದಿನೆಂಟು ನಾಡು ಗಳ ಶ್ರೀವೈಷ್ಣವರನ್ನು ಬರಮಾಡಿಕೊಂಡು ಮಹಾರಾಜನು ವೈಷ್ಣವರ ಕೈಯಲ್ಲಿ ಜೈನರ ಕೈಯನ್ನು ಹಿಡಿದು ಕೊಟ್ಟು ವೈಷ್ಣವ ಧರ್ಮಕ್ಕೂ ಜೈನಧರ್ಮಕ್ಕೂ ಭೇದವಿಲ್ಲವೆಂದು ಹೇಳಿದನು.

ಜೈನಧರ್ಮಕ್ಕೆ ಈ ಹಿಂದೆ ಸಲ್ಲುತ್ತಿದ್ದ ಂತೆ ( ಪೂ ರ್ವಮರ್ಯಾದೆಯಲು ) ಪಂಚಮಹಾವಾದ್ಯ ಗಳು (ಶೃಂಗವಾದ್ಯ,ತಮಟೆ, ಶಂಖ,ಭೇರಿ,ಜಯಘಂಟೆ)ಕಳಶವು ಸಲ್ಲುವುದು .ಶ್ರೀ ವೈಷ್ಣವರ ಕಡೆಯಿಂದ ಜೈನಧರ್ಮಕ್ಕೆ ಯಾವುದೇ ಹಾನಿಯಾಗಲಿ ವೃದ್ಧಿಯಾಗಲಿ ಆದರೆ ಅದು ವೈಷ್ಣವ ಧರ್ಮಕ್ಕೆ ಆದ ಹಾನಿಯೆಂದು ವೃದ್ಧಿಯೆಂದು ಶ್ರೀವೈಷ್ಣವರು ತಿಳಿಯಬೇಕು . . ಈ ನಿಯಮದ ಂತೆ (ಮರ್ಯಾದೆಯಲು ) ರಾಜ್ಯದ ಲ್ಲಿರುವ ಎಲ್ಲಾ ಬಸದಿಗಳಲ್ಲಿ ಶ್ರೀ ವೈ ಷ್ಣವರೇ ಶಾಸನವನ್ನು ಹಾಕಿಸಿ ಇದನ್ನು ಪಾಲಿಸ ಬೇಕು . ಚಂದ್ರ ಸೂ ರ್ಯರು ಇರು ವವರೆಗೆ ವೈಷ್ಣವ ಧರ್ಮ ವು ಜೈನಧರ್ಮವನ್ನು ರಕ್ಷಿಸಿಕೊಂಡು ಬರತ್ತದೆ. ವೈಷ್ಣವ ಧರ್ಮ ಜೈನಧರ್ಮಗಳು ಒಂದೇ,ಅವುಗಳ ನಡು ವೆ ಭೆದವಿಲ್ಲ .ಅದನ್ನು ಬೇರೆ ಬೇರೆ ಎಂದು ತಿಳಿಯಬಾರದು . ಶ್ರೀ ತಿರು ಮಲೆ ತಾತಯ್ಯನವರು ರಾಜಯದ ಎಲ್ಲ ಜೈನ ಮತೀಯರ ಅನು ಮತಿಯಂತೆ ಶ್ರವಣ ಬೆಳು ಗೊಳ ಕ್ಷೇತ್ರ ದಲ್ಲಿ (ಬೆಳು ಗೊಳ ತೀರ್ಥದಲ್ಲಿ ) ವೈಷ್ಣವ (=ವಿಷ್ಣು ದೇವಾಲಯ )ಅಂಗರಕ್ಷೆಗೆ (ಎಂದ ರೆ ಕಾವಲಿನ ವ್ಯವಸ್ಥೆಗಾಗಿ) ರಾಜ್ಯದಲ್ಲಿರು ವ ಎಲ್ಲ ಜೈನರು ಬಾಗಿಲು ಗಟ್ಟಳೆಯಾಗಿ (ಪ್ರತಿಮನೆಯವರು )ಮನೆಮನೆಗೆ ವರ್ಷಕ್ಕೆ ಒಂದು ಹಣ ಎಂದು ಕೊಡಬೇಕು. ಹಾಗೆ ಸಂಗ್ರ ಹಿಸಿದ ಹೊನ್ನಿನಿಂದ ದೇವರ ಕಾವಲಿಗೆ ಇಪ್ಪತ್ತು ಜನರನ್ನು ನೇಮಿಸಬೇಕು .ಉಳಿದ ಹೊನ್ನಿನಿಂದ ಜೀರ್ಣ ಜಿನಾಲಯಗಳಿಗೆ ಸು ಣ್ಣವನ್ನು ಬಳಸಬೇಕು . ಈ ನಿಯಮದ ಂತೆ ಚಂದ್ರ ಸೂ ರ್ಯ ರು ಇರು ವವರೆಗೆ ಪ್ರತಿವರ್ಷ ಹೊನ್ನನ್ನು ಕೊಟ್ಟು ಕೀರ್ತಿ ಯನ್ನು ಪುಣ್ಯವನ್ನು (ಜೈನರು ಅರ್ಜಿಸಿಕೊಳ್ಳಲಿ) ಹೀಗೆ ಮಾಡಿದ ಕಟ್ಟಳೆಯನ್ನು ಯಾರು ಮೀರಿದರೂ ಆತ ರಾಜದ್ರೋಹಿ .ಜೈನ ಸಂಘ -ವೈಷ್ಣವ ಸಮಾಜಗಳಿಗೆ ದ್ರೋಹಿ ,ಮು ನಿಯಾಗಲಿ,ಗ್ರಾಮೀಣನಾಗಲಿ ಈ ಧರ್ಮವನ್ನು ಯಾರಾದರೂ ಕೆಡಿಸಿದರೆ ಅವರು ಗಂಗಾನದಿಯ ದಡದಲ್ಲಿ ಹಸು ವನ್ನೂ ಬ್ರಾಹ್ಮಣನ್ನೂ ಕೊಂದ ಪಾಪಕ್ಕೆ ಗು ರಿಯಾಗು ತ್ತಾರೆ.

ತಾನು ಕೊಟ್ಟದ್ದಾಗಲಿ, ಬೇರೆಯವರು ಕೊಟ್ಟದ್ದಾಗಲಿ ಅಪಹರಿಸಿದ್ದಾದರೆ ಅಂಥವನು ಈ ಭೂಮಿಯಲ್ಲಿ ಅರವತ್ತು ಸಾವಿರ ಕ್ರಿಮಿಯಾಗಿ ಹುಟ್ಟುತ್ತಾನೆ.
ಕಲ್ಲೆಹದ ಬುಸುವಿಸೆಟ್ಟಿ ಬುಕ್ಕರಾಯರಿಗೆ ವಿಜ್ಞಾಪನೆ ಮಾಡಿ ತಿರುಮಲೆ ತಾತಯ್ಯನವರನ್ನು ಕರೆದುಕೊಂಡು ಬಂದು ಜೀರ್ಣೋದ್ಧಾರವನ್ನು ಮಾಡಿಸಿದರು. ಎರಡು ಧರ್ಮದವರೂ ಸೇರಿಕೊಂಡು ಬುಸುವಿಸೆಟ್ಟಿಗೆ ಸಂಘನಾಯಕ (ಜೈನ ಸಮಾಜದ ಮುಖ್ಯಸ್ಥ) ಪಟ್ಟವನ್ನು ಕಟ್ಟಿದರು.

ಒಂದೊಂದು ವಾಕ್ಯದಲ್ಲಿ ಉತ್ತರಿಸಿ.

೧.ಬುಕ್ಕರಾಯನ ಹಿರಿಮೆ ಏನು ?
ವಿಶಾಲ ಸಾಮ್ರಾಜ್ಯದ ಒಡೆಯನಾಗಿದ್ದು ಶತ್ರು ರಾಜರನ್ನು ಸದೆಬಡಿಯುವವನೂ ,(ಅರಿರಾಯ ವಿಭಾಡ) ನುಡಿದಂತೆ ನಡೆಯದ ರಾಜರ ದರ್ಪವನ್ನು ಮುರಿಯುವವ(ಭಾಷೆಗೆ ತಪ್ಪುವ ರಾಯರ ಗಂಡ)ನೂ ಆಗಿದ್ದುದು ಬುಕ್ಕರಾಯನ ಹಿರಿಮೆಯಾಗಿತ್ತು.

೨.ಬುಕ್ಕರಾಯನ ರಾಜ್ಯಭಾರ ಕಾಲದಲ್ಲಿ ಯಾರೊಳಗೆ ಸಂವಾದ ನಡೆಯಿತು ?
ಬುಕ್ಕರಾಯನ ರಾಜ್ಯಭಾರ ಕಾಲದಲ್ಲಿ ಜೈನ (ಭವ್ಯಜನ)ರಿಗೂ ವೈಷ್ಣವ(ಭಕ್ತರು)ರಿಗೂ ಸಂವಾದ (ಘರ್ಷಣೆ) ನಡೆಯಿತು.

೩.ನಾಡ ಭವ್ಯ ಜನರು ಬುಕ್ಕರಾಯನ ಬಳಿ ಏನೆಂದು ಬಿನ್ನಹ ಮಾಡಿದರು ?
ನಾಡ ಭವ್ಯ ಜನರು ಬುಕ್ಕರಾಯನ ಬಳಿ ಬಂದು ಭಕ್ತರು ಮಾಡುವ ಅನ್ಯಾಯಗಳನ್ನು ಬಿನ್ನಹ ಮಾಡಿದರು.

೪.ಶ್ರೀ ವೈಷ್ಣವರೊಡನೆ ಮಹಾರಾಜನು ಏನು ಹೇಳಿದನು ?
ಶ್ರೀವೈಷ್ಣವರ ಕೈಯಲ್ಲಿ ಜೈನರ ಕೈಯನ್ನು ಹಿಡಿಸಿಕೊಟ್ಟು ಬುಕ್ಕ ರಾಯನು ವೈಷ್ಣವ ಧರ್ಮಕ್ಕೂ ಜೈನಧರ್ಮಕ್ಕೂ ಯಾವುದೇ ಭೇದವಿಲ್ಲ.ಪರಸ್ಪರ ಹೊಂದಿಕೊಂಡಿರಬೇಕು ಎಂದು ಹೇಳಿದನು.

೫.ರಾಯನು ವಿಧಿಸಿದ ಕಟ್ಟಳೆಯನ್ನು ಮೀರಿದರೆ ಏನಾಗುವುದು ?
ರಾಯನು ವಿಧಿಸಿದ ಕಟ್ಟಳೆ ಮೀರಿದವನು ರಾಜದ್ರೋಹಿ ಎಂದು ತೀರ್ಮಾನಿಸಲಾಗುವುದು (ಶಿಕ್ಷೆಗೆ ಒಳಪಡಿಸಲಾಗುವುದು).

೨.ಬಿಟ್ಟಿರುವ ಸ್ಥಳಗಳಲ್ಲಿ ಸೂಕ್ತ ಪದಗಳನ್ನು ತುಂಬಿರಿ.

೧. ರಾಮಾನುಜೋ ______ ಯತಿರಾಜರಾಜಃ. (ವಿಜಯತೇ)

೨. ಜೈನದರ್ಶನಕ್ಕೆ ಪೂರ್ವಮರ್ಯಾದೆಯಲು ------------ ಕಳಶವೂ ಸಲುವುದು.
(ಪಂಚಮಹಾವಾದ್ಯಂಗಳೂ )
೩.ವೈಷ್ಣವರೂ ಜೈನರೂ ಒಂದು -----------ಕಾಣಲಾಗದು (ಭೇದವಾಗಿ)
೩.ಕೊಟ್ಟಿರುವ ಪದಗಳ ತತ್ಸಮ-ತದ್ಭವ ರೂಪ ಬರೆಯಿರಿ.
ವರ್ಷ -ವರುಷ,(ದ್ಭ)
ಶ್ರೀ-ಸಿರಿ(ದ್ಭ)
ರಾಯ- ರಾಜ(ತ್ಸ)
ವೀರ- ಬೀರ (ದ್ಭ)
ಭಕ್ತ_ಬಕುತ(ದ್ಭ)
ಬಿನ್ನಹ -ವಿಜ್ಞಾಪನೆ(ತ್ಸ)
ದೆಸೆ-ದಿಶಾ(ತ್ಸ)
ಚಂದ್ರ-ಚಂದಿರ(ದ್ಭ)
ಸೊದೆ -ಸುಧೆ(ತ್ಸ)
೪. ಸಂಧಿ ಹೆಸರಿಸಿ.
ಮಂಡಳೇಶ್ವರ = ಮಂಡಳ+ಈಶ್ವರ = ಗುಣಸಂಧಿ
ಸಕಳಾಚಾರ್ಯ =ಸಕಳ+ಆಚಾರ್ಯ =ಸವರ್ಣ ದೀರ್ಘ ಸಂಧಿ
ಭೇದವಿಲ್ಲ =ಭೇದ+ಇಲ್ಲ =ಆಗಮ ಸಂಧಿ
ಕೈವಿಡಿದು =ಕೈ+ಪಿಡಿದು =ಆದೇಶ ಸಂಧಿ(ಸಮಾಸದಲ್ಲಿ ಉತ್ತರಪದದ ಆದಿಯಲ್ಲಿರುವ ಪ,ಬ,ಮ ಮೂರು ವ್ಯಂಜನಗಳಿಗೆ ವ್ ವ್ಯಂಜನ ಆದೇಶವಾಗುವುದು.ಇದು ವಕಾರಾದೇಶ ಸಂಧಿ. ಉದಾ......ಕೆನೆ +ಪಾಲು = ಕೆನೆವಾಲು ,ತಲೆ+ಬಾಗು =ತಲೆವಾಗು ,ಎಲೆ+ಮನೆ =ಎಲೆವನೆ.( ಆಧಾರ-ಸಮಗ್ರ ಕನ್ನಡ ವ್ಯಾಕರಣ)
ವೃದ್ಧಿಯಾಗಿ=ವೃದ್ಧಿ+ಆಗಿ =ಆಗಮ ಸಂಧಿ
ಭೇದವಾಗಿ=ಭೇದ+ಆಗಿ =ಆಗಮ ಸಂಧಿ
ಕಾಣಲಾಗದು = ಕಾಣಲು +ಆಗದು =ಲೋಪ ಸಂಧಿ
ಜಿನಾಲಯ =ಜಿನ +ಆಲಯ =ಸವರ್ಣದೀರ್ಘ ಸಂಧಿ

ತಪ್ಪಲೀಯದೆ=ತಪ್ಪಲು +ಈಯದೆ =ಲೋಪ ಸಂಧಿ

ಚಂದ್ರಾರ್ಕ =ಚಂದ್ರ+ಅರ್ಕ =ಸವರ್ಣದೀರ್ಘ ಸಂಧಿ

ಶ್ರೀಮನ್ಮಹಾ=ಶ್ರೀಮತ್+ಮಹಾ=ಅನು ನಾಸಿಕ ಸಂಧಿ

೫ . ನಾಲ್ಕೈದು ವಾಕ್ಯಗಳಲ್ಲಿ ಉತ್ತರಿಸಿ.

೧.' ಧರ್ಮ ಸಮದೃಷ್ಟಿ' ಪಾಠದಲ್ಲಿ ರಾಮಾನು ಜಾಚಾರ್ಯರ ಗುಣವಿಶೇಷತೆಯನ್ನು ಹೇಗೆ ಕೊಂಡಾಡಲಾಗಿದೆ?

ಶ್ರೀ ರಾಮಾನು ಜಾಚಾರ್ಯರು ನಾಸ್ತಿಕರೆನ್ನುವ ಸಮುದ್ರವನ್ನುಬತ್ತಿಸು ವಬಡವಾಗ್ನಿಯಂತೆ ಇರುವವರು , ಶ್ರೀ ರಂಗನಾಥನ ಪಾದ ಕಮಲಗಳ ಸೇವಕರು (ಪರಮ ಭಕ್ತರು ), ಶ್ರೀ ವಿಷ್ಣು ಸನ್ನಿಧಿಯೆಂಬ ರತ್ನ ಮಂಟಪಕ್ಕೆ ಮಾರ್ಗದಾಯಕರೂ (ಶ್ರೀ ವಿಷ್ಣುವಿನ ಕೃಪೆಗೆ ಪಾತ್ರ ರಾಗಲು ದಾರಿ ತೋರು ವವರು ) ಯತಿರಾಜರಾಜರು ಆದ ಶ್ರೀ ರಾಮಾನು ಜಾಚಾರ್ಯರಿಗೆ ಜಯವಾಗಲಿ ಎಂದು ರಾಮಾನು ಜಾಚಾರ್ಯರ ಗುಣ ವಿಶೇಷತೆಯನ್ನು ಧರ್ಮಸಮದೃಷ್ಟಿಪಾಠ (ಬುಕ್ಕರಾಯನ ಶಾಸನ)ದಲ್ಲಿ ವರ್ಣಿಸಲಾಗಿದೆ.

೨.ಬುಕ್ಕರಾಯನು ನಡೆಸಿದ ಧರ್ಮಸಭೆಗೆ ಯಾರನ್ನೆಲ್ಲ ಆಹ್ವಾನಿಸಿದನು ?

ಕ್ರಿ.ಶ. ೧೩೬೮ರಲ್ಲಿ ವಿಜಯನಗರವನ್ನು ಆಳುತ್ತಿದ್ದ ಬುಕ್ಕರಾಯನು ನಡೆಸಿದ ಧರ್ಮಸಭೆಗೆ ಶ್ರೀರಂಗ ,ತಿರುಪತಿ ,ಕಾಂಚೀಪುರ ,ಮೇಲುಕೋಟೆ (ಕೋವಿಲ್,ತಿರು ಮಲೆ,ಪೆರುಮಾಳ್ ಕೋವಿಲ್,ತಿರುನಾರಾಯಣಪುರ )ಇವೇ ಮೊದಲಾದ ಕ್ಷೇತ್ರ ಗಳಿಂದ ಮುಖ್ಯರಾದ ಸಕಲಾಚಾರ್ಯರು ,ಸಕಲಮಯಿಗಳು ,ಸಕಲ ಸಾತ್ವಿಕರು ,ಮೋಷ್ಠಿಕರು (ಅಕ್ಕಸಾಲಿಗಳು ),ತಿರುಪಣಿ ತಿರುವಿಡಿ ತಣ್ಣೀರವರೂ (ರಾಟೆ ತಿರು ಗಿಸಿ ನೀರು ಹರಿಸು ವವರು )ಸಾವಂತ ,ಬೋವಕ್ಕಳೂ (ಮಲೆನಾಡು ಪ್ರದೇಶದಲ್ಲಿ ವಾಸಿಸು ವ ಒಂದು ವರ್ಗ), ತಿರಿಕು ಲ(ಅಲೆಮಾರಿ)ದವರು ,ಜಾಂಬವ ಕುಲ (ಕರಡಿ ಗುರುತಿನ ಧ್ವಜವುಳ್ಳ ದೊರೆಯ ಕುಲದವರು ) ಮೊದಲಾದ ಹದಿನೆಂಟು ನಾಡ ಶ್ರೀವೈಷ್ಣವರನ್ನು ಆಹ್ವಾನಿಸಿದನು .

೩.ಜೈನಧರ್ಮದ ಸುಧಾರಣೆಗಾಗಿ ಬುಕ್ಕರಾಯನು ಕೈಗೊಂಡ ಕ್ರಮಗಳೇನು?

ಶ್ರೀ ತಿರುಮಲೆ ತಾತಯ್ಯನವರು ರಾಜ್ಯದ ಎಲ್ಲ ಜೈನಮತೀಯರ ಅನುಮತದಂತೆ ಶ್ರವಣಬೆಳಗೊಳ ಕ್ಷೇತ್ರದಲ್ಲಿ ವೈಷ್ಣವ(ವಿಷ್ಣುದೇವಾಲಯ )ಅಂಗರಕ್ಷೆಗೆ (ಎಂದರೆ ಕಾವಲಿನ ವ್ಯವಸ್ಥೆಗೆ) ರಾಜ್ಯದಲ್ಲಿರುವ ಎಲ್ಲ ಜನರು ಬಾಗಿಲು ಗಟ್ಟಳೆಯಾಗಿ (ಪ್ರತಿ ಮನೆಮನೆಯವರು )ಮನೆಮನೆಗೆ ವರ್ಷಕ್ಕೆ

ಒಂದು ಹಣ ಎಂದು ಕೊಡಬೇಕು . ಹಾಗೆ ಸಂಗ್ರಹಿಸಿದ ಹೊನ್ನಿನಿಂದ ದೇವರ ಕಾವಲಿಗೆ ಇಪ್ಪತ್ತು ಜನರನ್ನು ನೇಮಿಸಬೇಕು .ಉಳಿದ ಹೊನ್ನಿನಿಂದ ಜೀರ್ಣ ಜಿನಾಲಯಗಳಿಗೆ ಸುಣ್ಣವನ್ನು ಬಳಿಸಬೇಕು . ಈ ನಿಯಮದಂತೆ ಚಂದ್ರ ಸೂರ್ಯರು ಇರುವವರೆಗೆ ಪ್ರತಿವರ್ಷ ಹೊನ್ನನ್ನು ಕೊಟ್ಟು ಕೀರ್ತಿಯನ್ನು ಪುಣ್ಯವನ್ನು ಅರ್ಜಿಸಿಕೊಳ್ಳಲಿ ಎಂದು ಬುಕ್ಕ ರಾಯನು ಜೈನ ಧರ್ಮದ ಸುಧಾರಣೆಗಾಗಿ ಕ್ರಮ ತೆಗೆದು ಕೊಂಡನು ..

೬. ಸಂದರ್ಭದೊಂದಿಗೆ ವಿವರಿಸಿ.

೧.'' ಪಾಷಂಡ ಸಾಗರ ಮಹಾಬಡವಾಮು ಖಾಗ್ನಿಃ.''

ಈ ಮೇಲಿನ ವಾಕ್ಯವನ್ನು ಬಿ.ಎಂ.ಶ್ರೀಯವರು ಸಂಪಾದಿಸಿದ ಕನ್ನಡ ಬಾವುಟ ಎನ್ನುವ ಕೃತಿಯಿಂದ ಆರಿಸಲಾದ ಧರ್ಮ ಸಮದೃಷ್ಟಿ ಪಾಠದಿಂದ ಆಯ್ದುಕೊಳ್ಳಲಾಗಿದೆ

ಈ ಮಾತನ್ನು ರಾಮಾನು ಜಾಚಾರ್ಯರನ್ನು ಕುರಿತು ಹೇಳಲಾಗಿದೆ.

ಸಂದರ್ಭ: ರಾಮಾನು ಜಾಚಾರ್ಯರು ನಾಸ್ತಿಕರೆನ್ನುವ ಸಾಗರದ ನೀರನ್ನು ಇಂಗಿಸಬಲ್ಲ ಬಡವಾಗ್ನಿಯಂತವರು . ಅಂದರೆ ತಮ್ಮ ಕಾಲದ ಜನರಲ್ಲಿ ವಿಷ್ಣುವಿನ ಕುರಿತು ಭಕ್ತಿ ಭಾವ ಮೂ ಡಿಸಿ ಶ್ರೀ ವಿಷ್ಣುವಿನ ಮುನಿಮಂಟಪಕ್ಕೆ ದಾರಿ ತೋರಿಸುವವರಾಗಿದ್ದರು..ಎಂದು ವಿಜಯನಗರಸಾಮ್ರಾಜ್ಯದ ಅರಸ ಬುಕ್ಕರಾಯನ ಶಾಸನದಲ್ಲಿ ಹೇಳಲಾಗಿದೆ.

ಸ್ವಾರಸ್ಯ:ಶ್ರೀರಾಮಾನುಜಾಚಾರ್ಯರು ವಿಷ್ಣುವಿನ ಪರಮ ಭಕ್ತರಾಗಿದ್ದು ನಾಸ್ತಿಕತೆಯನ್ನು ಹೋಗಲಾಡಿಸಿ ,ಭಕ್ತರಿಗೆ ವಿಷ್ಣುವಿನ ಕೃಪಾಕಟಾಕ್ಷಕ್ಕೆ ಪಾತ್ರ ರಾಗಲು ದಾರಿ ತೋರಿಸುವರಾಗಿದ್ದರು ಎಂಬುದನ್ನು ಮೇಲಿನ ವಾಕ್ಯ ಸೂಚಿಸುವುದು.

೨."ಎಲ್ಲಾ ರಾಜ್ಯದೊಳಗು ಳ್ಳಂತಹ ಬಸ್ತಿಗಳಿಗೆ ಶ್ರೀ ವೈಷ್ಣವರು ಶಾಸನವ ನಟ್ಟು ಪಾಲಿಸು ವರು ".

ಈ ಮೇಲಿನ ವಾಕ್ಯವನ್ನು ಬಿ.ಎಂ.ಶ್ರೀಯವರು ಸಂಪಾದಿಸಿದ ಕನ್ನಡ ಬಾವುಟ ಎನ್ನುವ ಕೃತಿಯಿಂದ ಆರಿಸಲಾದ ಧರ್ಮ ಸಮದೃಷ್ಟಿ ಪಾಠದಿಂದ ಆಯ್ದುಕೊಳ್ಳಲಾಗಿದೆ .ಈ ಮಾತನ್ನು ಬುಕ್ಕರಾಯನು ಹೇಳಿದ್ದಾನೆ.

ವಿಜಯನಗರ ಅರಸ ಬುಕ್ಕರಾಯನು ರಾಜ್ಯಭಾರ ಮಾಡುತ್ತಿರುವ ಸಂದರ್ಭದಲ್ಲಿ (೧೩೬೮ ಕ್ರಿ.ಶ.)ಜೈನರು ಬಂದು ವೈಷ್ಣವರಿಂದ ತಮಗಾಗುತ್ತಿರುವ ಅನ್ಯಾಯಗಳನ್ನು ಬಿನ್ನವಿಸಿಕೊಂಡಾಗ ಬುಕ್ಕರಾಯನು ಸಮಸ್ತ ಹದಿನೆಂಟು ನಾಡಿನ ಸಮಸ್ತ ವೈಷ್ಣವ ಮುಖ್ಯರನ್ನು ಕರೆಯಿಸಿ ವೈಷ್ಣವರ

ಕೈಯಲ್ಲಿ ಜೈನರ ಕೈಯನ್ನು ಹಿಡಿಸಿ ವೈಷ್ಣವ ಧರ್ಮಕ್ಕೂ ಜೈನ ಧರ್ಮಕ್ಕೂ ಯಾವುದೇ ಭೇದವಿಲ್ಲೆಂದು ಹೇಳಿದನು. ಶ್ರೀ ವೈಷ್ಣವರ ಕಡೆಯಿಂದ ಜೈನ ಧರ್ಮಕ್ಕೆ ಯಾವುದೇ ಹಾನಿ ಅಥವಾ ವೃದ್ಧಿ ಸಂಬವಿಸಿದರೆ ಅದು ಜೈನ ಧರ್ಮಕ್ಕೆ ಆದುದು ಎಂದು ತಿಳಿಯಬೇಕು. ಈ ನಿಯಮದಂತೆ ರಾಜ್ಯದಲ್ಲಿರುವ ಎಲ್ಲ ಬಸದಿಗಳಲ್ಲಿ ಶ್ರೀವೈಷ್ಣವರೇ ಶಾಸನವನ್ನು ಹಾಕಿಸಿ ಇದನ್ನು ಪಾಲಿಸಬೇಕು .. ಎಂದು ಶಾಸನ ರೂಪಿಸುವಾಗ ಈ ಮಾತು ಬಂದಿದೆ.

ಸ್ವಾರಸ್ಯ:ಎಲ್ಲ ಧರ್ಮಗಳ ಸಮನ್ವಯ ಸಾಧಿಸುವ ಉದ್ದೇಶವನ್ನು ಬುಕ್ಕರಾಯನು ಹೊಂದಿದ್ದನು ಎಂಬುದನ್ನು ಮೇಲಿನ ವಾಕ್ಯವು ಸೂಚಿಸುವುದು.

೩." ಮಿಕ್ಕ ಹೊನ್ನಿಂಗೆ ಜೀರ್ಣ ಜಿನಾಲಯಗಳಿಗೆ ಸೊದೆಯನಿಕ್ಕುವುದು ".

ಈ ಮೇಲಿನ ವಾಕ್ಯವನ್ನು ಬಿ.ಎಂ.ಶ್ರೀಯವರು ಸಂಪಾದಿಸಿದ ಕನ್ನಡ ಬಾವುಟ ಎನ್ನುವ ಕೃತಿಯಿಂದ ಆರಿಸಲಾದ ಧರ್ಮ ಸಮದೃಷ್ಟಿ ಪಾಠದಿಂದ ಆಯ್ದುಕೊಳ್ಳಲಾಗಿದೆ. ಈ ಮಾತನ್ನು ವಿಜಯನಗರ ಸಾಮ್ರಾಜ್ಯದ ಅರಸ ಬುಕ್ಕರಾಯನು ಹೇಳಿದ್ದಾನೆ.

ವೈಷ್ಣವರು ಜೈನರಿಗೆ ಅನ್ಯಾಯ ಮಾಡುತ್ತಿದ್ದಾರೆಂದು ಜೈನರು ಬಂದು ರಾಜನಲ್ಲಿ ಬಿನ್ನವಿಸಿಕೊಂಡಾಗ ಜೈನರು ಮತ್ತು ವೈಷ್ಣವರ ನಡುವೆ ಸಾಮರಸ್ಯ ಸಾಧಿಸಲು ಪ್ರಯತ್ನಿಸಿದ ಬುಕ್ಕ ರಾಯನು ವೈಷ್ಣವರ ಕಡೆಯಿಂದ ಜೈನ ಧರ್ಮಕ್ಕೆಯಾವುದೇ ಹಾನಿ ಸಂಭವಿಸಬಾರದೆಂದು ಶಾಸನ ವಿಧಿಸಿದನು .ಅಲ್ಲದೆ ಜೈನಮತೀಯರ ಅನುಮತದಂತೆ ಪ್ರತಿ ಜೈನ ಮನೆಗಳಿಂದ ವರ್ಷಕ್ಕೆ ಒಂದು ಹಣ ಸಂಗ್ರಹಿಸಿ ವೈಷ್ಣವ ದೇವರ ಕಾವಲಿಗೆ ಇಪ್ಪತ್ತು ಆಳನ್ನು ನೇಮಿಸಿ ಉಳಿದ ಹೊನ್ನಿಂದ ಜೀರ್ಣ ಜಿನಾಲಯಗಳಿಗೆ ಸುಣ್ಣವನ್ನು ಬಳಿಸಬೇಕು .ಎಂದು ನಿಯಮ ವಿಧಿಸಿದನು.

ಸ್ವಾರಸ್ಯ : ಬುಕ್ಕರಾಯನು ಜೈನ ಮತ್ತು ವೈಷ್ಣವ ಎಂಬ ತಾರತಮ್ಯ ಹೊಂದಿರಲಿಲ್ಲ.ಮತ್ತು ತನ್ನ ಪ್ರಜೆಗಳೂ ಆ ಭಾವವನ್ನು ಹೊಂದದೇ ಪರಸ್ಪರ ಧರ್ಮೀಯರು ಗೌರವಿಸಿಕೊಳ್ಳಲಿ,ಸಾಮರಸ್ಯದಿಂದ ಬಾಳಲಿ ಎಂಬ ಉದ್ದೇಶದಿಂದ ಈ ರೀತಿಯಾಗಿ ಆದೇಶವನ್ನು ಹೊರಡಿಸಿದನೆಂದು ಮೇಲಿನ ವಾಕ್ಯದ ಸ್ವಾರಸ್ಯವಾಗಿದೆ.

೪. "ಈ ಮಾಡಿದ ಕಟ್ಟಳೆಯನ್ನು ಅವನೊಬ್ಬನು ಮೀರಿದವನು ರಾಜದ್ರೋಹಿಯಪ್ಪನು ."

ಈ ಮೇಲಿನ ವಾಕ್ಯವನ್ನು ಬಿ.ಎಂ.ಶ್ರೀಯವರು ಸಂಪಾದಿಸಿದ ಕನ್ನಡ ಬಾವುಟ ಎನ್ನುವ ಕೃತಿಯಿಂದ ಆರಿಸಲಾದ ಧರ್ಮ ಸಮದೃಷ್ಟಿ ಪಾಠದಿಂದ ಆಯ್ದುಕೊಳ್ಳಲಾಗಿದೆ. ವಿಜಯನಗರ ಸಾಮ್ರಾಜ್ಯದ ಅರಸ ವೀರ ಬುಕ್ಕ ರಾಯನು ವಿಧಿಸಿದ ಶಾಸನದಲ್ಲಿ ಈ ಮಾತು ಬಂದಿದೆ. ಜೈನರಿಗೂ ಶ್ರೀ ವೈಷ್ಣವರಿಗೂ ಘರ್ಷಣೆಯಾದ ಸಂದರ್ಭದಲ್ಲಿ ಅವರ ನಡುವೆ ಸಾಮರಸ್ಯ ಸಾಧಿಸಲು ಪ್ರಯತ್ನಿಸಿದ ವಿಜಯನಗರ

ಸಾಮ್ರಾಜ್ಯದ ಅರಸ ವೀರ ಬು ಕ್ಕರಾಯನು (ಕ್ರಿ.ಶ.೧೩೬೮) ವೈಷ್ಣವ ಧರ್ಮದ ಪ್ರಮು ಖರನ್ನು ಕರೆದು ಇನ್ನು ಮುಂದೆವೈಷ್ಣವರು ಜೈನರನ್ನು ಪ್ರತ್ಯೇಕವಾಗಿ ನೋಡಬಾರದು . .ಅವರಿಗೆ ಆದ ಹಾನಿಯನ್ನು ತಮಗೆ ಆದ ಹಾನಿ ಎಂದು ಪರಿಗಣಿಸಬೇಕು ..ಅದರಂತೆ ಜೈನರೂ ಮನೆಗೊಂದರಂತೆ ಹಣ ಸಂಗ್ರ ಹಿಸಿ ವೈಷ್ಣವ ದೇವಾಲಯಗಳ ಕಾವಲಿಗೆ ನೀಡಬೇಕು .ಉಳಿದ ಹಣದಿಂದ ಜೀರ್ಣ ಜಿನಾಲಯಗಳಿಗೆ ಸೊದೆಯನಿಕ್ಕಬೇಕು ..ಇದನ್ನು ತಪ್ಪಿದವನು ರಾಜದ್ರೋಹಿಯೆನಿಸುವನು ಎಂದು ಕಟ್ಟಳೆ ವಿಧಿಸಿದನು . ಸ್ವಾರಸ್ಯ :ಬುಕ್ಕರಾಯನು ಧರ್ಮ ಸಮನ್ವಯ ಸಾಧಿಸುವ ಮನೋಭಾವನೆಯನ್ನು ಹೊಂದಿದ್ದನು ಮತ್ತು ಅವನ ಕಾಲದಲ್ಲಿ ರಾಜನು ಹೊರಡಿಸಿದ ಆದೇಶಕ್ಕೆ ಅವನ ಪ್ರಜೆಗಳು ಬದ್ಧರಾಗಿರಬೇಕಿತ್ತು ಎಂಬುದು ಮೇಲಿನ ವಾಕ್ಯದ ಸ್ವಾರಸ್ಯವಾಗಿದೆ.

೭.ಎಂಟು ಹತ್ತು ವಾಕ್ಯಗಳಲ್ಲಿ ಉತ್ತರಿಸಿ.

ಬುಕ್ಕ ರಾಯನು ತನ್ನ ಆಳ್ವಿಕೆಯಲ್ಲಿ ಧರ್ಮಸಮದೃಷ್ಟಿಯನ್ನು ಹೇಗೆ ಆಚರಣೆಗೆ ತಂದನು ?

ವಿಜಯನಗರ ಸಾಮ್ರಾಜ್ಯದ ಅರಸ ಬುಕ್ಕರಾಯನು ರಾಜ್ಯಭಾರ ಮಾಡುತ್ತಿದ್ದ ಸಮಯದಲ್ಲಿ ಭವ್ಯಜನಂಗಳು (ಜೈನರು )

ಬಂದು ಶ್ರೀ ವೈಷ್ಣವರು ತಮಗೆ ಮಾಡುತ್ತಿದ್ದ ಅನ್ಯಾಯಗಳನ್ನು ಬಿನ್ನವಿಸಿಕೊಂಡಾಗ ಶ್ರೀರಂಗ, ತಿರು ಪತಿ ,ಕಾಂಚಿಪುರ .ಮೇಲು ಕೋಟೆ (ಕೋವಿಲ್,ತಿರು ಮಲೆ,ಪೆರು ಮಾಳ್ ಕೋಯಿಲ್,ತಿರು ನಾರಾಯಣಪುರ ) ಮೊದಲಾದ ಕ್ಷೇತ್ರ ಗಳ ಸಕಲಾಚಾರ್ಯರು ಸಕಲಮಯಿಗಳು,ಸಕಲ ಸಾತ್ವಿಕರು ,ನಾಲ್ವತ್ತೆಂಟು ಜನಗಳು , ಸಾಮಂತರು , ಮೊದಲಾದ ಹದಿನೆಂಟು ನಾಡು ಗಳ ಶ್ರೀ ವೈಷ್ಣವರನ್ನು ಬರಮಾಡಿಕೊಂಡು ಮಹಾರಾಜನು ವೈಷ್ಣವರ ಕೈಯಲ್ಲಿ ಜೈನರ ಕೈಯನ್ನು ಹಿಡಿಸಿಕೊಟ್ಟು ವೈಷ್ಣವ ಧರ್ಮಕ್ಕೂ ಜೈನಧರ್ಮಕ್ಕೂ ಭೇದವಿಲ್ಲೆಂದು ಹೇಳಿದನು .ಜೈನ ಧರ್ಮಕ್ಕೆ ಈ ಹಿಂದೆ ಸಲ್ಲುತ್ತಿದ್ದಂತೆ ಪಂಚಮಹಾವಾದ್ಯಗಳು ಕಳಶವು ಸಲ್ಲುವುದು .ಶ್ರೀವೈಷ್ಣವರ ಕಡೆಯಿಂದ ಜೈನಧರ್ಮಕ್ಕೆ ಹಾನಿ ಅಥವಾ ವೃದ್ಧಿ ಸಂಭವಿಸಿದರೆ ಅದು ವೈಷ್ಣವ ಧರ್ಮಕ್ಕೆ ಆದುದು ಎಂದು ತಿಳಿಯಬೇಕು . .ಈ ನಿಯಮದಂತೆ ರಾಜ್ಯದಲ್ಲಿರು ವ ಎಲ್ಲಾ ಬಸದಿಗಳಲ್ಲಿ ಶ್ರೀ ವೈಷ್ಣವರೇ ಶಾಸನವನ್ನು ಹಾಕಿಸಿ ಪಾಲಿಸಬೇಕು .ಅಷ್ಟೇ ಅಲ್ಲ ಜೈನರೂ ಸಹ ಶ್ರವಣಬೆಳಗೊಳ ಕ್ಷೇತ್ರ ದಲ್ಲಿ ಶ್ರೀ ವೈಷ್ಣವ ಅಂಗರಕ್ಷೆಗೆ ಪ್ರತಿ ಮನೆಗೊಂದರಂತೆ ಹಣವನ್ನು ಸಂಗ್ರ ಹಿಸಿ, ಸಂಗ್ರ ಹಿಸಿದ ಹಣದಿಂದ ದೇವರ ಕಾವಲಿಗೆ ಇಪ್ಪತ್ತು ಆಳನ್ನು(ಜನರನ್ನು) ನೇಮಿಸಿ ಉಳಿದ ಹಣವನ್ನು ಜೈನ ಜಿನಾಲಯಗಳ ಜೀರ್ಣೋದ್ಧಾರಕ್ಕೆ ವಿನಿಯೋಗಿಸಬೇಕು .ಈ ನಿಯಮವನ್ನು

ಜೈನರೂ ವೈಷ್ಣವರೂ ಚಂದ್ರ ಸೂ ರ್ಯರು ಇರುವವರೆಗೆ ಪಾಲಿಸಿ ಪ್ರತಿವರ್ಷ ಹೊನ್ನನ್ನು ಕೊಟ್ಟು ಕೀರ್ತಿಯನ್ನು,ಪುಣ್ಯವನ್ನೂ ಸಂಪಾದಿಸಲಿ .ಇದನ್ನುಮೀರಿದವನು ರಾಜದ್ರೋಹಿಯೆನಿಸುವನು (ಶಿಕ್ಷೆ ಖಚಿತ )ಎಂದು ಆದೇಶ ಹೊರಡಿಸಿದ ಬುಕ್ಕರಾಯನು ವೈಷ್ಣವ ಮತ್ತು ಜೈನ ರು ಎಂದು ಪ್ರತ್ಯೇಕವಾಗಿ ಕಾಣಲಾಗದು .ಅವೆರಡೂ ಒಂದೇ ಎಂದು ತನ್ನ ಆಳ್ವಿಕೆಯಲ್ಲಿ 'ಧರ್ಮಸಮದೃಷ್ಟಿ' ಯನ್ನು ಆಚರಣೆಗೆ ತಂದನು .

## ವ್ಯಾಕರಣ ಪ್ರಶ್ನೆಗಳು

ಈ ಕೆಳಗಿನ ಪ್ರಶ್ನೆಗಳಿಗೆ ನಾಲ್ಕು ಆಯ್ಕೆಗಳನ್ನು ನೀಡಲಾಗಿದೆ.ಅವುಗಳಲ್ಲಿ ಸರಿಯಾದ ಉತ್ತರವನ್ನು ಆರಿಸಿ ಬರೆಯಿರಿ.

೧. 'ಮಂಡಳೇಶ್ವರ' ಪದವು ಈ ಸಂಧಿಗೆ ಉದಾಹರಣೆಯಾಗಿದೆ

ಎ)ಆಗಮ ಬಿ)ಲೋಪ ಸಿ)ಗುಣ ಡಿ)ಸವರ್ಣದೀರ್ಘ

೨'.ರಾಯರಗಂಡ' ಪದವು ಈ ಸಮಾಸಕ್ಕೆ ಉದಾಹರಣೆಯಾಗಿದೆ

ಎ) ತತ್ಪುರುಷ ಬಿ)ಕರ್ಮಧಾರಯ ಸಿ)ದ್ವಿಗು ಡಿ)ದ್ವಂದ್ವ

೩.'ಚರಣಾಂಬುಜ' ಪದವು ಈ ಸಂಧಿಗೆ ಉದಾಹರಣೆಯಾಗಿದೆ.

ಎ)ಗುಣ ಬಿ)ಸವರ್ಣದೀರ್ಘ ಸಿ)ಆದೇಶ ಡಿ)ಆಗಮ

೪.'ವಿಷ್ಣುಲೋಕ' ಪದವು ಈ ಸಮಾಸಕ್ಕೆ ಉದಾಹರಣೆಯಾಗಿದೆ

ಎ) ಕರ್ಮಧಾರಯ ಬಿ)ದ್ವಂದ್ವ ಸಮಾಸ ಸಿ)ದ್ವಿಗು ಡಿ)ತತ್ಪುರುಷ ಸಮಾಸ

೫. ವೀರಬುಕ್ಕರಾಯ ಪದದಲ್ಲಿರುವ ವೀರ ಎಂಬುದು ಈ ವ್ಯಾಕರಣಾಂಶದ ಉದಾಹರಣೆಯಾಗಿದೆ.

ಎ)ಕೃದಂತ ಬಿ)ಗುಣವಾಚಕ ಸಿ)ತದ್ಧಿತಾಂತ ಡಿ)ಸರ್ವನಾಮ

೬.'ಪಂಚಮಹಾವಾದ್ಯಗಳು' ಪದದಲ್ಲಿರುವ ಸಮಾಸ

ಎ)ಕರ್ಮಧಾರಯ ಸಮಾಸ ಬಿ)ದ್ವಂದ್ವ ಸಮಾಸ ಸಿ)ದ್ವಿಗು ಸಮಾಸ ಡಿ)ತತ್ಪುರುಷಸಮಾಸ

೭.'ಚಂದ್ರಾರ್ಕ' ಪದದಲ್ಲಿರುವ ಸಂಧಿ

ಎ)ಸವರ್ಣದೀರ್ಘ ಬಿ)ಗುಣ ಸಿ)ಆದೇಶ ಡಿ)ಜಶ್ತ್ವ

೮.'ಚಂದ್ರಾರ್ಕ' ಪದವು ಈ ಸಮಾಸದ ಉದಾಹರಣೆಯಾಗಿದೆ

ಎ) ತತ್ಪುರುಷ ಬಿ)ಕರ್ಮಧಾರಯ ಸಿ)ದ್ವಂದ್ವ ಡಿ)ಗಮಕ

೯.'ಭಕ್ತರದೆಸೆಯಿಂದ ' ಪದದಲ್ಲಿರುವ ವಿಭಕ್ತಿ

ಎ)ಸಪ್ತಮಿ ಬಿ)ಪಂಚಮಿ ಸಿ)ದ್ವಿತೀಯಾ ಡಿ)ತೃತೀಯಾ

೧೦.'ವರ್ಷವರ್ಷಕ್ಕೆ'ಪದವು ಈ ವ್ಯಾಕರಣಾಂಶಕ್ಕೆ ಉದಾಹರಣೆಯಾಗಿದೆ.

ಎ)ಅನುಕರಣಾವ್ಯಯ ಬಿ) ದ್ವಿರುಕ್ತಿ ಸಿ)ನುಡಿಗಟ್ಟು ಡಿ)ಜೋಡುನುಡಿ

೧೧.'ಮನೆಮನೆಗೆ' ಪದದಲ್ಲಿರುವ ವ್ಯಾಕರಣಾಂಶವಿದು

ಎ)ಜೋಡುನುಡಿ ಬಿ.ದ್ವಿರುಕ್ತಿ ಸಿ)ಅನುಕರಣಾವ್ಯಯ ಡಿ)ನುಡಿಗಟ್ಟು

೧೨.'ಹಣಕೊಟ್ಟು' ಪದದಲ್ಲಿರ ಸಮಾಸವಿದು

ಎ)ತತ್ಪುರುಷ ಬಿ)ಕರ್ಮಧಾರಯ ಸಿ)ಕ್ರಿಯಾ ಡಿ)ದ್ವಂದ್ವ

೧೩.'ಜಿನಾಲಯ ' ಪದವು ಈ ಸಂಧಿಗೆ ಉದಾಹರಣೆಯಾಗಿದೆ

ಎ)ಸವರ್ಣದೀರ್ಘ ಸಂಧಿ ಬಿ)ಗುಣ ಸಂಧಿ ಸಿ)ವಿಸರ್ಗ ಸಂಧಿ ಡಿ)ಲೋಪಸಂಧಿ

೧೪.ಜಿನಾಲಯ ಪದವು ಈ ಸಮಾಸದ ಉದಾಹರಣೆಯಾಗಿದೆ.

ಎ)ಕರ್ಮಧಾರಯ ಬಿ)ದ್ವಂದ್ವ ಸಿ)ದ್ವಿಗು ಡಿ)ತತ್ಪುರುಷ

ಉತ್ತರಗಳು

೧.ಸಿ)ಗುಣ ೨.ಎ)ತತ್ಪುರುಷ ೩.ಬಿ)ಸವರ್ಣದೀರ್ಘ ೪.ಡಿ)ತತ್ಪುರುಷ ೫.ಬಿ)ಗುಣವಾಚಕ
೬.ಸಿ)ದ್ವಿಗುಸಮಾಸ ೭.ಎ)ಸವರ್ಣದೀರ್ಘ ೮.ಸಿ)ದ್ವಂದ್ವ ೯.ಬಿ)ಪಂಚಮಿ ೧೦ಬಿ)ದ್ವಿರುಕ್ತಿ.
೧೧.ಬಿ)ದ್ವಿರುಕ್ತಿ ೧೨.ಸಿ)ಕ್ರಿಯಾ ೧೩.ಸವರ್ಣದೀರ್ಘ ೧೪. ತತ್ಪುರುಷ

*ಅಲಂಕಾರ ಹೆಸರಿಸಿ ಸಮನ್ವಯಿಸಿ*

ಚರಣಾಂಬುಜ

ಉಪಮೇಯ : ಚರಣ

ಉಪಮಾನ :ಅಂಬುಜ

ಅಲಂಕಾರ :ರೂಪಕ

ಇಲ್ಲಿ ಉಪಮೇಯವಾದ ಚರಣವು ಉಪಮಾನವಾದ ಅಂಬುಜ ಎಂದು ಅಬೇಧ ಕಲ್ಪಿಸಿರುವುದರಿಂದ ಇದು ರೂಪಕ ಅಲಂಕಾರವಾಗಿದೆ.

## ಗದ್ಯಪಾಠ -ಭಾಗ್ಯಶಿಲ್ಪಿಸರ್ ಎಂ. ವಿಶ್ವೇಶ್ವರಯ್ಯ

## ಲೇಖಕರು : ಡಿ.ಎಸ್.ಜಯಪ್ಪಗೌಡ

## ಲೇಖಕರ ಪರಿಚಯ

ಡಿ.ಎಸ್ .ಜಯಪ್ಪಗೌಡರು ೧೯೪೭ ರಲ್ಲಿ ಚಿಕ್ಕಮಗಳೂರು ಜಿಲ್ಲೆಯ ದಾರದಹಳ್ಳಿಯಲ್ಲಿ ಜನಿಸಿದರು.ದಾರದಹಳ್ಳಿಸುಬ್ಬೇಗೌಡ ಜಯಪ್ಪಗೌಡ ಎಂಬುದು ಇವರ ಪೂರ್ಣ ಹೆಸರು. ಇವರು ಕರ್ನಾಟಕ ಗ್ರಾಮೀಣ ಸಂಸ್ಥೆಗಳು , ಕರ್ನಾಟಕದ ಕಡಲಾಚೆಯ ಸಂಪರ್ಕಗಳು, ಮೈಸೂರು ಒಡೆಯರು,ಜನಪದ ಆಟಗಳು ,ಮೊದಲಾದ ಕೃತಿಗಳನ್ನುಬರೆದಿದ್ದಾರೆ.ಇವರ ಕರ್ನಾಟಕದ ಕಡಲಾಚೆಯ ಸಂಪರ್ಕಗಳು ಕೃತಿಗೆ ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ದೊರೆತಿದೆ. ಧಾರವಾಡದ ಕರ್ನಾಟಕ ಸಂಘದ ಸಂಶೋಧನಾ ಬಹುಮಾನಕ್ಕೆ ಇವರು ಭಾಜನರಾಗಿದ್ದಾರೆ. ಇವರ ದಿವಾನ್ ಸರ್ ಎಂ.ವಿಶ್ವೇಶ್ವರಯ್ಯನವರ ಕಾರ್ಯಸಾಧನೆಗಳು ಎಂಬ ಕೃತಿಯಿಂದ ಭಾಗ್ಯಶಿಲ್ಪಿಸರ್ ಎಂ.ವಿಶ್ವೇಶ್ವರಯ್ಯ ಪಾಠವನ್ನು ಆಯ್ದುಕೊಳ್ಳಲಾಗಿದೆ.

ಅ. ಕೊಟ್ಟಿರುವ ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರಿಸಿ.

೧. ವಿಶ್ವೇಶ್ವರಯ್ಯನವರ ಪೂರ್ವಜರು ಎಲ್ಲಿಯವರು?

ವಿಶ್ವೇಶ್ವರಯ್ಯನವರ ಪೂರ್ವಜರು ಮೂಲತಃ ಆಂಧ್ರಪ್ರದೇಶದ ಕರ್ನೂಲು ಜಿಲ್ಲೆ ಗಿಡ್ಡಲೂರು ತಾಲೂಕಿನ ಮೋಕ್ಷಗೊಂಡಂ ಅಗ್ರಹಾರಕ್ಕೆ ಸೇರಿದವರು.

೨. ವೆಂಕಟಲಕ್ಷ್ಮಮ್ಮ ಅವರು ತಮ್ಮ ಕುಟುಂಬವನ್ನು ಚಿಕ್ಕಬಳ್ಳಾಪುರಕ್ಕೆ ಸ್ಥಳಾಂತರಿಸಿದ್ದು ಏಕೆ?

ವೆಂಕಟಲಕ್ಷ್ಮಮ್ಮನವರು ತಮ್ಮ ಮಕ್ಕಳು ಹೆಚ್ಚು ಓದಿ ದೊಡ್ಡ ವ್ಯಕ್ತಿಗಳಾಗಬೇಕೆಂಬ ಹಂಬಲದಿಂದ ಸಂಸಾರವನ್ನು ಚಿಕ್ಕಬಳ್ಳಾಪುರಕ್ಕೆ ಸ್ಥಳಾಂತರಿಸಿದರು.

೩. ಬ್ರಿಟಿಷ್ ಸರಕಾರ ವಿಶ್ವೇಶ್ವರಯ್ಯ ಅವರಿಗೆ ಯಾವ ಪದವಿಯನ್ನು ನೀಡಿ ಗೌರವಿಸಿತು ?

ಬ್ರಿಟಿಷ್ ಸರಕಾರ ವಿಶ್ವೇಶ್ವರಯ್ಯ ಅವರಿಗೆ 'ಸರ್'ಪದವಿಯನ್ನು ನೀಡಿ ಗೌರವಿಸಿತು.

೪. ವಿಶ್ವೇಶ್ವರಯ್ಯ ಅವರನ್ನು ದಿವಾನರಾಗಿ ನೇಮಿಸಿದವರು ಯಾರು ?

ವಿಶ್ವೇಶ್ವರಯ್ಯ ಅವರನ್ನು ದಿವಾನರಾಗಿ ನೇಮಿಸಿದವರು ಮೈಸೂರು ಸಂಸ್ಥಾನದ ಮಹಾರಾಜರಾಗಿದ್ದ

ನಾಲ್ವಡಿ ಕೃಷ್ಣರಾಜ ಒಡೆಯರು.

೫. ವಿಶ್ವೇಶ್ವರಯ್ಯ ಅವರ ಹುಟ್ಟುಹಬ್ಬದ ನೆನಪಿಗಾಗಿ ಯಾವ ದಿನಾಚರಣೆಯನ್ನು ಮಾಡಲಾಗುತ್ತಿದೆ?

ವಿಶ್ವೇಶ್ವರಯ್ಯ ಅವರ ಹುಟ್ಟುಹಬ್ಬದ ನೆನಪಿಗಾಗಿ 'ಎಂಜನಿಯರ್ಸ ದಿನಾಚರಣೆ' ಯನ್ನು ಆಚರಿಸಲಾಗುತ್ತದೆ ?

ಆ. ಕೊಟ್ಟಿರುವ ಪ್ರಶ್ನೆಗಳಿಗೆ ಮೂರು ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿ.

೧.ಶಿಕ್ಷಣದ ಬಗ್ಗೆ ವಿಶ್ವೇಶ್ವರಯ್ಯನವರು ಏನೆಂದು ಹೇಳಿದ್ದಾರೆ ?

ವಿಶ್ವೇಶ್ವರಯ್ಯನವರು ಆಧುನಿಕ ಶಿಕ್ಷಣವೇ ಎಲ್ಲ ಸಮಸ್ಯೆಗಳಿಗೂ ಪರಮೋಚ್ಚ ಪರಿಹಾರವೆಂದು ನಂಬಿದ್ದರು .ಶಿಕ್ಷಣವು ಸಂಜೀವಿನಿ ಎಂದರಿತಿದ್ದ ಅವರುಶಿಕ್ಷಣದ ಹಲವು ಯೋಜನೆಗಳನ್ನು ರೂಪಿಸಿದರು.''ಶಿಕ್ಷಣಕ್ಕಾಗಿ ಶಿಕ್ಷಣವಿರಬೇಕು.ಅದು ಕೆಲವೇಜನರ ಸೊತ್ತಾಗದೇ ಪ್ರಗತಿಪರ ರಾಜ್ಯದಲ್ಲಿ ಎಲ್ಲರ ಆಜನ್ಮಸಿದ್ಧ ಹಕ್ಕಾಗಬೇಕು'' ಎಂಬುದನ್ನು ಮನಗಂಡಿದ್ದರು.

೨.ನೆಹರೂ ಅವರು ಸರ್ ಎಂ. ವಿಶ್ವೇಶ್ವರಯ್ಯನವರ ಬಗ್ಗೆ ಏನೆಂದು ಹೇಳಿದ್ದಾರೆ?

''ದುರದೃಷ್ಟವಶಾತ್ ಭಾರತೀಯರಾದ ನಾವು ಹೆಚ್ಚು ಮಾತನಾಡುವವರು ಮತ್ತು ನುಡಿದಂತೆ ನಡೆಯಲಾರದವರೆಂಬ ದೂಷಣೆಗೆ ಒಳಗಾಗಿದ್ದೇವೆ.ತಾವು ಈ ಮಾತಿಗೆ ಬಹುದೊಡ್ಡ ರೀತಿಯಲ್ಲಿ ಹೊರತಾಗಿದ್ದೀರಿ.ತಾವು ಕಡಿಮೆ ಮಾತನಾಡಿದ್ದೀರಿ; ಹೆಚ್ಚು ಕೆಲಸ ಮಾಡಿದ್ದೀರಿ.ಅದನ್ನು ನಾವು ತಮ್ಮಿಂದ ಕಲಿಯೋಣ''.ಎಂದು ಪಂಡಿತ್ ಜವಾಹರಲಾಲ್ ಅವರು ಬೆಂಗಳೂರಿನಲ್ಲಿ ನಡೆದ ವಿಶ್ವೇಶ್ವರಯ್ಯ ಅವರ ಶತಮಾನೋತ್ಸವ ಸಂದರ್ಭದಲ್ಲಿ ವಿಶ್ವೇಶ್ವರಯ್ಯನವರ ಕುರಿತು ಹೇಳಿದರು.

೩.ಹೈದರಾಬಾದ್ ನಗರದಲ್ಲಿ ವಿಶ್ವೇಶರಯ್ಯ ಅವರು ಸಲ್ಲಿಸಿದ ಸೇವೆ ಯಾವುದು ?

ಹೈದರಾಬಾದ್ ನಗರಕ್ಕೆ ಈಸಿ ಮತ್ತು ಮೂಸಿ ನದಿಗಳ ಪ್ರವಾಹದಿಂದ ಅಪಾರ ನಷ್ಟ ಸಂಭವಿಸುತ್ತಿತ್ತು .ಅದನ್ನು ತಡೆಯಲು ಎರಡು ನದಿಗಳಿಗೂ ಪ್ರತ್ಯೇಕ ಜಲಾಶಯ ನಿರ್ಮಿಸುವುದರ ಮೂಲಕ ಸಮಸ್ಯೆಯನ್ನು ಬಗೆಹರಿಸಿದ ವಿಶ್ವೇಶ್ವರಯ್ಯನವರು ಹೈದರಾಬಾದ್ ನಗರವನ್ನು ಭಾರತದ ಸುಯೋಜಿತ ನಗರಗಳ ಸಾಲಿಗೆ ಸೇರ್ಪಡೆಯಾಗುವಂತೆ ಮಾಡಿದರು.

೪.ಎಂಜನಿಯರ್‌ಗಳಿಗೆ ವಿಶ್ವೇಶ್ವರಯ್ಯ ಅವರು ಏನೆಂದು ಮಾರ್ಗದರ್ಶನ ಮಾಡಿದರು?

ವಿಶ್ವೇಶ್ವರಯ್ಯ ಅವರು ಎಂಜನಿಯರುಗಳಿಗೆ ''ನಮ್ಮ ಕೆಲಸಗಳು ಪ್ರಮಾಣದಲ್ಲಿ ಚಿಕ್ಕದಿರಬಹುದು ,ಆದರೆ ಪ್ರಪಂಚದಾದ್ಯಂತ ಯಾವುದೇ ವರ್ಗದ ಕಾಮಗಾರಿಯ ಎಂಜನಿಯರಿಂಗ್ ಗುಣಲಕ್ಷಣಗಳು ಒಂದೇ ಆಗಿರುತ್ತವೆ .ಈ ಕಾಮಗಾರಿಗಳನ್ನು ಕುಶಲತೆ ಮತ್ತು ಕಡಿಮೆ ವೆಚ್ಚದಲ್ಲಿ

ಕಾರ್ಯಗತಗೊಳಿಸಬೇಕೆಂದರೆ ಇತರ ಯಾವುದೇ ದೇಶದ ಎಂಜನಿಯರ್ ಪಡೆಯುವಷ್ಟೇ ತರಬೇತಿ ಮತ್ತು ಜ್ಞಾನವನ್ನು ಪಡೆಯಬೇಕು .ಮಾಹಿತಿಗಳಲ್ಲಾಗಲಿ ,ವಿಧಾನಗಳಲ್ಲಾಗಲಿ ನಾವು ಹಿಂದುಳಿಯುವುದು ಉಚಿತವಲ್ಲ.'' ಎಂದು ಮಾರ್ಗದರ್ಶನ ಮಾಡಿದರು.

೫.ಹಣಕಾಸು ನೀತಿಯಲ್ಲಿ ವಿಶ್ವೇಶ್ವರಯ್ಯಅವರು ಮಾಡಿದ ಮಾರ್ಪಾಡುಗಳು ಯಾವುವು ?

ರಾಜ್ಯದ ಆರ್ಥಿಕ ಚಟುವಟಿಕೆಗಳಿಗೆ ಭದ್ರಬುನಾದಿ ಹಾಕುವ ಉದ್ದೇಶದಿಂದ ಹಣಕಾಸು ನೀತಿಯಲ್ಲಿ ಮಾರ್ಪಾಡು ಮಾಡಿದ ವಿಶ್ವೇಶ್ವರಯ್ಯನವರು ೧೯೧೩ ರಲ್ಲಿ ಮೈಸೂರು ಬ್ಯಾಂಕ್ ಸ್ಥಾಪಿಸಿದರು.ಉಳಿತಾಯ ಬ್ಯಾಂಕ್ ಗಳು,ಕೈಗಾರಿಕೆಗಳ ಅಭಿವೃದ್ಧಿಗೆ ಫೀಡರ್ ಬ್ಯಾಂಕ್ ಕೈಗಾರಿಕಾ ಹೂಡಿಕೆ ಮತ್ತು ಅಭಿವೃದ್ಧಿ ನಿಧಿಗಳ ರಚನೆ ಮಾಡಿದರು. ಸಾರ್ವಜನಿಕ ಜೀವ ವಿಮಾ ಯೋಜನೆ ಜಾರಿಗೆ ತಂದರು.ರೈತರಿಗೆ ಹಾಗೂ ಕರಕುಶಲ ಕೆಲಸಗಾರರಿಗೆ ಸಾಲದ ಸೌಲಭ್ಯ ನೀಡಲು ಸಹಕಾರಿ ಕ್ಷೇತ್ರ ವನ್ನು ಬಲವರ್ಧನೆಗೊಳಿಸಿದರು.ಪ್ರಾಂತೀಯ ಸಹಕಾರಿ ಬ್ಯಾಂಕ್ ಗಳನ್ನು ಸ್ಥಾಪಿಸಿದರು.ರಾಜ್ಯದ ಆಸ್ತಿಯನ್ನು ಹೆಚ್ಚಿಸಿ, ಆದಾಯ ತರುವುದರ ಮೂಲಕ ಅಭಿವೃದ್ಧಿ ಕಾರ್ಯಗಳ ಪ್ರಭಾವಗಳನ್ನು ಅಳೆಯಲು ಅನುಕೂಲವಾಗುವಂತೆ ಆಯವ್ಯಯದಲ್ಲಿ ಹೊಸ ದೃಷ್ಟಿಕೋನವನ್ನು ಕಂಡುಕೊಂಡರು.

ಇ.ಕೊಟ್ಟಿರುವ ಪ್ರಶ್ನೆಗಳಿಗೆ ಎಂಟು ಹತ್ತು ವಾಕ್ಯಗಳಲ್ಲಿ ಉತ್ತರಿಸಿ.

೧. ಮುಂಬೈ ಮತ್ತು ಪೂನಾ ನಗರಗಳಲ್ಲಿ ವಿಶ್ವೇಶ್ವರಯ್ಯಅವರು ಸಲ್ಲಿಸಿದ ಸೇವೆಯನ್ನು ವಿವರಿಸಿ.

ವಿಶ್ವೇಶ್ವರಯ್ಯನವರು ಮುಂಬೈ ಪ್ರಾಂತ್ಯದ ಲೋಕೋಪಯೋಗಿ ಇಲಾಖೆಯಲ್ಲಿ ಸಹಾಯಕ ಎಂಜನಿಯರ್ ಆಗಿ ಸೇವೆ ಸಲ್ಲಿಸುತ್ತಿದ್ದಾಗ ಖಾನ್ ದೇಶ ಮತ್ತು ನಾಸಿಕ್ ಜಿಲ್ಲೆಗಳಲ್ಲಿ ಹರಿಯುತ್ತಿದ್ದ ಪಂಜ್ರಾ ನದಿಯ ನೀರಾವರಿ ಕಾಲುವೆಗೆ ತೂಬು ಮೇಲ್ಗಾಲುವೆಯನ್ನು ನಿರ್ಮಿಸುವ ಕಾರ್ಯದಲ್ಲಿ ಯಶಸ್ವಿಯಾದರು.ಸಿಂಧ್ ಪ್ರಾಂತ್ಯದ ಸುಕ್ಕೂರು ಪಟ್ಟಣಕ್ಕೆ ಕುಡಿಯುವ ನೀರಿನ ಪೂರೈಕೆಯ ಕಾರ್ಯವನ್ನು ಯಶಸ್ವಿಯಾಗಿ ಪೂರೈಸಿದರು.ಅಂದಿನ ಮುಂಬೈ ಪ್ರಾಂತ್ಯದ ಗವರ್ನರ್ ಆಗಿದ್ದ ಲಾರ್ಡ್ ಸಂಡ್ ಹರ್ಸ್ಟ್ ಅವರು ಇವರನ್ನು ಮುಕ್ತಕಂಠದಿಂದ ಶ್ಲಾಘಿಸಿದರು ಪೂನಾದ ಮುಥಾ ಕಾಲುವೆಗೆ ನೀರಿನ ನೆಲೆಯಾಗಿದ್ದ ಪೀಪ್ ಜಲಾಶಯಕ್ಕೆ ಸ್ವಯಂ ಚಾಲಿತ ಬಾಗಿಲುಗಳನ್ನು ಅಳವಡಿಸಿದರು ಈ ಅನ್ವೇಷಣೆ ಅವರ ಸಾಧನೆಯ ಕಿರೀಟಕ್ಕೆ ಮತ್ತೊಂದು ಗರಿಯನ್ನು ಸೇರಿಸಿತು. ಇದನ್ನೇ ಮುಂದೆ ಗ್ವಾಲಿಯರ್ ನ ತಿಗ್ರ ಜಲಾಶಯಕ್ಕೂ ಮೈಸೂರಿನ ಕೃಷ್ಣರಾಜಸಾಗರ ಜಲಾಶಯಕ್ಕೂ ಅಳವಡಿಸಲಾಯಿತು.ಮುಂದಿನ ನಾಲ್ಕು ವರ್ಷಗಳ ಕಾಲ ಮುಂಬೈ ಪ್ರಾಂತ್ಯದ ಸ್ಯಾನಿಟರಿ ಎಂಜನಿಯರ್ ಆಗಿ ನೇಮಕಗೊಂಡರು.ಅವರು

**ಈ ಹುದ್ದೆಗೆ ನೇಮಕವಾದ ಪ್ರಥಮ ಭಾರತೀಯರು**

**೨.ವಿಶ್ವೇಶ್ವರಯ್ಯ ಅವರು ಮೈಸೂರು ದಿವಾನರಾಗಿಸಲ್ಲಿಸಿದ ಸೇವೆಯನ್ನುಕುರಿತು ಬರೆಯಿರಿ.**

**ನಾಲ್ವಡಿ ಕೃಷ್ಣ ರಾಜ ಒಡೆಯರಿಂದ ದಿವಾನರಾಗಿ ನೇಮಕವಾದ ವಿಶ್ವೇಶ್ವರಯ್ಯನವರು ಆಡಳಿತದಲ್ಲಿ ಹೊಸ ಮಾದರಿಯನ್ನು ಅನುಷ್ಠಾನಗೊಳಿಸಿ ಕಚೇರಿಯ ಕೆಲಸ ಕಾರ್ಯಗಳಲ್ಲಿ ಸುಧಾರಣೆ ತಂದರು. ದಕ್ಷತೆ ಮತ್ತು ಪ್ರಾಮಾಣಿಕತೆಗೆ ಒತ್ತು ನೀಡಿದರು.ಸಂಸ್ಥಾನದಲ್ಲಿ ಸ್ಥಳೀಯ ಮಟ್ಟದಲ್ಲಿ ಕೇಂದ್ರೀಕೃತವಾಗಿದ್ದ ನ್ಯಾಯಾಂಗ ಮತ್ತು ಕಾರ್ಯಾಂಗಗಳ ಅಧಿಕಾರವನ್ನುಪ್ರತ್ಯೇಕಗೊಳಿಸಿದರು.ರಾಜ್ಯಪ್ರವಾಸ ಮಾಡಿ ಅಜಮಾಯಿಸಿ ಕಾರ್ಯ ನಡೆಸಿದರು.ಸಮರ್ಥ ಕಾರ್ಯ ನಿರ್ವಹಣೆಗಾಗಿ ಸಮಿತಿ ರಚನೆಗೆ ಪ್ರಾಶಸ್ತ್ಯ ನೀಡಿದರು.ನೇಮಕಾತಿಯಲ್ಲಿ ಸ್ಥಳಿಯರಿಗೆ ಆದ್ಯತೆ ನೀಡಿದರು..ಮೈಸೂರು ಮಾದರಿ ಎಂಬ ಹೊಸ ಆಡಳಿತ ಜನ್ಮ ತಾಳಲು ಕಾರಣರಾದರು.ಇವರ ಆಡಳಿತಾವಧಿಯಲ್ಲಿ ಮೈಸೂರು ರಾಜಧಾನಿಯಾಗಿ ಮತ್ತು ರಾಜ್ಯದ ಎರಡನೆಯ ದೊಡ್ಡ ನಗರವಾಗಿಪ್ರಸಿದ್ಧಿಪಡೆಯಿತು. ಮೈಸೂರಿನ ಹೊಸ ಅರಮನೆ , ಸಿ. ರಂಗಾಚಾರ್ಲು ಪುರಭವನ ,ಅರಮನೆ ವಿಸ್ತರಣೆ, ಕೃಷ್ಣರಾಜೇಂದ್ರ ಆಸ್ಪತ್ರೆ , ಲಲಿತಮಹಲ್ ಅರಮನೆಯ ತಳಹದಿ, ಮತ್ತುಪ್ರಧಾನ ಅರಮನೆಯ ಕಚೇರಿ ಸಮುಚ್ಚಯಗಳು ಇವರ ಕಾಲದಲ್ಲಿಯೇನಿರ್ಮಾಣಗೊಂಡವು. ಶಿವನಸಮುದ್ರ ಜಲವಿದ್ಯುತ್ ಉತ್ಪಾದನೆಯನ್ನುಸಮಗ್ರವಾಗಿ ಅಭಿವೃದ್ಧಿಪಡಿಸಿದರು. ಜನಾರೋಗ್ಯವನ್ನು ಕಾಪಾಡುವ ದೃಷ್ಟಿಯಿಂದ ಹಲವಾರು ಆಸ್ಪತ್ರೆಗಳನ್ನು ಪ್ರಾರಂಭಿಸಿದರು. ಸಾಂಕ್ರಾಮಿಕ ರೋಗಗಳ ನಿವಾರಣೆಗೆ ಹಲವಾರು ಕಾರ್ಯಕ್ರಮಗಳನ್ನು ಜಾರಿಗೆ ತಂದರು. ಹೀಗೆ ವಿಶ್ವೇಶ್ವರಯ್ಯ ಅವರು ಹೊಸಯುಗದ ಹರಿಕಾರರಾಗಿ ಮೈಸೂರು ಸಂಸ್ಥಾನಕ್ಕೆ ನವಚೈತನ್ಯವನ್ನುತುಂಬಿದರು.**

**೩.ಶಿಕ್ಷಣ ಕ್ಷೇತ್ರಕ್ಕೆವಿಶ್ವೇಶ್ವರಯ್ಯಅವರು ಸಲ್ಲಿಸಿದ ಕೊಡುಗೆಗಳನ್ನು ತಿಳಿಸಿ**

**ವಿಶ್ವೇಶ್ವರಯ್ಯ ಅವರು ಆಧುನಿಕ ಶಿಕ್ಷಣವೇ ಎಲ್ಲ ಸಮಸ್ಯೆಗಳಿಗೂ ಪರಮೋಚ್ಚ ಪರಿಹಾರವೆಂದು ನಂಬಿದ್ದರು. ಶಿಕ್ಷಣವು ಸಂಜೀವಿನಿ ಎಂಬುದನ್ನರಿತಿದ್ದ ಅವರು ಶಿಕ್ಷಣದ ಯೋಜನೆಗಳನ್ನು ರೂಪಿಸಿದರು.೧೯೧೩ರಲ್ಲಿ ಪ್ರಾಥಮಿಕ ಶಿಕ್ಷಣ ನಿಬಂಧನೆಯನ್ನು ಜಾರಿಗೆ ತಂದರು.ಮದ್ರಾಸ್ ವಿಶ್ವವಿದ್ಯಾನಿಲಯದ ನಿಯಂತ್ರಣಕ್ಕೆ ಒಳಪಟ್ಟಿದ್ದ ಪ್ರೌಢ ಶಿಕ್ಷಣ ಸಂಸ್ಥೆಗಳನ್ನು ಬೇರ್ಪಡಿಸಿ ಸಂಸ್ಥಾನವೇ ಪ್ರೌಢಶಿಕ್ಷಣದ ಅಂತಿಮ ಪರೀಕ್ಷೆ ನಡೆಸುವ ಯೋಜನೆಯನ್ನು ಆರ್ಥಿಕ ಪರಿಷತ್ತಿನ ಮೂಲಕ ರೂಪುಗೊಳಿಸಿದರು.ಮೈಸೂರು ವಿಶ್ವವಿದ್ಯಾನಿಲಯದ ಸ್ಥಾಪನೆ ಇವರ ದೂರದೃಷ್ಟಿಯ ಫಲಶೃತಿ.ತಾಂತ್ರಿಕ ಮತ್ತು ವೃತ್ತಿಪರ ಶಿಕ್ಷಣಕ್ಕೆ ಆದ್ಯತೆ ನೀಡಿದರು.ಬೆಂಗಳೂರಿನಲ್ಲಿ ಮೆಕಾನಿಕಲ್ ಎಂಜನಿಯರಿಂಗ್ ಶಾಲೆ**

,ಮೈಸೂರಿನಲ್ಲಿ ಚಾಮರಾಜೇಂದ್ರ ತಾಂತ್ರಿಕಸಂಸ್ಥೆಗಳನ್ನು ಪ್ರಾರಂಭಿಸಿದರು.ಮಹಿಳೆಯರಿಗಾಗಿ ಗೃಹಶಿಕ್ಷಣ ಶಾಲೆಗಳನ್ನು ಸ್ಥಾಪಿಸಿದರು. ವಿದ್ಯಾರ್ಥಿ ವೇತನವನ್ನು ಕೊಡುವುದರ ಮೂಲಕ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳ ವ್ಯಾಸಂಗಕ್ಕೆ ಅನುವು ಮಾಡಿಕೊಟ್ಟರು.ಗ್ರಂಥಾಲಯಗಳ ವ್ಯವಸ್ಥೆಗೆ ಅಸ್ಥಿಭಾರ ಹಾಕಿದರು.ಕನ್ನಡ ಸಾಹಿತ್ಯ ಪರಿಷತ್ತನ್ನು ಸ್ಥಾಪಿಸಿದರು.

ಈ. ಸಂದರ್ಭಾನುಸಾರ ಸ್ವಾರಸ್ಯವನ್ನು ವಿವರಿಸಿ.

೧.'' ತಾವು ಕಡಿಮೆ ಮಾತನಾಡಿದ್ದೀರಿ ಮತ್ತು ಹೆಚ್ಚು ಕೆಲಸ ಮಾಡಿದ್ದೀರಿ''

ಈ ಮೇಲಿನ ವಾಕ್ಯವನ್ನು ಡಿ.ಎಸ್.ಜಯಪ್ಪಗೌಡರು ಬರೆದ ಭಾಗ್ಯಶಿಲ್ಪಿಸರ್ ಎಂ.ವಿಶ್ವೇಶ್ವರಯ್ಯ ಎನ್ನುವ ಗದ್ಯಭಾಗದಿಂದ ಆಯ್ದುಕೊಳ್ಳಲಾಗಿದೆ.

ಈ ಮಾತನ್ನು ಭಾರತದ ಪ್ರಥಮ ಪ್ರಧಾನಿಯಾಗಿದ್ದ ಪಂಡಿತ್ ಜವಾಹರಲಾಲ್ ರವರು ಸರ್ ಎಂ.ವಿಶ್ವೇಶ್ವರಯ್ಯನವರ ಕುರಿತು ಹೇಳಿದ್ದಾರೆ.

ಸಂದರ್ಭ: ಜವಾಹರಲಾಲ್ ನೆಹರೂರವರು ಬೆಂಗಳೂರಿನಲ್ಲಿ ನಡೆದ ವಿಶ್ವೇಶ್ವರಯ್ಯಅವರ ಶತಮಾನೋತ್ಸವ ಸಂದರ್ಭದಲ್ಲಿ ವಿಶ್ವೇಶ್ವರಯ್ಯನವರ ಕುರಿತು ಹೇಳುತ್ತ ದುರದೃಷ್ಟವಶಾತ್ ಭಾರತೀಯರಾದ ನಾವು ಹೆಚ್ಚು ಮಾತನಾಡುವವರು ಮತ್ತು ನುಡಿದಂತೆ ನಡೆಯಲಾರದವರೆಂಬ ದೂಷಣೆಗೆ ಒಳಗಾಗಿದ್ದೇವೆ.ಆದರೆ ವಿಶ್ವೇಶ್ವರಯ್ಯನವರು ಈ ಮಾತಿಗೆ ಹೊರತಾದವರು ಎಂದು ಹೇಳುವಾಗ ಮೇಲಿನ ಮಾತು ಬಂದಿದೆ.

ಸ್ವಾರಸ್ಯ: ವಿಶ್ವೇಶ್ವರಯ್ಯನವರು ಮಾತಿಗಿಂತ ಕೃತಿಗೆ ಹೆಚ್ಚು ಮಹತ್ವವನ್ನು ನೀಡಿದ್ದರು. ಅವರು ಮಿತಭಾಷಿಗಳಾಗಿದ್ದರು ಮತ್ತು ಸದಾ ಕರ್ಮ ಯೋಗಿಯಾಗಿದ್ದರು ಎಂಬುದು ಮೇಲಿನ ವಾಕ್ಯದ ಸ್ವಾರಸ್ಯವಾಗಿದೆ.

೨.''ಅವರ ಸಾಧನೆಯ ಕಿರೀಟಕ್ಕೆ ಮತ್ತೊಂದು ಗರಿಯನ್ನು ಸೇರಿಸಿತು ''

ಈ ಮೇಲಿನ ವಾಕ್ಯವನ್ನು ಡಿ.ಎಸ್.ಜಯಪ್ಪಗೌಡರು ಬರೆದ ಭಾಗ್ಯಶಿಲ್ಪಿಸರ್ ಎಂ.ವಿಶ್ವೇಶ್ವರಯ್ಯ ಎನ್ನುವ ಗದ್ಯಭಾಗದಿಂದ ಆಯ್ದುಕೊಳ್ಳಲಾಗಿದೆ.

ಸಂದರ್ಭ:ವಿಶ್ವೇಶ್ವರಯ್ಯನವರು ಮುಂಬೈ ಪ್ರಾಂತ್ಯದ ಲೋಕೋಪಯೋಗಿ ಇಲಾಖೆಯಲ್ಲಿ ಸಹಾಯಕ ಎಂಜನಿಯರ್ ಆಗಿ ಸೇವೆ ಸಲ್ಲಿಸುತ್ತಿದ್ದಾಗ ಖಾನ್ ದೇಶ ಮತ್ತು ನಾಸಿಕ್ ಜಿಲ್ಲೆಗಳಲ್ಲಿ ಹರಿಯುತ್ತಿದ್ದ ಪಂಜ್ರಾ ನದಿಯ ನೀರಾವರಿ ಕಾಲುವೆಗೆ ತೂಬು ಮೇಲ್ಗಾಲುವೆಯನ್ನು ನಿರ್ಮಿಸುವ ಕಾರ್ಯದಲ್ಲಿ

ಯಶಸ್ವಿಯಾದರು.ಸಿಂಧ್ ಪ್ರಾಂತ್ಯದ ಸುಕ್ಕೂರು ಪಟ್ಟಣಕ್ಕೆಕುಡಿಯುವ ನೀರಿನ ಪೂರೈಕೆಯ ಕಾರ್ಯವನ್ನು ಯಶಸ್ವಿಯಾಗಿ ಪೂರೈಸಿದರು.ಅಂದಿನ ಮುಂಬೈ ಪ್ರಾಂತ್ಯದ ಗವರ್ನರ್ ಆಗಿದ್ದ ಲಾರ್ಡ್ ಸಂಡ್ ಹರ್ಸ್ಟ್ ಅವರು ಇವರನ್ನು ಮುಕ್ತಕಂಠದಿಂದ ಶ್ಲಾಘಿಸಿದರು ಪೂನಾದ ಮುಥಾ ಕಾಲುವೆಗೆ ನೀರಿನ ನೆಲೆಯಾಗಿದ್ದ ಪೀಪ್ ಜಲಾಶಯಕ್ಕೆಸ್ವಯಂ ಚಾಲಿತ ಬಾಗಿಲುಗಳನ್ನು ಅಳವಡಿಸಿದರು ಈ ಅನ್ವೇಷಣೆ ಅವರ ಸಾಧನೆಯ ಕಿರೀಟಕ್ಕೆಮತ್ತೊಂದು ಗರಿಯನ್ನು ಸೇರಿಸಿತು.

ಸ್ವಾರಸ್ಯ : ವಿಶ್ವೇಶ್ವರಯ್ಯನವರು ವೈಜ್ಞಾನಿಕ ವಿಮರ್ಶಾ ಶಕ್ತಿಯನ್ನು ಹೊಂದಿದ್ದರು .ದೂರದರ್ಶಿತ್ವ ಶಕ್ತಿ ಅವರಲ್ಲಿತ್ತು. ಸದಾ ಒಂದಿಲ್ಲೊಂದು ಹೊಸತನ್ನು ಅನ್ವೇಷಿಸುವ ಆ ಮೂಲಕ ಸಮಾಜಕ್ಕೆ ಒಳಿತು ಮಾಡುವ ಮನೋಭಾವ ಅವರದಾಗಿತ್ತು. ಅವರ ಸಾಧನೆಗಳು ಅವರ ವ್ಯಕ್ತಿತ್ವಕ್ಕೆ ಒಂದು ಕಿರೀಟದ ಹಾಗೆ ಎನ್ನುವುದು ಮೇಲಿನ ವಾಕ್ಯದ ಸ್ವಾರಸ್ಯವಾಗಿದೆ.

೩.''ಆದರ್ಶ ಪುರುಷರೊಬ್ಬರು ದಿವಾನರಾದದ್ದು ಮೈಸೂರು ಸಂಸ್ಥಾನದ ಪುಣ್ಯ ವಿಶೇಷವೇ ಸರಿ''.

ಈ ಮೇಲಿನ ವಾಕ್ಯವನ್ನು ಡಿ.ಎಸ್ .ಜಯಪ್ಪಗೌಡರು ಬರೆದ ಭಾಗ್ಯಶಿಲ್ಪಿಸರ್ ಎಂ.ವಿಶ್ವೇಶ್ವರಯ್ಯ ಎನ್ನುವ ಗದ್ಯಭಾಗದಿಂದ ಆಯ್ದುಕೊಳ್ಳಲಾಗಿದೆ.

ಸಂದರ್ಭ:ನಾಲ್ವಡಿ ಕೃಷ್ಣರಾಜ ಒಡೆಯರಿಂದ ದಿವಾನರಾಗಿ ನೇಮಕವಾದ ಸರ್ ಎಂ ವಿಶ್ವೇಶರಯ್ಯ ಆಡಳಿತದಲ್ಲಿ ಹೊಸ ಮಾದರಿಯನ್ನು ಅನುಷ್ಠಾನಗೊಳಿಸಿ ಕಚೇರಿಯ ಕೆಲಸ ಕಾರ್ಯಗಳಲ್ಲಿ ಸುಧಾರಣೆ ತಂದರು.ದಕ್ಷತೆ ಮತ್ತು ಪ್ರಾಮಾಣಿಕತೆಗೆ ಒತ್ತು ನೀಡಿದರು.ಸಮರ್ಥಕಾರ್ಯ ನಿರ್ವಹಣೆಗಾಗಿ ಸಮಿತಿ ರಚನೆಗೆ ಪ್ರಾಶಸ್ತ್ಯನೀಡಿದರು.ನೇಮಕಾತಿಯಲ್ಲಿ ಸ್ಥಳೀಯರಿಗೆ ಆದ್ಯತೆ ನೀಡಿದರು.ವಿಶ್ವೇಶ್ವರಯ್ಯನವರ ಕುರಿತು ಅಭಿಮಾನ ಹೊಂದಿದ ಜನರು ಮೇಲಿನಂತೆ ಅವರ ಕುರಿತು ಹೇಳಿದರು ಎಂದು ಲೇಖಕರು ವಿವರಿಸಿದ್ದಾರೆ.

ಸ್ವಾರಸ್ಯ: ಸ್ಥಳೀಯರಿಗೆ ಹೆಚ್ಚಿನ ಆದ್ಯತೆ ನೀಡುವ ಮೂಲಕ ಮೂಲ ನಿವಾಸಿಗಳ ಅಭಿವೃದ್ಧಿಗೆ ವಿಶ್ವೇಶ್ವರಯ್ಯ ಗಮನ ನೀಡಿದ್ದರು. ಇದರಿಂದಾಗಿ ಕನ್ನಡ ನಾಡಿನ ಜನರಲ್ಲಿ ಇಂತಹ ದಿವಾನರು ಒದಗಿದ್ದು ಪುಣ್ಯ ಎಂಬ ಭಾವನೆ ಮನೆಮಾಡಿತ್ತು ಎಂಬುದು ಈ ವಾಕ್ಯದ ಸ್ವಾರಸ್ಯವಾಗಿದೆ.

೪. ''ಶಿಕ್ಷಣಕ್ಕಾಗಿ ಶಿಕ್ಷಣವಿರಬೇಕು .ಅದು ಕೆಲವೇಜನರ ಸ್ವತ್ತಾಗದೇ ಪ್ರಗತಿಪರ ರಾಜ್ಯದಲ್ಲಿ ಎಲ್ಲರ ಆಜನ್ಮಸಿದ್ಧ ಹಕ್ಕಾಗಬೇಕು.''

ಈ ಮೇಲಿನ ವಾಕ್ಯವನ್ನು ಡಿ.ಎಸ್ .ಜಯಪ್ಪಗೌಡರು ಬರೆದ ಭಾಗ್ಯಶಿಲ್ಪಿಸರ್ ಎಂ.ವಿಶ್ವೇಶ್ವರಯ್ಯ ಎನ್ನುವ ಗದ್ಯಭಾಗದಿಂದ ಆಯ್ದುಕೊಳ್ಳಲಾಗಿದೆ.

ಈ ಮಾತನ್ನು ವಿಶ್ವೇಶ್ವರಯ್ಯನವರು ಹೇಳಿದ್ದಾರೆ.
ಸಂದರ್ಭ: ವಿಶ್ವೇಶ್ವರಯ್ಯ ಅವರು ಆಧುನಿಕ ಶಿಕ್ಷಣವೇ ಎಲ್ಲ ಸಮಸ್ಯೆಗಳಿಗೂ ಪರಮೋಚ್ಚ ಪರಿಹಾರವೆಂದು ನಂಬಿದ್ದರು. ಶಿಕ್ಷಣವು ಸಂಜೀವಿನಿ ಎಂಬುದನ್ನರಿತಿದ್ದ ಅವರು ಶಿಕ್ಷಣದ ಯೋಜನೆಗಳನ್ನುರೂಪಿಸಿದರು.ಮೈಸೂರು ವಿಶ್ವವಿದ್ಯಾನಿಲಯದ ಸ್ಥಾಪನೆ ಅವರ ದೂರದೃಷ್ಟಿಯ ಫಲಶ್ರುತಿ.ತಾಂತ್ರಿಕ ಮತ್ತು ವೃತ್ತಿಪರ ಶಿಕ್ಷಣಕ್ಕೆ ಆದ್ಯತೆ ನೀಡಿದ್ದ ವಿಶ್ವೇಶ್ವರಯ್ಯನವರು ಶಿಕ್ಷಣದ ಕುರಿತಾಗಿ ಮೇಲಿನ ನಿಲುವನ್ನು ತಳೆದಿದ್ದರು.
ಸ್ವಾರಸ್ಯ: ಶಿಕ್ಷಣದ ಸುಧಾರಣೆಯ ಬಗ್ಗೆ ಒಲವನ್ನು ಹೊಂದಿದ್ದ ವಿಶ್ವೇಶ್ವರಯ್ಯ ಅವರು ಶಿಕ್ಷಣ ಕ್ಷೇತ್ರದ ಅಭಿವೃದ್ಧಿಗೆ ಆದ್ಯತೆ ನೀಡಿದ್ದರು. ಶಿಕ್ಷಣ ಪಡೆಯುವುದು ಎಲ್ಲರ ಹಕ್ಕಾಗಬೇಕು ,ಪ್ರತಿಯೊಬ್ಬರಿಗೂ ಶಿಕ್ಷಣ ದೊರೆಯಬೇಕು ಎಂಬುದು ಅವರ ಕಾಳಜಿಯಾಗಿತ್ತು ಎಂಬುದು ಮೇಲಿನ ವಾಕ್ಯದ ಸ್ವಾರಸ್ಯವಾಗಿದೆ.
೫. ''ಮಾಹಿತಿಗಳಲ್ಲಾಗಲಿ, ವಿಧಾನಗಳಲ್ಲಾಗಲಿ ನಾವು ಹಿಂದುಳಿಯುವು ಉಚಿತವಲ್ಲ.''
ಈ ಮೇಲಿನ ವಾಕ್ಯವನ್ನು ಡಿ.ಎಸ್.ಜಯಪ್ಪಗೌಡರು ಬರೆದ ಭಾಗ್ಯಶಿಲ್ಪಿ ಸರ್ ಎಂ.ವಿಶ್ವೇಶ್ವರಯ್ಯ ಎನ್ನುವ ಗದ್ಯಭಾಗದಿಂದ ಆಯ್ದುಕೊಳ್ಳಲಾಗಿದೆ.
ಈ ಮಾತನ್ನು ವಿಶ್ವೇಶ್ವರಯ್ಯನವರು ಹೇಳಿದ್ದಾರೆ.
ಸಂದರ್ಭ:ವಿಶ್ವೇಶ್ವರಯ್ಯನವರು ಎಂಜನಿಯರುಗಳಿಗೆ ಮಾರ್ಗದರ್ಶನ ನೀಡುವ ಸಮಯದಲ್ಲಿ ಮೇಲಿನ ಮಾತು ಬಂದಿದೆ.ನಮ್ಮ ಕೆಲಸಗಳು ಪ್ರಮಾಣದಲ್ಲಿ ಚಿಕ್ಕದಿರಬಹುದು.ಆದರೆ ಪ್ರಪಂಚದಾದ್ಯಂತ ಯಾವುದೇ ವರ್ಗದ ಕಾಮಗಾರಿಯ ಎಂಜನಿಯರಿಂಗ್ ಗುಣಲಕ್ಷಣಗಳು ಒಂದೇ ಆಗಿರುತ್ತವೆ. ಈ ಕಾಮಗಾರಿಗಳನ್ನು ಕುಶಲತೆ ಮತ್ತು ಕಡಿಮೆ ವೆಚ್ಚದಲ್ಲಿ ಕಾರ್ಯಗತಗೊಳಿಸಬೇಕೆಂದರೆ ಇತರ ಯಾವುದೇ ದೇಶದ ಎಂಜನಿಯರ್ ಪಡೆಯುವಷ್ಟೇ ತರಬೇತಿ ಮತ್ತು ಜ್ಞಾನವನ್ನು ಪಡೆಯಬೇಕು .ಮಾಹಿತಿಗಳಲ್ಲಾಗಲಿ ,ವಿಧಾನಗಳಲ್ಲಾಗಲಿ ನಾವು ಹಿಂದುಳಿಯುವುದು ಉಚಿತವಲ್ಲ.'' ಎಂದು ಮಾರ್ಗದರ್ಶನ ಮಾಡಿದರು.
ಸ್ವಾರಸ್ಯ: ಎಂಜನಿಯರುಗಳ ಕಾರ್ಯಶೀಲತೆ,ದಕ್ಷತೆ ಹೆಚ್ಚಿಸುವುದು ,ತನ್ಮೂಲಕ ದೇಶದ ಪ್ರಗತಿ ಸಾಧಿಸುವುದು ವಿಶ್ವೇಶ್ವರಯ್ಯನವರ ಹಂಬಲವಾಗಿತ್ತು. ಪ್ರಗತಿ ಹೊಂದಿದ ದೇಶಗಳಿಗಿಂತ ನಾವೇನೂ ಕಡಿಮೆ ಅಲ್ಲ ಎಂದು ನಿರೂಪಿಸುದು ,ಪ್ರಸ್ತುತ ವಿಧ್ಯಮಾನಗಳ ಅರಿವು ,ಅಳವಡಿಕೆ ಅಗತ್ಯ ಎನ್ನುವುದು ವಿಶ್ವೇಶ್ವರಯ್ಯನವರ ನಿಲುವಾಗಿತ್ತು ಎನ್ನುವುದು ಮೇಲಿನ ವಾಕ್ಯದ ಸ್ವಾರಸ್ಯವಾಗಿದೆ.

ಬಿಟ್ಟ ಸ್ಥಳವನ್ನು ಸರಿಯಾದ ಪದದಿಂದ ತುಂಬಿರಿ.

೧.ವಿಶ್ವೇಶ್ವರಯ್ಯನವರು ಹೈದರಾಬಾದ್ ನಗರವನ್ನು --------ನಗರಗಳ ಸಾಲಿಗೆ ಸೇರುವಂತೆ ಮಾಡಿದರು .(ಭಾರತದ ಸುಯೋಜಿತ )

೨. ವಿಶ್ವೇಶ್ವರಯ್ಯ ಅವರ ಪ್ರಾಥಮಿಕ ಶಿಕ್ಷಣ -------ದಲ್ಲಿ ನಡೆಯಿತು .(ಚಿಕ್ಕಬಳ್ಳಾಪುರ)

೩.ವಿಶ್ವೇಶ್ವರಯ್ಯ ಅವರು ಮುಂಬೈ ಪ್ರಾಂತ್ಯದಲ್ಲಿ -------- ಆಗಿ ಸೇವೆ ಸಲ್ಲಿಸಿದರು .(ಲೋಕೋಪಯೋಗಿ ಇಲಾಖೆಯಲ್ಲಿ ಸಹಾಯಕ ಎಂಜನಿಯರ್ )

೪.ಮುಂಬೈ ಪ್ರಾಂತ್ಯದ ಗವರ್ನರ್ ಆಗಿದ್ದ -------ಅವರು ವಿಶ್ವೇಶ್ವರಯ್ಯ ಅವರನ್ನು ಮುಕ್ತಕಂಠದಿಂದ ಶ್ಲಾಘಿಸಿದರು .(ಲಾರ್ಡ್ ಸಂಡ್ ಹರ್ಸ್ಟ್)

೫.ಭಾರತ ಸರಕಾರವು ವಿಶ್ವೇಶ್ವರಯ್ಯನವರಿಗೆ ---------ಎಂಬ ಪ್ರಶಸ್ತಿ ನೀಡಿ ಗೌರವಿಸಿತು .(ಭಾರತರತ್ನ )

೧.ಕೊಟ್ಟಿರುವ ಪದಗಳ ತತ್ಸಮ ತದ್ಭವ ಬರೆಯಿರಿ.

ವಂಶ,ಸ್ಥಾನ, ಯಶ , ಪಟ್ಟಣ, ಕಾರ್ಯ

ವಂಶ-ವಂಸ ,ಸ್ಥಾನ-ತಾಣ,ಯಶ-ಜಸ,ಪಟ್ಟಣ-ಪತ್ತನ,ಕಾರ್ಯ-ಕಜ್ಜ

೨. ನೀಡಿರುವ ಪದಗಳಲ್ಲಿ ಅನ್ಯದೇಶ್ಯ ಪದಗಳನ್ನು ಆರಿಸಿ ಬರೆಯಿರಿ.

ಡಿಪ್ಲೋಮಾ , ಅಜಮಾಯಿಷಿ,ದಿವಾನ ,ಪ್ರೌಢ,ಶಿಕ್ಷಣ,ನಡೆಸು, ಸೋಪು ,ಕಾರ್ಖಾನೆ ,ಕಾಗದ ,ಕಛೇರಿ

ಅನ್ಯದೇಶ್ಯಪದಗಳು -ಡಿಪ್ಲೋಮಾ,ಅಜಮಾಯಿಷಿ,ಸೋಪು,ಕಾರ್ಖಾನೆ,ಕಛೇರಿ

ಹೆಚ್ಚುವರಿ ವ್ಯಾಕರಣಾಂಶಗಳು ಮತ್ತು ಸಂಭವನೀಯ ಪ್ರಶ್ನೆಗಳು

1.ಸನ್ನಡತೆ ಪದದಲ್ಲಿರುವ ಸಂಧಿ--------(ಅನುನಾಸಿಕ)

2.ಮೇಲ್ಗಾಲುವೆ ಪದವು ಈ ಸಂಧಿಗೆ ಉದಾಹರಣೆ-----(ಆದೇಶ ಸಂಧಿ)

3.ಮನ್ವಂತರ ಈ ಸಂಧಿಗೆ ಉದಾಹರಣೆ-----(ಯಣ್ ಸಂಧಿ)

4.ಪರಮೋಚ್ಚ ಪದದಲಿರುವ ಸಂಧಿ-----(ಗುಣಸಂಧಿ)

5.ನವ ಚೈತನ್ಯ ಪದದಲ್ಲಿರುವ ಸಮಾಸ---(ಕರ್ಮಧಾರಯ ಸಮಾಸ)

6.ಇಹಲೋಕ ತ್ಯಜಿಸು ಪದದಲ್ಲಿರುವ ವ್ಯಾಕರಣಾಂಶ---(ನುಡಿಗಟ್ಟು)

7.ಮನೋಸ್ಥೈರ್ಯ ಪದವು ಈ ಸಂಧಿಗೆ ಉದಾಹರಣೆ----(ವಿಸರ್ಗ ಸಂಧಿ)

8.ದೂರದೃಷ್ಟಿ ಪದದಲ್ಲಿರುವ ವ್ಯಾಕರಣಾಂಶ---- (ನುಡಿಗಟ್ಟು)

9.ಶಿಕ್ಷಣವು ಸಂಜೀವಿನಿ ಇಲ್ಲಿರುವ ಅಲಂಕಾರ-------(ರೂಪಕ)

10.ಗ್ರಂಥಾಲಯ ಪದವು ಈ ಸಂಧಿಗೆ ಉದಾಹರಣೆಯಾಗಿದೆ ------(ಸವರ್ಣದೀರ್ಘ ಸಂಧಿ)

11.ಶತಮಾನೋತ್ಸವ ಪದದಲ್ಲಿರುವ ಸಂಧಿ-----(ಗುಣಸಂಧಿ)

12.ಒಂದೊಂದು ಪದವು ಈ ಸಂಧಿಗೆ ಉದಾಹರಣೆಯಾಗಿದೆ ----(ಲೋಪ ಸಂಧಿ)

13.ಅಡ್ಡಿ ಆತಂಕ ಪದವು ಈ ವ್ಯಾಕರಣಾಂಶದ ಉದಾಹರಣೆಯಾಗಿದೆ-----(ಜೋಡು ನುಡಿ)

14.ಅಡಿಪಾಯ ಹಾಕು ಪದದಲ್ಲಿರುವ ವ್ಯಾಕರಣಾಂಶ-----(ನುಡಿಗಟ್ಟು)

15.ಅಸ್ಥಿಭಾರ ಹಾಕು ಪದವು ಈ ವ್ಯಾಕರಣಾಂಶದ ಉದಾಹರಣೆಯಾಗಿದೆ------(ನುಡಿಗಟ್ಟು)

16.ಹುಟ್ಟುಹಬ್ಬ ಪದವು ಈ ಸಮಾಸಕ್ಕೆ ಉದಾಹರಣೆಯಾಗಿದೆ -----(ತತ್ಪುರುಷ ಸಮಾಸ)

17.ಲೋಕೋಪಯೋಗಿ ಈ ಪದದಲ್ಲಿರುವ ಸಂಧಿ------(ಗುಣ ಸಂಧಿ)

18.ಉದ್ಯೋಗ ಪದದ ತದ್ಭವ ರೂಪ ---(ಉಜ್ಜುಗ)

19.ದೃಷ್ಟಿ ಪದದ ತದ್ಭವ ರೂಪ -----(ದಿಟ್ಟಿ)

20.ವರ್ಷ ಪದದ ತದ್ಭವ ರೂಪ------(ವರುಷ )

21.ಜನ್ಮ ಪದದ ತದ್ಭವ ರೂಪ ----(ಜನುಮ)

22.ನೂರಾರು ಪದದಲ್ಲಿರುವ ಸಮಾಸ ____(ದ್ವಿಗುಸಮಾಸ)

ಮೊದಲಿನ ಎರಡು ಪದಗಳಿಗಿರುವ ಸಂಬಂಧದಂತೆ ಮೂರನೆಯ ಪದಕ್ಕೆ ಸಂಬಂಧಿಸಿದ ಪದವನ್ನು ಬರೆಯಿರಿ.

1.ಮನೆತನಕ್ಕೆ: ಚತುರ್ಥಿ ವಿಭಕ್ತಿ :: ಸಂಸಾರವನ್ನು: ---(ದ್ವಿತೀಯಾ)

2.ನೂರಾರು :ಲೋಪಸಂಧಿ : : ಪೀಠೋಪಕರಣ : ___(ಗುಣಸಂಧಿ )

3.ಅಗ್ರ: ಅಗ್ಗ : :ಸಂಸ್ಥಾ: ____(ಸಂತೆ )

4.ಪರೀಕ್ಷಾ: ಪರಿಕೆ : : ವಂಶ : __(ವಂಚ)ವಂಸ

5.ದಿವಾನ : ಪರ್ಷಿಯನ್ : : ಅಜಮಾಯಿಸಿ: ___(ಪಾರ್ಸಿ )

ಕೆಳಗೆ ನೀಡಿದ ಪ್ರಶ್ನೆಗಳಿಗೆ ನಾಲ್ಕು ಆಯ್ಕೆಗಳನ್ನು ನೀಡಲಾಗಿದೆ. ಅವುಗಳಲ್ಲಿ ಸರಿಯಾದ ಉತ್ತರವನ್ನು ಆರಿಸಿ ಬರೆಯಿರಿ.

೧.'ಶತಮಾನೋತ್ಸವ' ಪದವು ಈ ಸಂಧಿಗೆ ಉದಾಹರಣೆಯಾಗಿದೆ

ಎ)ಸವರ್ಣದೀರ್ಘ ಬಿ)ಗುಣ ಸಿ)ಯಣ್ ಡಿ)ವೃದ್ಧಿ

೨.'ಒಂದೊಂದು 'ಪದದಲ್ಲಿರುವ ಸಂಧಿಯಿದು

ಎ) ಲೋಪ ಬಿ)ಆಗಮ ಸಿ)ಆದೇಶ ಡಿ)ಗುಣ

೩.'ಹೊಸರಾಷ್ಟ್ರ' ಪದವು ಈ ಸಮಾಸದ ಉದಾಹರಣೆಯಾಗಿದೆ

ಎ) ದ್ವಿಗು ಬಿ)ಅಂಶಿ ಸಿ)ಕರ್ಮಧಾರಯ ಡಿ) ದ್ವಂದ್ವ

೪.'ಎರಡನೆಯ ಮಗ' ಪದದಲ್ಲಿರುವ ಎರಡನೆಯ ಎನ್ನುವುದು ಈ ವ್ಯಾಕರಣಾಂಶದ ಉದಾಹರಣೆಯಾಗಿದೆ

ಎ) ಪರಿಮಾಣವಾಚಕ ಬಿ)ಸಂಖ್ಯಾವಾಚಕ ಸಿ)ಸಂಖ್ಯೇಯವಾಚಕ ಡಿ)ಗುಣವಾಚಕ

೫.'ಅಗ್ರಹಾರಕ್ಕೆ 'ಈ ಪದದಲ್ಲಿರುವ ವಿಭಕ್ತಿಯಿದು

ಎ) ಸಪ್ತಮಿ ಬಿ)ದ್ವಿತೀಯಾ ಸಿ)ತೃತೀಯಾ ಡಿ)ಚತುರ್ಥಿ

೬.'ನೀವು ಕಡಿಮೆ ಮಾತು ಆಡಿದ್ದೀರಿ' ಈ ವಾಕ್ಯದಲ್ಲಿರುವ ಪರಿಮಾಣವಾಚಕ ಪದವಿದು

ಎ)ಕಡಿಮೆ ಬಿ)ಮಾತು ಸಿ)ನೀವು ಡಿ)ಆಡಿದ್ದೀರಿ

೭.'ಸನ್ನಡತೆ' ಪದದಲ್ಲಿರುವ ಸಂಧಿ

ಎ)ಆದೇಶ ಬಿ)ಗುಣ ಸಿ)ಜಶ್ತ್ವ ಡಿ)ಅನುನಾಸಿಕ

೮.'ಮನೋಸ್ಥೈರ್ಯ' ಪದವು ಈ ಸಂಧಿಗೆ ಉದಾಹರಣೆಯಾಗಿದೆ

ಎ)ಅನುನಾಸಿಕ ಬಿ)ವಿಸರ್ಗ ಸಿ)ಗುಣ ಡಿ)ಯಣ್

೯.'ಮೇಲ್ಗಾಲುವೆ 'ಪದದಲ್ಲಿರುವ ಸಂಧಿಯಿದು

ಎ)ಆದೇಶ ಬಿ)ಗುಣ ಸಿ)ಆಗಮ ಡಿ)ಜಶ್ತ್ವ

೧೦.'ವಿದ್ಯಾರ್ಥಿವೇತನ' ಪದವು ಈ ಸಮಾಸದ ಉದಾಹರಣೆಯಾಗಿದೆ.

ಎ)ತತ್ಪುರುಷ ಬಿ)ಕ್ರಿಯಾ ಸಿ)ಅಂಶಿ ಡಿ)ಕರ್ಮಧಾರಯ

೧೧.'ದೂರದೃಷ್ಟಿ'ಪದವು ಈ ವ್ಯಾಕರಣಾಂಶದ ಉದಾಹರಣೆಯಾಗಿದೆ

ಎ)ದ್ವಿರುಕ್ತಿ ಬಿ)ನುಡಿಗಟ್ಟು ಸಿ)ಜೋಡುನುಡಿ ಡಿ)ಅನುಕರಣಾವ್ಯಯ

೧೨..'ಮೇಲ್ಗಾಲುವೆ' ಪದವು ಈ ಸಂದಿಗೆ ಉದಾಹರಣೆಯಾಗಿದೆ

ಎ)ಆದೇಶ ಸಂದಿ ಬಿ)ಜಶ್ತ್ವಸಂಧಿ ಸಿ)ಆಗಮ ಸಂಧಿ ಡಿ)ಲೋಪ ಸಂಧಿ

೧೩.'ನಾಲ್ವಡಿ 'ಪದವು ಈ ಸಮಾಸಕ್ಕೆ ಉದಾಹರಣೆಯಾಗಿದೆ

ಎ) ಗಮಕ ಬಿ)ತತ್ಪುರುಷ ಸಿ)ಅಂಶಿ ಡಿ)ದ್ವಿಗು

೧೪.'ದೇಶಸೇವೆ' ಪದವು ಈ ಸಮಾಸದ ಉದಾಹರಣೆಯಾಗಿದೆ

ಎ) ತತ್ಪುರುಷ ಬಿ)ಕರ್ಮಧಾರಯ ಸಿ)ದ್ವಂದ್ವ ಡಿ)ಬಹುರ್ವಿಹಿ

೧೫.'ದಿವಾನ 'ಪದವು ಕನ್ನಡಕ್ಕೆ ಈ ಭಾಷೆಯಿಂದ ಬಂದಿದೆ –

ಎ)ಪರ್ಷಿಯನ್ ಬಿ)ಇಂಗ್ಲಿಷ್ ಸಿ)ಉರ್ದು ಡಿ)ಅರಬ್ಬೀ

೧೬.'ನೆನಪು' ಪದದಲ್ಲಿರುವ ವ್ಯಾಕರಣಾಂಶ

ಎ)ಕೃದಂತಾವ್ಯಯ ಬಿ)ಕೃದಂತಭಾವನಾಮ ಡಿ)ಕೃದಂತನಾಡಿ)ತದ್ಧಿತಾಂತಭಾವನಾಮ

೧೭.'ಕ್ಷೇತ್ರವನ್ನು' ಪದದಲ್ಲಿರುವ ಸಂಧಿ ----

ಎ)ಆದೇಶ ಬಿ)ಆಗಮ ಸಿ)ಲೋಪ ಡಿ)ಯಣ್

೧೮.'ಅಜಮಾಯಿಷಿ' ಪದವು ಕನ್ನಡಕ್ಕೆ ಈ ಭಾಷೆಯಿಂದ ಬಂದಿದೆ ಎ)ಇಂಗ್ಲಿಷ್ ಬಿ)ಉರ್ದು ಸಿ)ಪರ್ಷಿಯನ್ ಡಿ)ಪಾರ್ಸಿ

೧೯.'ಸ್ಥಾನ' ಪದದ ತದ್ಭವ ರೂಪ

ಎ)ತಾಣ ಬಿ)ಸ್ಥಳ ಸಿ)ಜಾಗ ಡಿ)ಸ್ನಾನ

೨೦. 'ಪೀಠೋಪಕರಣ' ಪದವು ಈ ಸಂಧಿಗೆ ಉದಾಹರಣೆಯಾಗಿದೆ

ಎ) ಗುಣ ಸಿ)ಲೋಪ ಡಿ)ಅನುನಾಸಿಕ ಸಿ)ಸವರ್ಣದೀರ್ಘ

೨೧.'ನೂರಾರು 'ಪದವು ಈ ಸಂಧಿಗೆ ಉದಾಹರಣೆಯಾಗಿದೆ

ಎ)ಗುಣ ಬಿ)ಲೋಪ ಸಿ)ಜಶ್ತ್ವ ಡಿ)ಆದೇಶ

೨೨.'ವಿಶ್ವೇಶ್ವರಯ್ಯ ಅವರು ಕೈಗಾರಿಕೆಗೆ ಹೆಚ್ಚಿನ ಪ್ರಾಶಸ್ತ್ಯನೀಡಿದ್ದರು' ಎನ್ನುವುದು ಈ ಮಾದರಿಯ ವಾಕ್ಯಪ್ರಕಾರಕ್ಕೆಸೇರಿದೆ

ಎ)ನಿಷೇಧಾರ್ಥಕ ವಾಕ್ಯ ಬಿ)ಸಾಮಾನ್ಯವಾಕ್ಯ ಸಿ)ಸಂಯೋಜಿತ ವಾಕ್ಯ ಡಿ)ಮಿಶ್ರ ವಾಕ್ಯ

## ಉತ್ತರಗಳು

೧. ಬಿ)ಗುಣ ೨.ಎ)ಲೋಪ ೩. ಸಿ)ಕರ್ಮಧಾರಯ ೪.ಸಿ)ಸಂಖ್ಯೇಯವಾಚಕ

೫. ಡಿ)ಚತುರ್ಥಿ ೬.ಎ)ಕಡಿಮೆ ೭.ಡಿ)ಅನುನಾಸಿಕ ೮.ಎ)ಅನುನಾಸಿಕ

೯.ಎ)ಆದೇಶ ೧೦.ಎ)ತತ್ಪುರುಷ ೧೧. ಬಿ)ನುಡಿಗಟ್ಟು ೧೨.ಎ)ಆದೇಶ ಸಂಧಿ

೧೩.ಡಿ)ದ್ವಿಗು ೧೪.ಎ)ತತ್ಪುರುಷ ೧೫.ಎ)ಪರ್ಷಿಯನ್ ೧೬.ಬಿ)ಕೃದಂತ

ಭಾವನಾಮ

೧೭. ಬಿ)ಆಗಮ ೧೮.ಡಿ)ಪಾರ್ಸಿ ೧೯.ಎ)ತಾಣ ೨೦.ಎ)ಗುಣ ೨೧.ಬಿ)ಲೋಪ
೨೨.ಬಿ)ಸಾಮಾನ್ಯ ವಾಕ್ಯ

ಮೊದಲಿನ ಎರಡು ಪದಗಳಿಗೆ ಇರುವ ಸಂಬಂಧದಂತೆ ಮೂರನೆಯ ಪದಕ್ಕೆಸರಿ ಸಂಬಂಧ ಹೊಂದುವ ಪದ ಬರೆಯಿರಿ.

೧.ತಂದರು : ಭೂತಕಾಲ : : ತರುತ್ತಾರೆ : ---
೨.ಜಲಾಶಯ : ಸವರ್ಣದೀರ್ಘ ಸಂಧಿ :: ಮನ್ವಂತರ : ----
೩.ಯಶ : ಯಸ : : ವಂಶ : ---
೪.ಗ್ರಂಥಾಲಯ : ಸವರ್ಣದೀರ್ಘ ಸಂಧಿ : : ಮತ್ತೊಂದು : ----
೫.ಗ್ರಾಮಗಳನ್ನು : ದ್ವಿತೀಯಾ ವಿಭಕ್ತಿ : : ಮನೆತನಕ್ಕೆ : ----

ಉತ್ತರಗಳು

೧.ವರ್ತಮಾನ ೨.ಯಣ್ ಸಂಧಿ ೩.ಬಂಚ ೪. ಲೋಪಸಂದಿ ೫.ಚತುರ್ಥಿ

ಅಲಂಕಾರ ಹೆಸರಿಸಿ ಸಮನ್ವಯಿಸಿ.

ಶಿಕ್ಷಣವು ಸಂಜೀವಿನಿ
ಉಪಮೇಯ : ಶಿಕ್ಷಣ
ಉಪಮಾನ : ಸಂಜೀವಿನಿ
ಉಪಮೇಯವಾದ ಶಿಕ್ಷಣವನ್ನು ಉಪಮಾನವಾದ ಸಂಜೀವಿನಿ ಎಂದು ಅಬೇಧ ಕಲ್ಪಿಸಿ ಹೇಳಿರುವುದರಿಂದ ಇದು ರೂಪಕ ಅಲಂಕಾರವಾಗಿದೆ .

ಹೆಚ್ಚುವರಿ ಪ್ರಶ್ನೆಗಳು

ಒಂದು ವಾಕ್ಯದಲ್ಲಿ ಉತ್ತರಿಸಿ.

೧. ವಿಶ್ವೇಶ್ವರಯ್ಯ ಅವರ ತಂದೆ ತಾಯಿ ಯಾರು ?
ಶ್ರೀನಿವಾಸ ಶಾಸ್ತ್ರಿ ಮತ್ತು ವೆಂಕಟಲಕ್ಷಮ್ಮ
೨. ವಿಶ್ವೇಶ್ವರಯ್ಯನವರ ಹೆಸರಿನೊಂದಿಗೆ ಮೋಕ್ಷಗೊಂಡಂ ಸೇರಲು ಕಾರಣವೇನು ?

ವಿಶ್ವೇಶ್ವರಯ್ಯನವರ ಪೂರ್ವಜರು ಮೋಕ್ಷಗೊಂಡಂ ಎಂಬ ಅಗ್ರಹಾರದಲ್ಲಿ ನೆಲೆಸಿದವರಾಗಿದ್ದರಿಂದ ವಿಶ್ವೇಶ್ವರಯ್ಯನವರ ಹೆಸರಿನೊಂದಿಗೆ ಅವರ ಮೂಲಸ್ಥಳದ ಹೆಸರು ಸೇರಿಕೊಂಡಿತ್ತು.

೩. ವಿಶ್ವೇಶ್ವಯ್ಯನವರು ಎಷ್ಟರಲ್ಲಿ ಎಲ್ಲಿ ಜನಿಸಿದರು ?

ಕ್ರಿಸ್ತ ಶಕ ೧೮೬೦, ಸೆಪ್ಟೆಂಬರ್ ೧೫ ರಂದು

೪. ಪ್ರಾಥಮಿಕ ಶಿಕ್ಷಣದ ಹಂತದಲ್ಲಿಯೇ ವಿಶ್ವೇಶ್ವರಯ್ಯನವರಲ್ಲಿ ಜ್ಞಾನ ದಾಹ ಮೂಡಿಸಿದ ಅವರ ಗುರು ಯಾರು ?

ನಾಥ ಮುನಿನಾಯ್ಡು

೫. ಯಾವ ಅನ್ವೇಷಣೆ ವಿಶ್ವೇಶ್ವರಯ್ಯನವರ ಸಾಧನೆಯ ಕಿರೀಟಕ್ಕೆಮತ್ತೊಂದು ಗರಿ ಸೇರಿಸಿತು ?

ಪೂನಾದ ಮುಥಾ ಕಾಲುವೆಗೆ ನೀರಿನ ನೆಲೆಯಾಗಿದ್ದ ಪೀಪ್ ಜಲಾಶಯಕ್ಕೆವಿಶ್ವೇಶ್ವರಯ್ಯನವರು ಅಳವಡಿಸಿದ ಸ್ವಯಂ ಚಾಲಿತ ಬಾಗಿಲುಗಳ ಅನ್ವೇಷಣೆ ಅವರ ಸಾಧನೆಯ ಕಿರೀಟಕ್ಕೆಮತ್ತೊಂದು ಗರಿ ಸೇರಿಸಿತು.

೬. ಕೈಗಾರಿಕೆಗೆ ಪ್ರಾಶಸ್ತ್ಯನೀಡಿದ ವಿಶ್ವೇಶ್ವರಯ್ಯನವರು ಮಾಡಿದ ಘೋಷಣೆ ಯಾವುದು ?

ಕೈಗಾರಿಕೆಗೆ ಪ್ರಾಶಸ್ತ್ಯನೀಡಿದ ವಿಶ್ವೇಶ್ವರಯ್ಯನವರು ಮಾಡಿದ ಘೋಷಣೆ ''ಕೈಗಾರಿಕೀಕರಣ ಇಲ್ಲವೆ ಅವನತಿ ''.

೭.ವಿಶ್ವೇಶ್ವರಯ್ಯನವರ ಸಾಧನೆ ಗುರುತಿಸಿದ ಭಾರತ ಸರ್ಕಾರ ಅವರಿಗೆ ನೀಡಿದ ಅತ್ಯುನ್ನತ ಪ್ರಶಸ್ತಿ ಯಾವುದು ?

ವಿಶ್ವೇಶ್ವರಯ್ಯನವರ ಸಾಧನೆ ಗುರುತಿಸಿದ ಭಾರತ ಸರ್ಕಾರ ಅವರಿಗೆ ನೀಡಿದ ಅತ್ಯುನ್ನತ ಪ್ರಶಸ್ತಿ ' ಭಾರತ ರತ್ನ '.

೮.ವಿಶ್ವೇಶ್ವರಯ್ಯನವರು ಎಷ್ಟರಲ್ಲಿ ಮರಣ ಹೊಂದಿದರು ?

ಕ್ರಿಸ್ತಶಕ ೧೯೬೨, ಎಪ್ರಿಲ್ ೧೪.

ಮೂರು -ನಾಲ್ಕುವಾಕ್ಯಗಳಲ್ಲಿ ಉತ್ತರಿಸಿ.

೧. ವಿಶ್ವೇಶ್ವರಯ್ಯನವರು ಕೈಗಾರಿಕಾ ಕ್ಷೇತ್ರ ಕ್ಕೆನೀಡಿದ ಕೊಡುಗೆಗಳು ಯಾವುವು?

ವಿಶ್ವೇಶ್ವರಯ್ಯನವರು ಕೈಗಾರಿಕೆಗೆ ಅಗ್ರ ಪ್ರಾಶಸ್ತ್ಯನೀಡಿದ್ದರು.ಕೈಗಾರಿಕೀಕರಣ ಇಲ್ಲವೇ ಅವನತಿ ಎಂಬುದು ಅವರ ಘೋಷಣೆಯಾಗಿತ್ತು. ಭದ್ರಾವತಿಯ ಕಬ್ಬಿಣ ಮತ್ತು ಉಕ್ಕುಕಾರ್ಖಾನೆಯನ್ನು ಸ್ಥಾಪಿಸುವುದು ಅವರ ದೊಡ್ಡ ಗುರಿಯಾಗಿತ್ತು.ಹಂಚಿನ ಕಾರ್ಖಾನೆ , ಮೂಳೆ ಮತ್ತು ಗೊಬ್ಬರ

ತಯಾರಿಕಾ ಸ್ಥಾವರ ,ಸಕ್ಕರೆ ಕಾರ್ಖಾನೆ,ಔಷಧಿ ತಯಾರಿಕಾ ಘಟಕ,ಗಂಧದ ಎಣ್ಣೆ,ಬೆಂಕಿಕಡ್ಡಿ ಹಾಗೂ ಕಾಗದದ ಕಾರ್ಖಾನೆಗಳು ಸ್ಥಾಪಿತವಾದವು .ಸೋಪು ಹಾಗೂ ಲೋಹ ತಯಾರಿಕೆ, ಕಲೆ ಮತ್ತು ಕರಕುಶಲ ಡಿಪೋ, ಕೃಷ್ಣರಾಜೇಂದ್ರ ಬಟ್ಟೆಗಿರಣಿ ,ಕಾಗದದ ತಿರುಳು ,ರಟ್ಟು ಪೆನ್ಸಿಲ್,ಬೆಂಕಿಕಡ್ಡಿ ಮತ್ತು ಪೀಠೋಪಕರಣಗಳ ತಯಾರಿಕಾ ಘಟಕಗಳು ಹೀಗೆ ನೂರಾರು ಕೈಗಾರಿಕೆಗಳು ಪ್ರಾರಂಭಗೊಂಡವು.

೨. ಮೈಸೂರು ಸಂಸ್ಥಾನದಲ್ಲಿ ಮುಖ್ಯ ಎಂಜಿನಿಯರ್ ಆಗಿ ಕಾರ್ಯ ನಿರ್ವಹಿಸಿದ ವಿಶ್ವೇಶ್ವರಯ್ಯನವರು ಮಾಡಿದ ಅಭಿವೃದ್ಧಿ ಕಾರ್ಯಗಳು ಯಾವುವು ?

ವಿಶ್ವೇಶ್ವರಯ್ಯನವರು ಮೂರು ವರ್ಷಗಳ ಕಾಲ ಮೈಸೂರು ಸಂಸ್ಥಾನದಲ್ಲಿ ಮುಖ್ಯೆಂಜಿನಿಯರ್ ಆಗಿ ಕಾರ್ಯನಿರ್ವಹಿಸಿದರು.ಕಾವೇರಿ ನದಿಗೆ ಕನ್ನಂಬಾಡಿ ಜಲಾಶಯ ನಿರ್ಮಾಣ ಯೋಜನೆ ಪ್ರಾರಂಭ, ರೈಲು ಮಾರ್ಗಗಳ ವಿಸ್ತರಣೆಗೆ ಕ್ರಮ, ತಾಂತ್ರಿಕ ಶಿಕ್ಷಣದ ಅಭಿವೃದ್ಧಿಗೆ ಯೋಜನೆ ,ಮಾರಿಕಣಿವೆ ಜಲಾಶಯದ ನೀರು ಹಂಚಿಕೆ ಪುನರ್ವವಸ್ಥೆ,ಸಣ್ಣ ನೀರಾವರಿ ವ್ಯವಸ್ಥೆಗೆ ಮರು ಜೀವ ,ಇವೆಲ್ಲ ಅಭಿವೃದ್ಧಿ ಕಾರ್ಯಗಳ ಕುರುಹು. ಇವುಗಳಿಗೂ ಮಿಗಿಲಾಗಿ ಇಲಾಖೆಯಲ್ಲಿ ಕ್ರಮಬದ್ಧ ಕಾರ್ಯನೀತಿ ಸಂಸ್ಥಾನದಲ್ಲಿ ಶಿಸ್ತಿನ ಆಡಳಿತ , ಜನರಿಗೆ ಆಧುನಿಕ ಜೀವನ ವ್ಯವಸ್ಥೆಗೆ ಪೂರ್ವಸಿದ್ಧತೆ ಹೇಗಿರಬೇಕೆಂದು ತಿಳುವಳಿಕೆ ನೀಡಿದ್ದು ಇವು ಇವರು ಉಂಟು ಮಾಡಿದ ಆಡಳಿತ ಮತ್ತು ನೈತಿಕ ಪ್ರಭಾವಗಳು.

ಎಂಟು ಹತ್ತು ವಾಕ್ಯಗಳಲ್ಲಿ ಉತ್ತರಿಸಿ.

೧.ವಿಶ್ವೇಶ್ವರಯ್ಯನವರ ಬಾಲ್ಯ -ವಿದ್ಯಾರ್ಥಿ ಜೀವನದ ಕುರಿತು ಬರೆಯಿರಿ.

ವಿಶ್ವೇಶ್ವರಯ್ಯನರು ೧೮೬೦ ಸೆಪ್ಟೆಂಬರ್ ೧೫ ರಂದು ಶ್ರೀನಿವಾಸ ಶಾಸ್ತ್ರಿ ಮತ್ತು ವೆಂಕಟಲಕ್ಷ್ಮಮ್ಮ ನವರ ಎರಡನೆಯ ಮಗನಾಗಿ ಜನಿಸಿದರು.ಮೂಲತಃ ಆಂಧ್ರಪ್ರದೇಶದ ಕರ್ನೂಲು ಜಿಲ್ಲೆ ಗಿಡ್ಡಲೂರು ತಾಲೂಕಿನ ಮೋಕ್ಷಗೊಂಡಂ ಅಗ್ರಹಾರಕ್ಕೆ ಸೇರಿದವರಾದ ಇವರ ಪೂರ್ವಜರು ಕಾರಣಾಂತರದಿಂದ ಕರ್ನಾಟಕಕ್ಕೆ ವಲಸೆ ಬಂದು ಚಿಕ್ಕಬಳ್ಳಾಪುರ ಸಮೀಪದಲ್ಲಿರುವ ಮುದ್ದೇನಹಳ್ಳಿಯಲ್ಲಿ ಬಂದು ನೆಲೆಸಿದರು. ವೆಂಕಟಲಕ್ಷಮ್ಮನವರಿಗೆ ತಮ್ಮ ಮಕ್ಕಳು ಓದಿ ದೊಡ್ಡ ವ್ಯಕ್ತಿಗಳಾಗಬೇಕೆಂಬ ಹಂಬಲವಿತ್ತು. ಆದ್ದರಿಂದ ಸಂಸಾರವನ್ನು ಚಿಕ್ಕಬಳ್ಳಾಪುರಕ್ಕೆ ಸ್ಥಳಾಂತರಿಸಿದರು.ವಿಶ್ವೇಶ್ವರಯ್ಯ ಅವರ ಪ್ರಾಥಮಿಕ ಶಿಕ್ಷಣ ಚಿಕ್ಕಬಳ್ಳಾಪುರದಲ್ಲಿ ನಡೆಯಿತು.ಗುರುಗಳಾಗಿದ್ದ ನಾಥಮುನಿನಾಯ್ಡುರವರು ಒಳ್ಳೆಯ ಪುಸ್ತಕಗಳನ್ನು ಓದುವಂತೆ ಇವರಿಗೆ ಮಾರ್ಗದರ್ಶನ ಮಾಡಿದ್ದರು.ಇದರಿಂದ ವಯಸ್ಸಿಗೆ ಮೀರಿದ್ದ ಜ್ಞಾನಸಂಪಾದನೆಗೆ ಇವರಿಗೆ ಅವಕಾಶವಾಯಿತು. ಮುಂದೆ ಸೋದರಮಾವ ಎಚ್ ರಾಮಯ್ಯ ಅವರ ಮಾರ್ಗದರ್ಶನದಂತೆ

ಬೆಂಗಳೂರಿನ ವೆಸ್ಲಿಯನ್ ಪ್ರೌಢಶಾಲೆಯಲ್ಲಿ ಪ್ರೌಢಶಿಕ್ಷಣವನ್ನೂ ಸೆಂಟ್ರಲ್ ಕಾಲೇಜಿನಲ್ಲಿ ಎರಡುವರ್ಷಗಳ ಇಂಟರ್ ಮೀಡಿಯಟ್ ಶಿಕ್ಷಣವನ್ನೂ ಮತ್ತು ಮೂರು ವರ್ಷಗಳ ಬಿ.ಎ. ಪದವಿಯನ್ನೂ ಪಡೆದರು. ವ್ಯಾಸಂಗದಲ್ಲಿ ಕ್ರಮನಿಷ್ಠರಾಗಿದ್ದ ಅವರು ಜೀವನದಲ್ಲಿ ಉನ್ನತವಾದುದನ್ನು ಸಾಧಿಸಬೇಕೆಂಬ ದೃಢನಿರ್ಧಾರವನ್ನು ಹೊಂದಿದ್ದರು. ಅಂದಿನ ಮೈಸೂರು ದಿವಾನರಾಗಿದ್ದ ಸಿ.ರಂಗಾಚಾರ್ಲುರವರು ನೀಡಿದ ವಿದ್ಯಾರ್ಥಿವೇತನವನ್ನು ಬಳಸಿಕೊಂಡು ಪೂನಾದ ಎಂಜನಿಯರಿಂಗ್ ಕಾಲೇಜಿನಲ್ಲಿ ಡಿಪ್ಲೋಮಾ ಶಿಕ್ಷಣವನ್ನು ಪ್ರಥಮ ಸ್ಥಾನದಲ್ಲಿ ಪಡೆದು ಜೇಮ್ಸ್ ಬರ್ಕ್ಲಿ ಬಹುಮಾನಕ್ಕೂ ಪಾತ್ರರಾದರು.

೨. ವಿಶ್ವೇಶ್ವರಯ್ಯನವರ ಸಾಧನೆಗೆ ಸಂದ ಪ್ರಶಸ್ತಿ ಗೌರವಗಳು ಯಾವುವು ?

ಗೊಮ್ಮಟವ್ಯಕ್ತಿತ್ವದ ದಾರ್ಶನಿಕ ನೇತಾರರಾಗಿ 'ಆಡು ಮುಟ್ಟದ ಸೊಪ್ಪಿಲ್ಲ' ಎಂಬ ಗಾದೆ ಮಾತಿನಂತೆ ಬೆಳೆದ ವಿಶ್ವೇಶ್ವರಯ್ಯ ಅವರಿಗೆ ಬ್ರಿಟಿಷ್ ಸರ್ಕಾರ 'ಸರ್' ಪದವಿಯನ್ನು ನೀಡಿ ಗೌರವಿಸಿತು. ಅವರ ಸಾಧನೆಯನ್ನು ಗುರುತಿಸಿ ಭಾರತ ಸರ್ಕಾರ ದೇಶದ ಅತ್ಯುನ್ನತ 'ಭಾರತ ರತ್ನ' ಪ್ರಶಸ್ತಿಯನ್ನು ಸಲ್ಲಿಸಿತು. ದೇಶದ ಹಲವಾರು ಪ್ರತಿಷ್ಠಿತ ಸಂಸ್ಥೆ ಹಾಗೂ ವಿಶ್ವವಿದ್ಯಾನಿಲಯಗಳು ಸದಸ್ಯತ್ವ ಹಾಗೂ ಗೌರವ ಡಾಕ್ಟರೇಟ್ ಪದವಿಗಳನ್ನು ನೀಡಿ ಗೌರವಿಸಿದವು. ಮಹಾನ್ ಆಡಳಿತಗಾರರಾದ ಇವರ ಶತಮಾನೋತ್ಸವದ ಸವಿನೆನಪಿಗಾಗಿ ವಿಶೇಷ ಅಂಚೆಚೀಟಿ ಬಿಡುಗಡೆ ಮಾಡಲಾಯಿತು.ಸೆಪ್ಟೆಂಬರ್ ೧೫,೧೯೬೦ ರಂದು ಶತಮಾನೋತ್ಸವ ಅಭಿನಂದನೆ 'ಎಂ.ವಿ.' ಅಭಿನಂದನಾ ಗ್ರಂಥವನ್ನು ಪ್ರಕಟಿಸಲಾಯಿತು.೧೦೨ ವರ್ಷಗಳ ತುಂಬು ಜೀವನ ಪೂರೈಸಿದ ಸರ್ ಎಂ.ವಿ. ಅವರು ೧೯೬೨ ರಲ್ಲಿ ಇಹಲೋಕ ತ್ಯಜಿಸಿದರು. ಇವರ ಹುಟ್ಟುಹಬ್ಬದ ನೆನಪಿಗಾಗಿ ಇಂದಿಗೂ 'ಎಂಜಿನಿಯರ್ಸ್ ದಿನಾಚರಣೆ'ಯನ್ನು ಆಚರಿಸಲಾಗುತ್ತದೆ.

ಸಂದರ್ಭಾನುಸಾರ ಸ್ವಾರಸ್ಯ ವಿವರಿಸಿ.

೧ ''ಕೈಗಾರಿಕೀಕರಣ ಇಲ್ಲವೇ ಅವನತಿ ''

ಈ ಮೇಲಿನ ವಾಕ್ಯವನ್ನು ಡಿ.ಎಸ್.ಜಯಪ್ಪಗೌಡರು ಬರೆದ ಭಾಗ್ಯಶಿಲ್ಪಿ ಸರ್ ಎಂ.ವಿಶ್ವೇಶ್ವರಯ್ಯ ಎನ್ನುವ ಗದ್ಯಭಾಗದಿಂದ ಆಯ್ದುಕೊಳ್ಳಲಾಗಿದೆ.ಈ ಮಾತನ್ನು ವಿಶ್ವೇಶ್ವರಯ್ಯನವರು ಹೇಳಿದ್ದಾರೆ.

ಸಂದರ್ಭ : ಮೈಸೂರಿನ ದಿವಾನರಾದ ವಿಶ್ವೇಶ್ವರಯ್ಯನವರು ಮೈಸೂರು ಮಾದರಿ ಎಂಬ ಹೊಸ ಆಡಳಿತ ಪದ್ಧತಿ ಜನ್ಮತಾಳಲು ಕಾರಣರಾದರು.ಅವರು ಕೈಗಾರಿಕೆಗೆ ಅಗ್ರ ಪ್ರಾಶಸ್ತ್ಯ ನೀಡಿದ್ದರು. ಕೈಗಾರಿಕೀಕರಣ

ಇಲ್ಲವೇ ಅವನತಿ ಎಂದು ಘೋಷಿಸಿದ ಅವರು ಹಂಚಿನ ಕಾರ್ಖಾನೆ ,ಕಬ್ಬಿಣ ಮತ್ತು ಉಕ್ಕಿನ ಕಾರ್ಖಾನೆ ,ಮೂಳೆ ಮತ್ತು ಗೊಬ್ಬರ ತಯಾರಿಕಾ ಸ್ಥಾವರ ,ಸಕ್ಕರೆ ಕಾರ್ಖಾನೆ ಮೊದಲಾದವುಗಳನ್ನು ನಿರ್ಮಿಸಿದರು ಎನ್ನುವಾಗ ಮೇಲಿನ ಮಾತು ಬಂದಿದೆ.

ಸ್ವಾರಸ್ಯ : ದೇಶದ ಅಭಿವೃದ್ಧಿಯಲ್ಲಿ ಕೈಗಾರಿಕೆಗಳ ಪಾತ್ರವನ್ನು ಮನಗಂಡಿದ್ದ ವಿಶ್ವೇಶ್ವರಯ್ಯನವರು ಕೈಗಾರಕೆಗಳ ಅಭಿವೃದ್ಧಿಗೆ ಹೆಚ್ಚಿನ ಪ್ರಾಶಸ್ತ್ಯನೀಡಿದ್ದರು ಎಂಬುದು ಮೇಲಿನ ವಾಕ್ಯದ ಸ್ವಾರಸ್ಯವಾಗಿದೆ.

೨.''ಆಡು ಮುಟ್ಟದ ಸೊಪ್ಪಿಲ್ಲ''

ಈ ಮೇಲಿನ ವಾಕ್ಯವನ್ನು ಡಿ.ಎಸ್ .ಜಯಪ್ಪಗೌಡರು ಬರೆದ ಭಾಗ್ಯಶಿಲ್ಪಿಸರ್ ಎಂ.ವಿಶ್ವೇಶ್ವರಯ್ಯ ಎನ್ನುವ ಗದ್ಯಭಾಗದಿಂದ ಆಯ್ದುಕೊಳ್ಳಲಾಗಿದೆ.ಈ ಮಾತನ್ನು ವಿಶ್ವೇಶ್ವರಯ್ಯನವರು ಹೇಳಿದ್ದಾರೆ .

ಸಂದರ್ಭ: ಮೈಸೂರು ಸಂಸ್ಥಾನದ ದಿವಾನರಾಗಿ ವಿಶ್ವೇಶ್ವರಯ್ಯನವರು ಆಡಳಿತದಲ್ಲಿ ಹೊಸ ಮಾದರಿಯನ್ನು ಅನುಷ್ಠಾನಗೊಳಿಸಿ ಕಚೇರಿಯ ಕೆಲಸ ಕಾರ್ಯಗಳಲ್ಲಿ ಸುಧಾರಣೆ ತಂದರು . ಶಿಕ್ಷಣ ,ಕೈಗಾರಿಕೆ,ಸಾಹಿತ್ಯ ಹೀಗೆ ಎಲ್ಲ ಕ್ಷೇತ್ರಗಳಿಗೆ ಆದ್ಯತೆ ನೀಡಿದರು. ಆರ್ಥಿಕ ಚಟುವಟಿಕೆಗಳಿಗೆ ಭದ್ರಬುನಾದಿ ಹಾಕಿದರು. ಮೈಸೂರು ರಾಜಧಾನಿಯಾಗಿ ಮತ್ತು ರಾಜ್ಯದ ಎರಡನೆಯ ದೊಡ್ಡ ನಗರವಾಗಿ ಹೊರಹೊಮ್ಮುವಂತೆ ಮಾಡಿದರು.ಗೊಮ್ಮಟ ವ್ಯಕ್ತಿತ್ವದ ದಾರ್ಶನಿಕ ನೇತಾರರಾಗಿ ' ಆಡು ಮುಟ್ಟದ ಸೊಪ್ಪಿಲ್ಲ' ಎಂಬ ಗಾದೆ ಮಾತಿನಂತೆ ಬೆಳದ ಅವರಿಗೆ ಬ್ರಿಟಿಷ್ ಸರ್ಕಾರ ಸರ್ ಪದವಿಯನ್ನು ನೀಡಿ ಗೌರವಿಸಿತು ಎಂದು ಲೇಖಕರು ಹೇಳಿದ್ದಾರೆ.

ಸ್ವಾರಸ್ಯ : ನಾಡಿನ ಅಭಿವೃದ್ಧಿಗೆ ಕಂಕಣಬದ್ಧರಾಗಿದ್ದ ವಿಶ್ವೇಶ್ವರಯ್ಯನವರು ಎಲ್ಲ ಕ್ಷೇತ್ರದ ಪ್ರಗತಿಗೂ ಮಹತ್ವ ನೀಡಿದ್ದರು. ಅವರು ಪ್ರತಿಯೊಂದು ಕ್ಷೇತ್ರಕ್ಕೂ ತನ್ನದೇ ಆದ ಕೊಡುಗೆ ನೀಡಿದ್ದಾರೆ. ಎನ್ನುವುದು ಮೇಲಿನ ವಾಕ್ಯದ ಸ್ವಾರಸ್ಯವಾಗಿದೆ.

## ಗದ್ಯಪಾಠ ಎದೆಗೆ ಬಿದ್ದ ಅಕ್ಷರ

__ದೇವನೂರು ಮಹದೇವ

### ಲೇಖಕರ ಪರಿಚಯ

ದೇವನೂರು ಮಹಾದೇವ ಅವರು ಮೈಸೂರು ಜಿಲ್ಲೆ ನಂಜನಗೂಡು ತಾಲೂಕು ದೇವನೂರಿನಲ್ಲಿ

೧೯೪೯ ರಲ್ಲಿ ಜನಿಸಿದರು.

ಇವರು ದ್ಯಾವನೂರು ,ಒಡಲಾಳ, ಗಾಂಧಿ ಮತ್ತು ಮಾವೊ, ನಂಬಿಕೆಯ ನಂಟ ,ನೋಡು ಮತ್ತು ಕೂಡು, ಕುಸುಮ ಬಾಲೆ ಮೊದಲಾದ ಕೃತಿಗಳನ್ನು ಬರೆದಿದ್ದಾರೆ. ಇವರ ಕುಸುಮ ಬಾಲೆ ಕೃತಿಗೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ದೊರೆತಿದೆ. ಒಡಲಾಳ ಕೃತಿಗೆ ಭಾರತೀಯ ಭಾಷಾ ಪರಿಷತ್ ಪ್ರಶಸ್ತಿ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿಗಳು ದೊರೆತಿವೆ.

ಪ್ರಸ್ತುತ ಎದೆಗೆ ಬಿದ್ದ ಅಕ್ಷರ ಗದ್ಯಪಾಠವನನ್ನು ಇವರ ಎದೆಗೆ ಬಿದ್ದ ಅಕ್ಷರ ವೈಚಾರಿಕ ಬಿಡಿ ಲೇಖನ ಬಿಡಿ ಸಂಗ್ರಹದಿಂದ ತೆಗೆದುಕೊಳ್ಳಲಾಗಿದೆ

ಒಂದೊಂದು ವಾಕ್ಯದಲ್ಲಿ ಉತ್ತರಿಸಿ .

೧. ಮನೆ ಮಂಚಮ್ಮ ಯಾರು ?

ಮನೆ ಮಂಚಮ್ಮ ಊರಿನ ಗ್ರಾಮ ದೇವತೆ.

೨. ಮನೆ ಮಂಚಮ್ಮನ ಕತೆ ಹೇಳಿದ ಕವಿ ಯಾರು?

ಮನೆ ಮಂಚಮ್ಮ ಕತೆ ಹೇಳಿದ ಕವಿ ಸಿದ್ಧಲಿಂಗಯ್ಯ

೩. 'ಮಲೆಗಳಲ್ಲಿ ಮದುಮಗಳು ' ಯಾರ ಕಾದಂಬರಿ?

ಮಲೆಗಳಲ್ಲಿ ಮದುಮಗಳು ಇದು ಕುವೆಂಪುರವರು ಬರೆದ ಕಾದಂಬರಿ

೪. ಅಶೋಕ ಪೈ ಅವರ ವೃತ್ತಿ ಯಾವುದು ?

ಅಶೋಕ ಪೈ ಅವರು ವೃತ್ತಿಯಿಂದ ಒಬ್ಬ ಮನೋವೈದ್ಯರು .

೫. ದೇವನೂರರ 'ನನ್ನ ದೇವರು ' ಯಾರೆಂಬುದನ್ನು ಸ್ಪಷ್ಟೀಕರಿಸಿ .

ಚಾವಣಿ ಇಲ್ಲದ ಗುಡಿಯಲ್ಲಿ ಕಾರುಣ್ಯ ಸಮತೆಯ ಬುದ್ಧನನ್ನು ಇಟ್ಟರೆ ದೇವನೂರರಿಗೆ ಅವನೇ ಅವರ ದೇವರು.

ಮೂರು ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿ.

೧. ಅಶೋಕ ಪೈ ಹೇಳಿದ ಸಂಶೋಧನಾ ಸತ್ಯವೇನು ?

ಅಶೋಕ ಪೈಯವರು ಹೇಳಿದ ಮನಸ್ಸಿನ ಬಗ್ಗೆ ನಡೆದಿರುವ ಸಂಶೋಧನಾ ಸತ್ಯವೆಂದರೆ ಒಂದು ಕೊಠಡಿಯಲ್ಲಿ ಕುಳಿತು ಟೆಲಿವಿಷನ್ ನೋಡುತ್ತಿರುವವರು ಅನುಭವಿಸುತ್ತಿರುವ ದುಃಖ ಅಥವಾ ಸಂತೋಷದ ಭಾವವು ಪಕ್ಕದ ಕೊಠಡಿಯಲ್ಲಿ ಟೆಲಿವಿಷನ್ ನೋಡದೆ ಕುಳಿತಿರುವವರ ಮೇಲೂ ಸ್ವಲ್ಪ

ಮಟ್ಟಿಗೆ ಅದೇ ರೀತಿಯಾದ ಪ್ರಭಾವವನ್ನು ಬೀರುತ್ತದೆ.ಅಂದರೆ ಈ ಉದಾಹರಣೆ ವಿವರಿಸುವ ನಿಜವೆಂದರೆ ಯಾವ ಜೀವಿಯೂ ತನ್ನಷ್ಟಕ್ಕೆತಾನಿಲ್ಲ.ಯಾವುದೇ ಒಂದುಜೀವಿಗೆ ಆಗುವ ದುಃಖ ದುಮ್ಮಾನ ಪರಿಸರದಲ್ಲಿ ಉಸಿರಾಡುತ್ತ ಎಲ್ಲಾ ಜೀವಿಗಳಲ್ಲೂ ಕಂಪನ ಉಂಟು ಮಾಡುತ್ತಿರುತ್ತದೇನೋ.ಈ ಅನುಕಂಪನ ಇಡೀ ಜೀವಸಂಕುಲವನ್ನೇ ಒಂದು ಎಂದು ಹೇಳುತ್ತದೆ.

೨. 'ವಚನ ಧರ್ಮ'ದ ಬಗ್ಗೆ ದೇವನೂರರ ಅಭಿಪ್ರಾಯವೇನು?

ಲೇಖಕಕರಿಗೆ ವಿಶೇಷವಾಗಿ ಕಾಣುವುದು ಈ ಸಹಸ್ರಮಾನದಲ್ಲಿ ಹನ್ನೆರಡನೆಯ ಶತಮಾನದ ವಚನ ಆಂದೋಲನದ ಆ ಇಪ್ಪತ್ತೈದು ವರ್ಷಗಳು .ಹುಡುಕಿದರೂ ಜಗತ್ತಿನಲ್ಲೇ ಕರ್ನಾಟಕದ ಈ ಮಾದರಿ ಬಹುಶಃ ಎಲ್ಲೂ ಸಿಗುವುದಿಲ್ಲ ಈ ವಚನ ಧರ್ಮವನ್ನು ಜಾತಿಯ ಬಚ್ಚಲಿನಿಂದ ಮೇಲೆತ್ತಿ ರಕ್ಷಿಸಿದರೆ ಜಗತ್ತಿಗೇ ಇದು ಬೆಳಕಾಗಬಹುದು.ಇದು ಜಾತಿಯಾದರೆ ಕೆಟ್ಟ ಜಾತಿ; ಧರ್ಮವಾದರೆ ಮಹೋನ್ನತ ಧರ್ಮ ಎನ್ನುವುದು 'ವಚನಧರ್ಮ'ದ ಬಗ್ಗೆ ದೇವನೂರರ ಅಭಿಪ್ರಾಯವಾಗಿದೆ.

೩. ಪರಮ ಹಂಸರ ವ್ಯಕ್ತಿತ್ವದ ವೈಶಿಷ್ಟ್ಯ ಎಂಥದ್ದು?

ಒಂದು ದೇಹ ಮನಸ್ಸು ಅದೆಷ್ಟು ಮಾಧ್ಯಮವಾಗಬಹುದೋ ಅದಷ್ಟೂ ಒಂದೇ ದೇಹದಲ್ಲಿ ಸಂಭವಿಸಿದ ಒಂದು ಉದಾಹರಣೆ ಪರಮಹಂಸರು. ಯಾವುದನ್ನೂ ಕೊಲ್ಲದೆ, ಒಳಿತುಗಳನ್ನೆ ಕೂಡಿಸುತ್ತ ಕೂಡಿಸುತ್ತಾ ಹೋದ ವ್ಯಕ್ತತ್ವ ಪರಮಹಂಸರದು..

೪. ಇಂದಲ್ಲ ನಾಳೆ ಫಲ ಕೊಡುವ ಅಂಶಗಳಾವುವು ?

ಭೂಮಿಗೆ ಬಿದ್ದ ಬೀಜ ಮತ್ತು ಎದೆಗೆ ಬಿದ್ದ ಅಕ್ಷರ ಇವು ಇಂದಲ್ಲ ನಾಳೆ ಫಲ ಕೊಡುವ ಅಂಶಗಳು .ಭೂಮಿಗೆ ಬಿದ್ದ ಬೀಜ ಭೂಮಿಯಲ್ಲಿನ ನೀರನ್ನು ಹೀರಿಕೊಂಡು ಮೊಳಕೆಯೊಡೆದು ಸಸಿಯಾಗಿ ಬೆಳೆದು ಫಲ ಕೊಡುವ ವೃಕ್ಷವಾದರೆ ಜನರಿಗೆ ಹಣ್ಣನ್ನೂ, ಇಲ್ಲವಾದರೆ ಕೊನೆಯ ಪಕ್ಷ ನೆರಳನ್ನೂ ಕೊಡುವುದು.ಹಾಗೆಯೇ ಎದೆಗೆ ಬಿದ್ದ ಅಕ್ಷರ,ವಿದ್ಯೆ,ಜ್ಞಾನ ನಾಳಿನ ಭವಿಷ್ಯಕ್ಕೆ ಭದ್ರ ಬುನಾದಿಯಾಗಬಲ್ಲುದು .

ಎಂಟು ಹತ್ತು ವಾಕ್ಯಗಳಲ್ಲಿ ಉತ್ತರಿಸಿ

೧ ಸತ್ಯ ಮತ್ತು ಸಮಾನತೆಯನ್ನು ಕುರಿತು ನಿಮ್ಮ ಅನಿಸಿಕೆಗಳೇನು ?(ವಿದ್ಯಾರ್ಥಿಗಳೇ ಆಲೋಚಿಸಿ ಬರೆಯಬೇಕಾದುದು )

೨. ಕವಿ ಸಿದ್ಧಲಿಂಗಯ್ಯ ಹೇಳಿದ ಕತೆಯನ್ನು ಬರೆಯಿರಿ.

ಕವಿ ಸಿದ್ಧಲಿಂಗಯ್ಯ ಹೇಳಿದ ಕತೆಯಲ್ಲಿ ಒಂದು ಸಲ ಒಂದು ಗ್ರಾಮದ ಜನರೆಲ್ಲಾ ಸೇರಿ ತಮ್ಮ ದೇವತೆಗೆ

ಗುಡಿ ಕಟ್ಟಲು ಆರಂಭಿಸುತ್ತಾರೆ.ಚಾವಣಿ ಮಟ್ಟಕ್ಕೆ ಆ ಗುಡಿ ಬಂದಾಗ ಒಬ್ಬನ ಮೈಮೇಲೆ ದೇವತೆ ಮಂಚಮ್ಮ ಆವಾಹಿಸಿಕೊಂಡು ''ನಿಲ್ಸಿ ನನ್ನ ಮಕ್ಕಳಾ'' ಎಂದು ಅಬ್ಬರಿಸಿದಾಗ ಕೆಲಸ ನಿಲ್ಲಿಸಿದ ಜನ ಕಕ್ಕಾಬಿಕ್ಕಿಯಾಗಿ ನೋಡುತ್ತಿರಲು ಆ ದೇವತೆ ಮತ್ತು ಜನರ ನಡುವೆ ಮಾತುಕತೆ ನಡೆಯುತ್ತದೆ.ಏನು ಮಾಡುತ್ತಿದ್ದೀರಿ ಎಂಬ ದೇವತೆಯ ಪ್ರಶ್ನೆಗೆ ಜನರೆಲ್ಲ ನಿನಗೊಂದು ಗುಡಿ ಕಟ್ಟುತ್ತಿದ್ದೀವಿ ಎಂದು ಉತ್ತರಿಸುತ್ತಾರೆ.ಆಗ ದೇವತೆಯು ನನಗೆ ನೀವು ಮನೆಕಟ್ಟುತ್ತಿರುವಿರಾದರೆ ನನ್ನ ಮಕ್ಕಳಾದ ನಿಮಗೆಲ್ಲ ಮನೆ ಇದೆಯೋ ಎಂದು ಪ್ರಶ್ನಿಸುತ್ತಾಳೆ.ಆ ಜನರಲ್ಲಿ ಒಬ್ಬ ನನಗಿಲ್ಲ ಎಂದು ಉತ್ತರಿಸಿದಾಗ ಹಾಗಾದರೆ ಎಲ್ಲರಿಗೂ ಮನೆ ಆಗುವವರೆಗೆ ನನಗೂ ಮನೆ ಬೇಡ ಎಂದು ಆದೇಶಿಸಿದ ಮಂಚಮ್ಮ ಮನೆ ಮಂಚಮ್ಮನಾಗುತ್ತಾಳೆ. ಹೀಗೆ ಚಾವಣಿಯಿಲ್ಲದ ಗುಡಿಯಲ್ಲಿ ತಾಯಿ ಮನೆಂಚಮ್ಮ ಇಂದಿಗೂ ಪೂಜಿತಳಾಗುತ್ತಿದ್ದಾಳೆ.

೩. ಸತ್ಯ ಧರ್ಮ ಸಮಾನತೆಯ ಬಗೆಗೆ ದೇವನೂರರು ಕೊಡುವದೃಷ್ಟಾಂತಗಳು ಯಾವುವು?

ಲೇಖಕರು ಹೇಳುವ ಪ್ರಕಾರ ಅವರಿಗೆ ಈ ಸಹಸ್ರಮಾನದಲ್ಲಿ ಕಾಣುವುದು ಹನ್ನೆರಡನೆಯ ಶತಮಾನದ ವಚನ ಆಂದೋಲನದ ಆ ಇಪ್ಪತ್ತೈದು ವರ್ಷಗಳು ಹುಡುಕಿದರೂ ಜಗತ್ತಿನಲ್ಲೇ ಕರ್ನಾಟಕದ ಈ ಮಾದರಿ ಬಹಶಃ ಎಲ್ಲೂ ಸಿಗಲಾರದು .ಈ ವಚನ ಧರ್ಮವನ್ನು ಜಾತಿಯ ಬಚ್ಚಲಿನಿಂದ ಮೇಲೆತ್ತಿ ರಕ್ಷಿಸಿದರೆ ಜಗತ್ತಿಗೇ ಇದು ಬೆಳಕಾಗಬಹುದು.ಇದು ಜಾತಿಯಾದರೆ ಕೆಟ್ಟ ಜಾತಿ ; ಧರ್ಮವಾದರೆ ಮಹೋನ್ನತ ಧರ್ಮ.ಅದರಂತೆಯೇ ಪರಮಹಂಸರು.ಒಂದು ದೇಹ ಮನಸ್ಸು ಎಷ್ಟು ಮಾಧ್ಯಮವಾಗಬಹುದೋ ಅದಷ್ಟೂ ಒಂದೇ ದೇಹದಲ್ಲಿ ಸಂಭವಿಸಿದ ಉದಾಹರಣೆ ಪರಮಹಂಸರದು.ಯಾವುದನ್ನೂ ಕೊಲ್ಲದೆ, ಒಳಿತುಗಳನ್ನೆಕೂಡಿಸುತ್ತ ಕೂಡಿಸುತ್ತಾ ಹೋದ ಪರಮಹಂಸರು ಹಾಗೆಯೇ ಗಾಂಧಿ -ಒಂದು ಜೀವಿತದಲ್ಲಿ ಇರಬಹುದಾದ ಗಳಿಗೆ ಗಳಿಗೆಗಳನ್ನು ಬದುಕುತ್ತಾ ಗಳಿಗೆಯಿಂದ ಗಳಿಗೆಗೆ ಎಡವುತ್ತಾ ಸತ್ಯ ಸಮಾನತೆಗಳ ಕಡೆ ನಡೆಯುತ್ತ ಸಮಷ್ಟಿಯೇ ಆದ ಗಾಂಧಿ ಜೊತೆಗೆ ಅಂಬೇಡ್ಕರರ ಆರ್ತತೆ ಹಾಗೂ ಋಷಿ ಐನ್ ಸ್ಟೈನ್ ಅಂತೆಯೇ ಎಲ್ಲಾ ಶತಮಾನಗಳ ಜೊತೆ ಬೆಳೆಯುತ್ತಲೇ ಇರುವ ವ್ಯಾಸರು.ಟಾಲ್ ಸ್ಟಾಯ್ ,ಶೇಕ್ಸ್ ಪಿಯರ್ ಅದರಂತೆಯೇ ಪಂಪ,ಕುಮಾರವ್ಯಾಸ ,ಕವಿ ಬೇಂದ್ರೆಯವರ ಕೆಲವು ಕವಿತೆಗಳು,ಕುವೆಂಪುರವರ ಮಲೆಗಳಲ್ಲಿಮದುಮಗಳು ಇವೆಲ್ಲವೂ ಸತ್ಯ ಧರ್ಮ ಸಮಾನತೆಯ ಬಗ್ಗೆ ದೇವನೂರರು ಕೊಡುವ ದೃಷ್ಟಾಂತಗಳು.

ಸಂದರ್ಭದೊಡನೆ ವಿವರಿಸಿ .

mamatabhagwat1@gmail.com

೧. ''ಏನ್ರ ಯ್ಯಾಎನ್ ಮಾಡ್ತಾ ಇದ್ದೀರಿ ?''

ಈ ಮೇಲಿನ ವಾಕ್ಯವನ್ನು ದೇವನೂರು ಮಹಾದೇವ ಅವರು ಬರೆದ ಎದೆಗೆ ಬಿದ್ದ ಅಕ್ಷರ ಎನ್ನುವ ವೈಚಾರಿಕ ಲೇಖನದಿಂದ ಆಯ್ದುಕೊಳ್ಳಲಾಗಿದೆ.ಈ ಮಾತನ್ನು ಮಂಚಮ್ಮ ದೇವತೆ ಜನರಿಗೆ ಕೇಳಿದ್ದಾಳೆ.

ಸಂದರ್ಭ : ಕವಿ ಸಿದ್ಧಲಿಂಗಯ್ಯನವರು ಲೇಖಕರಿಗೆಒಮ್ಮೆ ಹೇಳಿದ ಕತೆಯಲ್ಲಿ ಬರುವ ಪ್ರಸಂಗ ಇದಾಗಿದ್ದು ಅದರಲ್ಲಿ ಬರುವ ಹಾಗೆ ಒಂದು ಗ್ರಾಮದ ಜನರು ತಮ್ಮ ಗ್ರಾಮ ದೇವತೆಗೋಸ್ಕರ ಗುಡಿ ಕಟ್ಟಲು ಪ್ರಾರಂಭಿಸುತ್ತಾರೆ. ಚಾವಣಿ ಮಟ್ಟಕ್ಕೆ ಆ ಗುಡಿ ಬಂದಾಗ ಒಬ್ಬನ ಮೈಮೇಲೆ ಆವಾಹಿಸಿದ ಮಂಚಮ್ಮ ದೇವಿ ನಿಲ್ಸಿ ನನ್ನ ಮಕ್ಕಳಾ ಎಂದು ಅಬ್ಬರಿಸಿದಾಗ ಜನ ಕಕ್ಕಾಬಿಕ್ಕಿಯಾಗುತ್ತಾರೆ.ಆಗ ಅವಳು ಜನರಿಗೆ ಮೇಲಿನಂತೆ ಕೇಳುತ್ತಾಳೆ.

ಸ್ವಾರಸ್ಯ: ಗ್ರಾಮದ ಜನರು ತನಗೆ ಮನೆಕಟ್ಟುವುದನ್ನು ಗಮನಿಸಿ ಕುತೂಹಲದಿಂದ ಪ್ರಶ್ನಿಸುವ ಸಂದರ್ಭವನ್ನು ಇಲ್ಲಿ ನೋಡಬಹುದು.

೨. ''ಹಾಗಾದರೆ ಎಲ್ಲರಿಗೂ ಮನೆ ಆಗುವವರೆಗೆ ನನಗೆ ಮನೆ ಬೇಡ .''

ಈ ಮೇಲಿನ ವಾಕ್ಯವನ್ನು ದೇವನೂರು ಮಹಾದೇವ ಅವರು ಬರೆದ ಎದೆಗೆ ಬಿದ್ದ ಅಕ್ಷರ ಎನ್ನುವ ವೈಚಾರಿಕ ಲೇಖನದಿಂದ ಆಯ್ದುಕೊಳ್ಳಲಾಗಿದೆ.ಈ ಮಾತನ್ನು ಮಂಚಮ್ಮ ದೇವತೆ ಜನರಿಗೆ ಹೇಳಿದ್ದಾಳೆ.

ಸಂದರ್ಭ : ಕವಿ ಸಿದ್ಧಲಿಂಗಯ್ಯನವರು ಲೇಖಕರಿಗೆಒಮ್ಮೆ ಹೇಳಿದ ಕತೆಯಲ್ಲಿ ಬರುವ ಪ್ರಸಂಗ ಇದಾಗಿದ್ದು ಅದರಲ್ಲಿ ಬರುವ ಹಾಗೆ ಒಂದು ಗ್ರಾಮದ ಜನರು ತಮ್ಮ ಗ್ರಾಮ ದೇವತೆಗೋಸ್ಕರ ಗುಡಿ ಕಟ್ಟಲು ಪ್ರಾರಂಭಿಸುತ್ತಾರೆ.ಗುಡಿ ಚಾವಣಿಯ ಮಟ್ಟವನ್ನು ತಲುಪಿದಾಗ ಇದ್ದಕ್ಕಿದ್ದಂತೆ ಜನರಿಗೆ ಪ್ರತ್ಯಕ್ಷಳಾದ ಮಂಚಮ್ಮ ದೇವತೆ ಅವರು ಮಾಡುತ್ತಿರುವ ಕಾರ್ಯದ ಕುರಿತು ವಿಚಾರಿಸುತ್ತಾಳೆ. ಜನರು ಅವಳಿಗಾಗಿಯೇ ಗುಡಿ ಕಟ್ಟುತ್ತಿರುವುದಾಗಿ ಹೇಳಿದಾಗ ಅವಳು ನಿಮಗೆಲ್ಲರಿಗೂ ಮನೆ ಇದೆಯೋ ಎಂದು ಪ್ರಶ್ನಿಸುತ್ತಾಳೆ.ಅವರಲ್ಲೊಬ್ಬ ತನಗಿಲ್ಲವೆಂದು ಹೇಳಿದಾಗ ಮಂಚಮ್ಮ ದೇವತೆ ಎಲ್ಲರಿಗೂ ಮನೆ ಆಗುವವರೆಗೆ ತನಗೆ ಮನೆ ಬೇಡವೆಂದು ಹೇಳುತ್ತಾಳೆ.

ಸ್ವಾರಸ್ಯ: ಗ್ರಾಮದೇವತೆಗೇ ಒಂದು ಮನೆ ನಿರ್ಮಿಸುವ ಪ್ರಯತ್ನ ನೋಡಿದ ಸ್ವತಃ ಮನನೆಗಳಿಲ್ಲದ ಎಷ್ಟೋಜನರ ಜನರ ಪರಿಸ್ಥಿತಿ ಮತ್ತು ಮನ:ಸ್ಥಿತಿಗೆ ಅನುಕಂಪ ತಾಳುವ ದೇವತೆಯ ಮನೋಭಾವ ಇಲ್ಲಿ ಅಡಗಿದೆ,

೩.''ಯಾವ ಜೀವಿಯೂ ತನ್ನಷ್ಟಕ್ಕೆತಾನಿಲ್ಲ. ''

ಈ ಮೇಲಿನ ವಾಕ್ಯವನ್ನು ದೇವನೂರು ಮಹಾದೇವ ಅವರು ಬರೆದ ಎದೆಗೆ ಬಿದ್ದ ಅಕ್ಷರ ಎನ್ನುವ

ವೈಚಾರಿಕ ಲೇಖನದಿಂದ ಆಯ್ದುಕೊಳ್ಳಲಾಗಿದೆ.

ಈ ಮಾತನ್ನು ಲೇಖಕರು ಹೇಳಿದ್ದಾರೆ.

ಸಂದರ್ಭ: ಮನೋವೈದ್ಯರಾದ ಅಶೋಕ ಪೈ ಯವರು ಮನಸ್ಸಿನ ಬಗ್ಗೆ ನಡೆದ ಒಂದು ಸಂಶೋಧನಾ ಸತ್ಯದ ಕುರಿತು ಹೇಳುತ್ತಾ ಒಂದು ಕೊಠಡಿಯಲ್ಲಿ ಒಂದಷ್ಟು ಜನರು ಟೆಲಿವಿಷನ್ ವೀಕ್ಷಿಸುತ್ತಿರುವಾಗ ಅವರು ನೋಡುವ ಸನ್ನಿವೇಷಗಳಿಗೆ ತಕ್ಕಂತೆ ದುಃಖ ಅಥವಾ ಸಂತೋಷದ ಭಾವವನ್ನು ಅನುಭವಿಸುತ್ತಿರುವಾಗ ಅವರ ಭಾವವು ಅವರ ಪಕ್ಕದ ಕೊಠಡಿಯಲ್ಲಿ ಟೆಲಿವಿಷನ್ ನೋಡದೆ ಇರುವವರನ್ನು ಸ್ವಲ್ಪ ಮಟ್ಟಿಗಾದರೂ ತಲುಪಿ ಅವರು ಕೂಡ ದುಃಖ ಅಥವಾ ಸಂತೋಷದ ಭಾವವನ್ನು ಅಲ್ಪ ಮಟ್ಟಿಗೆ ತಾಳುತ್ತಾರೆಎಂದು ವಿವರಿಸಿದ್ದಾರೆ.ಇದನ್ನು ಗಮನಿಸಿದರೆ ಯಾವ ಜೀವಿಯೂ ತನ್ನಷ್ಟಕ್ಕೆ ತಾನಿಲ್ಲ ಎಂದು ಅರ್ಥವಾಗುತ್ತದೆ ಎಂದು ಲೇಖಕರು ಹೇಳಿದ್ದಾರೆ.

ಸ್ವಾರಸ್ಯ: ಪ್ರತಿಯೊಬ್ಬರೂ ಇನ್ನೊಬ್ಬರ ಮೇಲೆ ಅಥವಾ ಪರಿಸ್ಥಿತಿಯ ಮೇಲೆ ಅಥವಾ ಸಂದರ್ಭಗಳ ಮೇಲೆ ಅವಲಂಬಿತರಾದವರೇ ಯಾರೂ ಸರ್ವ ಸ್ವತಂತ್ರರಲ್ಲ ಎನ್ನುವುದು ಮೇಲಿನ ವಾಕ್ಯದ ಸ್ವಾರಸ್ಯವಾಗಿದೆ

೪. ''ನಾವು ಮನುಷ್ಯರು ''.

ಈ ಮೇಲಿನ ವಾಕ್ಯವನ್ನು ದೇವನೂರು ಮಹಾದೇವ ಅವರು ಬರೆದ ಎದೆಗೆ ಬಿದ್ದ ಅಕ್ಷರ ಎನ್ನುವ ವೈಚಾರಿಕ ಲೇಖನದಿಂದ ಆಯ್ದುಕೊಳ್ಳಲಾಗಿದೆ.

ಈ ಮಾತನ್ನು ಲೇಖಕರು ಹೇಳಿದ್ದಾರೆ.

ಸಂದರ್ಭ: ಕೊಲೆ ಸುಲಿಗೆ ದ್ವೇಷ ಅಸೂಯೆಗಳಿಂದ ಕ್ಷೋಭೆಗೊಂಡು ನರಳುತ್ತಿರುವ ಜಗತ್ತು -ಅದು ಘಾಸಿಗೊಳಿಸುವುದು -ತನ್ನ ಆಳದ ಒಳ ಸಮಷ್ಟಿ ಮನಸ್ಸನ್ನೇ.ಈ ಸಮಷ್ಟಿ ಮನಸ್ಸಲ್ಲಿ ಎಲ್ಲರೂ ಇರುತ್ತಾರೆ. ನಾವು ಮನುಷ್ಯರು ನಮ್ಮೊಳಗೆ ಮೂರ್ಛಾವಸ್ಥೆಯಲ್ಲಿರುವ ಕಾರುಣ್ಯವನ್ನು ಎಚ್ಚರಗೊಳಿಸಬೇಕಾಗಿದೆ.ಈ ಎಳೆ ಹಿಡಿದು ಜಾಗತೀಕರಣವನ್ನು ರೂಪಿಸಬೇಕಾಗಿದೆ.ಆಗ ಮಾತ್ರವೇ ಅದು ಜಾಗತೀಕರಣ ಎಂದು ಲೇಖಕರು ಅಭಿಪ್ರಾಯ ಪಟ್ಟಿದ್ದಾರೆ.

ಸ್ವಾರಸ್ಯ: ಎಲ್ಲರೂ ಮಾನವರೂ ತನ್ನಂತೆ ಪರರು ಎಂದು ಬಗೆಯಬೇಕಾದುದೇ ಮನುಷ್ಯಧರ್ಮ ಪ್ರತಿಯೊಂದು ಜೀವಿಯ ಬಗ್ಗೆಯೂ ಕಾರುಣ್ಯದ ಭಾವ ತಾಳಬೇಕಾದುದು ಇಂದಿನ ಅಗತ್ಯ ಎಂಬುದೇ ಪ್ರಸ್ತುತ ವಾಕ್ಯದ ಸ್ವಾರಸ್ಯವಾಗಿದೆ.

೫.'' ಈ ಸಮಷ್ಟಿ ಮನಸ್ಸಲ್ಲಿ ಎಲ್ಲರೂ ಇರುತ್ತಾರೆ ''

ಈ ಮೇಲಿನ ವಾಕ್ಯವನ್ನು ದೇವನೂರು ಮಹಾದೇವ ಅವರು ಬರೆದ ಎದೆಗೆ ಬಿದ್ದ ಅಕ್ಷರ ಎನ್ನುವ

ವೈಚಾರಿಕ ಲೇಖನದಿಂದ ಆಯ್ದುಕೊಳ್ಳಲಾಗಿದೆ.
ಈ ಮಾತನ್ನು ಲೇಖಕರು ಹೇಳಿದ್ದಾರೆ.
ಸಂದರ್ಭ: ಯಾವುದೇ ಒಂದು ಜೀವಿಗೆ ಆಗುವ ದುಃಖ ದುಮ್ಮಾನ ಪರಿಸರದಲ್ಲಿ ಉಸಿರಾಡುತ್ತ ಎಲ್ಲಾ ಜೀವಿಗಳಲ್ಲೂ ಕಂಪನ ಉಂಟು ಮಾಡುತ್ತಿರುತ್ತದೇನೋ.ಈ ಅನುಕಂಪನ ಇಡೀ ಜೀವ ಸಂಕುಲವನ್ನೇ ಒಂದು ಎಂದು ಹೇಳುತ್ತದೆ.ಬುದ್ಧನ ಕಾರುಣ್ಯ ಇಲ್ಲಿಂದಲೇ ಮೂಡಿರಬಹುದು.ಕೊಲೆ ಸುಲಿಗೆ ದ್ವೇಷ ಅಸೂಯೆಗಳಿಂದ ಕ್ಷೋಭೆಗೊಂಡು ನರಳುತ್ತಿರುವ ಜಗತ್ತು -ಅದು ಘಾಸಿಗೊಳಿಸುವುದು -ತನ್ನ ಆಳದ ಒಳ ಸಮಷ್ಟಿ ಮನಸ್ಸನ್ನೇ.ಈ ಸಮಷ್ಟಿ ಮನಸ್ಸಲ್ಲಿ ಎಲ್ಲರೂ ಇರುತ್ತಾರೆ ಎಂದು ಲೇಖಕರು ಹೇಳಿದ್ದಾರೆ.
ಸ್ವಾರಸ್ಯ: ಮನುಷ್ಯನು ತನ್ನಲ್ಲಿರುವ ಕ್ರೌರ್ಯದ ಭಾವನೆಗಳನ್ನು ಕಿತ್ತೊಗೆಯಬೇಕಾದುದು ಅತೀ ಅಗತ್ಯವಾದುದು ಎಂಬ ಲೇಖಕರ ಕಾಳಜಿಯನ್ನು ಮೇಲಿನ ವಾಕ್ಯವು ಸೂಚಿಸುತ್ತದೆ.

ಹೊಂದಿಸಿ ಬರೆಯಿರಿ .

| | |
|---|---|
| ೧ ಕುವೆಂಪು | ಮಹಾಭಾರತ |
| ೨. ವಚನ ಆಂದೋಳನ | ಮಹಾದೇವ |
| ೩.ದೇವನೂರ | ೧೨ ನೆಯ ಶತಮಾನ |
| ೪ . ವ್ಯಾಸ | ಮಲೆಗಳಲ್ಲಿ ಮದುಮಗಳು |
| | ರಾಮಾಯಣ |

ಕುವೆಂಪು-ಮಲೆಗಳಲ್ಲಿ ಮದುಮಗಳು , ವಚನ ಆಂದೋಳನ -೧೨ ನೆಯ ಶತಮಾನ , ದೇವನೂರ -ಮಹಾದೇವ , ವ್ಯಾಸ- ಮಹಾಭಾರತ .
ಕೊಟ್ಟಿರುವ ಪದಗಳ ವಿರುದ್ಧಾರ್ಥಕ ಪದ ಬರೆಯಿರಿ.
ಒಳಿತು X ಕೆಡುಕು , ಸಮಷ್ಟಿ X ವ್ಯಷ್ಟಿ, ಪುಣ್ಯ X ಪಾಪ , ಬೆಳಕು X ಕತ್ತಲು , ಧರ್ಮ X ಅಧರ್ಮ

ಒಂದು ವಾಕ್ಯದಲ್ಲಿ ಉತ್ತರಿಸಿ.
೧.ಮಂಚಮ್ಮ ಇಂದು ಎಲ್ಲಿ ಪೂಜಿತಳಾಗುತ್ತಿದ್ದಾಳೆ ?
ಚಾವಣಿ ಇಲ್ಲದ ಗುಡಿಯಲ್ಲಿ ಮಂಚಮ್ಮ ಇಂದು ಪೂಜಿತಳಾಗುತ್ತಿದ್ದಾಳೆ.

**GOVT HIGH SCHOL BEGUR BANGALURU -68**

೨.ವಚನಧರ್ಮವು ಯಾವಾಗ ಜಗತ್ತಿಗೇ ಬೆಳಕಾಗಬಹುದು ಎಂದು ದೇವನೂರರು ಹೇಳಿದ್ದಾರೆ?
ವಚನಧರ್ಮವನ್ನು ಜಾತಿಯ ಬಚ್ಚಲಿನಿಂದ ಮೇಲೆತ್ತಿ ರಕ್ಷಿಸಿದರೆ ಜಗತ್ತಿಗೇ ಇದು ಬೆಳಕಾಗಬಹುದು ಎಂದು ದೇವನೂರರು ಹೇಳಿದ್ದಾರೆ.
೩.ದೇವನೂರರ ಅಭಿಪ್ರಾಯದಲ್ಲಿ ಎಲ್ಲಾ ಶತಮಾನಗಳ ಜೊತೆ ಬೆಳೆಯುತ್ತಲೇ ಇರುವವರು ಯಾರು ?
ದೇವನೂರರ ಅಭಿಪ್ರಾಯದಲ್ಲಿ ಎಲ್ಲಾ ಶತಮಾನಗಳ ಜೊತೆ ಬೆಳೆಯುತ್ತಲೇ ಇರುವವರು ಮಹಾಭಾರತವನ್ನು ಬರೆದ ಭಗವಾನ್ ವೇದವ್ಯಾಸರು.
೪.ದೇವನೂರರ ಪ್ರಕಾರ ಮನುಷ್ಯರು ಯಾವುದನ್ನು ಎಚ್ಚರಗೊಳಿಸಬೇಕಿದೆ ?
ಮನುಷ್ಯರು ತಮ್ಮೊಳಗೆ ಮೂರ್ಛಾವಸ್ಥೆಯಲ್ಲಿರುವಕಾರುಣ್ಯವನ್ನು ಎಚ್ಚರಗೊಳಿಸಬೇಕಾಗಿದೆ.
ಎರಡು ಮೂರು ವಾಕ್ಯಗಳಲ್ಲಿ ಉತ್ತರಿಸಿ.
೧.ಮಂಚಮ್ಮ ದೇವತೆ ತನಗೆ ಮನೆ ಬೇಡವೆನ್ನಲು ಕಾರಣವೇನು ? ಅಥವಾ
ಮಂಚಮ್ಮ ದೇವತೆ ಗುಡಿಕಟ್ಟುವುದನ್ನುಅರ್ಧಕ್ಕೆ ನಿಲ್ಲಿಸಲು ಹೇಳಲು ಕಾರಣವೇನು ? ಅಥವಾ
ಮಂಚಮ್ಮದೇವತೆಗೆ ಗುಡಿ ಕಟ್ಟುವ ಕಾರ್ಯ ಅರ್ಧಕ್ಕೆ ನಿಲ್ಲಲು ಕಾರಣಗಳೇನು ? ಅಥಮಂಚಮ್ಮ ದೇವಿಗೋಸ್ಕರ ಗುಡಿ ಕಟ್ಟುತ್ತಿದ್ದ ಕಾರ್ಯ ಅಪೂರ್ಣವಾಗಲು ಕಾರಣವೇನು ?
ಚಾವಣಿ ಇಲ್ಲದ ಗುಡಿಯಲ್ಲಿ ಮಂಚಮ್ಮ ದೇವಿಯ ಪೂಜೆಗೆ ಒಳಗಾದುದರ ಹಿನ್ನೆಲೆ ತಿಳಿಸಿ.
ಗುಡಿ ಕಟ್ಟುತ್ತಿದ್ದ ಜನರನ್ನು ದೇವತೆ ನಿಮ್ಮೆಲ್ಲರಿಗೂ ಮನೆ ಇದೆಯೋ ಎಂದು ಕೇಳಿದಾಗ ಅವರಲ್ಲಿ ಒಬ್ಬನಿಂದ ನನಗಿಲ್ಲ ಎಂಬ ಉತ್ತರ ಬಂದಿತು .ತನಗಾಗಿ ಗುಡಿ ಕಟ್ಟುತ್ತಿದ್ದ ಜನರಿಗೇ ಮನೆಗಳಿಲ್ಲ .ಅವರೆಲ್ಲರಿಗೂ ಮನೆಗಳಾದ ಮೇಲೆ ನನಗೆ ಗುಡಿ ಕಟ್ಟಿ ಎಂದು ಜನರಿಗೆ ದೇವಿ ಹೇಳಿದ ಕಾರಣ ಮಂಚಮ್ಮ ದೇವತೆಗೆ ಗುಡಿ ಕಟ್ಟುವ ಕಾರ್ಯ ಅಲ್ಲಿಗೇ ನಿಂತು ಹೋಯಿತು. ಆದ್ದರಿಂದ ಚಾವಣಿ ಇಲ್ಲದ ಗುಡಿಯಲ್ಲಿ ಮನೆಮಂಚಮ್ಮ ಪೂಜಿತಳಾಗುತ್ತಿದ್ದಾಳೆ.
೨. ಬುದ್ಧನ ಕಾರುಣ್ಯ ಎಲ್ಲಿಂದ ಒಡಮೂಡಿರಬಹುದು ಎಂದು ಲೇಖಕರು ವಿಶ್ಲೇಷಿಸಿದ್ದಾರೆ ?
ಯಾವ ಜೀವಿಯೂ ತನ್ನಷ್ಟಕ್ಕೆ ತಾನಿಲ್ಲ .ಯಾವುದೇ ಒಂದು ಜೀವಿಗೆ ಆಗುವ ದುಃಖದುಮ್ಮಾನ ಪರಿಸರದಲ್ಲಿ ಉಸಿರಾಡುತ್ತ ಎಲ್ಲ ಜೀವಿಗಳಲ್ಲೂ ಕಂಪನ ಉಂಟು ಮಾಡುತ್ತಿರಬಹುದು.ಈ ಅನುಕಂಪನ ಇಡೀ ಜೀವ ಸಂಕುಲವನ್ನೇ ಒಂದು ಎಂದು ಹೇಳುತ್ತದೆ.ಬುದ್ಧನ ಕಾರುಣ್ಯ ಇಲ್ಲಿಂದಲೇ ಒಡಮೂಡಿರಬಹುದು ಎಂದು ದೇವನೂರರು ವಿಶ್ಲೇಷಿಸಿದ್ದಾರೆ .

೩.ಜಾಗತೀಕರಣವನ್ನು ಹೇಗೆ ರೂಪಿಸಬಹುದು ಎಂದು ದೇವನೂರರು ಆಶಿಸಿದ್ದಾರೆ ?
ಕೊಲೆ ಸುಲಿಗೆ ದ್ವೇಷ ಅಸೂಯೆಗಳಿಂದ ಕ್ಷೋಭೆಗೊಂಡು ನರಳುತ್ತಿರುವ ಜಗತ್ತು ಅದು ಘಾಸಿಗೊಳಿಸುವುದುತನ್ನ ಆಳದ ಒಳ ಸಮಷ್ಟಿ ಮನಸ್ಸನ್ನೆ.ಈ ಸಮಷ್ಟಿ ಮನಸ್ಸಲ್ಲಿ ಎಲ್ಲರೂ ಇರುತ್ತಾರೆ.ಮನುಷ್ಯರಾದ ನಾವು ನಮ್ಮಲ್ಲಿ ಮೂರ್ಛಾವಸ್ಥೆಯಲ್ಲಿರುವಕಾರುಣ್ಯವನ್ನು ಎಚ್ಚರಗೊಳಿಸಬೇಕಾಗಿದೆ.
ಈ ಎಳೆ ಹಿಡಿದು ಜಾಗತೀಕರಣವನ್ನುರೂಪಿಸಬೇಕಾಗಿದೆ.ಆಗ ಮಾತ್ರ ಅದು ಜಾಗತೀಕರಣವಾಗಿ ಅದು ರೂಪುಗೊಳ್ಳುವುದು ಎಂದು ದೇವನೂರರು ಹೇಳಿದ್ದಾರೆ.

ಎಂಟು ಹತ್ತು ವಾಕ್ಯಗಳಲ್ಲಿ ಉತ್ತರಿಸಿ.
ಇಡೀ ಜೀವ ಸಂಕುಲವೇ ಒಂದು ಎಂದು ಲೇಖಕರು ಅಶೋಕ ಪೈಯವರು ಹೇಳಿರುವ ಸಂಶೋಧನಾ ಸತ್ಯದಿಂದ ಹೇಗೆ ವಿವರಿಸಿದ್ದಾರೆ ?
ಶಿವಮೊಗ್ಗದ ಅಶೋಕ ಪೈಯವರು ವಿವರಿಸಿದ ಸಂಶೋಧನಾ ಸತ್ಯದ ವಿವರ ಹೀಗಿದೆ... ಒಂದು ರೂಮಿನಲ್ಲಿ ಕುಳಿತು ದೂರದರ್ಶನವನ್ನು ವೀಕ್ಷಿಸುತ್ತಿರುವವರ ಭಾವನೆಯು ಅದರ ಪಕ್ಕದ ರೂಮಿನಲ್ಲಿ ದೂರದರ್ಶನವನ್ನು ವೀಕ್ಷಿಸದೇ ಇದ್ದವರ ಮೇಲೂ ಅಲ್ಪ ಸ್ವಲ್ಪ ಪ್ರಭಾವನ್ನು ಬೀರುತ್ತದೆ.
ದೂರದರ್ಶನವನ್ನು ವೀಕ್ಷಿಸುತ್ತಿರುವವರು ಸಂತಸದ ಭಾವವನ್ನು ಅನುಭವಿಸುತ್ತಿದ್ದರೆ ಅದರ ಪಕ್ಕದ ರೂಮಿನವರೂ ಸ್ವಲ್ಪ ಮಟ್ಟಿಗೆ ಸಂತಸದ ಭಾವವನ್ನೂದೂರದರ್ಶನ ವೀಕ್ಷಿಸುತ್ತಿರುವವರು ದುಃಖದ ಭಾವವನ್ನು ಅನುಭವಿಸುತ್ತಿದ್ದರೆ ಅದನ್ನು ನೋಡದೇ ಇರುವ ಪಕ್ಕದ ರೂಮಿನಲ್ಲಿರುವವರೂ ಸ್ವಲ್ಪ ಮಟ್ಟಿಗೆ ಅದೇ ಭಾವವನ್ನೂ ಅನುಭವಿಸುವರು.ಇದರಿಂದ ಯಾವ ಜೀವಿಯೂ ತನ್ನಷ್ಟಕ್ಕೆತಾನಿಲ್ಲ ಎಂದು ಹೇಳುತ್ತದೆ .ಯಾವುದೇ ಒಂದು ಜೀವಿಗೆ ಆಗುವ ಆಗುವ ದುಃಖ ದುಮ್ಮಾನ ಪರಿಸರದಲ್ಲಿ ಉಸಿರಾಡುತ್ತ ಎಲ್ಲ ಜೀವಿಗಳಲ್ಲೂ ಕಂಪನ ಉಂಟು ಮಾಡುತ್ತದೆ.ಈ ಅನುಕಂಪನ ಇಡೀ ಜೀವಸಂಕುಲವನ್ನೇ ಒಂದು ಎಂದು ಹೇಳುತ್ತದೆ ಎಂದು ಲೇಖಕರು ವಿವರಿಸಿದ್ದಾರೆ.

ಸಂದರ್ಭದೊಡನೆ ವಿವರಿಸಿ.
'ನನಗಿಲ್ಲ ತಾಯಿ '
ಈ ಮೇಲಿನ ವಾಕ್ಯವನ್ನು ದೇವನೂರು ಮಹಾದೇವ ಅವರು ಬರೆದ ಎದೆಗೆ ಬಿದ್ದ ಅಕ್ಷರ ಎನ್ನುವ ವೈಚಾರಿಕ ಲೇಖನದಿಂದ ಆಯ್ದುಕೊಳ್ಳಲಾಗಿದೆ.ಈ ಮಾತನ್ನು ಗುಡಿ ಕಟ್ಟುತ್ತಿರುವವರಲ್ಲೊಬ್ಬ

**ಹೇಳಿದ್ದಾನೆ.**

**ತನಗಾಗಿ ಊರಿನ ಜನರು ಗುಡಿ ಕಟ್ಟುತ್ತಿದ್ದಾಗ ಅವರಲ್ಲಿಯೇ ಒಬ್ಬನ ಮೈ ಮೇಲೆ ಆವಾಹಿಸಿದ ಮಂಚಮ್ಮ ದೇವಿ ಅವರನ್ನು ಏನು ಮಾಡುತ್ತಿದ್ದೀರಿ ಎಂದು ಪ್ರಶ್ನೆ ಮಾಡುತ್ತಾಳೆ. ಅವರು ಅವಳಿಗಾಗಿ ಗುಡಿ ಕಟ್ಟುತ್ತಿದ್ದೇವೆ ಎಂದು ಉತ್ತರಿಸುತ್ತಾರೆ. ಆಗ ಅವಳು ಹಾಗಾದರೆ ನಿಮಗೆಲ್ಲರಿಗೂ ಮನೆ ಇದೆಯಾ ಎಂದು ಪ್ರಶ್ನಿಸುತ್ತಾಳೆ. ಆಗ ಅವರಲ್ಲೊಬ್ಬ ಮೇಲಿನಂತೆ ಉತ್ತರಿಸುತ್ತಾನೆ.**

**ಸ್ವಾರಸ್ಯ: ದೇವತೆಗೆ ಮನೆಕಟ್ಟುವ ಕಾರ್ಯವನ್ನು ಭಕ್ತರು ನಿರ್ವಹಿಸುತ್ತಾರೆ. ಆದರೆ ಆ ಭಕ್ತರಲ್ಲಿಯೇ ಎಷ್ಟೋ ಜನರಿಗೆ ನಿಲ್ಲಲು ನೆಲೆಯಿರುವುದಿಲ್ಲ ನಮ್ಮನ್ನೇ ಪೊರೆಯುವ ನಮಗೇ ಎಲ್ಲವನ್ನೂ ನೀಡುವ ದೇವರಿಗೇ ನೆಲೆ ಕಲ್ಪಸುವುದು ನಮ್ಮಿಂದ ಸಾಧ್ಯವೇ ಎಂಬ ಪ್ರಶ್ನೆ ಇಲ್ಲಿ ಉದ್ಭವಿಸುವುದನ್ನು ಇಲ್ಲಿ ಗಮನಿಸಬಹುದು .**

## ವ್ಯಾಕರಣ ಪ್ರಶ್ನೆಗಳು

***ಕೆಳಗಿನ ಪ್ರಶ್ನೆಗಳಿಗೆ ನಾಲ್ಕು ಆಯ್ಕೆಗಳನ್ನು ನೀಡಲಾಗಿದೆ. ಸರಿಯಾದ ಉತ್ತರವನ್ನು ಆರಿಸಿ ಬರೆಯಿರಿ.***

***೧. ಅಕ್ಷರ ಪದದ ತದ್ಭವ ರೂಪ ----***

***ಎ) ಅಕ್ಕರ ಬಿ) ಅಕ್ಷರಾ ಸಿ) ಅಕ್ಕರೆ ಡಿ) ವಿದ್ಯೆ***

***೨. ಗ್ರಾಮದೇವತೆ ಈ ಪದದಲ್ಲಿರುವ ಸಮಾಸ***

ಎ) ***ಗಮಕ ಬಿ) ತತ್ಪುರುಷ ಸಿ) ಕ್ರಿಯಾ ಡಿ) ಕರ್ಮಧಾರಯ***

***೩. ಒಂದ್ಸಲ ಪದದ ಗ್ರಾಂಥಿಕ ರೂಪವಿದು***

***ಎ) ಒಂದೇ ಸಲ ಬಿ) ಒಂದುಸಲ ಸಿ) ಒಂದ ಸಲ ಡಿ) ಒಂದ್ಸಾಲ***

***೪. ತಮ್ಮ ಪದವು ಈ ಸರ್ವನಾಮಕ್ಕೆ ಉದಾಹರಣೆಯಾಗಿದೆ***

***ಎ) ಪ್ರಶ್ನಾರ್ಥಕ ಬಿ) ಉತ್ತಮ ಪುರುಷ ಸಿ) ಆತ್ಮಾರ್ಥಕ ಡಿ) ಪ್ರಥಮ ಪುರುಷ***

***೫. ಗುಡಿಯಲ್ಲಿ ಪದದಲ್ಲಿರುವ ಸಂಧಿ –***

***ಎ) ಆದೇಶ ಬಿ) ಲೋಪ ಸಿ) ಆಗಮ ಡಿ) ವೃದ್ಧಿ***

***೬. ಕವಿ ಪದವು ಈ ಮಾದರಿಯ ನಾಮಪದದ ಉದಾಹರಣೆಯಾಗಿದೆ***

***ಎ) ಅಂಕಿತ ನಾಮ ಬಿ) ರೂಢನಾಮ ಸಿ) ಅನ್ವರ್ಥಕನಾಮ ಡಿ) ಸಾಮಾನ್ಯ***

***೭. ಆ ದೇವತೆ ಪದದಲ್ಲಿರುವ ಸಮಾಸ***

*ಎ) ಕ್ರಿಯಾ ಬಿ) ಅಂಶಿ ಸಿ) ಕರ್ಮಧಾರಯ ಡಿ) ಗಮಕ*

*೮. ಇನ್ನೊಂದು ಪದವು ಈ ಸಂಧಿಗೆ ಉದಾಹರಣೆಯಾಗಿದೆ--*

*ಎ) ಲೋಪ ಬಿ) ಆಗಮ ಸಿ) ಆದೇಶ ಡಿ) ಗುಣ*

*೯. ನಿನಗೊಂದು ಪದದಲ್ಲಿರುವ ಸಂಧಿ -----*

*ಎ) ಜಶ್ತ್ವ ಬಿ) ಅನುನಾಸಿಕ ಡಿ) ಲೋಪ ಡಿ) ಗುಣ*

*೧೦. ಮಹೋನ್ನತ ಪದವು ಈ ಸಂಧಿಗೆ ಉದಾಹರಣೆಯಾಗಿದೆ---*

*ಎ) ಗುಣ ಬಿ) ಲೋಪ ಸಿ) ಸವರ್ಣದೀರ್ಘ ಡಿ) ಅನುನಾಸಿಕ*

*೧೧. ಈ ನಿಜ ಏನನ್ನು ಹೇಳುತ್ತದೆ ಈ ವಾಕ್ಯದಲ್ಲಿರಬೇಕಾದ ಲೇಖನ ಚಿಹ್ನೆ---*

*ಎ) ಆವರಣ ಬಿ) ಪೂರ್ಣವಿರಾಮ ಸಿ) ಭಾವಸೂಚಕ ಡಿ)ಪ್ರಶ್ನಾರ್ಥಕ*

*ಉತ್ತರಗಳು*

*೧. ಎ) ಅಕ್ಕರಾ ೨. ಬಿ) ತತ್ಪುರುಷ ೩. ಬಿ) ಒಂದುಸಲ ೪. ಸಿ) ಆತ್ಮಾರ್ಥಕ*

*೫. ಸಿ) ಆಗಮ ೬. ಸಿ) ಅನ್ವರ್ಥನಾಮ ೭. ಡಿ) ಗಮಕ ೮. ಎ) ಲೋಪ*

*೯. ಸಿ) ಲೋಪ ೧೦. ಎ) ಗುಣ ೧೧. ಡಿ)ಪ್ರಶ್ನಾರ್ಥಕ*

**೨. ಈ ಕೆಳಗಿನ ಪದಗಳ ಗ್ರಾಂಥಿಕ ರೂಪ ಬರೆಯಿರಿ**

**ಕಟ್ತಾ, ಏನ್, ಮಾಡ್ತಾ,ಇದ್ದೀವಿ,ಉಂಟಾ, ಒಂದ್ಸಲ, ನಿಲ್ಸಿ,ಕೆಲ್ಸ, ಹೇಳ್ತಾನೆ,ನನ್,**

**ಉತ್ತರಗಳು**

**ಕಟ್ಟುತ್ತಾ, ಏನು, ಮಾಡುತ್ತಾ, ಇದ್ದೇವೆ,ಇದೆಯಾ? ,ಒಂದುಸಲ, ನಿಲ್ಲಿಸಿ, ಕೆಲಸ, ಹೇಳುತ್ತಾನೆ,ನನ್ನ,**

**ಮೊದಲಿನ ಎರಡು ಪದಗಳ ಸಂಬಂಧದಂತೆ ಮೂರನೆಯ ಪದಕ್ಕೆ ಸಂಬಂಧಿಸಿದ ಪದವನ್ನು ಬರೆಯಿರಿ.**

**೧.ಮಹೋನ್ನತ : ಗುಣ ಸಂಧಿ : :ಧರ್ಮವನ್ನು:----**

**೨.ಗುಡಿಕಟ್ಟಲು : ಕ್ರಿಯಾ ಸಮಾಸ: : ಗ್ರಾಮದೇವತೆ : ---**

**೩.ದುಃಖ ದುಮ್ಮಾನ : ಜೋಡುನುಡಿ : :ಗಳಿಗೆ ಗಳಿಗೆ :---**

**೪.ಕಾಲವಶ: ತತ್ಪುರುಷ ಸಮಾಸ : :ಆ ಗುಡಿ : ___**

**GOVT HIGH SCHOL BEGUR BANGALURU -68**

೫.ವಶ : ವಸ : :ವಿಜ್ಞಾನ : –

೬.ವರ್ಷ : ವರುಸ : :ಅಕ್ಷರ : ----

೭.ಕಾರಣ್ಯವನ್ನು: ಆಗಮಸಂಧಿ : : ನಮ್ಮೊಳಗೆ :

೮.ತಿಳಿಯದು : ನಿಷೇಧಾರ್ಥಕ : : ತಿಳಿಯಲಿ : ----

೯.ಆ ದೇವತೆ : ಗಮಕ ಸಮಾಸ : : ಗುಡಿಮನೆ : —-

೧೦.ಎದೆ : ಎರ್ದೆ(ಹೃದಯ ) : : ಭೂಮಿ : –-----

೧೧.ಗ್ರಾಮ :ಗಾವ : :ಕಥಾ: –---

*೧೨.ಕಟ್ತಾ: ಕಟ್ಟುತ್ತಾ: : ನಿಲ್ಸಿ:*

*೧೩.ನನ್: ನನ್ನ: : ಏನ್:* ___

*೧೪.ಮನದೊಳಗೆ: ಲೋಪ ಸಂಧಿ: : ಗುಡಿಯಲ್ಲಿ:* -----

*೧೫.ಗುಡಿಕಟ್ಟಲು: ಕ್ರಿಯಾ ಸಮಾಸ: : ಆ ಜನರು:* ---

*೧೬..ಮೈಸೂರಿಗೆ: ಚತುರ್ಥಿ: : ಕೊಠಡಿಯಲ್ಲಿ:* ---

*೧೭.ಗಳಿಗೆ ಗಳಿಗೆ: ದ್ವಿರುಕ್ತಿ: : ದುಃಖದುಮ್ಮಾನ:* ---

*೧೮.ಭೂಮಿ: ಬುವಿ: : ಗ್ರಾಮ:* ---

*೧೯.ಅರಿವಿಲ್ಲದೆ: ಲೋಪಸಂಧಿ: : ಸತ್ಯವನ್ನು:* __

*೨೦.ಕಾರುಣ್ಯವನ್ನು: ಆಗಮಸಂಧಿ: : ನಮ್ಮೊಳಗೆ:* ___

*೨೧.ಬುದ್ಧನನ್ನು: ದ್ವಿತೀಯಾ ವಿಭಕ್ತಿ: : ಅಂಬೇಡ್ಕರರ:*___

*೨೨.ಹೇಳಲಿ: ವಿಧ್ಯರ್ಥಕ: : ಹೇಳಿಯಾರು:* ___-

*೨೩.ಒಡಮೂಡುತ್ತದೆ: ವರ್ತಮಾನ: : ಒಡಮೂಡುವುದು:* ----

*ಉತ್ತರಗಳು*

೧.ಆಗಮ ಸಂಧಿ ೨.ತತ್ಪುರುಷ ಸಮಾಸ ೩.ದ್ವಿರುಕ್ತಿ ೪.ಗಮಕ ಸಮಾಸ ೫.ಬಿನ್ನಾಣ
೬.ಅಕ್ಕರ ೭.ಲೋಪಸಂಧಿ ೮.ವಿಧ್ಯರ್ಥಕ ೯. ೧೦. ಬುವಿ ೧೧.ಕತೆ ೧೨.ನಿಲ್ಲಿಸಿ
೧೩.ಏನು ೧೪.ಆಗಮಸಂಧಿ ೧೫.ಗಮಕ ಸಮಾಸ ೧೬.ಸಪ್ತಮಿ ೧೭.ಜೋಡುನುಡಿ
೧೮.ಗಾವ ೧೯. ಆಗಮ ೨೦.ಲೋಪಸಂಧಿ ೨೧.ಷಷ್ಠಿ ೨೨.ಸಂಭಾವನಾರ್ಥಕ

mamatabhagwat1@gmail.com

*೨೩. ಭವಿಷ್ಯತ್*

## ಗದ್ಯಪಾಠ -ವೃಕ್ಷಸಾಕ್ಷಿ

- ದುರ್ಗಸಿಂಹ

### ಲೇಖಕರ ಪರಿಚಯ :

ಗದಗ ಜಿಲ್ಲೆ ರೋಣ ತಾಲೂಕಿನ ಕಿಸುಕಾಡು ನಾಡಿನ ಸಯ್ಯುಡಿ ಯಲ್ಲಿ ಜನಿಸಿದ ದುರ್ಗಸಿಂಹನ ಕಾಲ ಸುಮಾರು ಕ್ರಿ.ಶ. ೧೦೩೧ .ಗುಣಾಢ್ಯನಿಂದ ಪೈಶಾಚಿ ಭಾಷೆಯಲ್ಲಿ ರಚಿತವಾದ ಬೃಹತ್ಕಥೆ ವಸುಭಾಗಭಟ್ಟನ ಸಂಸ್ಕೃತ ಪಂಚತಂತ್ರ ಕ್ಕೆ ಆಕರವಾಗಿದ್ದು ಅದೇ ಕೃತಿಯನ್ನಾಧರಿಸಿ ದುರ್ಗಸಿಂಹನು

ಕನ್ನಡದಲ್ಲಿ ಪಂಚತಂತ್ರ ಎಂಬ ಚಂಪೂಕಾವ್ಯವನ್ನು ರಚಿಸಿದ್ದಾನೆ. ವೃಕ್ಷಸಾಕ್ಷಿ ಗದ್ಯ ಭಾಗವನ್ನು ಕರ್ನಾಟಕ ಪಂಚತಂತ್ರ ಕೃತಿಯಿಂದಲೇ ಆರಿಸಲಾಗಿದೆ.

ಗದ್ಯದ ಹೊಸಗನ್ನಡ ರೂಪ

ಮಧುರಾನಗರದಲ್ಲಿದ್ದ ಧರ್ಮಬುದ್ಧಿ ಮತ್ತು ದುಷ್ಟಬುದ್ಧಿ ಎಂಬ ಇಬ್ಬರು ವ್ಯಾಪಾರಿಗಳ ಮಕ್ಕಳು ಒಟ್ಟಿಗೆ ವ್ಯಾಪಾರಕ್ಕಾಗಿ ಹೋಗಿ ಬಹಳಷ್ಟು ಸಂಪತ್ತು (ಹೊನ್ನು) ಪಡೆದು ಹಿಂದಿರುಗಿ ಪುನಃ ತಮ್ಮ ಹುಟ್ಟೂರಾದ ಮಧುರಾಪುರದ ಹೊರವಲಯದ ಹೂದೋಟದಲ್ಲಿ ಬೀಡು ಬಿಟ್ಟರು.ಅರ್ಧರಾತ್ರಿಯಾದಾಗ ಧರ್ಮಬುದ್ಧಿಯು ದುರ್ಬುದ್ಧಿಯವನಾದ ದುಷ್ಟಬುದ್ಧಿಯನ್ನು ಕರೆದು ಗಳಿಸಿರುವ ಹೊನ್ನನ್ನು ಪಾಲು ಮಾಡಿಕೊಳ್ಳೋಣ ಎನ್ನಲು ದುಷ್ಟಬುದ್ಧಿಯು ಪಾಪಬುದ್ಧಿಯನ್ನು ಹೊಂದಿದವನಾಗಿ ಹೀಗೆಂದನು. ನಾವು ಈ ಹೊನ್ನನ್ನು ಹಂಚಿಕೊಂಡು ಮನೆಯಲ್ಲಿ ಸ್ವೇಚ್ಛೆಯಿಂದ ಇರುವವರು ಅಲ್ಲ.ಮತ್ತೆ ವ್ಯಾಪಾರಕ್ಕೆ ಹೋಗಬೇಕು.ಆದ ಕಾರಣದಿಂದ ನಿನಗೂ ನನಗೂ ವೆಚ್ಚಕ್ಕೆ ಬೇಕಾಗುವಷ್ಟು ಹೊನ್ನನ್ನು ತೆಗೆದುಕೊಂಡು ಉಳಿದ ಹೊನ್ನೆಲ್ಲವನ್ನು ಇಲ್ಲಿಯೇ ಇಡೋಣ ಎಂದನು.ಧರ್ಮಬುದ್ಧಿಯು ಆ ಪಾಪಕರ್ಮನನ್ನು ತನ್ನ

ಗೆಳೆಯನೇ (ತನ್ನ ಹಾಗೆ) ಎಂದು ಬಗೆದು ಅವನ ಮಾತಿಗೆ ಒಪ್ಪಿಕೊಂಡು ಒಂದು ದೊಡ್ಡ ಆಲದ ಮರದ ಬಳಿಯಲ್ಲಿ ಹೊನ್ನನ್ನು ಹೂಳಿ ಮರುದಿನ ಇಬ್ಬರೂ ನಗರಕ್ಕೆ ಹೋಗಿ ಇಷ್ಟ ವಿಷಯ ಸುಖಗಳನ್ನು ಅನುಭವಿಸುತಿದ್ದರು.ದುಷ್ಟಬುದ್ಧಿಯು ಧರ್ಮಬುದ್ಧಿಯನ್ನು ವಂಚಿಸಿ(ಅವನಿಗೆ ಗೊತ್ತಾಗದಂತೆ ) ಹೊನ್ನನ್ನು ಹೂತಿಟ್ಟ ಆಲದಮರದ ಬಳಿ ಹೋಗಿ ಅಲ್ಲಿದ್ದ ಹೊನ್ನೆಲ್ಲವನ್ನೂ ತೆಗೆದುಕೊಂಡು ಹೊಂಡವನ್ನು ಮೊದಲಿನಂತೆ ಮುಚ್ಚಿ ಕೆಲವು ದಿನಗಳು ಕಳೆದ ಮೇಲೆ ತಾನೇ ಧರ್ಮಬುದ್ಧಿಯಲ್ಲಿಗೆ ಬಂದು ತನ್ನ ಬಳಿ ವೆಚ್ಚಕ್ಕೆ ಹೊನ್ನಿಲ್ಲ ಆದ್ದರಿಂದ ಮತ್ತಷ್ಟು ಸ್ವಲ್ಪ ಹೊನ್ನನ್ನು ತೆಗೆದುಕೊಂಡು ಬರೋಣವೆಂದು ಅವನನ್ನೂ ಕರೆದುಕೊಂಡು ಹೋಗಿ ಹೊನ್ನನ್ನು ಹೂತಿಟ್ಟ ಸ್ಥಳವನ್ನು ಅಗೆದಾಗ ಅಲ್ಲಿ ಹೊನ್ನನ್ನು ಕಾಣದೆ ಇನ್ನು ಹೇಳದಿದ್ದರೆ ಸುಳ್ಳು ತನ್ನ ಮೇಲೆ ಬರುವುದೆಂದು ಹೊನ್ನನೆಲ್ಲವನ್ನೂ ನೀನೆ ತೆಗೆದುಕೊಂಡೆಯೆಂದು

ಅತಿ ಕುಟಿಲ ಮನಸ್ಸಿನವನಾದ ದುಷ್ಟಬುದ್ಧಿಯು ಧನದ ಮೇಲಿನ ವ್ಯಾಮೋಹ (ಲೋಭ)ತನದಿಂದ ಮತಿಗೆಟ್ಟವನಾಗಿ ಕಳ್ಳನಿಗೆ ಸುಳ್ಳೇ ತನ್ನ ಶಕ್ತಿ (ತಸ್ಕರಸ್ಯಾನೃತಂ ಬಲಂ) ಎಂಬ ವಾಕ್ಯವನ್ನು ನೆನೆಯುತ್ತ ಸುಳ್ಳನ್ನು ಹೇಳಿದನು(ಕಳ್ಳನಿಗೆ ಸುಳ್ಳೇ ಪ್ರಧಾನ)

ಹಾಗೆ ದುಷ್ಟಬುದ್ಧಿಯು ಮೊದಲೇ ಹಾ!ಹಾ! ಎಂದು ಕೆಟ್ಟೆನೆಂದು ಬಾಯನ್ನೂ ಹೊಟ್ಟೆಯನ್ನೂ ಹೊಡೆದುಕೊಳ್ಳುತ್ತ ಕೂಗುತ್ತ (ಬೊಬ್ಬೆ ಹಾಕುತ್ತ) ಕಳವಳಗೊಂಡವನಂತೆ ರಕ್ಷಣೆಯಿಲ್ಲವೆಂದು ನುಡಿಯಲು ,ಸ್ನೇಹ ನಾಶವಾಯಿತಲ್ಲಾ ಎಂದು ಜರಿಯುತ್ತ ನೀನೆ ಕದ್ದವನೆಂದು ಆರೋಪಿಸುತ್ತ , ವಿಚಾರ ಮಾಡೋಣವೆಂದು ಧರ್ಮಾಧಿಕರಣರಲ್ಲಿಗೆ ಬಂದುಇಬ್ಬರೂ ಆ ವಿಚಾರವನ್ನೆಲ್ಲ ಸವಿಸ್ತಾರವಾಗಿ ಹೇಳಲು ಕೊನೆಯಲ್ಲಿ ದುಷ್ಟಬುದ್ಧಿಯು ಹೀಗೆ ಹೇಳಿದನು.ಹೊನ್ನೆಲ್ಲವನ್ನೂ ಈತನೆ ತೆಗೆದುಕೊಂಡನೆಂಬುದಕ್ಕೆ ಸಾಕ್ಷಿಯಿದೆ ಎನ್ನಲು ಸಭಾಸದರು ಸಾಕ್ಷಿಯನ್ನು ಹೇಳು ಎಂದಾಗ ದುಷ್ಟಬುದ್ಧಿಯು ಹೊನ್ನನ್ನು ಇಡುವಾಗ ಇವನು ಮತ್ತು ತಾನಲ್ಲದೆ ಅಲ್ಲಿ ಇನ್ನು ಯಾರೂ ಮನುಷ್ಯರಿರಲಿಲ್ಲ.ಆದರೆ ಆ ಸಂದರ್ಭದಲ್ಲಿ ಅಲ್ಲಿದ್ದ ವಟವೃಕ್ಷವೇ ಸಾಕ್ಷಿ ಎಂದನು.ಅದನ್ನು ಕೇಳಿ ಧರ್ಮಾಧಿಕರಣರು ವಿಸ್ಮಯಗೊಂಡರು.ಇವನ ಮಾತು ಹಿಂದೆಂದೂ ಕೇಳದ ವಿಚಾರ.ಈ ಆಶ್ಚರ್ಯವನ್ನು ನೋಡೋಣವೆಂದು ಧರ್ಮಬುದ್ಧಿಯನ್ನು ಕರೆದು ನೀನು ಈ ಸಾಕ್ಷಿಯನ್ನು ಒಪ್ಪಿಕೊಳ್ಳುವುದು ಎಂದಾಗ ಅವನು ವೃಕ್ಷಸಾಕ್ಷಿಯೆಂದು ಈ ಮೊದಲು ಹೇಳಿದವರಾಗಲೀ ಕೇಳಿದವರಾಗಲೀ ಇಲ್ಲ ಎಂದಾಗ

ವಚನ || ಮನುಷ್ಯರ ಸುಕೃತ್ಯ ಮತ್ತು ದುಷ್ಕೃತ್ಯಗಳನ್ನು ದೈವಗಳು ತಿಳಿಯುವವು.ಆದುದರಿಂದ ಈ

ಸಾಕ್ಷಿಯು ಉಚಿತವಾದುದು.ಮರವನ್ನು ಮಾತಾಡಿಸುವುದು ಪರಮಗಹನವಾದ ವಿಚಾರ.ಆದ್ದರಿಂದ ಈ ಸಾಕ್ಷಿಯನ್ನು ಅಂಗೀಕರಿಸುವುದು. ಎಂದು ಧರ್ಮಾಧಿಕರಣರು ಹೇಳಲು ಧರ್ಮಬುದ್ಧಿಯು ತುಂಬಾ ಆಲೋಚಿಸಿ ಒಪ್ಪಿಕೊಂಡನು.ಆಗ ಧರ್ಮಾಧಿಕರಣರು ಇಂದು ಹೊತ್ತು ಹೋಯಿತು (ಸಂಜೆಯಾಯಿತು)ನಾಳೆ ಹೋಗಿ ಕೇಳೋಣ ವೆಂದು ಹೇಳಲು ಎಲ್ಲರೂ ತಮ್ಮ ತಮ್ಮ ಮನೆಗೆ ಹೋದರು. ಅಷ್ಟರಲ್ಲಿ ದುಷ್ಟಬುದ್ಧಿಯು ತನ್ನ ಮನೆಗೆ ಬಂದು ತನ್ನ ತಂದೆಯ ಕೈಯನ್ನು ಹಿಡಿದು ಯಾರೂ ಇಲ್ಲದಂತಹ ಸ್ಥಳಕ್ಕೆ ಕರೆತಂದು ನಡೆದ ವೃತ್ತಾಂತವೆಲ್ಲವನ್ನೂ ವಿವರಿಸಿ ಹೇಳಿ ನಿಮ್ಮ ಒಂದು ಮಾತಿನಿಂದ ನಮ್ಮ ಕಷ್ಟಗಳೆಲ್ಲ ದೂರವಾಗಿ ಹಲವು ಕಾಲದವರೆಗೆ ಹಸಿಯದೆ ಉಂಡು ಬಾಳುವಷ್ಟು ಹಣವು ಬರುವುದು .ನೀವು ಆ ಮರದ ಪೊಟರೆಯಲ್ಲಿ ಅಡಗಿದ್ದು ಧರ್ಮಬುದ್ಧಿಯೇ ಹೊನ್ನೆಲ್ಲವನ್ನೂ ತೆಗೆದುಕೊಂಡನೆಂದು ನುಡಿಯಿರಿ ಎಂದನು ಆತನು ಹೀಗೆಂದನು.

ಪರಧನಹರಣವೂ,ವಿಶ್ವಾಸಘಾತಕವೂ, ಸ್ವಾಮಿದ್ರೋಹವೂ ಇವೆಲ್ಲವೂ ಹೇಗೆಂದರೂ ಕೆಡುಕನ್ನು ಉಂಟು ಮಾಡುವುವು.ಇವೆಲ್ಲವನ್ನೂ ನೀನು ತಿಳಿದೂ ಕೂಡ ನನ್ನನ್ನು ಸಾಕ್ಷಿ ಮಾಡಿ, ನುಡಿಸಿ ಕೆಡಿಸಲು ಆಲೋಚಿಸಿದೆ.ನಿನ್ನ ಕ್ಷುಲ್ಲಕ (ಕೀಳು) ಆಲೋಚನೆಯು ನಮ್ಮ ಕುಲವನ್ನೇ ನಾಶ ಮಾಡುವ ರೀತಿಯದು.ಎನ್ನಲು ದುಷ್ಟಬುದ್ಧಿಯು ಅದನ್ನು ಕೇಳಿ ನಮ್ಮ ಕಾರ್ಯವನ್ನು ಕೆಡಿಸದೆ ನಾನು ಹೇಳಿದಂತೆ ಮಾಡು ಎಂದು ತನ್ನ ತಂದೆಯನ್ನು ಒಪ್ಪಿಸುವಷ್ಟರಲ್ಲಿಯೇ ಸಂಜೆಯಾಯಿತು.

ಆಕಾಶವನ್ನು ಆವರಿಸಿ ದಿಕ್ಕುಗಳನ್ನು ಮುಚ್ಚಿ ದೃಷ್ಟಿಯನ್ನು ತಡೆದು ಹೊಗೆ ತುಂಬಿ, ಮಳೆಗಾಲದ ಮೋಡ ,ಕಾಡಿಗೆಯ ರಾಶಿ ,ಕೋಗಿಲೆ ,ವಿಷ್ಣುವಿನ ಕಾಯ ಕಾಂತಿ,ಶಿವನ ಕುತ್ತಿಗೆಯ ಬಣ್ಣದ ಕತ್ತಲೆ ಕ್ರಮೇಣ ಹಬ್ಬಿತು.

ಆ ರೀತಿಯಾಗಿ ಕವಿದ ಕತ್ತಲೆಯಲ್ಲಿ ಕೊಲ್ಲದೆ ಬಿಡೆನೆಂದು ಕರೆದುಕೊಂಡು ಹೋಗುವಂತೆ ಕರೆದೊಯ್ದು ಮಾರಿಯ ಮನೆಗೆ ಹರಕೆಯ ಕುರಿಯನ್ನು ಕರೆದೊಯ್ಯುವಂತೆ ಆಲದ ಮರದ ಪೊಟರೆಯಲ್ಲಿ ತನ್ನ ತಂದೆಯನ್ನು ಹೊಗಿಸಿ ವ್ಯಾಜ್ಯವನ್ನು ಗೆದ್ದೆನೆಂದು ಖುಷಿಪಟ್ಟು ಮನೆಗೆ ಬಂದು ನಿದ್ರೆ ಮಾಡಿದನು.

ಬೆಳಗಾಗಲು ಧರ್ಮಬುದ್ಧಿಯು ದೇವ, ಗುರು,ದ್ವಿಜ ಪೂಜೆಗಳನ್ನು ಮಾಡುತ್ತ ಕಳೆಯುತ್ತಿರಲು, ದುಷ್ಟಬುದ್ಧಿಯು ಮುಖವನ್ನು ತೊಳೆಯದೆ ಬಂದು ಧರ್ಮಾಧಿಕರಣರಿಗೆ ಹೀಗೆ ಹೇಳಿದನು. ಪ್ರತ್ಯರ್ಥಿ ಬಂದಿಲ್ಲ, ಬಹಳ ಹೊತ್ತಾಯಿತು.ನಾನೇನು ಮಾಡಬೇಕು ಎಂದು ಕೇಳುತ್ತಿರಲು ಅಷ್ಟರಲ್ಲಿ ಧರ್ಮಬುದ್ಧಿಯು ಬರುತ್ತಿರುವುದನ್ನು ಕಂಡು ಆ ಕೂಡಲೇ ನಡೆಯಿರಿ ನಿಮ್ಮಿಬ್ಬರ ಜಗಳವನ್ನು

ತೀರಮಾನಿಸುವೆವು ಎಂದು ಆಲದ ಮರದ ಸಮೀಪಕ್ಕೆಬಂದು ಅಷ್ಟವಿಧಾರ್ಚನೆಯಿಂದ ಮರವನ್ನು ಅರ್ಚಿಸಿ ಅನಂತರ ಅವರಿಬ್ಬರನ್ನೂವಿಚಾರಿಸಿ ಆ ಮರವನ್ನುಕುರಿತು ಹೀಗೆಂದರು.ನೀನಾದರೋ ಯಕ್ಷಾದಿ ದಿವ್ಯ ದೇವತಾವಾಸವೂ ಆದ ವೃಕ್ಷವಾಗಿರುವೆ.

ಆದರಿಂದ ನಿನ್ನ ಸಾಕ್ಷಿ ಮಾಡಿ ಕೇಳುವೆವು.ನೀನು ನಿಜವನ್ನೇ ನುಡಿಯೆಂದು ಧರ್ಮಾಧಿಕರಣರು ಧರ್ಮದ ವಿಚಾರಗಳನ್ನುಕುರಿತು ಹೇಳಿದಾಗ ಮರದ ಪೊಟರೆಯಲ್ಲಿ ಅಡಗಿ ಕುಳಿತಿದ್ದ ದುಷ್ಟಬುದ್ಧಿಯ ತಂದೆಪ್ರೇಮಮತಿ ಮತಿಗೆಟ್ಟುಧರ್ಮಗತಿಯನ್ನುಬಿಟ್ಟು'ಪ್ರಕೃತಿ ವಿಕೃತಿಯಾದ ಮನುಷ್ಯನ ಆಯುಷ್ಯ ಕು ಕುಂದುವುದು. ಎಂದು ಹೇಳುವಂತೆ ಧರ್ಮಬುದ್ಧಿಯೇ ಧನವನ್ನುತೆಗೆದುಕೊಂಡಿರುವನು ಎಂದು ಹೇಳಿದನು.ನೆರೆದವರೂ ಧರ್ಮಾಧಿಕರಣರೂ ಇದನ್ನುಕೇಳಿ ಆಶ್ಚರ್ಯಪಟ್ಟರು.ಧರ್ಮಬುದ್ಧಿಯೂ ಕೂಡ ಆಶ್ಚರ್ಯಚಕಿತನಾಗಿ ಇದು ದೈವವಲ್ಲ. ಆಗಿದ್ದರೆ ಸತ್ಯವನ್ನೇಕೆ ನುಡಿಯದು ?ಇದೇನಾದರೊಂದು ಕೃತ್ರಿಮವಾಗಿರಬೇಕು. ಎಂದು ಆ ಮರವನ್ನು ಒಂದು ಸುತ್ತು ಹಾಕಿ ನೋಡಿ ಅಲ್ಲೊಂದು ದೊಡ್ಡ ಪೊಟರೆಯೂ ಹಾಗೂ ಅಲ್ಲಿ ಮನುಷ್ಯ ಸಂಚಾರವಾದ ಕುರುಹು ಇದುದ್ದನ್ನುನೋಡಿ ಧರ್ಮಾಧಿಕರಣರಿಗೆ ಹೀಗೆ ಹೇಳಿದನು.ಸುಳ್ಳುಹೇಳದ (ಹುಸಿಯದ ) ವ್ಯಾಪಾರಿಯೇ ಇಲ್ಲ.ನಾನು ವ್ಯಾಪಾರಿಯಾದುದರಿಂದ ನನ್ನ ವೃತ್ತಿಧರ್ಮಕ್ಕನುಗುಣವಾಗಿ ಧರ್ಮಬುದ್ಧಿ ಅಧರ್ಮಬುದ್ಧಿಯಾಗಿ ಧನವನ್ನುವಂಚಿಸಿ ನನ್ನ ಮನೆಗೆ ತೆಗೆದುಕೊಂಡು ಹೋಗಬೇಕೆನ್ನುವಷ್ಟರಲ್ಲಿ ಸೂರ್ಯನು ಮೂಡಿ ಬೆಳಗಾಯಿತು.ಆದ್ದರಿಂದ ತೆಗೆದುಕೊಂಡು ಹೋಗಲು ಸಾಧ್ಯವಾಗದೆ ಮರದ ಪೊಟರೆಯಲ್ಲಿಟ್ಟುಬಂದೆನು.ಮರುದಿವಸವಹೋಗಿ ನೋಡುವಷ್ಟರಲ್ಲಿ ಆ ಹೊನ್ನನ್ನುಒಂದು ಸರ್ಪವು ಸುತ್ತಿಕೊಂಡು ಮಲಗಿತ್ತು ಆದ್ದರಿಂದ ಹೊನ್ನನ್ನುತೆಗೆದುಕೊಂಡು ಹೋಗಲು ಅಂಜಿದೆನು.ನೀವೆಲ್ಲ ಇಲ್ಲಿಯೇ ಇದ್ದುನೋಡುತ್ತಿರಿ.ಪೊಟರೆಯೊಳಗೆ ಹೊಗೆಯನ್ನುಹಾಕಿ ಹಾವನ್ನುಹೊರಹೋಗುವಂತೆ ಮಾಡಿ ಕದ್ದ ಒಡವೆಯನ್ನುಕೊಡುವೆನು. ಎಂದು ಧರ್ಮಬುದ್ಧಿಯು ಹುಲ್ಲುಕಟ್ಟೆಗೆಯನ್ನುತರಿಸಿ ಅದನ್ನುಪೊಟರೆಯಲ್ಲಿ ತುಂಬಿ ದುಷ್ಟಬುದ್ಧಿಯ ಮನೆಗೆ ಬೆಂಕಿ ಹಾಕುವಂತೆ ಬೆಂಕಿ ಹಾಕಲು ಹೊಗೆ ಸುತ್ತಿ ಬೆಂಕಿ ಉರಿಯತೊಡಗಲು ಒಳಗಿದ್ದ ಪ್ರೇಮಮತಿ (ದುಷ್ಟಬುದ್ಧಿಯ ತಂದೆ)ಧೈರ್ಯಗೆಟ್ಟು,ಕೂಗುತ್ತ (ಬೊಬ್ಬೆಹಾಕುತ್ತ)ಪೊಟರೆಯೊಳಗಿನಿಂದ ಹೊರಳಿ ಉರುಳಿ ಕಂಠಗತಪ್ರಾಣನಾದನು.ಅದನ್ನು ನೋಡಿದ ಧರ್ಮಾಧಿಕರಣರು ಇವನು ದುಷ್ಟಬುದ್ಧಿಯ ತಂದೆಯೆಂಬುದರಲ್ಲಿ ಸಂಶಯವಿಲ್ಲ.ಎಂದು ಅರಿತು ಈ ಪಾಪಕರ್ಮನಾಗಿರುವ ದುಷ್ಟಪುತ್ರನಿಂದ ನಿನಗೆ ಇಂತ ದುರ್ಮರಣ ಸಂಭವಿಸಿತು ಎಂದರು.

ಪ್ರಶ್ನೋತ್ತರಗಳು

## ಒಂದೊಂದು ವಾಕ್ಯದಲ್ಲಿ ಉತ್ತರಿಸಿ.

೧.'ವೃಕ್ಷಸಾಕ್ಷಿ ಕತೆಯನ್ನು ಯಾವ ಕೃತಿಯಿಂದ ಆರಿಸಲಾಗಿದೆ?

ವೃಕ್ಷಸಾಕ್ಷಿ ಕತೆಯನ್ನು ದುರ್ಗಸಿಂಹ ಕವಿ ಯು ರಚಿಸಿದ ಕರ್ನಾಟಕ ಪಂಚತಂತ್ರಂ ಎಂಬ ಕೃತಿಯಿಂದ ಆರಿಸಲಾಗಿದೆ

೨.ದುಷ್ಟಬುದ್ಧಿಯು ಧರ್ಮಬುದ್ಧಿಯ ಮೇಲೆ ಯಾವ ಆರೋಪವನ್ನು ಹೊರಿಸಿದನು ?

ದುಷ್ಟಬುದ್ಧಿಯು ಧರ್ಮಬುದ್ಧಿಯ ಮೇಲೆ ಸಂಪತ್ತಿನ ಕಳ್ಳತನದ ಆರೋಪವನ್ನು ಹೊರಿಸಿದನು.

೩.ಧರ್ಮಾಧಿಕರಣರು ಏಕೆ ವಿಸ್ಮಯ ಹೊಂದಿದರು ?

ಹೊನ್ನನ್ನು ಹೂತಿಟ್ಟ ಸ್ಥಳದಲ್ಲಿ ಮತ್ತು ಆ ಸಂದರ್ಭದಲ್ಲಿ ಧರ್ಮಬುದ್ಧಿ ಮತ್ತು ತನ್ನನ್ನು ಹೊರತುಪಡಿಸಿ ಮನುಷ್ಯರಾರೂ ಇರಲಿಲ್ಲ.ಆದ್ದರಿಂದ ಕದ್ದವರಾರು ಎಂದು ಅಲ್ಲಿದ್ದ ಆಲದ ಮರವೊಂದೇ ಹೇಳಲು ಸಾಧ್ಯ ಎಂದು ದುಷ್ಟಬುದ್ಧಿಯು ಹೇಳಿದಾಗ ಧರ್ಮಾಧಿಕರಣರು ವಿಸ್ಮಯ ಹೊಂದಿದರು.

೪.ಧರ್ಮಬುದ್ಧಿಯು ತನ್ನ ಬೆಳಗಿನ ಹೊತ್ತನ್ನು ಹೇಗೆ ಕಳೆದನು ?

ಧರ್ಮಬುದ್ಧಿಯು ತನ್ನ ಬೆಳಗಿನ ಹೊತ್ತನ್ನು ದೇವ,ಗುರು , ಬ್ರಾಹ್ಮಣರ ಪೂಜೆಗಳನ್ನು ಮಾಡುತ್ತ ಕಳೆದನು.

೫.ಧರ್ಮಾಧಿಕರಣರು ವಟವೃಕ್ಷದ ಸಮೀಪಕ್ಕೆ ಏಕೆ ಬಂದರು ?

ಹೊನ್ನನ್ನು ಕದ್ದವರಾರು ಎಂದು ಸಾಕ್ಷ್ಯ ಕೇಳಲು ಧರ್ಮಾಧಿಕರಣರು ವಟ ವೃಕ್ಷದ ಸಮೀಪಕ್ಕೆ ಬಂದರು.

## ಮೂರು ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿ.

೧. ಧರ್ಮಬುದ್ಧಿಗೆ ದುಷ್ಟಬುದ್ಧಿಯು ಯಾವ ಸಲಹೆಯನ್ನಿತ್ತನು ?

ಧರ್ಮಬುದ್ಧಿ ಮತ್ತು ದುಷ್ಟಬುದ್ಧಿಗಳಿಬ್ಬರೂ ವ್ಯಾಪಾರಕ್ಕೆ ಹೋಗಿ ಸಾಕಷ್ಟು ಹಣ ಸಂಪತ್ತು ಸಂಪಾದಿಸಿಕೊಂಡು ತಮ್ಮ ಜನ್ಮಭೂಮಿಗೆ ಮರಳಿ ಹೊರಉದ್ಯಾನವನದಲ್ಲಿದ್ದ ಸಂದರ್ಭದಲ್ಲಿ ಅದನ್ನು ಇಬ್ಬರೂ ಸಮ ಪಾಲು ಮಾಡಿಕೊಳ್ಳೋಣ ಎಂದು ಧರ್ಮಬುದ್ಧಿಯು ಹೇಳಿದಾಗ ಪಾಪಬುದ್ಧಿಯಿಂದ ಕೂಡಿದವನಾದ ದುಷ್ಟಬುದ್ಧಿಯು ನಾವು ಇಷ್ಟು ಹೊನ್ನನ್ನು ಮನೆಯಲ್ಲಿಟ್ಟು ಸ್ವೇಚ್ಛೆಯಿಂದ ಬಾಳಲು ಸಾಧ್ಯವಿಲ್ಲ ಮತ್ತೆ ವ್ಯಾಪಾರಕ್ಕೆ ಬೇರೆ ಊರಿಗೆ ಹೋಗಬೇಕಾದ್ದರಿಂದ ನಮ್ಮಿಬ್ಬರಿಗೂ ವೆಚ್ಚಮಾಡಲು ಎಷ್ಟು ಬೇಕೋ ಅಷ್ಟು ಹೊನ್ನನ್ನು ತೆಗೆದುಕೊಂಡು ಉಳಿದದ್ದನ್ನು ಇಲ್ಲಿಯೇ ಇಡೋಣ ಎಂದು ಸಲಹೆ ನೀಡಿದನು.

೨. ದುಷ್ಟಬುದ್ಧಿಯು ತನ್ನ ತಂದೆಗೆ ಏಕಾಂತದಲ್ಲಿ ಏನೆಂದು ಹೇಳಿದನು ? ಹೊನ್ನು ಹೇಗೆ ನಾಪತ್ತೆ ಯಾಯಿತು ಎಂಬುದನ್ನು ಅಲ್ಲಿದ್ದ ವಟವೃಕ್ಷವೊಂದೇ ಹೇಳಲು ಸಾಧ್ಯ ಎಂದು ಧರ್ಮಾಧಿಕರಣರು ವೃಕ್ಷ ಸಾಕ್ಷಿಯನ್ನು ಕೇಳುವಂತೆ ಅವರನ್ನು ಒಪ್ಪಿಸುವಲ್ಲಿ ಯಶಸ್ವಿಯಾದ

ದುಷ್ಟಬುದ್ಧಿಯು ತನ್ನ ಮನೆಗೆ ಬಂದು ತನ್ನ ತಂದೆಯ ಕೈಯನ್ನು ಹಿಡಿದು ಯಾರೂ ಇಲ್ಲದಂತಹ ಸ್ಥಳಕ್ಕೆ ಕರೆತಂದು ನಡೆದ ವೃತ್ತಾಂತವೆಲ್ಲವನ್ನೂ ವಿವರಿಸಿ ಹೇಳಿ ನಿಮ್ಮ ಒಂದು ಮಾತಿನಿಂದ ನಮ್ಮ ಕಷ್ಟಗಳೆಲ್ಲ ದೂರವಾಗಿ ಹಲವು ಕಾಲದವರೆಗೆ ಹಸಿಯದೆ ಉಂಡು ಬಾಳುವಷ್ಟು ಹಣವು ಬರುವುದು .ನೀವು ಆ ಮರದ ಪೊಟರೆಯಲ್ಲಿ ಅಡಗಿದ್ದು ಧರ್ಮಬುದ್ಧಿಯೇ ಹೊನ್ನೆಲ್ಲವನ್ನೂ ತೆಗೆದುಕೊಂಡನೆಂದು ನುಡಿಯಿರಿ ಎಂದನು.

೩. ಧರ್ಮಾಧಿಕರಣರು ವಟವೃಕ್ಷಕ್ಕೆ ಏನು ಹೇಳಿದರು ?

ಕಳೆದು ಹೋಗಿರುವ ಸಂಪತ್ತು ಕದ್ದವರಾರು ಎಂದು ತಿಳಿಯಲು ಧರ್ಮಾಧಿಕರಣರು ದುಷ್ಟಬುದ್ಧಿ ಮತ್ತು ಧರ್ಮಬುದ್ಧಿಯರೊಡಗೂಡಿ ಹೊನ್ನನ್ನು ಹೂತಿಟ್ಟ ಆಲದ ಮರದ ಸಮೀಪಕ್ಕೆ ಬಂದು ಅಷ್ಟವಿಧಾರ್ಚನೆಯಿಂದ ಮರವನ್ನು ಅರ್ಚಿಸಿ ಅನಂತರ ಅವರಿಬ್ಬರನ್ನೂ ವಿಚಾರಿಸಿ ಆ ಮರವನ್ನು ಕುರಿತು ನೀನಾದರೋ ಯಕ್ಷಾದಿ ದಿವ್ಯ ದೇವತಾವಾಸವೂ ಆದ ವೃಕ್ಷವಾಗಿರುವೆ. ಅದರಿಂದ ನಿನ್ನ ಸಾಕ್ಷಿ ಮಾಡಿ ಕೇಳುವೆವು.ನೀನು ನಿಜವನ್ನೇ ನುಡಿಯೆಂದು ಹೇಳಿದರು.

<u>ಎಂಟು ಹತ್ತು ವಾಕ್ಯಗಳಲ್ಲಿ ಉತ್ತರಿಸಿ.</u>

೧.ವೃಕ್ಷ ಸಾಕ್ಷಿ ಪಾಠದಲ್ಲಿ ನೀವು ಮೆಚ್ಚುವ ಪಾತ್ರ ಯಾವುದು? ಏಕೆ ?

೨. ದುಷ್ಟಬುದ್ಧಿಯ ತಂತ್ರ ಅವನಿಗೆ ತಿರುಗು ಬಾಣವಾದ ಬಗೆಯನ್ನು ತಿಳಿಸಿ

ಅತಿ ಕುಟಿಲ ಮನಸ್ಸುಳ್ಳವನಾದ ದುಷ್ಟಬುದ್ಧಿಯು ದರ್ಮಬುದ್ಧಿ ಮತ್ತು ತಾನು ಇಬ್ಬರೂ ಸೇರಿಯೇ ಸಂಪಾದಿಸಿದ ಸಂಪತ್ತನ್ನು ಮನೆಗೆ ತೆಗೆದುಕೊಂಡು ಹೋಗಲು ಬಿಡದೇ ಅದನ್ನು ಮರದ ಕೆಳಗೆ ಹೂತಿಡಲು ಧರ್ಮಬುದ್ಧಿಯನ್ನು ಒಪ್ಪಿಸುವಲ್ಲಿ ಯಶಸ್ವಿಯಾಗುತ್ತಾನೆ .ಧರ್ಮಬುದ್ಧಿಗೆ ಗೊತ್ತಾಗದ ಹಾಗೆ ಹೂತಿಟ್ಟಿದ್ದ ಹೊನ್ನನ್ನು ತಾನೇ ತೆಗೆದು ಅದರ ಕಳುವಿನ ಆರೋಪಪವನ್ನು ಧರ್ಮಬುದ್ಧಿಯ ಮೇಲೆ ಹೊರಿಸುತ್ತಾನೆ .ಕೊನೆಗೆ ಇಬ್ಬರೂ ಧರ್ಮಾದಿಕರಣರಲ್ಲಿಗೆ ಬಂದು ವ್ಯಾಜ್ಯ ತೀರ್ಮಾನಿಸುವಂತೆ ಕೇಳಿಕೊಳ್ಳುತ್ತಾರೆ .ನಡೆದುದೆಲ್ಲವನ್ನು ವಿವರಿಸಿ ಧರ್ಮಬುದ್ಧಿಯೆ ಹೊನ್ನನ್ನು ಕದ್ದಿದ್ದಾನೆಂದು ಹೇಳುವ ದುಷ್ಟಬುಧ್ಧಿಯು ಅದಕ್ಕೆ ಅಲ್ಲಿದ್ದ ಮರವೇ ಸಾಕ್ಷಿ ಎನ್ನುವನು.ಮರುದಿನ ಮರದ ಬಳಿ ಸಾಕ್ಷಿ ಕೇಳಲು

ಹೋಗುವುದೆಂದು ತೀರ್ಮಾನವಾದಾಗ ಮನೆಗೆ ಬಂದ ದುಷ್ಟಬುದ್ಧಿಯು ತನ್ನ ತಂದೆಯ ಬಳಿ ಮರದ ಪೊಟರೆಯಲ್ಲಿ ಅವಿತು ಸಾಕ್ಷಿ ನುಡಿಯುವಂತೆ ಒತ್ತಾಯಿಸುತ್ತಾನೆ.ಒಲ್ಲದ ಮನಸ್ಸಿನಿಂದ ಅವನ ತಂದೆಯು ಮಗನ ಮೇಲಿನ ವ್ಯಾಮೋಹಕ್ಕೆ ಕಟ್ಟುಬಿದ್ದು ಮರುದಿನ ಎಲ್ಲರೂ ಬರುವುದಕ್ಕೆ ಮುಂಚೆಯೇ ಮರದ ಪೊಟರೆಯಲ್ಲಿ ಅವಿತು ಕುಳಿತು ಕೊಳ್ಳುವನು .ಧರ್ಮಾಧಿಕರಣರು ಧರ್ಮಬುದ್ಧಿ ಮತ್ತು ಧರ್ಮಬುದ್ಧಿಯರ ನ್ನು ನಿಲ್ಲಿಸಿ ವೃಕ್ಷದ ಸಾಕ್ಷಿ ಕೇಳಿದಾಗ ಪೊಟರೆಯಲ್ಲಿ ಅವಿತಿದ್ದ ದುಷ್ಟಬುದ್ಧಿಯ ತಂದೆಯು ಧರ್ಮಬುದ್ಧಿಯೇ ಹೊನ್ನನ್ನು ಕದ್ದಿರುವನೆಂದಾಗ ಮರವು ಸಾಕ್ಷಿ ನುಡಿಯುವುದೇ ಆದಲ್ಲಿ ಅದು ಸತ್ಯವನ್ನು ಹೇಳದೇ ಏಕೆ ಸುಳ್ಳು ನುಡಿಯುವುದು ಎಂದು ಆಲೋಚಿಸಿದ ಧರ್ಮಬುದ್ಧಿಯು ಮರವನ್ನು ಪ್ರದಕ್ಷಿಣೆ ಹಾಕಿದಾಗ ಅಲ್ಲಿ ಮನಷ್ಯಸಂಚಾರದ ಕುರುಹು ದೊರೆಯುತ್ತದೆ.ಆಗ ಧರ್ಮಬುದ್ಧಿಯು ಉಪಾಯವಾಗಿ ಎಲ್ಲ ವ್ಯಾಪಾರಿಗಳಿಗಿರುವಂತೆ ತನಗೂ ಕೂಡ ಹಣದ ಮೋಹವಿದ್ದುದಾಗಿ ಹೂತಿಟ್ಟ ಹಣವನ್ನು ತೆಗೆಯಲು ಬಂದು ಅದನ್ನು ಮನೆಗೆ ತೆಗೆದುಕೊಂಡು ಹೋಗುವಷ್ಟರಲ್ಲಿ ಬೆಳಗಾಗಿದ್ದರಿಂದ ಪೊಟರೆಯಲ್ಲಿ ಅಡಗಿಸಿಟ್ಟುದಾಗಿಯೂ ಮರುದಿನ ತೆಗೆದುಕೊಂಡು ಹೋಗಲು ಬಂದಾಗ ಅಲ್ಲಿ ದೊಡ್ಡದಾದ ಹಾವು ಇತ್ತೆಂದೂ ಅದನ್ನು ಹಾಗೆ ಅಲ್ಲಿಯೇ ಬಿಟ್ಟು ಹೋಗಿದ್ದುದಾಗಿ ತಿಳಿಸಿ ಕಟ್ಟಿಗೆಯನ್ನು ತರಿಸಿ ಪೊಟರೆಗೆ ಹೊಗೆ ಹಾಕಿಸಿ ಹಾವನ್ನು ಓಡಿಸಿ ಅಡಗಿಸಿಟ್ಟ ಹೊನ್ನನ್ನು ಮರಳಿಸುವಂತೆ ಮಾಡಿದಾಗ ಪೊಟರೆಯಲ್ಲಿ ಅಡಗಿ ಕುಳಿತಿದ್ದ ದುಷ್ಟಬುದ್ಧಿಯು ಬೆಂಕಿಗೆ ಆಹುತಿಯಾಗುತ್ತಾನೆ.ಹೀಗೆ ಅತಿ ಆಸೆಗೆ ಒಳಗಾದ ದುಷ್ಟಬುದ್ದಿಯು ತಾನು ಬೀಸಿದ ಬಲೆಯಲ್ಲಿ ತಾನೇ ಸಿಕ್ಕು ಹೊನ್ನಿನ ಜೊತೆ ತನ್ನ ತಂದೆಯನ್ನೂ ಕಳೆದುಕೊಳ್ಳುತ್ತಾನೆ.

<u>ಸಂದರ್ಭಾನುಸಾರ ಸ್ವಾರಸ್ಯ ಬರೆಯಿರಿ.</u>

೧.''ಪೊನ್ನನೆಲ್ಲಮಂ ನೀನೆ ಕೊಂಡೆ''

ಈ ಮೇಲಿನ ವಾಕ್ಯವನ್ನು ದುರ್ಗಸಿಂಹನು ಬರೆದ ಕರ್ನಾಟಕ ಪಂಚತಂತ್ರ ದಿಂದ ಆರಿಸಲಾದ ವೃಕ್ಷ ಸಾಕ್ಷಿ ಎನ್ನುವ ಗದ್ಯ ಭಾಗದಿಂದ ಆರಿಸಲಾಗಿದೆ.ಈ ಮಾತನ್ನು ದುಷ್ಟಬುದ್ಧಿಯು ಧರ್ಮಬುದ್ಧಿಗೆ ಹೇಳಿದನು.
ಸಂದರ್ಭ: ವ್ಯಾಪಾರದಿಂದ ಬಂದ ಸಂಪತ್ತನ್ನು ಹಂಚಿಕೊಳ್ಳೋಣ ಎಂಬ ಧರ್ಮಬುದ್ಧಿಯ ಸಲಹೆಗೆ ದುಷ್ಟಬುದ್ಧಿಯು ಇಷ್ಟೊಂದು ಹಣವನ್ನು ತೆಗೆದುಕೊಂಡು ಮನೆಯಲ್ಲಿಟ್ಟರೆ ನಮಗೆ ತೊಂದರೆಯಾಗುವುದು.ಆದ್ದರಿಂದ ಖರ್ಚಿಗೆ (ವೆಚ್ಚಕ್ಕೆ) ಬೇಕಾಗುವಷ್ಟು ಮಾತ್ರ ನಮ್ಮ ಬಳಿ ಇಟ್ಟುಕೊಂಡು ಉಳಿದದ್ದನ್ನು ಇಲ್ಲಿಯೇ ಇಡೋಣ ಎಂದನು.ಅದಕ್ಕೆ ಧರ್ಮಬುದ್ಧಿಯೂ ಒಪ್ಪಿಕೊಳ್ಳಲು

ಇಬ್ಬರೂ ಸೇರಿ ಅದನ್ನು ಅಲ್ಲಿಯೇ ಇದ್ದ ಆಲದ ಮರದಕೆಳಗೆ ಹೂತಿಟ್ಟರು.ಕೆಲವು ದಿನಗಳು ಕಳೆದ ಮೇಲೆ ದುಷ್ಟಬುದ್ಧಿಯು ಧರ್ಮಬುದ್ಧಿಗೆ ಗೊತ್ತಾಗದ ಹಾಗೆ ಸಂಪತ್ತನ್ನುಬಚ್ಚಿಟ್ಟ ಸ್ಥಳಕ್ಕೆ ಹೋಗಿ ಸಂಪತ್ತೆಲ್ಲವನ್ನೂ ತೆಗೆದುಕೊಂಡು ಗುಂಡಿಯನ್ನು ಮೊದಲಿನಂತೆಯೇ ಮುಚ್ಚಿಟ್ಟನು. ಮತ್ತೆ ಕೆಲವು ದಿನಗಳು ಕಳೆದ ಮೇಲೆ ತಾನೇ ಧರ್ಮಬುದ್ಧಿಯನ್ನು ಕರೆದು ತನಗೆ ವ್ಯಯಕ್ಕಾಗಿ ಹಣವು ಬೇಕಿತ್ತೆಂದು ಸಂಪತ್ತನ್ನು ಹೂತಿಟ್ಟ ಕಡೆ ಹೋಗಿ ತರೋಣವೆಂದು ಅವನನ್ನು ಕರೆದುಕೊಂಡು ಹೋಗಿ ಅಲ್ಲಿ ಅದು ಇರದಿದ್ದ ರಿಂದ ನೀನೆ ಎಲ್ಲವನ್ನು ತೆಗೆದುಕೊಂಡೆ ಎಂದು ಮತ್ತೆ ಧರ್ಮಬುದ್ಧಿಯ ಮೇಲೆ ಆರೋಪವನ್ನು ಮಾಡುವಾಗ ಮೇಲಿನ ಮಾತು ಬಂದಿದೆ.

ಸ್ವಾರಸ್ಯ : ಹಣವನ್ನು ತಾನೇ ದೋಚಿ ಅದನ್ನು ಮರೆಮಾಚುವ ಉದ್ದೇಶದಿಂದ ದುಷ್ಟಬುದ್ಧಿಯು ಧರ್ಮಬುದ್ಧಿಯ ಮೇಲೆ ಆರೋಪ ಹೊರಿಸಲು ಯತ್ನಿಸುತ್ತಿರುವುದು ಮೇಲಿನ ವಾಕ್ಯದಿಂದ ಕಂಡುಬರುತ್ತದೆ.

೨. ''ಈತನ ಮಾತು ಅಶ್ರುತಪೂರ್ವಮ್''

ಈ ಮೇಲಿನ ವಾಕ್ಯವನ್ನುದುರ್ಗಸಿಂಹನು ಬರೆದ ಕರ್ನಾಟಕ ಪಂಚತಂತ್ರ ದಿಂದ ಆರಿಸಲಾದ ವೃಕ್ಷ ಸಾಕ್ಷಿ ಎನ್ನುವ ಗದ್ಯಭಾಗದಿಂದ ಆರಿಸಲಾಗಿದೆ.ಈ ಮಾತನ್ನು ಧರ್ಮಾಧಿಕರಣರು ಹೇಳಿದರು. ಧರ್ಮಬುದ್ಧಿ ಮತ್ತು ದುಷ್ಟಬುದ್ಧಿಗಳಿಬ್ಬರೂ ವ್ಯಾಪಾರದಿಂದ ತಾವು ಸಂಪಾದಿಸಿದ ಹಣವನ್ನು ದುಷ್ಟಬುದ್ಧಿಯ ಸಲಹೆಯಂತೆ ಖರ್ಚಿಗೆ ಬೇಕಾದಷ್ಟು ಹಣವನ್ನು ಮಾತ್ರ ತಮ್ಮ ಬಳಿ ಇರಿಸಿಕೊಂಡು ಉಳಿದದ್ದನ್ನು ಒಂದು ಆಲದ ವೃಕ್ಷದ ಬಳಿ ಹೂತಿಟ್ಟರು.ಪಾಪಬುದ್ಧಿಯಿಂದ ಕೂಡಿದ ದುಷ್ಟಬುದ್ಧಿಯು ಧರ್ಮಬುದ್ಧಿಗೆ ಗೊತ್ತಾಗದ ಹಾಗೆ ಆ ಸಂಪತ್ತನ್ನು ತೆಗೆದುಕೊಂಡು ಕಳ್ಳತನದ ಆರೋಪವನ್ನು ಧರ್ಮಬುದ್ಧಿಯ ಮೇಲೆ ಹೊರಿಸಿದನು.ಸಂಪತ್ತನ್ನು ತೆಗೆದುಕೊಂಡವರಾರೆಂದು ತಮ್ಮ ವ್ಯಾಜ್ಯವನ್ನು ಬಗೆಹರಿಸಲು ಅವರು ಧರ್ಮಾಧಿಕರಣರು ಇರುವಲ್ಲಿಗೆ ಬಂದರು.ನಡೆದುದೆಲ್ಲವನ್ನು ಧರ್ಮಾಧಿಕರಣರಿಗೆ ವಿವರಿಸಿದ ದುಷ್ಟಬುದ್ಧಿಯು ಹೊನ್ನೆಲ್ಲವನ್ನು ಧರ್ಮಬುದ್ಧಿಯೇ ತೆಗೆದುಕೊಂಡನೆಂಬುದಕ್ಕೆ ಅಲ್ಲಿದ್ದ ಆಲದ ಮರವೇ ಸಾಕ್ಷಿ ಎಂದಾಗ ಧರ್ಮಾಧಿಕರಣರು ತಮ್ಮ ಮನಸ್ಸಿನಲ್ಲಿ ಮೇಲಿನಂತೆ ಅಂದುಕೊಂಡರು.

ಸ್ವಾರಸ್ಯ: ವೃಕ್ಷವು ಸಾಕ್ಷಿನುಡಿಯುವುದು ಎಂದಾಗ ಧರ್ಮಾಧಿಕರಣರು ಅದು ಹೇಗೆ ಸಾಧ್ಯ ಎಂದು ಆಶ್ಚರ್ಯ ವ್ಯಕ್ತಪಡಿಸಿರುವುದನ್ನು ಇಲ್ಲಿನ ವಾಕ್ಯದಿಂದ ವೇದ್ಯವಾಗುತ್ತದೆ.

೩. ''ನಿನ್ನ ಪಳುವಗೆ ನಮ್ಮ ಕುಲವನೆಲ್ಲಮನಳಿವ ಬಗೆ''

ಮೇಲಿನ ವಾಕ್ಯವನ್ನುದುರ್ಗಸಿಂಹನು ಬರೆದ ಕರ್ನಾಟಕ ಪಂಚತಂತ್ರ ದಿಂದ ಆರಿಸಲಾದ ವೃಕ್ಷ ಸಾಕ್ಷಿ

ಎನ್ನುವ ಗದ್ಯಭಾಗದಿಂದ ಆಯ್ದುಕೊಳ್ಳಲಾಗಿದೆ.
ಈ ಮಾತನ್ನುದುಷ್ಟಬುದ್ಧಿಯ ತಂದೆ (ಪ್ರೇಮಮತಿ)ಯು ದುಷ್ಟಬುದ್ಧಿಗೆ ಹೇಳಿದನು.
ಸಂದರ್ಭ : ಧರ್ಮಬುದ್ಧಿ ಮತ್ತುದುಷ್ಟಬುದ್ಧಿಯರು ತಾವು ಸಂಪಾದಿಸಿದ ಹೊನ್ನನ್ನು ಖರ್ಚಿಗೆ ಬೇಕಾದಷ್ಟು ಮಾತ್ರ ತಮ್ಮ ಬಳಿ ಇರಿಸಿಕೊಂಡು ಉಳಿದದ್ದನ್ನು ಒಂದು ಆಲದ ಮರದ ಬಳಿ ಹೂತಿಟ್ಟರು.ದುರಾಸೆಯಿಂದ ಕೂಡಿದವನಾದ ದುಷ್ಟಬುದ್ಧಿಯು ಧರ್ಮಬುದ್ಧಿಗೆ ಗೊತ್ತಾಗದ ಹಾಗೆ ಹೂತಿಟ್ಟ ಹೊನ್ನೆಲ್ಲವನ್ನೂ ತೆಗೆದುಕೊಂಡು ಅದನ್ನು ತೆಗೆದುಕೊಂಡ ಆರೋಪವನ್ನು ಧರ್ಮಬುದ್ಧಿಯ ಮೇಲೆ ಹೊರಿಸಿದನು .ಕೊನೆಗೆ ತಮ್ಮ ವ್ಯಾಜ್ಯವನ್ನು ಬಗೆಹರಿಸಲು ಅವರಿಬ್ಬರೂ ಧರ್ಮಾಧಿಕರಣರಲ್ಲಿಗೆ ಬಂದು ನಡೆದುದೆಲ್ಲವನ್ನು ವಿವರಿಸಿ ಹೊನ್ನೆಲ್ಲವನ್ನೂ ಧರ್ಮಬುದ್ಧಿಯೇ ತೆಗೆದುಕೊಂಡನೆಂಬುದಕ್ಕೆ ಅಲ್ಲಿದ್ದ ಆಲದ ಮರವೇ ಸಾಕ್ಷಿಯೆಂದನು.ಆ ಹೊತ್ತಿಗೆ ಸಂಜೆಯಾದ್ದರಿಂದ ಮರುದಿನ ವೃಕ್ಷನ್ಯಾಯ ಕೇಳುವುದೆಂದು ತೀರ್ಮಾನವಾಯಿತು.ಮನೆಗೆ ಮರಳಿದ ದುಷ್ಟಬುದ್ಧಿಯು ತನ್ನ ತಂದೆಯನ್ನು ಮರದ ಪೊಟರೆಯಲ್ಲಿಅಡಗಿದರ್ಮಾಧಿಕರಣರು ಆರೋಪದ ಕುರಿತು ಕೇಳಿದಾಗ ಧರ್ಮಬುದ್ಧಿಯೇ ಹೊನ್ನನ್ನು ಕದ್ದವನೆಂದು ಹೇಳುವಂತೆ ಒತ್ತಾಯಿಸಿದನು.ಆಗ ಮಗನಿಗೆ ಬುದ್ಧಿ ಹೇಳುತ್ತ ಪ್ರೇಮಮತಿ(ತಂದೆ)ಯು ಪರಧನ ,ವಿಶ್ವಾಸಘಾತಕತನ,ಸ್ವಾಮಿದ್ರೋಹ ಇವೆಲ್ಲವೂ ಎಲ್ಲ ಕಾಲದಲ್ಲಿಯೂ ಹಾನಿಯನ್ನುಂಟು ಮಾಡುವಂತವು.ನಿನ್ನ ದುರಾಸೆಯಿಂದಾದ ಕಳ್ಳತನವು ನಮ್ಮ ಕುಲವನ್ನೇ ನಾಶ ಮಾಡುವುದು ಎಂದು ಹೇಳಿದನು.
ಸ್ವಾರಸ್ಯ : ಅನ್ಯಾಯ ,ಅನೀತಿ ,ಅಕ್ರಮ, ಮೋಸಗಳಿಂದ ಸಂಪಾದಿಸುವುದು ಕುಲವನ್ನೇ ನಾಶ ಪಡಿಸುವುದು ಎಂಬುದು ಮೇಲಿನ ವಾಕ್ಯದ ಸ್ವಾರಸ್ಯವಾಗಿದೆ.
೪. ''ಪ್ರಕೃತಿ ವಿಕೃತಿಯಾದ ಮನುಷ್ಯನಾಯುಷ್ಯಂ ಕುಂದುಗಂ''
ಮೇಲಿನ ವಾಕ್ಯವನ್ನುದುರ್ಗಸಿಂಹನು ಬರೆದ ಕರ್ನಾಟಕಪಂಚತಂತ್ರ ದಿಂದ ಆರಿಸಲಾದ ವೃಕ್ಷ ಸಾಕ್ಷಿ ಎನ್ನುವ ಗದ್ಯಭಾಗದಿಂದ ಆಯ್ದುಕೊಳ್ಳಲಾಗಿದೆ.
ಈ ಮಾತನ್ನುದುಷ್ಟಬುದ್ಧಿಯ ತಂದೆ (ಪ್ರೇಮಮತಿ)ಯು ಮರದ ಪೊಟರೆಯಲ್ಲಿ ಅಡಗಿದ್ದು ಹೇಳಿದನು.
ಸಂದರ್ಭ :ವ್ಯಾಪಾರದಿಂದ ದೊರೆತ ಹೊನ್ನಿನಲ್ಲಿ ತಮಗೆ ಖರ್ಚಿಗೆ ಬೇಕಾದಷ್ಟು ಇಟ್ಟುಕೊಂಡು ಉಳಿದದ್ದನ್ನು ಆಲದ ಮರದ ಬಳಿ ಧರ್ಮಬುದ್ಧಿ ಮತ್ತುದುಷ್ಟಬುದ್ಧಿಯರು ಹೂತಿಡುತ್ತಾರೆ.ದುರಾಸೆಯಿಂದ ಕೂಡಿದವನಾದ ದುಷ್ಟಬುದ್ಧಿಯು ತಾನೆ ಹೂತಿಟ್ಟ ಹೊನ್ನೆಲ್ಲವನ್ನು

ತೆಗೆದುಕೊಂಡು ಕಳುವಿನ ಆರೋಪವನ್ನು ಧರ್ಮಬುದ್ಧಿಯ ಮೇಲೆ ಹೊರಿಸುತ್ತಾನೆ .ನ್ಯಾಯ ತೀರ್ಮಾನಕ್ಕಾಗಿ ಧರ್ಮಾಧಿಕರಣರ ಬಳಿ ಬಂದು ನಡೆದುದೆಲ್ಲವನ್ನು ವಿವರಿಸಿ ಧರ್ಮಬುದ್ಧಿಯೇ ಹೊನ್ನನ್ನು ತೆಗೆದವನು ಎಂಬುದಕ್ಕೆ ಆಲದ ಮರವೇ ಸಾಕ್ಷಿ ಎನ್ನುತ್ತಾನೆ.ಮರುದಿನ ಅವರೆಲ್ಲರೂ ಹೊನ್ನನ್ನು ಅಡಗಿಸಿಟ್ಟಿದ್ದ ಆಲದ ಮರದ ಬಳಿ ಬರುತ್ತಾರೆ.ಮಗನ ಒತ್ತಾಯಕ್ಕೆ ಕಟ್ಟುಬಿದ್ದ ದುಷ್ಟಬುದ್ಧಿಯ ತಂದೆ ಈ ಮೊದಲೇ ಮರದ ಪೊಟರೆಯಲ್ಲಿ ಅಡಗಿಕುಳಿತಿರುತ್ತಾನೆ .ಧರ್ಮಾಧಿಕರಣರು ವೃಕ್ಷದ ಬಳಿ ವಿಚಾರಿಸಿದಾಗ ಅಲ್ಲಿ ಅಡಗಿ ಕುಳಿತಿದ್ದ ಪ್ರೇಮಮತಿ (ದುಷ್ಟಬುದ್ಧಿಯ ತಂದೆ)ಯು ಮತಿಗೆಟ್ಟು ಧರ್ಮದ ದಾರಿಯನ್ನು ಬಿಟ್ಟು 'ಪ್ರಕೃತಿ ವಿಕೃತಿಯಾದರೆ ಮನುಷ್ಯನ ಆಯುಷ್ಯವು ಕುಂದುವುದು ಎಂದು ನುಡಿವಂತೆ ಧರ್ಮಬುದ್ಧಿ ಎಲ್ಲ ಸಂಪತ್ತನ್ನು ತೆಗೆದುಕೊಂಡನೆಂದು ಮೇಲಿನಂತೆ ಹೇಳಿದನು

ಸ್ವಾರಸ್ಯ : ಪ್ರಕೃತಿ ಮುನಿದರೆ ಮನುಷ್ಯನಿಗೆ ಉಳಿಗಾಲವಿಲ್ಲ.ವಟವೃಕ್ಷವು ಪ್ರಕೃತಿಯ ಕೊಡುಗೆ .ಅದಕ್ಕೆ ವಿರುದ್ಧವಾಗಿ ನಡೆದರೆ ವಿಕೃತಿ ಎಂದು ಮೇಲಿನ ವಾಕ್ಯವು ಸೂಚಿಸುವುದು.

೫. ''ಹುಸಿಯದ ಬೇಹಾರಿಯೇ ಇಲ್ಲ''

ಮೇಲಿನ ವಾಕ್ಯವನ್ನು ದುರ್ಗಸಿಂಹನು ಬರೆದ ಕರ್ನಾಟಕ ಪಂಚತಂತ್ರ ದಿಂದ ಆರಿಸಲಾದ ವೃಕ್ಷ ಸಾಕ್ಷಿ ಎನ್ನುವ ಗದ್ಯ ಭಾಗದಿಂದ ಆಯ್ದುಕೊಳ್ಳಲಾಗಿದೆ.

ಈ ಮಾತನ್ನು ಧರ್ಮಬುದ್ಧಿಯು ಧರ್ಮಾಧಿಕರಣರಿಗೆ ಹೇಳಿದನು.

ಮರದ ಬಳಿ ಹೂತಿಟ್ಟ ಧನವನ್ನು ದುಷ್ಟಬುದ್ಧಿಯು ತಾನು ತೆಗೆದು ಅದರ ಕಳುವಿನ ಆರೋಪವನ್ನು ಧರ್ಮಬುದ್ಧಿಯ ಮೇಲೆ ಹೊರಿಸಿ ಧರ್ಮಬುದ್ಧಿಯೇ ಹೊನ್ನನ್ನು ಕದ್ದನೆಂಬುದಕ್ಕೆ ಅಲ್ಲಿದ್ದ ಮರವೇ ಸಾಕ್ಷಿ ಎಂದನು.ಅವನ ಮಾತನ್ನು ಕೇಳಿದ ಧರ್ಮಾಧಿಕರಣರು ನ್ಯಾಯವನ್ನು ತೀರ್ಮಾನಿಸಲು ವೃಕ್ಷದ ಸಾಕ್ಷಿ ಕೇಳಲು ತೀರ್ಮಾನಿಸಿದಾಗ ದುಷ್ಟಬುದ್ಧಿಯು ತನ್ನ ತಂದೆಯನ್ನು ಮರದ ಪೊಟರೆಯಲ್ಲಿ ಅಡಗಿಸಿಟ್ಟು ಧರ್ಮಾಧಿಕರಣರು ಪ್ರಶ್ನಿಸಿದಾಗ ಧರ್ಮಬುದ್ಧಿಯೇ ಕದ್ದನೆಂದು ತಂದೆಯಿಂದ ಹೇಳಿಸುವನು.ವೃಕ್ಷವು ಸಾಕ್ಷ್ಯವನ್ನು ನುಡಿಯುವುದೇ ಆದಲ್ಲಿ ಸತ್ಯವನ್ನೇಕೆ ನುಡಿಯಲಾರದು ಎಂದು ಅನುಮಾನಗೊಂಡ ಧರ್ಮಬುದ್ಧಿಯು ಮರವನ್ನೊಮ್ಮೆ ಸುತ್ತು ಹಾಕಿದಾಗ ಪೊಟರೆಯ ಬಳಿ ಮನುಷ್ಯರ ಕುರುಹನ್ನು ಅರಿತು ಇದರ ಮರ್ಮವನ್ನು ತಿಳಿಯಬೇಕೆಂದು ಮೇಲಿನಂತೆ ಹೇಳುವನು.ವ್ಯಾಪಾರಿಬುದ್ಧಿಯಿಂದ ಹೀಗೆ ಮಾಡಿದ್ದಾಗಿಯೂ , ಪೊಟರೆಯಲ್ಲಿ ಅಡಗಿಸಿಟ್ಟ ಸಂಪತ್ತನ್ನು ಪಡೆಯಲು ಬಂದಾಗ ಅದನ್ನು ಹಾವು ಬಳಸಿ ಮಲಗಿತ್ತೆಂದೂ ,ಈಗ ಹೊಗೆ ಹಾಕಿಸಿ ಹಾವನ್ನು ಓಡಿಸುವೆನು ಮತ್ತು ಅಡಗಿಸಿಟ್ಟ ಹೊನ್ನನ್ನು ಮರಳಿ ಪಡೆಯಬಹುದು ಎಂದು ಪೊಟರೆಗೆ ಬೆಂಕಿ ಹಾಕಿಸಿ ಅಡಗಿಕುಳಿತ ದುಷ್ಟಬುದ್ಧಿಯ ತಂದೆ ಹೊರಗೆ

ಬರುವಂತೆ ಮಾಡಿ ನಿಜ ಸಂಗತಿಯನ್ನು ಬಯಲು ಮಾಡುವನು.

ಸ್ವಾರಸ್ಯ : ವ್ಯಾಪಾರ ವೃತ್ತಿಯಲ್ಲಿ ಎಲ್ಲವನ್ನೂ ನಿಜವೇ ಹೇಳಲು ಸಾಧ್ಯವಿಲ್ಲ. ಕೆಲವೊಮ್ಮೆ ಸುಳ್ಳು ಹೇಳುವ ಸಂದರ್ಭಗಳೂ ಬರುತ್ತವೆ ಎನ್ನುವುದು ಮೇಲಿನ ವಾಕ್ಯದ ಸ್ವಾರಸ್ಯವಾಗಿದೆ.

ಮೊದಲೆರಡು ಪದಗಳಿಗಿರುವ ಸಂಬಂಧದಂತೆ ಮೂರನೆಯ ಪದಕ್ಕೆ ಸಂಬಂಧಿಸಿದ ಪದವನ್ನು ಬರೆಯಿರಿ.

೧.ವಡ್ಡಾರಾಧನೆ -ಶಿವಕೋಟ್ಯಾಚಾರ್ಯ: : ಪಂಚತಂತ್ರಂ-----(ದುರ್ಗಸಿಂಹ)

೨. ಕಬ್ಬ -ಕಾವ್ಯ : : ಬೇಹಾರಿ ------(ವ್ಯಾಪಾರಿ)

೩.ಅನೃತ -ಸುಳ್ಳು: : ಕೃತ್ರಿಮ ----(ಮೋಸ)

೪. ಬಂದಲ್ಲದೆ - ಲೋಪ : : ಧೃತಿಗೆಟ್ಟು----(ಆದೇಶ )

೫.ದೈವ ಭಕ್ತಿ -ತತ್ಪುರುಷ : : ಅಬ್ಜೋದರ---(ಬಹುವ್ರೀಹಿ ಸಮಾಸ)

ಪದಗಳನ್ನು ವಿಂಗಡಿಸಿ ಸಂಧಿಯ ಹೆಸರು ಬರೆಯಿರಿ.

ಪೋಗಲ್ ವೇಳ್ಕುಂ, ತಕ್ಕನಿತು , ಪೂಳ್ದೆಡೆ.

ಪೋಗಲ್+ಬೇಳ್ಕುಂ=ಪೋಗಲ್ವೇಳ್ಕುಂ =ಆದೇಶ ಸಂಧಿ

ತಕ್ಕ +ಅನಿತು= ತಕ್ಕನಿತು = ಲೋಪ ಸಂಧಿ

ಪೂಳ್ದ +ಎಡೆ =ಪೂಳ್ದೆಡೆ=ಲೋಪಸಂಧಿ

ನೀಡಿರುವ ಪದಗಳನ್ನು ವಿಗ್ರಹಿಸಿ ಸಮಾಸವನ್ನು ಹೆಸರಿಸಿ

ಅತಿಕುಟಿಲ,ಕೈಕೊಳುದ್ವು,ಕಟ್ಟೇಕಾಂತ,ಸ್ವಾಮಿದ್ರೋಹ,ಪರಧನ, ಧನಹರಣ, ಸಾಕ್ಷಿಮಾಡಿ,ಬಲವಂದು,

ಅತಿಯಾದ +ಕುಟಿಲ=ಕರ್ಮಧಾರಯ ಸಮಾಸ.

ಕೈಯಂ +ಕೊಳುದ್ವು = ಕ್ರಿಯಾ ಸಮಾಸ

ಕಡಿದು + ಏಕಾಂತ = ಕರ್ಮಧಾರಯ ಸಮಾಸ

ಸ್ವಾಮಿಗೆ +ದ್ರೋಹ=ತತ್ಪುರುಷ ಸಮಾಸ

ಪರರ +ಧನ =ತತ್ಪುರುಷ ಸಮಾಸ

ಧನದ +ಹರಣ = ತತ್ಪುರುಷ ಸಮಾಸ

ಸಾಕ್ಷಿಯನ್ನು+ಮಾಡಿ = ಕ್ರಿಯಾ ಸಮಾಸ

ಬಲದಿಂದ +ಬಂದು = ಕ್ರಿಯಾ ಸಮಾಸ

ಕೊಟ್ಟಿರುವ ಪದ್ಯ ಭಾಗಕ್ಕೆ ಪ್ರಸ್ತಾರ ಹಾಕಿ ಛಂದಸ್ಸನ್ನು ಹೆಸರಿಸಿ ಲಕ್ಷಣ ಬರೆಯಿರಿ.

UUUU| U U- | UU-
೧. ಅತಿ ಕುಟಿ| ಲ ಮನಂ| ಧನಲು

UU _ | _ _| U_U| UU_| UU_
ಬ್ಧತೆ ಯಿಂ|ದಂದು|ಷ್ಟಬುದ್ಧಿ| ನುಡಿದಂ| ಪುಸಿಯಂ

ಕಂದ ಪದ್ಯ _ಲಕ್ಷಣ

ಇದು ನಾಲ್ಕು ಚರಣಗಳುಳ್ಳ ಮಾತ್ರಾ ವೃತ್ತ ಪದ್ಯ.ಒಂದನೆಯ ಮತ್ತು ಮೂರನೆಯ ಚರಣಗಳಲ್ಲಿ ನಾಲ್ಕು ಮಾತ್ರೆಗಳ ಮೂರು ಮೂರು ಗಣಗಳೂ ,ಎರಡನೆಯ ಮತ್ತು ನಾಲ್ಕನೆಯ ಚರಣಗಳಲ್ಲಿ ನಾಲ್ಕು ಮಾತ್ರೆಗಳ ಐದೈದು ಗಣಗಳೂ ಇರುತ್ತವೆ.

ಭ ರ ನ ಭ ಭ ಭ ಲ+ಗು

- U U| - U-| UUU| - U U |- U U| - UU |U -
೨. ಮೇದಿನಿ|ಯಂ ಕ್ರಮ|ಕ್ರಮದೆ ಪರ್ವಿ|ದು|ದಾತ್ತನಭೋ ವಿಭಾಗಮಾ

- UU
ಚ್ಛಾದಿತ.......

ಉತ್ಪಲ ಮಾಲಾ ವೃತ್ತ -ಲಕ್ಷಣ

ಇದು ನಾಲ್ಕು ಪಾದಗಳ ಸಮವೃತ್ತ ಪದ್ಯ.ಪ್ರತಿ ಚರಣದಲ್ಲಿ ೨೦ ಅಕ್ಷರಗಳಿರುತ್ತವೆ.ಮತ್ತು ಭ,ರ,ನ,ಭ,ರ ಎಂಬ ಆರು ಗಣಗಳೂ ಮೇಲೆ ಒಂದು ಲಘು ,ಒಂದು ಗುರು ಬರುತ್ತದೆ.ಅಲ್ಲದೆ ಒಂಬತ್ತನೆಯ ಅಕ್ಷರ ಸ್ಥಾನದಲ್ಲಿ ಯತಿಯು ಬರುವುದು.ಹಾಗೂ ಈ ವೃತ್ತದ ಪ್ರತಿಯೊಂದು ಚರಣದ ಆದಿಯಲ್ಲಿ ಒಂದು ಗುರು ಬರುತ್ತದೆ.

ಸಂಭವನೀಯ ಪ್ರಶ್ನೆಗಳು

ಮೂರರಿಂದ ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿ.

೧. ದುಷ್ಟಬುದ್ಧಿಯು ಗಳಿಸಿದ ಸಂಪತ್ತನ್ನು ತನ್ನದಾಗಿಸಿಕೊಳ್ಳಲು ಮಾಡಿದ ಉಪಾಯವೇನು ?

ಧರ್ಮಬುದ್ದಿ ಮತ್ತು ದುಷ್ಟಬುದ್ಧಿಯರು ಇಬ್ಬರೂ ಸೇರಿಯೇ ಗಳಿಸಿದ ಸಂಪತ್ತನ್ನು ಸಮನಾಗಿ

ಹಂಚಿಕೊಳ್ಳಬೇಕೆಂಬ ಧರ್ಮಬುದ್ಧಿಯ ಸಲಹೆಯನ್ನು ತಳ್ಳಿಹಾಕಿದ ದುಷ್ಟಬುದ್ಧಿಯು ಖರ್ಚಿಗೆ ಎಷ್ಟು ಬೇಕೋ ಅಷ್ಟನ್ನು ತೆಗೆದುಕೊಂಡು ಉಳಿದಿದ್ದನ್ನು ಮರದ ಕೆಳಗೆ ಯಾರಿಗೂ ಗೊತ್ತಾಗದ ಹಾಗೆ ಹೂತಿಡೋಣವೆಂದು ಧರ್ಮಬುದ್ಧಿಯನ್ನು ಒಪ್ಪಿಸುವಲ್ಲಿ ಯಶಸ್ವಿಯಾದನು.ಅದಕ್ಕೆ ಧರ್ಮಬುದ್ಧಿಯು ಒಪ್ಪಲಾಗಿ ಹೊನ್ನನ್ನು ಇಬ್ಬರೂ ಸೇರಿ ಮರದ ಸಮೀಪ ಹುಂಡಿ ತೋಡಿ ಹೂತಿಟ್ಟರು.ಸ್ವಲ್ಪದಿನಗಳು ಕಳೆದ ಮೇಲೆ ದುರಾಸೆಯವನಾದ ದುಷ್ಟಬುದ್ಧಿಯು ಧರ್ಮಬುದ್ಧಿಗೆ ಗೊತ್ತಾಗದ ಹಾಗೆ ಹೊನ್ನನ್ನು ತೆಗೆದುಕೊಂಡು ಹುಂಡಿಯನ್ನು ಮೊದಲಿನಂತೆಯೇ ಹೂತಿಟ್ಟನು .ತದನಂತರದಲ್ಲಿ ತನಗೆ ಹಣದ ಅವಶ್ಯಕತೆ ಇರುವುದಾಗಿಯೂ ಹೊನ್ನನ್ನು ತೆಗೆದುಕೊಂಡು ಬರೋಣವೆಂದು ಕರೆದುಕೊಂಡು ಬಂದು ಅಲ್ಲಿ ಹೊನ್ನಿಲ್ಲದ ಕಾರಣ ಅದನ್ನು ಧರ್ಮಬುದ್ಧಿಯೇ ತೆಗೆದುಕೊಂಡನೆಂದು ಧರ್ಮಬುದ್ಧಿಯ ಮೇಲೆ ಆರೋಪ ಹೊರಿಸಿದನು.

೨.ಪ್ರೇಮಮತಿಯು ದುಷ್ಟಬುದ್ಧಿಗೆ ಹೇಗೆ ಬುದ್ಧಿವಾದ ಹೇಳಿದನು ? ಏಕೆ ?

ನಿಮ್ಮ ಒಂದು ಮಾತಿನಿಂದ ನಮ್ಮ ಕಷ್ಟಗಳೆಲ್ಲ ದೂರವಾಗಿ ಹಲವು ಕಾಲದವರೆಗೆ ಹಸಿಯದೆ ಉಂಡು ಬಾಳುವಷ್ಟು ಹಣವು ಬರುವುದು .ನೀವು ಆ ಮರದ ಪೊಟರೆಯಲ್ಲಿ ಅಡಗಿದ್ದು ಧರ್ಮಬುದ್ಧಿಯೇ ಹೊನ್ನೆಲ್ಲವನ್ನೂ ತೆಗೆದುಕೊಂಡನೆಂದು ನುಡಿಯಿರಿ ಎಂದು ದುಷ್ಟಬುದ್ಧಿಯು ತನ್ನ ತಂದೆಯಾದ ಪ್ರೇಮಮತಿಗೆ ಹೇಳಿದನು.ಅದಕ್ಕೆ ಅವನ ತಂದೆಯು ಪರಧನಹರಣವೂ,ವಿಶ್ವಾಸಘಾತಕವೂ, ಸ್ವಾಮಿದ್ರೋಹವೂ ಇವೆಲ್ಲವೂ ಹೇಗೆಂದರೂ ಕೆಡುಕನ್ನು ಉಂಟು ಮಾಡುವುವು.ಇವೆಲ್ಲವನ್ನೂ ನೀನು ತಿಳಿದೂ ಕೂಡ ನನ್ನನ್ನು ಸಾಕ್ಷಿ ಮಾಡಿ, ನುಡಿಸಿ ಕೆಡಿಸಲು ಆಲೋಚಿಸಿದೆ.ನಿನ್ನ ಕ್ಷುಲ್ಲಕ (ಕೀಳು) ಆಲೋಚನೆಯು ನಮ್ಮ ಕುಲವನ್ನೇ ನಾಶ ಮಾಡುವ ರೀತಿಯದು ಎಂದು ಬುದ್ಧಿ ಹೇಳಿದನು .

೩.ವೃಕ್ಷಸಾಕ್ಷಿಯ ಹಿಂದಿರುವ ರಹಸ್ಯವನ್ನು ಧರ್ಮಬುದ್ಧಿಯು ಹೇಗೆ ಪತ್ತೆ ಹಚ್ಚಿದನು ?

ಹೊನ್ನನ್ನು ಕದ್ದವರು ಯಾರು ಎಂದು ಧರ್ಮಾಧಿಕರಣರು ಪ್ರಶ್ನಿಸಿದಾಗ ದುಷ್ಟಬುದ್ಧಿಯ ಸಲಹೆಯಂತೆ ಮರದ ಪೊಟರೆಯಲ್ಲಿ ಮೊದಲೇ ಅಡಗಿದ್ದ ಅವನ ತಂದೆಯು ಧರ್ಮಬುದ್ಧಿಯೇ ಅದನ್ನು ಕದ್ದವನೆಂದು ಹೇಳಲು ಧರ್ಮಬುದ್ಧಿಗೆ ಆಶ್ಚರ್ಯವಾಯಿತು.ವೃಕ್ಷವು ಸಾಕ್ಷಿ ಹೇಳುವುದು ನಿಜವೇ ಆದಲ್ಲಿ ಸತ್ಯವನ್ನೇಕೆ ಹೇಳಲಾರದು ಎಂದು ಆಲೋಚಿಸಿದ ಧರ್ಮಬುದ್ಧಿಯು ಸಂದೇಹ ಬಂದು ಮರದ ಸನಿಹ ಮನುಷ್ಯಸಂಚಾರದ ಕುರುಹು ಕಂಡನು. ಆದ್ದರಿಂದ ತಾನೇ ಹೊನ್ನನ್ನು ತೆಗೆದು ಅದನ್ನು ಮರದ ಪೊಟರೆಯಲ್ಲಿಟ್ಟುದಾಗಿಯೂ ಅದನ್ನು ತೆಗೆಯಲು ಬಂದಾಗ ಅಲ್ಲಿದ್ದ ಹಾವನ್ನು ನೋಡಿ ಹೆದರಿದುದಾಗಿಯೂ ಈಗಲೇ ಹಾವನ್ನು ಓಡಿಸಿ ಅದನ್ನು ಮರಳಿಸುವಂತೆ ಹೇಳಿ ಕಟ್ಟಿಗೆ ತರಿಸಿ ಹೊಗೆ

ಹಾಕಿಸಿ ಪೊಟರೆಯಲ್ಲಿ ಅಡಗಿದ್ದ ವ್ಯಕ್ತಿಯು ಹೊರಬರುವಂತೆ ಮಾಡಿದನು. ಹೀಗೆ ವೃಕ್ಷಸಾಕ್ಷಿಯ ಹಿಂದಿರುವ ರಹಸ್ಯವನ್ನು ಧರ್ಮಬುದ್ಧಿಯು ಪತ್ತೆ ಹಚ್ಚಿದನು .

ಸಂದರ್ಭಾನುಸಾರ ಸ್ವಾರಸ್ಯ ಬರೆಯಿರಿ.

೧. ಪಾಪಕರ್ಮನಪ್ಪ ದುಷ್ಪುತ್ರ ನಿಂ ನಿನಗಿಂತಪ್ಪ ದುರ್ಮರಣಂ ಸಮನಿಸಿದುದು

ಈ ಮೇಲಿನ ವಾಕ್ಯವನ್ನು ದುರ್ಗಸಿಂಹನು ಬರೆದ ಕರ್ನಾಟಕ ಪಂಚತಂತ್ರ ದಿಂದ ಆರಿಸಲಾದ ವೃಕ್ಷ ಸಾಕ್ಷಿ ಎನ್ನುವ ಗದ್ಯಭಾಗದಿಂದ ಆರಿಸಲಾಗಿದೆ.

ಈ ಮಾತನ್ನು ಧರ್ಮಾಧಿಕರಣರು ಪ್ರೇಮಮತಿಗೆ ಹೇಳಿದ್ದಾರೆ.

ತನ್ನ ಮಗನಾದ ದುಷ್ಟಬುದ್ದಿಯ ಕೋರಿಕೆಯಂತೆ ಪ್ರೇಮಮತಿಯು ಮರದ ಪೊಟರೆಯಲ್ಲಿ ಅಡಗಿದ್ದು ಧರ್ಮಾಧಿಕರಣರು ಹೊನ್ನು ಕದ್ದವರಾರು ಎಂದು ಪ್ರಶ್ನಿಸಿದಾಗ ಧರ್ಮಬುದ್ಧಿಯೇ ಕದ್ದವನೆಂದು ಉತ್ತರಿಸುವನು.ಸಂದೇಹ ಬಂದ ಧರ್ಮಬುದ್ಧಿಯು ವೃಕ್ಷದ ಪೊಟರೆಯಲ್ಲಿ ಮನುಷ್ಯರು ಅಡಗಿರುವ ಜಾಡು ಹಿಡಿದು ತನ್ನ ತಪ್ಪನ್ನು ಒಪ್ಪಿಕೊಂಡವನಂತೆ ನಟಿಸಿ ಅದನ್ನು ಮರಳಿಸುವುದಾಗಿಯೂ ಆದರೆ ಮರದ ಪೊಟರೆಯಲ್ಲಿಟ್ಟ ಹೊನ್ನಿನ ಬಳಿ ಇರುವ ಹಾವನ್ನು ಓಡಿಸಿದರೆ ಮಾತ್ರ ಹೊನ್ನನ್ನು ಪಡೆಯಬಹುದು ಎಂದು ಹೇಳಿ ಪೊಟರೆಗೆ ಹೊಗೆ ಹಾಕಿಸಿದನು. ಬೆಂಕಿಯ ಹೊಗೆಗೆ ಸಿಕ್ಕು ಒದ್ದಾಡಿದ ಪ್ರೇಮಮತಿಯು ಕೂಗುತ್ತ ಉರುಳಿ ಹೊರಗೆ ಬಂದು ಪ್ರಾಣ ಬಿಟ್ಟಾಗ ಅದನ್ನು ನೋಡಿದ ಧರ್ಮಾಧಿಕರಣರು ಅವನು ದುಷ್ಟಬುದ್ದಿಯ ತಂದೆಯೆಂದು ಗುರುತಿಸಿ ಮೇಲಿನಂತೆ ಹೇಳುವರು.

೨.ತಸ್ಕರಸ್ಯಾನೃತಂ ಬಲಂ

ಈ ಮೇಲಿನ ವಾಕ್ಯವನ್ನು ದುರ್ಗಸಿಂಹನು ಬರೆದ ಕರ್ನಾಟಕ ಪಂಚತಂತ್ರ ದಿಂದ ಆರಿಸಲಾದ ವೃಕ್ಷ ಸಾಕ್ಷಿ ಎನ್ನುವ ಗದ್ಯಭಾಗದಿಂದ ಆರಿಸಲಾಗಿದೆ.

ಇಬ್ಬರೂ ಸೇರಿ ಸಂಪಾದಿಸಿದ ಹೊನ್ನನ್ನು ಹಂಚಿಕೊಳ್ಳದೇ ಬೇಕಾದಷ್ಟು ಮಾತ್ರ ತೆಗೆದುಕೊಂಡು ಉಳಿದದ್ದನ್ನು ಮರದ ಹತ್ತಿರ ಧರ್ಮಬುದ್ಧಿ ಮತ್ತು ದುಷ್ಟಬುದ್ಧಿಯರು ಹೂತಿಟ್ಟರು. ದುರಾಸೆಯ ಬುದ್ಧಿಯಿಂದ ಕೂಡಿದ ದುಷ್ಟಬುದ್ಧಿಯು ಧರ್ಮಬುದ್ಧಿಗೆ ಗೊತ್ತಾಗದ ಹಾಗೆ ಅದನ್ನು ತಾನೇ ತೆಗೆದಿಟ್ಟುಕೊಂಡು ಹೊನ್ನನ್ನು ಕದ್ದ ಆರೋಪವನ್ನು ಧರ್ಮಬುದ್ಧಿಯ ಮೇಲೆ ಹೊರಿಸುವನು.ಅತಿ ಕುಟಿಲ ಮನಸ್ಸಿನವನಾದ ದುಷ್ಟಬುದ್ಧಿಯು ಅತಿಯಾದ ಧನದ ಮೋಹಕ್ಕೆ ಒಳಗಾಗಿ ಕಳ್ಳನಿಗೆ ಸುಳ್ಳೇ ಬಲ ಎನ್ನುವ ಹಾಗೆ ಮತಿಗೆಟ್ಟು ಕದ್ದ ಆರೋಪವನ್ನು ಧರ್ಮಬುದ್ಧಿಯ ಮೇಲೆ ಹೊರಿಸುವನು ಎನ್ನುವಾಗ ಮೇಲಿನ ಮಾತು ಬಂದಿದೆ.

ಸ್ವಾರಸ್ಯ: ಸುಳ್ಳು ಹೇಳುವ ಸಾಮರ್ಥ್ಯವಿರುವ ಕಳ್ಳ ಎಲ್ಲಿ ಹೋದರೂ ಜಯಿಸಬಲ್ಲ ,ಕಳ್ಳನಿಗೆ ಸುಳ್ಳು ಒಂದು ಅಸ್ತ್ರ ,ಶಕ್ತಿ ಎಂಬ ಅರ್ಥದಲ್ಲಿ ಮೇಲಿನ ಮಾತು ಬಂದಿದೆ.

ವ್ಯಾಕರಣಾಂಶಗಳು

<u>ಮೊದಲೆರಡು ಪದಗಳಿಗಿರುವ ಸಂಬಂಧದಂತೆ ಮೂರನೆಯ ಪದಕ್ಕೆ ಸಂಬಂಧಿಸಿದ ಪದವನ್ನು ಬರೆಯಿರಿ.</u>

ಬೀಯ :ವ್ಯಯ : : ಪತ್ತನ : _( ಪಟ್ಟಣ )

ಮಹಾವಟ : ಕರ್ಮಧಾರಯ ಸಮಾಸ : :ವಿಸ್ಮಯಂಬಟ್ಟು : _(ಕ್ರಿಯಾ ಸಮಾಸ)

ಪಲವು :ಪರಿಮಾಣವಾಚಕ : : ಕೆಟ್ಟ :_ (ಗುಣವಾಚಕ)

ಪುಸಿ: ಹುಸಿ : : ಪೋಗಿ :_(ಹೋಗಿ)

ಅಷ್ಟವಿಧಾರ್ಚನೆ : ದ್ವಿಗು ಸಮಾಸ : : ಪೊನ್ನಂಕೊಂಡು :_(ಕ್ರಿಯಾಸಮಾಸ)

ವಂಚನಾ :ಬಂಚನೆ : :ಶ್ರವಣ: _(ಸವಣ )

ಸಂದೇಹ :ಸಂದೆಯ : :ಕೋಕಿಲಾ : _(ಕೋಗಿಲೆ )

ಮತಿಗೆಟ್ಟು:ಆದೇಶ ಸಂಧಿ : : ದಿಙ್ಮುಖ _ (ಅನುನಾಸಿಕ ಸಂಧಿ)

ವಿಸ್ಮಯಂಬಟ್ಟು: ಕ್ರಿಯಾಸಮಾಸ: : ದ್ವಿಜಪೂಜೆ : __(ತತ್ಪುರುಷ ಸಮಾಸ )

ಪರದುವೋಗಿ : ಆದೇಶಸಂಧಿ : : ಅಷ್ಟವಿಧಾರ್ಚನೆ : _(ಸವರ್ಣದೀರ್ಘಸಂಧಿ)

(ಪರದುವೋಗಿ =ಪರದು+ಪೋಗಿ =ಆದೇಶ ಸಂಧಿ)

ಧನಮಂ :ದ್ವಿತೀಯಾ ವಿಭಕ್ತಿ : :ಮನೆಯೊಳ್ : _(ಸಪ್ತಮಿ)

ಕೆಳಗಿನ ಪದಗಳ ಹೊಸಗನ್ನಡ ರೂಪ ಬರೆಯಿರಿ.

ಪೊನ್ನು, ಪೊಕ್ಕು ಪೋಗಿ,ಪೊಳ್ತು,ಎಲ್ಲಮಂ,ವಂದು, ವರ್ಪುದೆಂದು , ಪುಸಿ, ಎನಿಪ, ಪೇಳು ,ಪೆರರು,ಪೋದರ್, ಪಿಡಿದು,ಪೇಳ್ದರುಂ, ಕೇಳ್ದರುಂ, ಪಲವು, ಕಯ್ಯಂ,ಪರಕೆ,ಪೊಗೆ, ಪಾವು, ಕುಡುವೆನು

ಉತ್ತರ :ಹೊನ್ನು, ಹೊಕ್ಕು(ಪ್ರವೇಶಿಸಿ )ಹೋಗಿ, ಹೊತ್ತು, ಎಲ್ಲವನ್ನು,ಬಂದು, ಬರುವುದೆಂದು, ಹುಸಿ, ಎನ್ನುವ , ಹೇಳು, ಬೇರೆಯವರು, ಹೋದರು, ಹಿಡಿದು, ಹೇಳಿದವರು, ಕೇಳಿದವರು,ಹಲವು, ಕೈಯನ್ನು, ಹರಕೆ, ಹೊಗೆ, ಹಾವು, ಕೊಡುವೆನು

<u>ಒಂದು ವಾಕ್ಯದಲ್ಲಿ ಉತ್ತರಿಸಿ.</u>

೧. ಧರ್ಮಬುದ್ಧಿ ಮತ್ತು ದುಷ್ಟಬುದ್ಧಿಯರು ಯಾವ ನಗರದಲ್ಲಿ ವಾಸವಾಗಿದ್ದರು ?

ಧರ್ಮಬುದ್ಧಿ ಮತ್ತು ದುಷ್ಟಬುದ್ಧಿಯರು ಮಧುರಾ ನಗರದಲ್ಲಿ ವಾಸವಾಗಿದ್ದರು.

೨. ಧರ್ಮಬುದ್ಧಿ ಮತ್ತು ದುಷ್ಟಬುದ್ಧಿಯರು ಹೇಗೆ ಸಂಪತ್ತು ಗಳಿಸಿದರು .

ವ್ಯಾಪಾರಿಗಳ ಮಕ್ಕಳಾದ ಧರ್ಮಬುದ್ಧಿ ಮತ್ತು ದುಷ್ಟಬುದ್ಧಿಯರು ವ್ಯಾಪಾರದಿಂದ ಅಪಾರವಾದ ಹೊನ್ನು (ಸಂಪತ್ತು) ಗಳಿಸಿದರು .

೩.ಧರ್ಮಬುದ್ಧಿ ಮತ್ತು ದುಷ್ಟಬುದ್ಧಿಯರು ಹೊನ್ನನ್ನು ಮರದ ಸಮೀಪ ಹೂತಿಡಲು ಕಾರಣವೇನು ?

ಗಳಿಸಿದಷ್ಟೂ ಹೊನ್ನನ್ನು ಮನೆಯಲ್ಲಿಟ್ಟುಕೊಂಡರೆ ನೆಮ್ಮದಿಯಿಂದ ಜೀವಿಸಲು ಸಾಧ್ಯವಿಲ್ಲವೆಂದು ದುಷ್ಟಬುದ್ಧಿಯು ನೀಡಿದ ಸಲಹೆಯನ್ನು ಧರ್ಮಬುದ್ಧಿಯು ಒಪ್ಪಿದ್ದರಿಂದ ಅವರಿಬ್ಬರೂ ತಮ್ಮ ಖರ್ಚಿಗೆ ಬೇಕಾದಷ್ಟು ಹೊನ್ನು ಮಾತ್ರ ತಮ್ಮ ಬಳಿ ಇಟ್ಟುಕೊಂಡು ಉಳಿದದ್ದನ್ನು ಮರದ ಸಮೀಪ ಯಾರಿಗೂ ಕಾಣದಂತೆ ಹೂತಿಟ್ಟರು.

೪.ಕಳ್ಳನಿಗೆ ಯಾವುದು ಬಲ ?

ಕಳ್ಳನಿಗೆ ಸುಳ್ಳೇ ಬಲ (ತಸ್ಕರಸ್ಯಾ ಅನೃತಂ ಬಲಂ)

೫. ದುಷ್ಟಬುದ್ಧಿ ಮತ್ತು ಧರ್ಮಬುದ್ಧಿಯರು ತಮ್ಮ ವ್ಯಾಜ್ಯ ಬಗೆಹರಿಸಲು ಯಾರಲ್ಲಿಗೆ ಬಂದರು ?

ದುಷ್ಟಬುದ್ಧಿ ಮತ್ತು ಧರ್ಮಬುದ್ಧಿಯರು ತಮ್ಮ ವ್ಯಾಜ್ಯ ಬಗೆಹರಿಸಲು ಧರ್ಮಾಧಿಕರಣರಲ್ಲಿಗೆ ಬಂದರು.

ಅಲಂಕಾರ ಹೆಸರಿಸಿ ಸಮನ್ವಯಿಸಿ.

''ಬಳಾರಿಯ ಮನೆಯಂ ಹರಕೆಯ ಕುರಿಯಂ ಪುಗಿಸುವಂತೆ .''

ಉಪಮೇಯ : ಲುಪ್ತವಾಗಿದೆ(ದುಷ್ಟಬುದ್ಧಿಯು ತನ್ನ ತಂದೆಯನ್ನು ವೃಕ್ಷದ ಪೊಟರೆಯಲ್ಲಿ ಅಡಗಿಸಿದುದು )

ಉಪಮಾನ : ಬಳಾರಿಯ ಮನೆಯಂ ಹರಕೆಯ ಕುರಿಯಂ ಪುಗಿಸುವುದು .

ಉಪಮಾವಾಚಕ : ಅಂತೆ

ಸಮಾನಧರ್ಮ : ಹೊಗಿಸುವುದು (ಪುಗಿಸುವುದು )

ಅಲಂಕಾರ :ಉಪಮಾ

ಉಪಮೇಯವಾದ ದುಷ್ಟಬುದ್ಧಿಯು ತನ್ನ ತಂದೆಯಾದ ಪ್ರೇಮಮತಿಯನ್ನು ಮರದ ಪೊಟರೆಯಲ್ಲಿ ಅಡಗಿಸಿದುದನ್ನು ಉಪಮಾನವಾದ ಮಾರಿಯ ಮನೆಯಲ್ಲಿ ಹರಕೆಯ ಕುರಿಯನ್ನು ಹೊಗಿಸುವುದಕ್ಕೆ

ಹೋಲಿಸಿ ವರ್ಣಿಸಿರುವುದರಿಂದ ಇದು ಉಪಮಾ ಅಲಂಕಾರವಾಗಿದೆ.

ಗದ್ಯಪಾಠ ವ್ಯಾಘ್ರಗೀತೆ.------

ಎ.ಎನ್ ಮೂರ್ತಿ ರಾವ್

ಲೇಖಕರ ಪರಿಚಯ:

ಎ.ಎನ್.ಮೂರ್ತಿರಾವ್ ರವರ ಪೂರ್ಣ ಹೆಸರು ಅಕ್ಕಿ ಹೆಬ್ಬಾಳು ನರಸಿಂಹ ಮೂರ್ತಿರಾವ್ ಇವರು ೧೯೦೦ ,ಜೂನ್ ೧೬ ರಂದು ಮಂಡ್ಯ ಜಿಲ್ಲೆಯ ಅಕ್ಕಿಹೆಬ್ಬಾಳಿನಲ್ಲಿ ಜನಿಸಿದರು.ಹಗಲುಗನಸುಗಳು ,ಅಲೆಯುವ ಮನ ,ಅಪರವಯಸ್ಕನ ಅಮೆರಿಕಾ ಯಾತ್ರೆ,ಚಂಡಮಾರುತ ,ಮಿನುಗುಮಿಂಚು,ಪೂರ್ವಸೂರಿಗಳೊಡನೆ ಮೊದಲಾದವು ಇವರ ಪ್ರಮುಖ ಕೃತಿಗಳು. ಇವರ ಚಿತ್ರಗಳು ಪತ್ರಗಳು ಕೃತಿಗೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ದೊರೆತಿದೆ ದೇವರು ಎಂಬ ಕೃತಿಗೆ ಪಂಪ ಪ್ರಶಸ್ತಿ ದೊರೆತಿದೆ. ಮೈಸೂರು ವಿಶ್ವವಿದ್ಯಾಲಯ ಇವರಿಗೆ ಗೌರವ.ಡಿ.ಲಿಟ್ ಪದವಿ ನೀಡಿ ಗೌರವಿಸಿದೆ. ಇವರು ೧೯೮೪ ರಲ್ಲಿ ಕೈವಾರದಲ್ಲಿ ಸಮಾವೇಶಗೊಂಡ ೫೬ ನೆಯ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆ ವಹಿಸಿದ್ದರು.

ಇವರು ಅಗಸ್ಟ್೨೩,೨೦೦೩ರಲ್ಲಿ ಮರಣಹೊಂದಿದರು.

ಇವರ ಸಮಗ್ರ ಲಲಿತಪ್ರಬಂಧಗಳು ಕೃತಿಯಿಂದ ವ್ಯಾಘ್ರಗೀತೆ ಗದ್ಯಭಾಗವನ್ನು ಆರಿಸಲಾಗಿದೆ.

ಒಂದೊಂದು ವಾಕ್ಯದಲ್ಲಿ ಉತ್ತರಿಸಿ.

೧. ಭಗವದ್ಗೀತೆಯನ್ನುರಚಿಸಿದವರು ಯಾರು ?

ಭಗವದ್ಗೀತೆಯನ್ನುರಚಿಸಿದವರು ಮಹರ್ಷಿ ವೇದವ್ಯಾಸರು

೨. ಹುಲಿಗೆ ಪರಮಾನಂದವಾಗಲು ಕಾರಣವೇನು?

ಶಾನುಭೋಗರ ದುಂಡು ದುಂಡಾದ ಶರೀರವನ್ನು ಕಂಡು ಹುಲಿಗೆ ಪರಮಾನಂದವಾಯಿತು.

೩. ಶಾನುಭೋಗರಿಗೆ ತಲೆ ಸುತ್ತಲು ಕಾರಣವೇನು?

ಹಿಂದಿನಿಂದ ಹುಲಿ ಮೈಮೇಲೆ ಎರಗುವುದಿಲ್ಲ ಎಂದರಿತಿದ್ದ ಶಾನುಭೋಗರು ಅದಕ್ಕೆ ಬೆನ್ನು ತಿರುಗಿಸಿ ನಡೆಯುವುದು ಹುಲಿಯು ಅವರ ಮುಂಭಾಗಕ್ಕೆಬಂದು ಮೇಲೆರಗಬೇಕೆಂದು ಮಾಡುವ

ಪ್ರಯತ್ನದ ಪುನರಾವರ್ತನೆ ಐದಾರು ಬಾರಿ ನಡೆದು ದಣಿವಾದ ಶಾನುಭೋಗರಿಗೆ ತಲೆಸುತ್ತಲಾರಂಭಿಸಿತು.

೪. ಶಾನುಭೋಗರ ಬ್ರಹ್ಮಾಸ್ತ್ರ ಯಾವುದು ?

ಶಾನುಭೋಗರ ಬ್ರಹ್ಮಾಸ್ತ್ರ ಅವರ ಬಳಿಯಲ್ಲಿದ್ದ ಖಿರ್ದಿ ಪುಸ್ತಕ.

೫. ಹಸಿದು ಮಲಗಿದ್ದ ಹುಲಿಯ ಏನೆಂದು ಯೋಚಿಸಿತು ?

ವಿಧಿ ತನ್ನ ಆಹಾರಕ್ಕೆ ಏನನ್ನು ಒದಗಿಸುದೋ ಎಂದು ಹಸಿದು ಮಲಗಿದ್ದ ಹುಲಿಯು ಯೋಚಿಸಿತು.

ಮೂರು -ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿ.

೧. ಮದಲಿಂಗನ ಕಣಿವೆಯಲ್ಲಿ ಬರುವಾಗ ಶಾನುಭೋಗರು ಏನೆಂದು ಯೋಚಿಸಿದರು?

ರೈತರಿಂದ ಸಂಗ್ರಹಿಸಿದ ಕಂದಾಯದ ಮೊತ್ತವನ್ನು ಚಿಕ್ಕನಾಯಕನ ಹಳ್ಳಿಯಲ್ಲಿರುವ ಖಜಾನೆಗೆ ಕಟ್ಟಿ ಅಲ್ಲಿದ್ದ ಸ್ನೇಹಿತರನ್ನು ನೋಡಿಕೊಂಡು ಶಾನುಭೋಗರು ವಾಪಸ್ಸು ಹೊರಡಬೇಕೆನ್ನುವಷ್ಟರಲ್ಲಿ ಸಂಜೆ ಆರುಗಂಟೆಯಾಗಿತ್ತು.ಅವರು ಮರಳಿ ತಮ್ಮ ಹಳ್ಳಿಯನ್ನು ತಲುಪಬೇಕಾದರೆ ಮದಲಿಂಗನ ಕಣಿವೆಯನ್ನು ದಾಟಿ ಹೋಗಬೇಕಿತ್ತು.ಕಾಡು ದಾರಿ,ಆದರೂ ಬೆಳುದಿಂಗಳು ದಿನ ;ಸ್ವಲ್ಪ ದೊಡ್ಡ ಹೆಜ್ಜೆ ಹಾಕಿದರೆ ಊಟದ ಹೊತ್ತಿಗೆ ಊರು ಸೇರಿಕೊಳ್ಳಬಹುದು ಎಂದು ಶಾನು ಭೋಗರು ಯೋಚಿಸಿದರು.

೨. ಹುಲಿಯು ಹಿಂದಿನಿಂದ ಹಾರಿ ಕೊಲ್ಲದಿರಲು ಕಾರಣಗಳೇನು ?

ಭರತಖಂಡದ ಹುಲಿಗಳು ಹಿಂದಿನಿಂದ ಹಾರಿ ಕೊಲ್ಲುವುದಿಲ್ಲ.ಶತ್ರುವನ್ನಾದರೂ ಸರಿಯೆ,ಆತ ಬೆನ್ನು ತಿರುಗಿಸಿರುವಾಗ ಕೊಲ್ಲುವುದು ಧರ್ಮವಲ್ಲವೆಂದು ಹುಲಿಯ ಅಭಿಪ್ರಾಯ.

೩.ಶಾನುಭೋಗರು ಮೂರ್ಛೆಯಲ್ಲಿದ್ದಾಗ ನಡೆದ ಘಟನೆಗಳನ್ನು ವಿವರಿಸಿ

ಚಿಕ್ಕನಾಯಕನಹಳ್ಳಿಗೆ ತೆಂಗಿನ ಕಾಯಿ ತುಂಬಿಕೊಂಡು ಹೋಗಿದ್ದ ಕೆಲವು ರೈತರು ತಿಂಗಳ ಬೆಳಕಿನಲ್ಲಿ ಗಾಡಿ ಹೊಡೆದುಕೊಂಡು ತಮ್ಮ ಹಳ್ಳಿಗೆ ಹಿಂದಿರುಗುತ್ತಿದ್ದರು.ಶಾನುಭೋಗರು ಬಿದ್ದ ಸ್ಥಳಕ್ಕೆ ಸ್ವಲ್ಪ ದೂರ ಇದ್ದಾಗ ಎತ್ತುಗಳು ಮುಂದೆ ಹೋಗದೆ ಅಲ್ಲೆ ನಿಂತುಬಿಟ್ಟವು.ಅಷ್ಟರಲ್ಲಿ ಹುಲಿಯ ಗರ್ಜನೆ ಕೇಳಿಸಿತು.ಎತ್ತುಗಳ ಘಂಟೆಯ ಧ್ವನಿ ಕೇಳಿ ಹುಲಿ ಕೆಲವು ನಿಮಿಷ ತಡೆಯಿತು.ಆದರೆ ರೈತರ ಮಾತು ಕೇಳಿ ಬಂದ ಮೇಲೆ ನಿರಾಶೆಯಿಂದಲೂ , ಕೋಪದಿಂದಲೂ ಗರ್ಜಿಸಿ ಪಲಾಯನ ಮಾಡಿತು.ಗರ್ಜನೆ ನಿಂತು ಸ್ವಲ್ಪ ಹೊತ್ತು ಕಳೆದ ಮೇಲೆ ರೈತರು ತಮ್ಮ ಬಳಿಯಿದ್ದ ಕೋವಿಯಿಂದ ಗುಂಡು ಹಾರಿಸಿ ಕೈಲಾದಷ್ಟು ಗಲಭೆ ಮಾಡುತ್ತ ತೆಂಗಿನ ಗರಿಯ ಪಂಜು ಹೊತ್ತಿಸಿಕೊಂಡು ಮುಂದೆ ಬಂದು ನೋಡಿದಾಗ

ಶಾನುಭೋಗರು ಮೂರ್ಛೆಯಲ್ಲಿ ಬಿದ್ದಿದ್ದರು. ರೈತರು ಅವರ ಮುಖದ ಮೇಲೆ ನೀರೆರೆಚಿ ಎಚ್ಚರಿಸಿದರು.

ಎಂಟು -ಹತ್ತು ವಾಕ್ಯಗಳಲ್ಲಿ ಉತ್ತರಿಸಿ.

೧.ಮೂರ್ತಿರಾಯರ ದೃಷ್ಟಿಯಲ್ಲಿ ಹುಲಿಯು ಬೇಟೆಯಾಡುವ ಬಗೆಯನ್ನು ವಿವರಿಸಿ.

ಹುಲಿ ಪ್ರಾಣಿಗಳನ್ನು ಕೊಂದು ತಿನ್ನುವುದೇನೋ ಉಂಟು.ಆದರೆ ನಿಷ್ಪಕ್ಷಪಾತವಾದ ದೃಷ್ಟಿಯಲ್ಲಿ ನೋಡಿದರೆ ಅದರಲ್ಲಿ ತಪ್ಪೇನಿದೆ ? ಶಾಕಾಹಾರವನ್ನು ತಿಂದು ಬದುಕಬೇಕಾದ ಮಾನವನೇ ಮಾಂಸವನ್ನು ತಿನ್ನಬಹುದಾದರೆ ಹುಲಿಯಲ್ಲಿ ಅದು ದೊಡ್ಡ ಅಪರಾದವಲ್ಲ.ಆದರೆ ಕೊಲ್ಲುವಾಗ ಧರ್ಮಾಧರ್ಮಗಳನ್ನು ಅನುಸರಿಸುತ್ತವೆಯೋ ಇಲ್ಲವೋ ? ಶ್ರೀರಾಮನಂತ ದೊರೆಗಳು ಆಳಿದ ,ಭಗವದ್ಗೀತೆಯಂತ ಗ್ರಂಥ ಉದ್ಭವಿಸಿದ ಭರತ ಭೂಮಿಯಲ್ಲಿ ಹುಲಿಗಳು ಅಧರ್ಮಕ್ಕೆಡೆ ಮಾಡಿಕೊಡಲಾರವು.ಭರತಖಂಡದ ಹುಲಿಗಳು ಹಿಂದಿನಿಂದ ಹಾರಿ ಕೊಲ್ಲುವುದಿಲ್ಲ.ಶತ್ರುವನ್ನಾದರೂ ಸರಿಯೆ ,ಆತ ಬೆನ್ನು ತಿರುಗಿಸಿರುವಾಗ ಕೊಲ್ಲುವುವುದು ಧರ್ಮವಲ್ಲ ಎಂದಿರಬಹುದು.ನಿಶ್ಯಬ್ದವಾಗಿ ಪ್ರಾಣಿಯ ಹಿಂದಕ್ಕೆ ನಡೆದು ,ಅನಂತರ ಅವರ ಮುಂಭಾಗಕ್ಕೆ ನೆಗೆದು ಕೂಡಲೇ ತಿರುಗಿ ಪ್ರಾಣಿಯ ಮೇಲೆ ಬೀಳುತ್ತವೆ. ಖಂಡವಿದೆಕೊ,ಮಾಂಸವಿದೆಕೋ,ಗುಂಡಿಗೆಯ ಬಿಸಿರಕ್ತವಿದೆಕೋ ಎಂದು ಹಸುವು ಹೇಳಿದರೂ ಬಾಯಿ ಚಪ್ಪರಿಸಿಕೊಂಡು ಹಸುವನ್ನು ತಿನ್ನದೆ ಸತ್ಯವ್ರತೆಯಾದ ಪುಣ್ಯಕೋಟಿಯನ್ನು ತಿನ್ನಲೊಲ್ಲದ ಹುಲಿರಾಯನ ಆ ಪವಿತ್ರ ಕಥೆ ಇಂದಿನ ಹುಲಿಗಳಿಗೆ ಆದರ್ಶ.ಆದ್ದರಿಂದ ಅವು ಅಧರ್ಮಕ್ಕೆ ಎಂದೂ ಕೈ ಹಾಕುವುದಿಲ್ಲ ಎಂದು ಮೂರ್ತಿರಾಯರು ಹುಲಿಯ ಬೇಟೆಯಾಡುವ ಬಗೆಯನ್ನು ವಿವರಿಸಿದ್ದಾರೆ.

೨.ಶಾನುಭೋಗರನ್ನು ರಕ್ಷಿಸಿದುದು ಖಿರ್ದಿ ಪುಸ್ತಕವೇ? ಹುಲಿಯ ಧರ್ಮವೇ? ಸಮರ್ಥನೆಯೊಂದಿಗೆ ವಿವರಿಸಿ.

ಶಾನುಭೋಗರಿಗೆ ಖಿರ್ದಿ ಪುಸ್ತಕ ಕೇವಲ ಜೀವನಾಧಾರವಲ್ಲ.ಅದು ಅವರ ರಾಜಭಕ್ತಿಯ ಲಾಂಛನ .ಖಜಾನೆಗೆ ರೈತರ ಕಂದಾಯದ ಹಣವನ್ನು ಕಟ್ಟಿ ಶಾನುಭೋಗರು ತಮ್ಮ ಹಳ್ಳಿಗೆ ಮರಳುತ್ತಿದ್ದ ಸಮಯದಲ್ಲಿ ಕಾಡಿನಲ್ಲಿ ಅವರು ಬರುತ್ತಿದ್ದಾಗ ಹುಲಿಯೊಂದು ಅವರನ್ನು ಬೇಟೆಯಾಡಲು ಹೊಂಚು ಹಾಕಿತು.ಹುಲಿಗಳು ಹಿಂದಿನಿಂದ ಮೇಲೆ ಬೀಳುವುದಿಲ್ಲ ವೆಂದು ಅರಿತಿದ್ದ ಶಾನುಭೋಗರು ಉಪಾಯವಾಗಿ ಹುಲಿಗೆ ಬೆನ್ನು ತಿರುಗಿಸಿ ನಡೆದು ನಡೆದು ದಣಿದರು.ಆ ವಿಪತ್ತಿನ ಸನ್ನಿವೇಶದಲ್ಲಿ ಅವರಿಗೆ ನೆನಪಾಗಿದ್ದು ಅವರ ಬಳಿಯಿದ್ದ ಖಿರ್ದಿ ಪುಸ್ತಕ.ಅದು ಸಧ್ಯಕ್ಕೆ ಅವರ ಬಳಿಯಿದ್ದ ಬ್ರಹ್ಮಾಸ್ತ್ರ.ಅದರಿಂದ

ಹುಲಿಯ ಮುಖಕ್ಕೆ ಬಡಿದಾಗ ಏನಾಯಿತೆಂದು ಅರಿಯಲು ಅದಕ್ಕೆ ಅರೆ ನಿಮಿಷ ಹಿಡಿಯಿತು.ಅದನ್ನೇ ಉಪಯೋಗಿಸಿಕೊಂಡು ಓಡಿದ ಅವರು ಕಲ್ಲು ಎಡವಿ ಬಿದ್ದು ಮೂರ್ಛೆ ಹೋದಾಗ ಅಷ್ಟರಲ್ಲಿ ಅಲ್ಲಿಗೆ ಬರುತ್ತಿದ್ದ ರೈತರಿಂದಾಗಿ ಹುಲಿಯಿಂದ ಬಚಾವಾದರು.ಅವರಿಗೆ ಆ ಅರೆ ನಿಮಿಷದ ಅವಕಾಶವನ್ನು ಒದಗಿಸಿ ಕೊಟ್ಟು ಪ್ರಾಣವನ್ನು ಕಾಪಾಡಿದ ಪುಸ್ತಕದ ಮೇಲೆ ಅವರಿಗೆ ಕೃತಜ್ಞತಾ ಭಾವ.ಖಿರ್ದಿ ಪುಸ್ತಕವೇ ತಮ್ಮ ಜೀವ ಉಳಿಸಿತು ಎಂಬುದು ಅವರ ನಂಬಿಕೆ.ಆದರೆ ನಿಜವಾಗಿ ನೋಡಿದರೆ ಶಾನುಭೋಗರು ಉಳಿದದ್ದು ಖಿರ್ದಿ ಪುಸ್ತಕದಿಂದಲ್ಲ.ಹುಲಿಯ ಧರ್ಮಶ್ರದ್ಧೆಯಿಂದ.ಭರತ ಖಂಡದ ಹುಲಿಗಳ ಧರ್ಮಶ್ರದ್ಧೆ,ಹಿಂದಿನಿಂದ ದಾಳಿ ಮಾಡಿ ಕೊಲ್ಲದಿರುವ ಅವರ ಉದಾರ ಗುಣವೇ ಶಾನುಭೋಗರು ಹುಲಿಯಿಂದ ಪಾರಾಗಲು ಕಾರಣವಾಗಿದೆ.

ಸಂದರ್ಭದೊಂದಿಗೆ ಸ್ವಾರಸ್ಯವನ್ನು ಬರೆಯಿರಿ.

೧. ''ಖಂಡವಿದೆಕೋ,ಮಾಂಸವಿದೆಕೋ,ಗುಂಡಿಗೆಯ ಬಿಸಿರಕ್ತವಿದೆಕೋ''.

ಈ ಮೇಲಿನ ವಾಕ್ಯವನ್ನು ಎ.ಎನ್ ಮೂರ್ತಿರಾಯರು ಬರೆದ 'ಸಮಗ್ರ ಲಲಿತಪ್ರಬಂಧಗಳು' ಎಂಬ ಸಂಕಲನದಿಂದ ಆರಿಸಲಾದ 'ವ್ಯಾಘ್ರಗೀತೆ ' ಎಂಬ ಗದ್ಯಭಾಗದಿಂದ ಆಯ್ದುಕೊಳ್ಳಲಾಗಿದೆ.

ಶಾನುಭೋಗರನ್ನು ಬೇಟೆಯಾಡಬೇಕೆಂದು ಹುಲಿ ಅವರನ್ನು ಹಿಂಬಾಲಿಸಿತು. ಆದರೆ ಹುಲಿಯ ಧರ್ಮಶ್ರದ್ಧೆಯ ಪ್ರಕಾರ ಅದು ಹಿಂದಿನಿಂದ ದಾಳಿ ಮಾಡುವ ಹಾಗಿರಲಿಲ್ಲ. ಇದನ್ನೆ ಅರಿತಿದ್ದ ಶಾನುಭೋಗರು ಆದಷ್ಟು ಅದಕ್ಕೆ ಬೆನ್ನು ಹಾಕಿ ನಡೆಯುತ್ತ ಅದರ ದಾಳಿಯಿಂದ ತಪ್ಪಿಸಿಕೊಳ್ಳುತ್ತಿದ್ದರು.ಮೇಲೆ ಬಿದ್ದೆ ಬಿಡಲೆ ಎಂದು ಯೋಚಿಸಿದ ಹುಲಿಗೆ ತಾನು ಸದ್ವಂಶದಲ್ಲಿ ಜನಿಸಿದವನು ಎಂಬುದು ನೆನಪಾಯಿತು.''ಖಂಡವಿದೆಕೋ,ಮಾಂಸವಿದಕೋ, ಗುಂಡಿಗೆಯ ಬಿಸಿರಕ್ತವಿದೆಕೋ'' ಎಂದು ಎದುರಿಗೇ ಬಂದು ಹಸು ಆಹ್ವಾನಿಸಿದರೂ ಸತ್ಯವ್ರತೆಯಾದ ಪುಣ್ಯಕೋಟಿಯನ್ನು ತಿನ್ನದೆ ತನ್ನ ಪ್ರಾಣವನ್ನೆ ತೊರೆದ ತನ್ನ ಅಜ್ಜನನ್ನು ಹುಲಿಯು ನೆನಪಿಸಿಕೊಂಡಿತು ಎಂದು ಲೇಖಕರು ವಿವರಿಸುವ ಸಂದರ್ಭದಲ್ಲಿ ಮೇಲಿನ ಮಾತು ಬಂದಿದೆ.

ಸ್ವಾರಸ್ಯ : ಹುಲಿಯು ತನ್ನನ್ನು ತಿನ್ನುವುದೆಂಬ ಅರಿವಿದ್ದರೂ ಕೊಟ್ಟ ಮಾತಿನಂತೆ ಹುಲಿಗೆ ಆಹಾರವಾಗಲು ಬಂದ ಪುಣ್ಯಕೋಟಿ ಹಸುವಿನ ಪ್ರಾಮಾಣಿಕತೆ ,ಸತ್ಯ ಇಲ್ಲಿ ವ್ಯಕ್ತವಾಗಿದೆ. ಎಂತಹ ಸಂದರ್ಭದಲ್ಲಿಯೂ ಸತ್ಯವನ್ನು ಬಿಡಬಾರದೆಂಬ ತತ್ವ ಇಲ್ಲಿ ವ್ಯಕ್ತವಾಗಿದೆ.

೨. ''ಸ್ವಧರ್ಮವೇ ನಿಧನಂ ಶ್ರೇಯಃ''

ಈ ಮೇಲಿನ ವಾಕ್ಯವನ್ನು ಎ.ಎನ್ ಮೂರ್ತಿರಾಯರು ಬರೆದ 'ಸಮಗ್ರ ಲಲಿತಪ್ರಬಂಧಗಳು' ಎಂಬ ಸಂಕಲನದಿಂದ ಆರಿಸಲಾದ 'ವ್ಯಾಘ್ರಗೀತೆ ' ಎಂಬ ಗದ್ಯಭಾಗದಿಂದ ಆಯ್ದುಕೊಳ್ಳಲಾಗಿದೆ.

ಸಂದರ್ಭ: ಶಾನುಭೋಗರ ಮೇಲೆ ಹಿಂದಿನಿಂದ ಮೇಲೆ ಬಿದ್ದಾದರೂ ಅವರನ್ನು ಕೊಲ್ಲಬೇಕೆಂದು ಹುಲಿಯು ಒಂದು ಕ್ಷಣ ಆಲೋಚಿಸಿತು.ಆ ಸಂದರ್ಭದಲ್ಲಿ ಅದಕ್ಕೆ ಪುಣ್ಯಕೋಟಿಯ ಸತ್ಯತೆಯನ್ನು ಮೆಚ್ಚಿ ತನ್ನ ಪ್ರಾಣವನ್ನು ಬಿಟ್ಟ ತನ್ನ ವಂಶದ ಹಿರಿಯ ಹುಲಿಯ ನೆನಪಾಯಿತು.ಅಂತಹ ಹುಲಿಯ ಮೊಮ್ಮಗನಾಗಿ ಹುಟ್ಟಿ ತಾನು ಆದರ್ಮಕ್ಕೆ ಕೈ ಹಾಕುವುದೆ ? ಎಂದು ಆಲೋಚಿಸಿದ ಹುಲಿಗೆ ಭಗವದ್ಗೀತೆಯಲ್ಲಿ ಬಂದಿರುವ ಮೇಲಿನ ವಾಕ್ಯ ನೆನಪಾಯಿತುಎಂದು ಲೇಖಕರು ಹೇಳಿದ್ದಾರೆ.

ಸ್ವಾರಸ್ಯ: ಪ್ರತಿಯೊಬ್ಬರೂ ತಮ್ಮ ತಮ್ಮ ಧರ್ಮವನ್ನು ಪಾಲಿಸಿದರೆ ಯಶಸ್ಸು ಸಿಗುವುದು ,ಕುಲಧರ್ಮಕ್ಕೆ ಅಪಚಾರವೆಸಗಬಾರದು ಎಂಬ ತತ್ವ ಇಲ್ಲಿ ವ್ಯಕ್ತವಾಗಿದೆ.

೩. ''ದೇವರೆ, ಮರ ಹತ್ತುವಷ್ಟು ಅವಕಾಶ ಕರುಣಿಸು''

ಈ ಮೇಲಿನ ವಾಕ್ಯವನ್ನು ಎ.ಎನ್ ಮೂರ್ತಿರಾಯರು ಬರೆದ 'ಸಮಗ್ರ ಲಲಿತಪ್ರಬಂಧಗಳು' ಎಂಬ ಸಂಕಲನದಿಂದ ಆರಿಸಲಾದ 'ವ್ಯಾಘ್ರಗೀತೆ ' ಎನ್ನುವ ಗದ್ಯಭಾಗದಿಂದ ಆಯ್ದುಕೊಳ್ಳಲಾಗಿದೆ.

ಶಾನುಭೋಗರು ಹುಲಿಗೆ ಬೆನ್ನು ಹಾಕಿ ಅದರ ಆಕ್ರಮಣವನ್ನು ತಪ್ಪಿಸಿಕೊಳ್ಳಲು ಸಾಕಷ್ಟು ಪ್ರಯತ್ನಿಸಿ ನಡೆದು ನಡೆದು ಸುಸ್ತಾದರು. ಕೊನೆಗೆ ಅವರಿಗೆ ನೆನಪಾಗಿದ್ದು ಅವರ ಬಳಿಯಲ್ಲಿದ್ದ ಖಿರ್ದಿ ಪುಸ್ತಕ.ಅದನ್ನು ಪ್ರಯೋಗಿಸಿ ಅದರಿಂದ ಹುಲಿಯ ಗಮನ ಸ್ವಲ್ಪವಾದರೂ ಚಲಿಸಿದರೆ ,ಅಷ್ಟರಲ್ಲಿ ಸಮೀಪದ ಮರಕ್ಕೆ ಹಾರಿ ಮೇಲಕ್ಕೇರಬಹುದೆಂದು ಯೋಚಿಸಿ ಪುಸ್ತಕವನ್ನು ಹುಲಿಯ ಮುಖಕ್ಕೆ ಬೀಸಿದರು.ಬಳಲಿಕೆಯಿಂದ ಜಡವಾಗಿದ್ದ ಮನಸ್ಥಿತಿಯಲ್ಲಿದ್ದ ಹುಲಿಗೆ ಏನಾಯಿತೆಂದು ಅರಿಯಲು ಅರೆನಿಮಿಷ ಬೇಕಾಯಿತು.ಆಗ ಶಾನುಭೋಗರು ಮೇಲಿನಂತೆ ಯೋಚಿಸುತ್ತಾ ಒಂದೇ ಉಸಿರಿನಲ್ಲಿ ಮರದ ಕಡೆ ಧಾವಿಸಿದರು.

ಸ್ವಾರಸ್ಯ : ಜೀವ ಉಳಿಸಿಕೊಳ್ಳಲು ಒಂದು ಅವಕಾಶ ಸಿಕ್ಕರೆ ಸಾಕು ,ಬದುಕಿದೆನಾದರೆ ಮುಂದೇನಾದರೂ ಸಾಧಿಸಬಹುದು ಎನ್ನುವುದು ಮೇಲಿನ ವಾಕ್ಯದ ಸ್ವಾರಸ್ಯವಾಗಿದೆ.

೪. ''ನಾನು ಮುಖ ಮೇಲಾಗಿ ಬಿದ್ದಿದ್ದೇನೆ?''

ಈ ಮೇಲಿನ ವಾಕ್ಯವನ್ನು ಎ.ಎನ್ ಮೂರ್ತಿರಾಯರು ಬರೆದ 'ಸಮಗ್ರ ಲಲಿತಪ್ರಬಂಧಗಳು' ಎಂಬ ಸಂಕಲನದಿಂದ ಆರಿಸಲಾದ 'ವ್ಯಾಘ್ರಗೀತೆ 'ಎಂಬ ಗದ್ಯಭಾಗದಿಂದ ಆಯ್ದುಕೊಳ್ಳಲಾಗಿದೆ.

ಸಂದರ್ಭ:ಹುಲಿಯಿಂದ ತಪ್ಪಸಿಕೊಳ್ಳಬೇಕೆಂದು ಶಾನುಭೋಗರು ತಮ್ಮ ಬಳಿಯಿದ್ದ ಖಿರ್ದಿ ಪುಸ್ತಕವನ್ನು

ಆದರ ಮುಖಕ್ಕೆ ಬೀಸಿದರು. ಅದು ಗಾಬರಿಯಾಗಿದ್ದ ಸಂದರ್ಭ ಬಳಸಿ ಓಡಿ ಹೋಗುತ್ತಿದ್ದಾಗ ಕಲ್ಲು ಎಡವಿ ಬಿದ್ದು ಮೂರ್ಛೆ ಹೋದರು.ಅಷ್ಟರಲ್ಲಿ ಅಲ್ಲಿಗೆ ರೈತರು ಬಂದಿದ್ದರಿಂದ ಹುಲಿ ಅಲ್ಲಿಂದ ಪಲಾಯನ ಮಾಡಿತು.ಆದರೂ ಶಾನುಭೋಗರ ಮನಸ್ಸಿನಲ್ಲಿ ಸಂಶಯವೊಂದು ಕಾಡುತ್ತಿತ್ತು.ನಿಸ್ಸಹಾಯಕರಾಗಿ ಪ್ರಜ್ಞೆಯಿಲ್ಲದೆ ಬಿದ್ದಾಗಲೂ ಹುಲಿ ಇವರನ್ನು ಏಕೆ ಎಳದೊಯ್ಯಲಿಲ್ಲ ಎಂದು ಯೋಚಿಸಿದ ಅವರು ಗಾಡಿಯವರನ್ನು ಮೇಲಿನಂತೆ ಕೇಳಿದರು.ಆದರೆ ಶಾನುಭೋಗರು ಬೆನ್ನು ಮೇಲಾಗಿ ಬಿದ್ದುದ್ದರಿಂದ ಹುಲಿಯು ತನ್ನ ಕುಲಧರ್ಮ ಪಾಲಿಸಿದ್ದರಿಂದ ಶಾನುಭೋಗರು ಹುಲಿಯಿಂದ ಪಾರಾಗಿದ್ದರು.

ಸ್ವಾರಸ್ಯ : ಹುಲಿಯು ಶಾನುಭೋಗರನ್ನು ತಿನ್ನಲು ಸದವಕಾಶ ಒದಗಿತ್ತಾದರೂ ಅದು ತಿನ್ನದೇ ಓಡಿ ಹೋಗಿದ್ದು ಹೇಗೆ ಸಾಧ್ಯ ? ಕೊನೆಯವರೆಗೂ ಹುಲಿ ತನ್ನ ಕುಲಧರ್ಮ ಉಳಿಸಿಕೊಂಡಿತ್ತು ಎಂಬುದನ್ನು ಮೇಲಿನ ವಾಕ್ಯವು ಸೂಚಿಸುವುದು.

೫. ''ಹುಲಿ ಈಗ ಎಷ್ಟು ಹಸಿದಿರಬೇಕು''

ಈ ಮೇಲಿನ ವಾಕ್ಯವನ್ನು ಎ.ಎನ್ ಮೂರ್ತಿರಾಯರು ಬರೆದ 'ಸಮಗ್ರ ಲಲಿತಪ್ರಬಂಧಗಳು' ಎಂಬ ಸಂಕಲನದಿಂದ ಆರಿಸಲಾದ 'ವ್ಯಾಘ್ರಗೀತೆ ' ಎನ್ನುವ ಗದ್ಯಭಾಗದಿಂದ ಆಯ್ದುಕೊಳ್ಳಲಾಗಿದೆ.

ಸಂದರ್ಭ :ಬೇಟೆಯಾಡುವ ಉದ್ದೇಶದಿಂದ ತಮ್ಮನ್ನು ಹಿಂಬಾಲಿಸಿದ ಹುಲಿಯಿಂದ ತಪ್ಪಿಸಿಕೊಂಡ ಶಾನುಭೋಗರು ''ಕುಡಿದ ನೀರು ಅಲುಗದ ಹಾಗೆ'' ಅಲ್ಲದಿದ್ದರೂ ಜೀವ ಸಹಿತ ಮನೆ ಸೇರಿಕೊಂಡರು.ರಸದೂಟವನ್ನು ಮಾಡಿದರು.ಆ ಸಂದರ್ಭದಲ್ಲಿ ಅವರು ಹುಲಿಯನ್ನು ಮೇಲಿನಂತೆ ನೆನಪಿಸಿಕೊಂಡರು.

ಸ್ವಾರಸ್ಯ: ಶಾನುಭೋಗರನ್ನು ತಿನ್ನಲು ಹುಲಿ ನಡೆಸಿದ ಹರಸಾಹಸ ವ್ಯರ್ಥವಾಗಿ ಕೊನೆಗೂ ಶಾನುಭೋಗರು ಮನೆ ಸೇರಿಕೊಂಡರು. ಅವರು ಊಟ ಮಾಡುವಾಗ ಸಹಜವಾಗಿ ತನ್ನಂತೆಯೇ ಹಸಿದ ಇನ್ನೊಂದು ಜೀವ ನೆನಪಾದುದು ಅವರೊಳಗೆ ಅಡಗಿದ್ದ ಮಾನವೀಯ ಗುಣವನ್ನು,ಜೊತೆಗೆ ತಾನು ಬಚಾವಾದುದರ ಬಗ್ಗೆ ತನ್ನ ಬಗ್ಗೆ ಅಭಿಮಾನವನ್ನೂ ಮೇಲಿನ ವಾಕ್ಯ ಸೂಚಿಸುವುದು.

ಬಿಟ್ಟಿರುವ ಸ್ಥಳಗಳನ್ನು ಸೂಕ್ತ ಪದಗಳಿಂದ ತುಂಬಿ

೧. ಮಂತ್ರಿತ್ವ ಹೋಗಿ ಕೇವಲ -------ಮಾತ್ರ ಉಳಿದಿತ್ತು(ಶಾನುಭೋಗಿಕೆ)

೨. ಖಿರ್ದಿ ಪುಸ್ತಕ ------ ಬ್ರಹ್ಮಾಸ್ತ್ರ.(ಶಾನುಭೋಗರ)

೩. ನೆಲದಿಂದ ಮೇಲೆದ್ದುಕೊಂಡಿದ್ದ ------ಎಡವಿ ಶಾನುಭೋಗರು ಬಿದ್ದರು.(ಕಲ್ಲನ್ನು)

೪. ರೈತರು ತಿಂಗಳ ಬೆಳಕಿನಲ್ಲಿ ------ಹೊಡೆಯುತ್ತಿದ್ದರು.(ಗಾಡಿ)

೫. ಶಾನುಭೋಗರು ಉಳಿದಿದ್ದು-------ಪುಸ್ತಕದಿಂದಲ್ಲ.(ಖಿರ್ದಿ)

ಸಂಭವನೀಯ ಪ್ರಶ್ನೆಗಳು -ಉತ್ತರಗಳು

ಮೂರು -ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿ.

೧.ಹುಲಿಯು ಪ್ರಾಣಿಗಳನ್ನು ಕೊಂದು ತಿನ್ನುವುದು ಅಪರಾಧವಲ್ಲ ಎಂದು ಲೇಖಕರು ಅಭಿಪ್ರಾಯ ಪಡಲು ಕಾರಣವೇನು ?

ಹುಲಿ ಪ್ರಾಣಿಗಳನ್ನು ಕೊಂದು ತಿನ್ನುವುದು ನಿಜ .ಆದರೆ ನಿಷ್ಪಕ್ಷಪಾತವಾದ ದೃಷ್ಟಿಯಿಂದ ನೋಡಿದರೆ ಅದರಲ್ಲಿ ತಪ್ಪೇನಿದೆ? ಶಾಕಾಹಾರವನ್ನು ತಿಂದು ಬದುಕಬಹುದಾದ ಮಾನವನೇ ಮಾಂಸವನ್ನು ತಿನ್ನಬಹುದಾದರೆ ಹುಲಿಯಲ್ಲಿ ಅದೊಂದು ದೊಡ್ಡ ಅಪರಾಧವೇ? ಅದು ಆಹಾರಕ್ಕಾಗಿ ಕೊಲ್ಲುವುದರಲ್ಲಿ ತಪ್ಪೇನೂ ಇಲ್ಲ ಎಂದು ಲೇಖಕರ ಅಭಿಪ್ರಾಯವಾಗಿದೆ.

೨. ಹುಲಿಯು ಶಾನುಭೋಗರನ್ನು ನೋಡಿ ಪರಮಾನಂದ ಹೊಂದಿದ ಸಂದರ್ಭ ವಿವರಿಸಿ.

ಖಜಾನೆಗೆ ಹಣ ಕಟ್ಟಿ ಶಾನುಭೋಗರು ತಮ್ಮ ಹಳ್ಳಿಗೆ ಮರಳಲು ಮದಲಿಂಗನ ಕಣಿವೆಯನ್ನು ಹಾದು ಹೋಗಬೇಕಿತ್ತು.ಅಲ್ಲೇ ರಸ್ತೆಗೆ ದೂರದಲ್ಲಿ ಇದ್ದ ಗುಹೆಯಲ್ಲಿ ಮಲಗಿದ್ದ ಹುಲಿಗೆ ಎಚ್ಚರವಾದಾಗ ಅದಕ್ಕೆ ತನ್ನ ಹೊಟ್ಟೆ ಬರಿದಾಗಿದೆಯೆಂದು ಭಾಸವಾಯಿತು.ವಿಧಿ ಏನು ಆಹಾರ ಒದಗಿಸುವುದೋ ಎಂದು ಯೋಚಿಸಿದ ಅದು ಬಂಡೆಗಳ ಮರೆಯಲ್ಲಿ ನಡೆಯುತ್ತಿದ್ದಾಗ ಮಧಿರವಾದ ಗಂಧವೊಂದು ಅದರ ಘ್ರಾಣೇಂದ್ರಿಯವನ್ನು ಆಕ್ರಮಿಸಿತು.ಅದರ ಜಾಡು ಹಿಡಿದು ಬಂದ ಹುಲಿಯು ರಸ್ತೆಯ ಬಳಿ ಬಂದಾಗ ಶಾನುಭೋಗರನ್ನು ನೋಡಿತು. ದುಂಡು ದುಂಡಾದ ಶಾನುಭೋಗರ ಶರೀರವನ್ನು ನೋಡಿ ಹುಲಿಗೆ ಪರಮಾನಂದವಾಯಿತು.

೩.ಹುಲಿಯಿಂದ ತಪ್ಪಿಸಿಕೊಳ್ಳಲು ಶಾನುಭೋಗರು ಮಾಡಿದ ಉಪಾಯ ವಿವರಿಸಿ.(ಶಾನುಭೋಗರಿಗೆ ತಲೆಸುತ್ತಿ ಬರಲು ಕಾರಣವಾದ ಸನ್ನಿವೇಶ ವಿವರಿಸಿ.)

ಭರತಖಂಡದ ಹುಲಿಗಳು ಹಿಂದಿನಿಂದ ಪ್ರಾಣಿಗಳ ಮೇಲೆ ಬೀಳುವುದಿಲ್ಲ ವೆಂದು ಅರಿತಿದ್ದ ಶಾನುಭೋಗರು ಅದು ತಮ್ಮ ತಲೆಯ ಮೇಲೆ ಬರುವ ವೇಳೆಗೆ ಸರಿಯಾಗಿ ಸ್ವಲ್ಪ ಬಾಗಿದರು.ಹುಲಿ ನೆಲಕ್ಕೆ ಇಳಿದು ಅವರ ಕಡೆ ತಿರುಗುವುದರೊಳಗಾಗಿ ಅವರೂ ಹಿಂದಿರುಗಿ ಬಂದ ದಾರಿಯಲ್ಲೇ ಪುನಃ ನಡೆದರು.ಹುಲಿ ಕತ್ತು ಎತ್ತಿ ನೋಡಿದರೆ ಶಾನುಭೋಗರು ಮತ್ತೆ ಅದರ ಕಡೆಗೇ ಬೆನ್ನು ತಿರುಗಿಸಿ ನಡೆಯುತ್ತಿದ್ದರು. ಈ ಸ್ಪರ್ಧೆ ಐದಾರು ಸಾರಿ ನಡೆಯುವುದರೊಳಗೆ ಇಬ್ಬರ ವೇಗವೂ ಸಲಸಲಕ್ಕೆ

ಹೆಚ್ಚಿತ್ತು.ಒಂದು ಸಲವಾದರೂ ಹುಲಿಗೆ ಶಾನುಭೋಗರ ಮುಖ ದರ್ಶನವಾಗಲೇ ಇಲ್ಲ. ಈ ಪ್ರಯತ್ನದಲ್ಲಿಯೇ ಶಾನುಭೋಗರ ತಲೆ ಸುತ್ತಲಾರಂಭಿಸಿತು.

೪. ಖಿರ್ದಿ ಪುಸ್ತಕವು ಶಾನುಭೋಗರಿಗೆ ಬ್ರಹ್ಮಾಸ್ತ್ರವಾದ ಬಗೆ ಹೇಗೆ ?

ಹುಲಿಯಿಂದ ಜೀವ ಉಳಿಸಿಕೊಳ್ಳುವ ಪ್ರಯತ್ನದಲ್ಲಿ ಹುಲಿಗೆ ಮುಖ ತೋರಿಸದೆ ಬೆನ್ನು ತಿರುಗಿಸಿ ನಡೆದು ನಡೆದು ಶಾನುಭೋಗರಿಗೆ ದಣಿವಾಯಿತು. ಆ ವಿಪತ್ತಿನ ಸನ್ನಿವೇಶದಲ್ಲಿ ಅವರಿಗೆ ತಮ್ಮ ಬಳಿಯಿದ್ದ ಖಿರ್ದಿ ಪುಸ್ತಕ ನೆನಪಾಯಿತು. ಖಿರ್ದಿ ಪುಸ್ತಕವು ಶಾನುಭೋಗರ ಬ್ರಹ್ಮಾಸ್ತ್ರ. ಬೇರಾವ ಆಯುಧವೂ ಅವರ ಬಳಿ ಇಲ್ಲವಾದ ಕಾರಣ ಅದನ್ನೆಪ್ರಯೋಗಿಸಿ ಹುಲಿಯ ಗಮನವನ್ನು ಚಲಿಸುವ ಪ್ರಯತ್ನ ಮಾಡುವುದು ಅವರ ಉದ್ದೇಶವಾಗಿತ್ತು.ಆದ್ದರಿಂದ ಆ ಪುಸ್ತಕದಿಂದಲೇ ಹುಲಿಯ ಮುಖಕ್ಕೆ ಬಡಿದು ಅದಕ್ಕೆ ಅರಿವಾಗಲು ಬೇಕಾದ ಅರೆನಿಮಿಷವನ್ನು ಶಾನುಭೋಗರು ಅಲ್ಲಿಂದ ಓಡಲು ಬಳಸಿಕೊಂಡರು.

೫ .ಹುಲಿಯು ತನ್ನ ಕುಲಧರ್ಮ ಪಾಲಿಸಿದ ರೀತಿ ವಿವರಿಸಿ.

ತನ್ನನ್ನು ಹಿಂಬಾಲಿಸಿ ಬಂದ ಹುಲಿಯಿಂದ ತಪ್ಪಿಸಿಕೊಳ್ಳಲು ಶಾನುಭೋಗರು ಅದಕ್ಕೆ ಬೆನ್ನು ಹಾಕಿಯೇ ನಡೆದು ಸುಸ್ತಾದರು. ಹುಲಿಗಳು ಹಿಂದಿನಿಂದ ಮೇಲೆ ಬೀಳುವುದಿಲ್ಲ. ಮುಂದಿನಿಂದಲೇ ದಾಳಿ ಮಾಡುತ್ತವೆ ಎಂದು ಅರಿತಿದ್ದ ಅವರು ಬೆನ್ನು ತಿರುಗಿಸಿ ನಡೆಯುತ್ತಲೇ ಇದ್ದರು.ಕೊನೆಗೆ ಸಾಕಾಗಿ ಹುಲಿಯ ಗಮನವನ್ನು ಬೇರೆಡೆಗೆ ಸೆಳೆದು ಆ ಅರೆನಿಮಿಷದ ಸಮಯವನ್ನು ಉಪಯೋಗಿಸಿಕೊಂಡು ಓಡಲು ಪ್ರಯತ್ನಿಸಿ ಮುಂದಿದ್ದ ಕಲ್ಲು ಎಡವಿ ಪ್ರಜ್ಞೆ ತಪ್ಪಿ ಬಿದ್ದರು. ಅಷ್ಟರಲ್ಲಿ ಅಲ್ಲಿಗೆ ರೈತರು ಬಂದಿದ್ದನ್ನು ಅರಿತು ಹುಲಿ ಓಡಿ ಹೋಯಿತು.ಆದರೂ ಶಾನುಭೋಗರು ಎಚ್ಚರ ತಪ್ಪಿಬಿದ್ದಾಗಲೂ ಹುಲಿ ಅವರನ್ನು ಎಳೆದೊಯ್ಯಲಿಲ್ಲ.ಏಕೆಂದರೆ ಶಾನುಭೋಗರು ಬೆನ್ನು ಮೇಲಾಗಿ ಬಿದ್ದಿದ್ದರು.ಹೀಗೆ ಹುಲಿಯು ಕೊನೆಯವರಗೂ ತನ್ನ ಕುಲಧರ್ಮವನ್ನು ಪಾಲಿಸಿತ್ತು.

ಒಂದು ಪೂರ್ಣ ವಾಕ್ಯದಲ್ಲಿ ಉತ್ತರಿಸಿ.

೧. ಲೇಖಕರಿಗೆ ಹುಲಿಯ ಧರ್ಮಶ್ರದ್ಧೆಯ ಕಥೆ ಹೇಳಿದವರು ಯಾರು?

(ಅವರ ಬಂಧುವಾದ ಕೃಷ್ಣಮೂರ್ತಿಯವರು )

೨. ಶಾನುಭೋಗರು ಹೇಗೆ ಜೀವನ ನಡೆಸಯುತ್ತಿದ್ದರು ?

ಶಾನುಭೋಗರು ತಮ್ಮ ವಂಶದ ಕೀರ್ತಿಗೆ ಕುಂದು ತರದಂತೆ ಖಿರ್ದಿ ಪುಸ್ತಕವನ್ನು ನಿಷ್ಠೆಯಿಂದ

ಕಾಪಾಡಿಕೊಂಡು ಮಸಿಯ ಕಾಣಿಕೆಗಾಗಿ ರೈತರನ್ನು ಪೀಡಿಸದೆ , ದೇವರು ಕೊಟ್ಟಷ್ಟರಲ್ಲಿ ತೃಪ್ತಿಗೊಂಡು ಜೀವನ ನಡೆಸುತ್ತಿದ್ದರು.

೩.ಖಿರ್ದಿ ಪುಸ್ತಕದ ಕುರಿತು ಶಾನುಭೋಗರು ಯಾವ ಭಾವನೆ ಹೊಂದಿದ್ದರು ?

ಶಾನುಭೋಗರಿಗೆ ಖಿರ್ದಿ ಪುಸ್ತಕ ಕೇವಲ ಜೀವನದ ಆಧಾರವಲ್ಲ; ಅವರ ರಾಜಭಕ್ತಿಯ ಲಾಂಛನವಾಗಿತ್ತು.

೪. ಹುಲಿಗಳಿಗೂ, ಹಸುಗಳಿಗೂ ಆದರ್ಶವಾದ ಪವಿತ್ರ ಕಥೆ ಯಾವುದು?

ಖಂಡವಿದೆಕೋ, ಮಾಂಸವಿದೆಕೋ,ಗುಂಡಿಗೆಯ ಬಿಸಿರಕ್ತವಿದೆಕೋ ಎಂದು ಹಸು ಆಹ್ವಾನ ಕೊಟ್ಟರೂ ಅದನ್ನು ತಿನ್ನದ ಹುಲಿರಾಯ ಪುಣ್ಯಕೋಟಿ ಎಂಬ ಆ ಹಸುವಿನ ಸತ್ಯತೆಗೆ ಮೆಚ್ಚಿ ತನ್ನ ಪ್ರಾಣವನ್ನೆ ನೀಡಿದ ಕಥೆ ಹುಲಿಗಳಿಗೂ ,ಹಸುಗಳಿಗೂ ಆದರ್ಶವಾದ ಪವಿತ್ರ ಕಥೆಯಾಗಿದೆ

೫. ಹುಲಿಯ ಕುರಿತು ಶಾನುಭೋಗರ ಬಾಯಿಂದ ಮೆಚ್ಚಿಕೆಯ ಮಾತು ಬರಲು ಕಾರಣವೇನು ?

ಬೆನ್ನು ಮೇಲಾಗಿ ಬಿದ್ದ ಶಾನುಭೋಗರನ್ನು ಎಳೆದೊಯ್ಯದ ಹುಲಿಯು ಹಿಂದಿನಿಂದ ಪ್ರಾಣಿಗಳ ಮೇಲೆ ಆಕ್ರಮಣ ಮಾಡದ ತನ್ನ ಕುಲಧರ್ಮವನ್ನು ಕಾಪಾಡಿಕೊಂಡಿದ್ದು ನೋಡಿ ಶಾನುಭೋಗರು ಹುಲಿಯ ಕುರಿತು ಭಲೆ ಎಂದರು.

೬. ಶಾನುಭೋಗರ ವಿಷಯದಲ್ಲಿ ಹುಲಿಗೆ ಮೆಚ್ಚುಗೆ ಮೂಡಲು ಕಾರಣವೇನು ?

ತನಗೆ ಸರಿಯಾದ ಎದುರಾಳಿ ಸಿಕ್ಕಿದನು ಎಂದು ಶಾನುಭೋಗರ ವಿಷಯದಲ್ಲಿ ಹುಲಿಗೆ ಮೆಚ್ಚುಗೆ ಮೂಡಿತು.

೭.ಶಾನುಭೋಗರ ದೃಷ್ಟಿಯಲ್ಲಿ ಅವರನ್ನು ಹುಲಿಯಿಂದ ರಕ್ಷಿಸಿದ್ದು ಯಾವುದು ?

ಶಾನುಭೋಗರ ದೃಷ್ಟಿಯಲ್ಲಿ ಅವರನ್ನು ಹುಲಿಯಿಂದ ರಕ್ಷಿಸಿದ್ದು ಅವರ ಖಿರ್ದಿಪುಸ್ತಕ.

೮.ಲೇಖಕರ ಪ್ರಕಾರ ಶಾನುಭೋಗರನ್ನು ರಕ್ಷಿಸಿದ್ದು ಯಾವುದು?

ಲೇಖಕರ ಪ್ರಕಾರ ಶಾನುಭೋಗರನ್ನು ರಕ್ಷಿಸಿದುದು ಹುಲಿಯ ಧರ್ಮಶ್ರದ್ಧೆ

ಸಂದರ್ಭದೊಂದಿಗೆ ಸ್ವಾರಸ್ಯ ವಿವರಿಸಿ.

೧. ''ಮಡಿಯ ಬೇಕಾದರೆ ಮಾಡಿಯೇ ತೀರುತ್ತೇನೆ.''

ಈ ಮೇಲಿನ ವಾಕ್ಯವನ್ನು ಎ.ಎನ್ ಮೂರ್ತಿರಾಯರು ಬರೆದ 'ಸಮಗ್ರ ಲಲಿತಪ್ರಬಂಧಗಳು' ಎಂಬ ಸಂಕಲನದಿಂದ ಆರಿಸಲಾದ 'ವ್ಯಾಘ್ರಗೀತೆ ' ಎಂಬ ಗದ್ಯಭಾಗದಿಂದ ಆಯ್ದುಕೊಳ್ಳಲಾಗಿದೆ.

ತನ್ನನ್ನೇ ಹಿಂಬಾಲಿಸಿ ಬರುತ್ತಿದ್ದ ಹುಲಿಯನ್ನು ನೋಡಿ ಗಾಬರಿಯಾದರೂ ಶಾನುಭೋಗರು ಹುಲಿಯು ಹೇಗೆಂದರೂ ಹಿಂದಿನಿಂದ ದಾಳಿ ಮಾಡುವುದಿಲ್ಲ ಎಂದು ಅರಿತಿದ್ದರು. ಹಾಗಾಗಿ ಅದಕ್ಕೆ ಮುಖ ತೋರಿಸದೆ ಬೆನ್ನು ತಿರುಗಿಸಿ ನಡೆದರು. ಆದರೆ ಈ ದೊಂಬರಾಟವನ್ನು ಎಷ್ಟು ಸಲ ನಡೆಸಲು ಸಾಧ್ಯ? ಕೊನೆಗೆ ಈ ವಿಪತ್ತಿನ ಸನ್ನಿವೇಶದಲ್ಲಿ ಅವರಿಗೆ ನೆನಪಾಗಿದ್ದು ಖಿರ್ದಿ ಪುಸ್ತಕ.ಹುಲಿಯ ಪಂಜಾದಿಂದ ಒಂದೇಟು ಬಿದ್ದರೆ ಸಾಕು-ಮುಂದೆ ಯಾವುದರ ಅರಿವೂ ಉಳಿಯುವುದಿಲ್ಲ.ನೋವೇನಿದ್ದರೂ ಒಂದು ಕ್ಷಣದ ಮಾತು .ಕೈಯಲ್ಲಿದ್ದ ಖಿರ್ದಿಪುಸ್ತಕವನ್ನೇ ಬ್ರಹ್ಮಾಸ್ತ್ರವಾಗಿ ಬಳಸಬೇಕೆಂದು ಯೋಚಿಸುವಾಗ ಶಾನುಭೋಗರು ಮೇಲಿನಂತೆ ಆಲೋಚಿಸಿದರು.

ಸ್ವಾರಸ್ಯ: ಸಾಧಿಸಿಯೇ ತೀರಬೇಕು ಎಂತಹ ಕಷ್ಟವಿದ್ದರೂ ಹಿಡಿದ ಛಲ ಬಿಡಬಾರದು ಎನ್ನುವುದು ಮೇಲಿನ ವಾಕ್ಯದಿಂದ ಸ್ಪಷ್ಟವಾಗುವುದು.

೨. ಕರ್ಮಣ್ಯೇವಾಧಿಕಾರಸ್ತೇ ಮಾ ಫಲೇಷು ಕದಾಚನ !

ಈ ಮೇಲಿನ ವಾಕ್ಯವನ್ನು ಎ.ಎನ್ ಮೂರ್ತಿರಾಯರು ಬರೆದ 'ಸಮಗ್ರ ಲಲಿತಪ್ರಬಂಧಗಳು' ಎಂಬ ಸಂಕಲನದಿಂದ ಆರಿಸಲಾದ 'ವ್ಯಾಘ್ರಗೀತೆ ' ಎಂಬ ಗದ್ಯಭಾಗದಿಂದ ಆಯ್ದುಕೊಳ್ಳಲಾಗಿದೆ. ಹುಲಿಯ ಕೈಯಿಂದ ಪಾರಾಗಲು ತನ್ನ ಬಳಿಯಿರುವ ಖಿರ್ದಿ ಪುಸ್ತಕವನ್ನೇ ಬ್ರಹ್ಮಾಸ್ತ್ರವಾಗಿ ಬಳಸಲು ಶಾನುಭೋಗರು ನಿರ್ಧರಿಸಿದರು.ಆದರೆ ಅದು ಹುಲಿಯ ಮೇಲೇನು ಫಲಿಸೀತು ? ಅದನ್ನು ಹುಲಿಯ ಮೇಲೆ ಪ್ರಯೋಗಿಸಿದ್ದರಿಂದ ಹುಲಿ ಸಾಯುವುದಿರಲಿ,ಅದರ ಮೇಲೆ ಯಾವ ಪರಿಣಾಮವೂ ಆಗುವುದಿಲ್ಲ.ಆದರೆ ಹುಲಿಯ ಗಮನ ಸ್ವಲ್ಪ ಚಲಿಸಿದರೆ ಆಷ್ಟರಲ್ಲಿ ಸಮೀಪದ ಮರಕ್ಕೆ ಹಾರಿ ಮೇಲಕ್ಕೇರಬಹುದೆಂದು ಹುಚ್ಚು ಆಸೆ.ಅಂತೂ ಮನುಷ್ಯ ಪ್ರಯತ್ನದಲ್ಲಿರುವುದನ್ನೆಲ್ಲಾ ಮಾಡಿಬಿಡಬೇಕು ಎಂದು ಶಾನುಭೊಗರು ಮೇಲಿನಂತೆ ಭಗವದ್ಗೀತೆಯ ವಾಕ್ಯವನ್ನು ನೆನೆಪಿಸಿಕೊಂಡರು.

ಸ್ವಾರಸ್ಯ: ಪ್ರತಿಯೊಂದು ಜೀವಿಯೂ ತನ್ನ ಕರ್ಮಕ್ಕೆತಕ್ಕ ಪ್ರತಿಫಲ ಪಡೆದೇ ಪಡೆಯುವುದು.ಆದ್ದರಿಂದ ಕರ್ಮದಲ್ಲಿ ಶ್ರದ್ಧೆಯಿರಬೇಕು ಎನ್ನುವುದು ಮೇಲಿನ ವಾಕ್ಯದ ಸ್ವಾರಸ್ಯವಾಗಿದೆ

ಮೊದಲಿನ ಎರಡು ಪದಗಳ ಸಂಬಂಧದಂತೆ ಮೂರನೆ ಪದಕ್ಕೆ ಸಂಬಂಧಿಸಿದ ಪದವನ್ನು ಬರೆಯಿರಿ.

೧. ದೃಷ್ಟಿ: ದಿಟ್ಟಿ: :ಕ್ಷಣ : --(ಚಣ)

೨. ಧರ್ಮ : ಅಧರ್ಮ : : ಸಂಶಯ : ----( ನಿಸ್ಸಂಶಯ)

೩. ಬ್ರಹ್ಮಾಸ್ತ್ರ : ಸವರ್ಣದೀರ್ಘ ಸಂಧಿ : : ಘ್ರಾಣೇಂದ್ರಿಯ ---- (ಗುಣಸಂಧಿ)

೪. ಆಶ್ಚರ್ಯ : ಅಚ್ಚರಿ : : ಕೀರ್ತಿ : ------( ಕೀರುತಿ)

೫. ಪುಸ್ತಕ : ಹೊತ್ತಗೆ : : ವ್ಯಾಘ್ರ : ---(ಬಗ್ಗ)

೬. ಧರ್ಮ : ದಮ್ಮ : : ಹುಲಿ : —(ಪುಲಿ)

೭. ಅಜ್ಜ : ಆರ್ಯ : : ಕಜ್ಜ : ——(ಕಾರ್ಯ)

೮. ಪಶು : ಪಸು : : ವಶ ----(ಬಸ)

೯. ಸತ್ಯವ್ರತೆ: ತತ್ಪುರುಷ ಸಮಾಸ ::ಬೆನ್ನುತಿರುಗಿಸು : -----(ಕ್ರಿಯಾಸಮಾಸ)

೧೦. ಕುಲಧರ್ಮ : ತತ್ಪುರುಷ ಸಮಾಸ : : ನೀರೆರೆಚಿ-----(ಕ್ರಿಯಾಸಮಾಸ)

೧೧. ಮುಖದರ್ಶನ : ತತ್ಪುರುಷ ಸಮಾಸ : : ಪಂಚೇಂದ್ರಿಯ :----(ದ್ವಿಗು ಸಮಾಸ)

೧೨. ಸದ್ವಂಶ : ಜಶ್ತ್ವಸಂಧಿ : : ಪರಮಾನಂದ : -----(ಸವರ್ಣದೀರ್ಘ ಸಂಧಿ)

೧೩. ಇಮ್ಮಡಿ : ದ್ವಿಗು ಸಮಾಸ: : ಧರ್ಮಶ್ರದ್ಧೆ: ------(ತತ್ಪುರುಷ ಸಮಾಸ)

೧೪. ಭಗವದ್ಗೀತೆ : ಜಶ್ತ್ವಸಂಧಿ: : ಪಂಚೇಂದ್ರಿಯ : -----(ಗುಣಸಂಧಿ)

೧೫. ಶುದ್ಧ:ಸುದ್ಧ : : ಶ್ರದ್ಧಾ: ಸಡ್ಡೆ

ಬಿಟ್ಟ ಸ್ಥಳ ತುಂಬಿರಿ

೧. ರಾಜಭಕ್ತಿ ಪದದಲ್ಲಿರುವ ಸಮಾಸ ----(ತತ್ಪುರುಷ ಸಮಾಸ)

೨.ಅಕ್ಷರ ಪದದ ತದ್ಭವ ರೂಪ -----(ಅಕ್ಕರ)

೩.ರಾಯ ಪದದ ತತ್ಸಮ ರೂಪ -----(ರಾಜ)

೪.ನಿಷ್ಠಾ ಪದದ ತದ್ಭವ ರೂಪ ---(ನಿಟ್ಟೆ)ನಿಷ್ಠೆ

೫.. ಕಣಿವೆಯನ್ನು ಪದದಲ್ಲಿರುವ ಸಂಧಿ ----(ಆಗಮ ಸಂಧಿ)

೬.ಬೇಗ ಬೇಗ ಪದವು ಈ ವ್ಯಾಕರಣಾಂಶದ ಉದಾಹರಣೆ -----(ದ್ವಿರುಕ್ತಿ)

೭. ಶಾನುಭೋಗಿಕೆ ಪದದಲ್ಲಿರುವ ವ್ಯಾಕರಣಾಂಶ-----(ತದ್ಧಿತಾಂತ ಭಾವನಾಮ)

೮.ಆ ಇಂದ್ರಿಯ ಪದದಲ್ಲಿರುವ ಸಮಾಸ ----(ಗಮಕ ಸಮಾಸ)

೯.ಘಂಟಾ ಪದದ ತದ್ಭವ ರೂಪ ---(ಗಂಟೆ)

೧೦. ಮೆಲ್ಲಮೆಲ್ಲನೆ ಪದದಲ್ಲಿರುವ ವ್ಯಾಕರಣಾಂಶ------(ದ್ವಿರುಕ್ತಿ)

೧೧. ಬೆಕ್ಕಿನಂತೆ ದೇಹವನ್ನು ಹುದುಗಿಸಿಕೊಂಡು ಹುಲಿ ಮೆಲ್ಲಮೆಲ್ಲನೆ ಶಾನುಭೋಗರ ಹತ್ತಿರ ಸರಿಯಿತು.

ಈ ವಾಕ್ಯದಲ್ಲಿರುವ ಅಲಂಕಾರ ------(ಉಪಮಾ)

೧೨. ಖಿರ್ದಿ ಪುಸ್ತಕ ಶಾನುಭೋಗರ ಬ್ರಹ್ಮಾಸ್ತ್ರ ಇಲ್ಲಿರುವ ಅಲಂಕಾರ ----(ರೂಪಕ)

ಕೆಳಗಿನ ಪ್ರಶ್ನೆಗಳಿಗೆ ನಾಲ್ಕು ಆಯ್ಕೆಗಳನ್ನು ನೀಡಲಾಗಿದೆ. ಅವುಗಳಲ್ಲಿ ಸರಿಯಾದ ಉತ್ತರವನ್ನು ಆರಿಸಿ ಬರೆಯಿರಿ.

೧.'ಪಶು' ಪದದ ತದ್ಭವ ರೂಪವಿದು

ಎ) ಪಸು ಬಿ)ಪ್ರಾಣಿ ಸಿ)ಮೃಗ ಡಿ)ಪಾಶ

೨.'ಘ್ರಾಣೇಂದ್ರಿಯ ' ಪದವು ಈ ಸಂಧಿಗೆ ಉದಾಹರಣೆಯಾಗಿದೆ.

ಎ) ಆದೇಶ ಬಿ)ಗುಣ ಸಿ)ಲೋಪ ಡಿ) ಸವರ್ಣದೀರ್ಘ

೩.'ಜೀರ್ಣವಸ್ತ್ರ' ಪದದಲ್ಲಿರುವ ಸಮಾಸ

ಎ) ಕ್ರಿಯಾ ಬಿ)ತತ್ಪುರುಷ ಸಿ)ಗಮಕ ಡಿ)ಕರ್ಮಧಾರಯ

೪.'ಹಿಂಸ್ರಪಶು' ಪದವು ಈ ಸಮಾಸಕ್ಕೆ ಉದಾಹರಣೆಯಾಗಿದೆ.

ಎ) ಕರ್ಮಧಾರಯ ಬಿ)ಗಮಕ ಸಿ) ಕ್ರಿಯಾ ಡಿ) ಅಂಶಿ

೫.'ಭಗವದ್ಗೀತೆ ' ಪದವು ಈ ಸಂಧಿಗೆ ಉದಾಹರಣೆಯಾಗಿದೆ.

ಎ) ಆದೇಶ ಬಿ)ಜಶ್ತ್ವ ಸಿ)ಶ್ಚುತ್ವ ಡಿ) ಆಗಮ

೬.'ಶ್ರದ್ಧೆ ಪದದ ತದ್ಭವ ರೂಪವಿದು

ಎ)ಶ್ರದ್ಧಾ ಬಿ)ನಂಬಿಕೆ ಸಿ)ನಿಷ್ಠೆ ಡಿ)ಶ್ರಾದ್ಧ

೭.'ಮಂತ್ರಿತ್ವ' ಪದದಲ್ಲಿರುವ ವ್ಯಾಕರಾಂಶವಿದು

ತದ್ಧಿತಾಂತ ಅವ್ಯಯ ಬಿ)ತದ್ಧಿತಾಂತ ನಾಮಪದ ಸಿ)ತದ್ಧಿತಾಂತ ಭಾವನಾಮ ಡಿ) ಕೃದಂತ

೮.'ಶಾನುಭೋಗಿಕೆ 'ಪದವು ಈ ವ್ಯಾಕರಣಾಂಸಕ್ಕೆ ಉದಾಹರಣೆಯಾಗಿದೆ.

ಎ)ಕೃದಂತಾವ್ಯಯ ಬಿ)ಕೃದಂತಭಾವನಾಮ ಸಿ)ಕೃದಂತ ನಾಮ ಡಿ) ತದ್ಧಿತಾಂತ ಭಾವನಾಮ

೯.'ಕೀರ್ತಿ' ಪದದ ತದ್ಭವ ರೂಪವಿದು -

ಎ) ಅಪಕೀರ್ತಿ ಬಿ) ಕೀರುತಿ ಸಿ)ಪ್ರಸಿದ್ಧಿ ಡಿ)ಕೀರತಿ

೧೦.'ಅಲ್ಲಿಂದ ವಾಪಸ್ಸು ಹೊರಡುವ ವೇಳೆಗೆ ಸಂಜೆ ಆರು ಘಂಟೆಯಾಗಿತ್ತು ' ಈ ವಾಕ್ಯದಲ್ಲಿರುವ ಸಂಖ್ಯಾವಾಚಕ

ಎ) ಸಂಜೆ ಬಿ) ಘಂಟೆ ಸಿ) ಹೊರಡು ಡಿ)ಆರು

೧೧.'ಬೇಗ ಬೇಗ' ಪದದಲ್ಲಿರುವ ವ್ಯಾಕರಣಾಂಶ ---

ಎ) ದ್ವಿರುಕ್ತಿ ಬಿ)ಅನುಕರಣಾವ್ಯಯ ಸಿ)ಜೋಡುನುಡಿ ಡಿ)ನುಡಿಗಟ್ಟು

೧೨.'ಧರ್ಮಶ್ರದ್ಧೆ' ಪದದಲ್ಲಿರುವ ಸಮಾಸವಿದು ---

ಎ)ಕರ್ಮಧಾರಯ ಬಿ)ಗಮಕ ಸಿ)ತತ್ಪುರುಷ ಡಿ) ಬಹುರ್ವಿಹಿ

೧೩.'ಮುಖ 'ಪದದ ತದ್ಭವ ರೂಪ -

ಎ) ಮೊಗ ಬಿ)ವದನ ಸಿ)ಮುಕ ಡಿ)ಮೊಖ

೧೪.'ನಿಂತೀತು ' ಪದವು ಈ ಕ್ರಿಯಾಪದಕ್ಕೆ ಉದಾಹರಣೆಯಾಗಿದೆ

ಎ) ವಿಧ್ಯರ್ಥಕ ಬಿ)ನಿಷೇಧಾರ್ಥಕ ಸಿ)ಸಂಭಾವನಾರ್ಥಕ ಡಿ) ಸಾಮಾನ್ಯಾರ್ಥಕ

೧೫.'ಮೆಚ್ಚಿಕೆ' ಪದದಲ್ಲಿರುವ ವ್ಯಾಕರಣಾಂಶವಿದು ---

ಎ) ಕೃದಂತಾವ್ಯಯ ಬಿ)ಕೃದಂತ ಭಾವನಾಮ ಸಿ)ಕೃದಂತನಾಮ ಡಿ)ತದ್ಧಿತಾಂತ ಭಾವನಾಮ

೧೬.'ಸದ್ವಂಶ ' ಪದವು ಈ ಸಂಧಿಗೆ ಉದಾಹರಣೆಯಾಗಿದೆ.

ಎ) ಆದೇಶ ಬಿ)ಶ್ಚುತ್ವ ಸಿ)ಜಶ್ತ್ವ ಡಿ)ಅನುನಾಸಿಕ

೧೭.'ಕ್ಷಣ 'ಪದದ ತದ್ಭವ ರೂಪ ---

ಎ)ಚಣ ಬಿ)ನಿಮಿಷ ಸಿ)ಸಮಯ ಡಿ)ಕಣ

೧೮.'ಶಾನುಭೋಗಿಕೆ' ಪದವು ಈ ವ್ಯಾಕರಣಾಂಶದ ಉದಾಹರಣೆಯಾಗಿದೆ –

ಎ) ತದ್ಧಿತಾಂತ ಭಾವನಾಮ ಬಿ)ತದ್ಧಿತಾಂತಅವ್ಯಯ ಸಿ)ಕೃದಂತಾವ್ಯಯ ಡಿ) ಕೃದಂತಭಾವನಾಮ

೧೯.'ವ್ಯಾಘ್ರ ' ಪದದ ತದ್ಭವ ರೂಪ ---

ಎ)ಹುಲಿ ಬಿ)ಬಗ್ಗ ಸಿ) ಪುಲಿ ಡಿ)ವಾಘು

೨೦.'ಸುವರ್ಣಾಕ್ಷರ ' ಪದವು ಈ ಸಂಧಿಗೆ ಉದಾಹರಣೆಯಾಗಿದೆ

ಎ)ಗುಣ ಸಂಧಿ ಬಿ) ಆದೇಶ ಸಂಧಿ ಸಿ) ಸವರ್ಣ ದೀರ್ಘ ಡಿ) ಯಣ್

೨೧.'ಮುಖದರ್ಶನ ' ಪದವು ಈ ಸಮಾಸದ ಉದಾಹರಣೆಯಾಗಿದೆ -

ಎ)ತತ್ಪುರುಷ ಬಿ)ಕರ್ಮಧಾರಯ ಸಿ)ಗಮಕ ಡಿ)ಕ್ರಿಯಾ

೨೨.'ಬ್ರಹ್ಮಾಸ್ತ್ರ ' ಪದವು ಈ ಸಂಧಿಗೆ ಉದಾಹರಣೆಯಾಗಿದೆ --

ಎ) ಗುಣ ಬಿ)ಆದೇಶ ಸಿ)ಸವರ್ಣದೀರ್ಘ ಡಿ)ಆದೇಶ

೨೩. 'ಮಂಜು ಮಂಜು 'ಪದದಲ್ಲಿರುವ ವ್ಯಾಕರಣಾಂಶವಿದು --

ಎ)ದ್ವಿರುಕ್ತಿ ಬಿ)ಅನುಕರಣಾವ್ಯಯ ಸಿ)ಜೋಡುನುಡಿ ಡಿ)ನುಡಿಗಟ್ಟು

೨೪.'ಎದೆನಡುಗು ' ಪದವು ಈ ವ್ಯಾಕರಣಾಂಶದ ಉದಾಹರಣೆಯಾಗಿದೆ -

ಎ)ನುಡಿಗಟ್ಟು ಬಿ)ಅನುಕರಣಾವ್ಯಯ ಸಿ)ಜೋಡುನುಡಿ ಡಿ)ದ್ವಿರುಕ್ತಿ

೨೫.'ನೀರೆರೆಚಿ ' ಪದವು ಈ ಸಂಧಿಗೆ ಉದಾಹರಣೆಯಾಗಿದೆ

ಎ)ಆಗಮ ಬಿ)ಲೋಪ ಸಿ)ಗುಣ ಡಿ)ಜಶ್ತ್ವ

೨೬.'ವದನಾರವಿಂದ ' ಪದದಲ್ಲಿರುವ ಸಂಧಿ ---

ಎ) ಸವರ್ಣದೀರ್ಘ ಬಿ) ಗುಣ ಸಿ) ಜಶ್ತ್ವ ಡಿ) ಆದೇಶ

೨೭.'ಪುಸ್ತಕ 'ಪದದ ತದ್ಭವ ರೂಪ ----

ಎ) ಮಸ್ತಕ ಬಿ) ಹೊತ್ತಿಗೆ ಸಿ)ಹೊತ್ತಗೆ ಡಿ)ಬುಕ್

೨೮.'ಫಲಿಸೀತು ' ಪದವು ಈ ಮಾದರಿಯ ಕ್ರಿಯಾಪದಕ್ಕೆ ಉದಾಹರಣೆಯಾಗಿದೆ

ಎ) ನಿಷೇಧಾರ್ಥಕ ಬಿ)ಸಂಭಾವನಾರ್ಥಕ ಸಿ)ವಿಧ್ಯರ್ಥಕ ಡಿ)ಸಾಮಾನ್ಯಾರ್ಥಕ

೨೯.'ಹುಲಿ ಕತ್ತೆತ್ತಿ ನೋಡಿದರೆ ಶಾನುಭೋಗರು ಮತ್ತೆ ತನ್ನ ಕಡೆಗೇ ಬೆನ್ನು ತಿರುಗಿಸಿದ್ದಾರೆ 'ಈ ವಾಕ್ಯದಲ್ಲಿರಬೇಕಾದ ಲೇಖನ ಚಿಹ್ನೆ ----

ಎ)ಪೂರ್ಣವಿರಾಮ ಬಿ)ಅರ್ಧವಿರಾಮ ಸಿ)ಪ್ರಶ್ನಾರ್ಥಕ ಡಿ)ಆಶ್ಚರ್ಯಸೂಚಕ

೩೦.'ಎತ್ತುಗಳ ಘಂಟೆಯ ಶಬ್ದವನ್ನು ಕೇಳಿದ ಹುಲಿ ಕೆಲವು ನಿಮಿಷ ತಡೆದು ನೋಡಿತು ' ಈ ವಾಕ್ಯದಲ್ಲಿರುವ ಪರಿಮಾಣವಾಚಕ ಪದ -

ಎ) ಎತ್ತುಗಳು ಬಿ)ಶಬ್ದವನ್ನು ಸಿ)ಕೆಲವು ಡಿ)ನಿಮಿಷ

೩೧.'ಇಮ್ಮಡಿ' ಪದವು ಈ ಸಮಾಸಕ್ಕೆ ಉದಾಹರಣೆಯಾಗಿದೆ

ಎ) ದ್ವಿಗು ಬಿ)ದ್ವಂದ್ವ ಸಿ)ಕರ್ಮಧಾರಯ ಡಿ)ಅಂಶಿ

೩೨.'ಕತ್ತೆತ್ತಿ ' ಪದವು ಈ ಸಂಧಿಗೆ ಉದಾಹರಣೆಯಾಗಿದೆ

ಎ)ಲೋಪ ಸಂಧಿ ಬಿ)ಆಗಮ ಸಂಧಿ ಸಿ)ಆದೇಶಸಂಧಿ ಡಿ)ಜಶ್ತ್ವಸಂಧಿ

## ಉತ್ತರಗಳು

೧.ಎ)ಪಸು ೨.ಬಿ)ಗುಣ ಸಂಧಿ ೩. ಬಿ)ಕರ್ಮಧಾರಯ ೪. ಎ)ಕರ್ಮಧಾರಯ ೫.ಬಿ)ಜಶ್ತ್ವ ೬. ಎ)ಶ್ರದ್ಧಾ(ಸಡ್ಡೆ) ೭.ಸಿ)ತದ್ಧಿತಾಂತಭಾವನಾಮ ೮. ಡಿ)ತದ್ಧಿತಾಂತ ಭಾವನಾಮ ೯.ಬಿ)ಕೀರುತಿ ೧೦.ಡಿ)ಆರು ೧೧.ಎ)ದ್ವಿರುಕ್ತಿ ೧೨.ಸಿ)ತತ್ಪುರುಷ ೧೩.ಎ)ಮೊಗ ೧೪.ಸಂಭಾವನಾರ್ಥಕ

೧೫. ಬಿ)ಕೃದಂತಭಾವನಾಮ ೧೬.ಸಿ)ಜಠ್ಠ ೧೭. ಎ)ಚಣ ೧೮.ಎ)ತದ್ಧಿತಾಂತ ಭಾವನಾಮ
೧೯.ಬಿ)ಬಗ್ಗ ೨೦.ಸಿ)ಸವರ್ಣದೀರ್ಘ ಸಂಧಿ ೨೧. ಎ)ತತ್ಪುರುಷ ಸಮಾಸ
೨೨. ಸಿ)ಸವರ್ಣದೀರ್ಘ ೨೪.ಎ)ದ್ವಿರುಕ್ತಿ ೨೫. ಬಿ)ಲೋಪ ೨೬. ಎ)ಸವರ್ಣದೀರ್ಘ
೨೭. ಬಿ)ಹೊತ್ತಿಗೆ ೨೮.ಬಿ)ಸಂಭಾವನಾರ್ಥಕ ೨೯.ಡಿ)ಆಶ್ಚರ್ಯ ಸೂಚಕ ೩೦.ಸಿ)ಕೆಲವು
೩೧. ಎ)ದ್ವಿಗು ೩೨.ಎ)ಲೋಪಸಂಧಿ

ಮೊದಲಿನ ಎರಡು ಪದಗಳಿಗೆ ಇರುವ ಸಂಬಂಧದಂತೆ ಮೂರನೆಯ ಪದಕ್ಕೆಸರಿ ಸಂಬಂದ ಹೊಂದುವ ಪದ ಬರೆಯಿರಿ.

೧.ಒಂದೆರಡು : ಲೋಪಸಂಧಿ : : ಮೈಯಲ್ಲಿ : ----

೨.ಪ್ರಾಣ : ಹರಣ : : ವಸ್ತ್ರ : ----

೩.ಮೆಲ್ಲಮೆಲ್ಲನೆ : ದ್ವಿರುಕ್ತಿ : : ಬೆನ್ನುತಿರುಗಿಸು : ----

೪.ದೇಹವನ್ನು : ಆಗಮಸಂಧಿ : : ಒಂದೇಟು : ----

೫.ಮುಖದರ್ಶನ : ತತ್ಪುರುಷಸಮಾಸ : : ನೀರೆರೆಚು : ___

ಉತ್ತರಗಳು

೧.ಆಗಮ ಸಂಧಿ ೨. ೩.ನುಡಿಗಟ್ಟು ೪.ಲೋಪಸಂಧಿ ೫.ಲೋಪಸಂಧಿ

ಅಲಂಕಾರ ಹೆಸರಿಸಿ ಸಮನ್ವಯಿಸಿ

ವದನಾರವಿಂದ

ಉಪಮೇಯ :ವದನ

ಉಪಮಾನ : ಅರವಿಂದ

ಅಲಂಕಾರ : ರೂಪಕ

ಸಮನ್ವಯ : ಉಪಮೇಯವಾದ ವದನವನ್ನು ಉಪಮಾನವಾದ ಅರವಿಂದ ಎಂದು ಅಬೇಧ ಕಲ್ಪಿಸಿರುವುದರಿಂದ ಇದು ರೂಪಕ ಅಲಂಕಾರವಾಗಿದೆ.

**ಪಧ್ಯಪಾಠ ಎಮ್ಮ ನುಡಿಗೇಳ್**

mamatabhagwat1@gmail.com

## -ಪಂಪ ಕವಿ ಪರಿಚಯ

ಪಂಪ ಮಹಾಕವಿಯು ವೆಂಗಿಮಂಡಲದ ವೆಂಗಿಪಳು ಎಂಬ ಅಗ್ರಹಾರದವನು. ಈತನ ಕಾಲ ಸುಮಾರು ಕ್ರಿ.ಶ. ೯೪೧. ಇವನು ವಿಕ್ರಮಾರ್ಜುನವಿಜಯ ಮತ್ತು ಆದಿಪುರಾಣ ಎಂಬ ಎರಡು ಕೃತಿಗಳನ್ನು ಬರೆದಿದ್ದಾನೆ.ಇವನು ಸರಸ್ವತೀ ಮಣಿಹಾರ ,ಸಂಸಾರ ಸಾರೋದಯ ,ಕವಿತಾಗುಣಾರ್ಣವ ಎಂಬ ಬಿರುದುಗಳನ್ನು ಹೊಂದಿದ್ದನು.

ಎಮ್ಮ ನುಡಿಗೇಳ್

- (ಆದಿ ಕವಿ ಪಂಪ)

ಪದ್ಯದ ಸಾರಾಂಶ (ಪಂಪಭಾರತಂ ಗದ್ಯಾನುವಾದ -ಎನ್. ಅನಂತರಂಗಾಚಾರ್)

ವ|| ಎಂಬೆನ್ನಗಮೆಯ್ದೆ ವಂದ ಪಿತೃದ್ವಂದ್ವ ಚರಣಕ್ಕೆವಿನಯವಿನಮಿತೋತ್ತಮಾಂಗ
ನಾದನರ್ವರುಂಪರಸಿತಡವರಿಸಿಯುಂ ತೆಬ್ಬರಿಸಿಯುಮಳ್ಕಿರೊಳಪ್ಪಿಕೊಂಡಮೃತವರ್ಷಿ ಕರ
ಪರಿಷೇಕದಿಂದೆ ಪುತ್ರಸ್ಪರ್ಷನಮಾಪ್ಯಾಯನಕೋಟಿಯಾಗೆ ಪುಳಕಿತ ಗಾತ್ರರುಮಾನಂದ ಬಾಷ್ಪವಾರಿ
ಧಾರಾಪರಿಕಲಿತನೇತ್ರರುಮಾಗಿ ಕಿರಿದಾನುಂ ಬೇಗಮಿರ್ದಲ್ಲಿ ಕಾರ್ಯವ್ಯಗ್ರ
ಪಾಪಿಪಾಶಾಶ್ರಿತರೆಲ್ಲರುಂ
ಕೇಳಲೆಂದು ಮಹೀಭುಜನಿಂತೆಂದಂ-

ಎನ್ನುವಷ್ಟರಲ್ಲಿ ಸಮೀಪಕ್ಕೆಬಂದ ತಂದೆತಾಯಿಗಳ ಚರಣಕ್ಕೆ(ಪಾದಕ್ಕೆ) ವಿನಯದಿಂದ ತಲೆಬಗ್ಗಿಸಿ ನಮಸ್ಕರಿಸಿದ(ದುಯೋರ್ಧನನು ತನ್ನ ತಂದೆತಾಯಿಗಳಾದ ಧೃತರಾಷ್ಟ್ರ ಗಾಂಧಾರಿಯರಿಗೆ) ದುಯೋರ್ಧನನನ್ನು ಇಬ್ಬರೂ ಹರಸಿದರು.ಮೈಯನ್ನು ಮುಟ್ಟಿನೋಡಿ ಯೂ ,ಸಮಾಧಾನ ಮಾಡಿಯೂ ಪ್ರೀತಿಯಿಂದ ಮಗನನ್ನು ಆಲಂಗಿಸಿದ ಅವರಿಗೆ ಅಮೃತವನ್ನು ಸುರಿಸುವ ಅಭಿಷೇಕಕ್ಕಿಂತ ಮಗನ ಸ್ಪರ್ಷವು ಅತಿಯಾದ ಆನಂದವನ್ನು ಉಂಟುಮಾಡಿತು.ರೋಮಾಂಚಿತವಾದ ಶರೀರವುಳ್ಳವರೂ ಸಂತೋಷದ, ಕಣ್ಣೀರಿನ ಪ್ರವಾಹದಿಂದ ತುಂಬಿದ ಕಣ್ಣುಳ್ಳವರೂ ಆದ ಅವರು ಸ್ವಲ್ಪ ಕಾಲ ಮೌನವಾಗಿದ್ದು,ಮುಂದಿನ ಕಾರ್ಯದಲ್ಲಿ ಆಸಕ್ತನಾದ ಪಾಪಿ ದುಯೋರ್ಧನನ ಪಾಶಕ್ಕೆ ಒಳಗಾದವರೆಲ್ಲರೂ ಕೇಳಲೆಂದು ಧೃತರಾಷ್ಟ್ರನು ಹೀಗೆಂದನು.

ಮ|| ಎನಗಂ ಪಾಂಡುಗಮಿಲ್ಲ ಭೇದಮಿಳೆಯಂ ಪಚ್ಚಾಳ್ವಮಾ ಪಾಂಡುನಂದನಂ
ದನರುಂ ಸೈದರೆ ನಿನ್ನೊಳೀ ಕಲಹಮುಂ ನಿನ್ನಿಂದಮಾಯ್ತೆಂದೊಡಿಂ |

ಮುನಿವೈ ಗಂಗೆಯ ಪೆರ್ಮರ್ಗಗಂಗೆ ಘಟಸಂಭೂತಂಗೆ ಕರ್ಣಾಂಗಸಾ
ಧ್ಯನೊಳಾ ಗಾಂಡಿವಿಯೊಳ್ ಕರುತ್ತಿರಿವರಾರಿಂ ಮಾಡುವಂ ಸಂಧಿಯುಂ ||

ನನಗೂ ಪಾಂಡುವಿಗೂ ಭೇದವಿಲ್ಲ; ಈ ಭೂಮಿಯನ್ನು(ರಾಜ್ಯವನ್ನು) ಭಾಗ ಮಾಡಿಕೊಂಡು ಆಳೋಣ.ಆ ಪಾಂಡುವಿನ ಮಕ್ಕಳು (ಪಾಂಡವರು)ನಿನ್ನೊಂದಿಗೆ ಹೊಂದಾಣಿಕೆಯಿಂದ ನಡೆದುಕೊಳ್ಳುವವರೇ ಆಗಿದ್ದಾರೆ.ನಿನ್ನಿಂದಲೇ ಈ ಕಲಹವು ಸಂಭವಿಸಿತು ಎಂದರೆ ನೀನು ಇನ್ನೂ ಕೋಪಿಸಿಕೊಳ್ಳುತ್ತೀಯೆ.ಭೀಷ್ಮ,ದ್ರೋಣ, ಕರ್ಣರಿಗೂ ಅಸಾಧ್ಯವಾದ (ಸೋಲಿಸಲು ಸಾಧ್ಯವಿಲ್ಲದ) ಆ ಆರ್ಜುನ(ಗಾಂಡೀವಿ) ನೊಂದಿಗೆ ಕೋಪದಿಂದ ಯುದ್ಧ ಮಾಡುವವರು ಯಾರಿದ್ದಾರೆ?ಆದ್ದರಿಂದ ಅವರೊಂದಿಗೆ (ಪಾಂಡವರೊಂದಿಗೆ) ಸಂಧಿ ಮಾಡಿಕೊಳ್ಳುವುದೇ ಉಚಿತವಾದುದುಎಂದು ಧೃತರಾಷ್ಟ್ರನು ದುರ್ಯೋಧನನಿಗೆ ಹೇಳಿದನು.

ಹರಿಣಿ|| ಪಗೆಗೆ ಕಣೆಯೊಂದುಂಟೇ ನಣ್ಪಿಂಗಾಮಾಗರಮುಂಟೆ ನೀಂ
ಬಗೆಯೆ ಪಗೆಯುಂ ನಣ್ಪುಂ ಕಯ್ಕೊಂಡ ಕಜ್ಜದಿನಲ್ತೆ ಪು |
ಟ್ಟುಗುಮರಸುಗಳ್ಗಿಂದೀ ಸಂದರ್ಥಶಾಸ್ತ್ರದೊಳೇಕೆ ಪೇಳ್
ಮಗನೆ ನೆಗಳ್ದೆ ಕಾರ್ಯಂ ಮಿತ್ರಾದಿ ಕಾರಕಮೆಂಬುದಂ ||

ಹಗೆತನಕ್ಕೆ ಒಂದು ಗಣಿಯಿದೆಯೆ? ಸ್ನೇಹಕ್ಕೆ ಒಂದು ಮನೆಯಿದೆಯೆ?ನೀನೇ ಆಲೋಚಿಸು.ಅರಸರಿಗೆ ಶತ್ರುತ್ವ ಮತ್ತು ಮಿತ್ರ ತ್ವಗಳೆರಡೂ ಅವರು ಕೈಗೊಳ್ಳುವ ಕಾರ್ಯದಿಂದಲ್ಲವೇ ಹುಟ್ಟುವುದು ಎಂದು ರಾಜರಿಗೆ ಯೋಗ್ಯವಾದ ಅರ್ಥಶಾಸ್ತ್ರದಲ್ಲಿ ಹೇಳಿಲ್ಲವೇ?ಅರ್ಥಶಾಸ್ತ್ರದಲ್ಲಿ ಹೇಳಿರುವ ''ಕೈಗೊಂಡ ಕಾರ್ಯವೇ ಸ್ನೇಹದ್ವೇಷಗಳಿಗೆ ಕಾರಣ''ವೆಂಬ ನೀತಿ ವಾಕ್ಯದಂತೆ ನೀನೇಕೆ ಮಾಡುವುದಿಲ್ಲ ? ಎಂದು ಧೃತರಾಷ್ಟ್ರನು ಮಗನಿಗೆ ಬುದ್ಧಿವಾದ ಹೇಳಿದನು.

ಕಂ || ನೀನುಳ್ಳೊಡೆಲ್ಲರೊಳರೆಮ
ಗೇನುಮಳಲ್ ಮನದೊಳಿಲ್ಲದೆಂತೆನೆ ಮಗನೇ |
ಭಾನುವೆ ಸಾಲದೆ ಪಗಲೆನಿ
ತಾನುಂ ದೀವಿಗೆಗಳುರಿದೊಡೇಂ ನಂದಿದೊಡೇಂ ||

ನೀನಿದ್ದರೆ ಎಲ್ಲರೂ ಇದ್ದ ಹಾಗೆ.ಮಗನೆ ನೀನೊಬ್ಬನುಳಿದರೆ ನಮಗೆ ಮನದಲ್ಲಿ ಯಾವ ಚಿಂತೆಯೂ ಇಲ್ಲ.ಅದು ಹೇಗೆಂದರೆ ಸೂರ್ಯನೊಬ್ಬನೇ ಸಾಲದೇ?ಹಗಲಿನಲ್ಲಿ ಎಷ್ಟು ದೀವಿಗೆಗಳು ಉರಿದರೇನು?

ಆರಿದರೇನು? (ಹಗಲಿನಲ್ಲಿ ಎಷ್ಟು ದೀವಿಗೆಗಳು ಉರಿದರೂ ಸೂರ್ಯನ ಮಹತ್ವ ಅವುಗಳಿಗೆ ದೊರೆಯುವುದಿಲ್ಲ.ಸೂರ್ಯನ ಪ್ರಭೆಯ ಮುಂದೆ ದೀವಿಗೆಳ ಬೆಳಕು ಕಂದಿ ಹೋಗುತ್ತದೆ.ಅಷ್ಟು ಪ್ರಾಮುಖ್ಯತೆ ಪಡೆಯುವುದಿಲ್ಲ. ಹಾಗೆಯೇ ದುರ್ಯೋಧನನೊಬ್ಬನು ಉಳಿದರೆ ಅವನ ತಂದೆ ತಾಯಿಗಳಿಗೆ ಉಳಿದ ಮಕ್ಕಳನ್ನು ಕಳೆದುಕೊಂಡ ದುಃಖ ಅಷ್ಟಾಗಿ ಕಾಡಲಾರದೇನೋ)

ವ|| ಅದಲ್ಲದೆಯುಂ ಪಾಂಡವರಪ್ಪೊಡೆನಗೆ ಪಾಂಡುರಾಜಂಗೆ ಬೆಸಕ್ಕೆಯ್ವುದ್ದೆನೆ ಬೆಸಕ್ಕೆವರೆಂದುದಂ
ಮೀರುವವರಲ್ಲರವರನಾನೆಂತುಮೊಡಂಬಡಿಸಿ ನೀನೆಂದುದನೆನಿಸುವೆನಿದರ್ಕೆ
ಮಾರ್ಕೊಳ್ಳದೊಡಂಬಡು
ನಿನ್ನಂ ಕಯ್ಯನೊಡ್ಡಿ ಬೇಡಿದಪ್ಪೆನೆಂದ ಧೃತರಾಷ್ಟ್ರನ ನುಡಿಗನುಬಲಮಾಗಿ
ಗಾಂಧಾರಿಯಿಂತೆಂದಳ್-

ಅದಲ್ಲದೆಯೂ ಪಾಂಡವರಾದರೊ ನನ್ನೊಡನೆ ಪಾಂಡುರಾಜನೊಂದಿಗೆ ಹೇಗೆ ವಿಧೇಯರಾಗಿದ್ದರೋ ಅಷ್ಟೇ ವಿಧೆಯರಾಗಿದ್ದಾರೆ.ಅವನೊಂದಿಗೆ ಹೇಗೆ ನಡೆದುಕೊಳ್ಳುತ್ತಿದ್ದರೋ ಹಾಗೆಯೇ ನಡೆದುಕೊಳ್ಳುವವರು.ನಾನು ಹೇಳಿದುದನ್ನು ಅವರು ಮೀರುವುದಿಲ್ಲ.ಅವರನ್ನು ನಾನು ಹೇಗಾದರೂ ಒಪ್ಪಿಸಿ ನೀನು ಹೇಳಿದುದಕ್ಕೆ ಒಪ್ಪಿಕೊಳ್ಳುವ ಹಾಗೆ ಮಾಡುವೆನು.ಇದಕ್ಕೆ ನೀನು ಪ್ರತಿಯಾಡದೆ ಒಪ್ಪಿಕೊ.ನಿನ್ನನ್ನು ಕೈಯೊಡ್ಡಿ ಬೇಡಿಕೊಳ್ಳುವೆನು ಎಂದು ಧೃತರಾಷ್ಟ್ರನು ದುರ್ಯೋಧನನಿಗೆ ಹೇಳಿದಾಗ ಅವನ ಮಾತನ್ನು ಬೆಂಬಲವಾಗಿ (ಅನುಮೋದಿಸಿ) ಗಾಂಧಾರಿಯು ಹೀಗೆ ಹೇಳಿದಳು.

ಚಂ || ಕುರುಕುಳನಂದನಂ ಪವನನಂದನನೆಂಬ ಮದಾಂಧಗಂಧಸಿಂ
ಧುರಮೆ ಕರುತ್ತು ಪಾಯೆ ಪಡಲಿಟ್ಟವೊಲಾದುದು ಪುಣ್ಯದೊಂದು ಪೆ|
ರ್ಮರನುಳಿವಂತೆ ನೀನುಳಿದೆಯಿನ್ನಿರಿವನ್ನರುಮಿಲ್ಲ ಮುತ್ತರುಂ
ಕುರುಡರುಮೆನ್ನದೆಮ್ಮ ನುಡಿಗೇಳ್ ಮಗನೇ ಬಗೆ ತಂದೆಗಿಂಬುಕೆಯ್ ||
ಕುರುಕುಲವೆನ್ನುವ ನಂದನವನವು ಪವನನಂದನನೆಂಬ (ಭೀಮ)ಮದದಿಂದ ಅಂಧನಾದ ಆನೆಯ ಕೋಪದ ದಾಳಿಗೆ ತುತ್ತಾಗಿ ಧ್ವಂಸವಾಯಿತು.ಪುಣ್ಯದಿಂದ ಒಂದು ದೊಡ್ಡ ಮರವು ಉಳಿವ ಹಾಗೆ ನೀನೊಬ್ಬನು ನಮ್ಮ ಪಾಲಿಗೆ ಉಳಿದಿದ್ದೀಯೆ.ಇನ್ನು ಯುದ್ಧ ಮಾಡಿವವರು ಯಾರೂ ಇಲ್ಲ.ಮುದುಕರು ,ಕುರುಡರು ಎನ್ನದೆ ನಮ್ಮ ಮಾತನ್ನು ಕೇಳು ಮಗನೆ.ತಂದೆಯ ಮಾತನ್ನು ಒಪ್ಪಿಕೋ. ಎಂದು

ಗಾಂಧಾರಿಯು ದುರ್ಯೋಧನನಿಗೆ ಹೇಳಿದಳು.

ಒಂದೊಂದು ವಾಕ್ಯದಲ್ಲಿ ಉತ್ತರಿಸಿ.

೧. ಭೀಮನಿಗೆ ಪವನನಂದನನೆಂಬ ಹೆಸರು ಬರಲು ಕಾರಣವೇನು ?

ಭೀಮನು ಕುಂತಿಗೆ ವಾಯುದೇವನ ವರಪ್ರಸಾದದಿಂದ ಜನಿಸಿದವನಾಗಿದ್ದರಿಂದ ಅವನಿಗೆ ಪವನನಂದನ ಎಂಬ ಹೆಸರು ಬಂದಿದೆ.

೨.ಘಟಸಂಭೂತ ಯಾರು

ದ್ರೋಣಾಚಾರ್ಯರು ಘಟಸಂಭೂತರು.

೩.ಗಾಂಡೀವಿ ಎಂದು ಅರ್ಜುನನನ್ನು ಏಕೆ ಕರೆಯುತ್ತಾರೆ ?

ಅರ್ಜುನನು ಗಾಂಡೀವ ಎಂಬ ಧನುಸ್ಸು ಹೊಂದಿದವನಾಗಿದ್ದರಿಂದ ಅವನ್ನು ಗಾಂಡೀವಿ ಎಂದು ಕರೆಯುತ್ತಾರೆ.

೪.ಪಂಪ ಭಾರತದ ಇನ್ನೊಂದು ಹೆಸರೇನು ?

ಪಂಪ ಭಾರತದ ಇನ್ನೊಂದು ಹೆಸರು ವಿಕ್ರಮಾರ್ಜುನ ವಿಜಯ

ಎರಡು- ಮೂರು ವಾಕ್ಯಗಳಲ್ಲಿ ಉತ್ತರಿಸಿ.

೧. ಸಂಧಿಯೇ ಉಚಿತವೆಂದು ಧೃತರಾಷ್ಟ್ರನು ಹೇಗೆ ಸಮರ್ಥಿಸಿದನು ?

ಯುದ್ಧಭೂಮಿಯಲ್ಲಿ ಏಕಾಂಗಿಯಾದ ದುರ್ಯೋಧನನ್ನೊಬ್ಬನನ್ನಾದರೂ ಉಳಿಸಿಕೊಳ್ಳಬೇಕೆಂಬ ಹಂಬಲದಿಂದ ಧೃತರಾಷ್ಟ್ರ ಗಾಂಧಾರಿಯರು ಯುದ್ಧಭೂಮಿಗೇ ಬಂದು ಅವನನ್ನುಸಂಧಿಸುತ್ತಾರೆ.ಧೃತರಾಷ್ಟ್ರನು ದುರ್ಯೋಧನನಿಗೆ ನನಗೂ ಪಾಂಡುವಿಗೂ ಭೇದವಿಲ್ಲ; ಈ ಭೂಮಿಯನ್ನು(ರಾಜ್ಯವನ್ನು) ಭಾಗ ಮಾಡಿಕೊಂಡು ಆಳೋಣ.ಆ ಪಾಂಡುವಿನ ಮಕ್ಕಳು (ಪಾಂಡವರು)ನಿನ್ನೊಂದಿಗೆ ಹೊಂದಾಣಿಕೆಯಿಂದ ನಡೆದುಕೊಳ್ಳುವವರೇ ಆಗಿದ್ದಾರೆ.ನಿನ್ನಿಂದಲೇ ಈ ಕಲಹವು ಸಂಭವಿಸಿತು ಎಂದರೆ ನೀನು ಇನ್ನೂ ಕೋಪಿಸಿಕೊಳ್ಳುತ್ತೀಯೆ.ಭೀಷ್ಮ,ದ್ರೋಣ, ಕರ್ಣರಿಗೂ ಅಸಾಧ್ಯವಾದ (ಸೋಲಿಸಲು ಸಾಧ್ಯವಿಲ್ಲದ) ಆ ಅರ್ಜುನ(ಗಾಂಡೀವಿ) ನೊಂದಿಗೆ ಕೋಪದಿಂದ ಯುದ್ಧ ಮಾಡುವವರು ಯಾರಿದ್ದಾರೆ? ಆದ್ದರಿಂದ ಅವರೊಂದಿಗೆ (ಪಾಂಡವರೊಂದಿಗೆ) ಸಂಧಿ ಮಾಡಿಕೊಳ್ಳುವುದೇ ಉಚಿತವಾದುದುಎಂದು ಬುದ್ಧಿ ಹೇಳಿದನು

೨. ದುರ್ಯೋಧನನಿಗೆ ಗಾಂಧಾರಿ ನೀಡಿದ ಉಪದೇಶವೇನು ?

ಕುರುಕುಲವೆನ್ನುವ ನಂದನವನವು ಪವನನಂದನನೆಂಬ (ಭೀಮ)ಮದದಿಂದ ಅಂಧನಾದ ಆನೆಯ ಕೋಪದ ದಾಳಿಗೆ ತುತ್ತಾಗಿ ಧ್ವಂಸವಾಯಿತು.ಪುಣ್ಯದಿಂದ ಒಂದು ದೊಡ್ಡ ಮರವು ಉಳಿವ ಹಾಗೆ ನೀನೊಬ್ಬನು ನಮ್ಮ ಪಾಲಿಗೆ ಉಳಿದಿದ್ದೀಯೆ.ಇನ್ನು ಯುದ್ಧ ಮಾಡಿವವರು ಯಾರೂ ಇಲ್ಲ.ಮುದುಕರು ,ಕುರುಡರು ಎನ್ನದೆ ನಮ್ಮ ಮಾತನ್ನು ಕೇಳು ಮಗನೆ.ತಂದೆಯ ಮಾತನ್ನು ಒಪ್ಪಿಕೋ. ಎಂದು ಗಾಂಧಾರಿಯು ದುರ್ಯೋಧನನಿಗೆ ಹೇಳಿದಳು.

ಎಂಟು-ಹತ್ತು ವಾಕ್ಯಗಳಲ್ಲಿ ಉತ್ತರಿಸಿ.

೧. ಧೃತರಾಷ್ಟ್ರನು ಸಂಧಿಮಾಡಿಕೊ ಎಂದು ದುರ್ಯೋಧನನಿಗೆ ಹೇಳಲು ಕಾರಣವೇನು ?

ದಾಯಾದಿ ಮತ್ಸರ ಮತ್ತು ಛಲದಿಂದಾಗಿ ಕೌರವನು ಯುದ್ಧವನ್ನೇ ಬಯಸಿದ ಕಾರಣ ಮಹಾಭಾರತ ಯುದ್ಧ ಅನಿವಾರ್ಯವಾಯಿತು.ಕೌರವನ ಹನ್ನೊಂದು ಅಕ್ಷೋಹಿಣಿ ಸೈನ್ಯ  ಪಾಂಡವರ ಏಳು ಅಕ್ಷೋಹಿಣಿ ಸೈನ್ಯದೊಳಗೆ ನಡೆದ ಯುದ್ಧದಲ್ಲಿ ಮೊದಲ ಹತ್ತು ದಿನ ಭೀಷ್ಮನ ಸೇನಾಧಿಪತ್ಯದಲ್ಲಿ ,ಅನಂತರದ ಐದು ದಿನ ದ್ರೋಣರ ಸೇನಾಧಿಪತ್ಯದಲ್ಲಿ ,ಎರಡು ದಿನ ಕರ್ಣನ ಸೇನಾಧಿಪತ್ಯದಲ್ಲಿ ಕೊನೆಯ ಅರ್ಧ ದಿನ ಶಲ್ಯನ ಸೇನಾಧಿಪತ್ಯದಲ್ಲಿ ಯುದ್ಧ ನಡೆದು ಕೌರವನ ತೊಂಬತ್ತೊಂಬತ್ತು ಮಂದಿ ಸಹೋದರರರು ಸಹಿತ ಹನ್ನೊಂದು ಅಕ್ಷೋಹಿಣಿ ಸೈನ್ಯ ನುಚ್ಚುನೂರಾಗಿ ಹೋಯ್ತು.ಉಳಿದಿರುವ ಒಬ್ಬ ಮಗನನ್ನಾದರೂ ಉಳಿಸಿಕೊಳ್ಳಬೇಕೆಂಬ ಉದ್ದೇಶದಿಂದ ಧೃತರಾಷ್ಟ್ರ ಗಾಂಧಾರಿಯರು ಯುದ್ಧಭೂಮಿಗೆ ಬಂದು ಕೌರವನ್ನು ಸಂಧಿಸುವರು. ಈ ಕಲಹವು ಅವನಿಂದಲೇ ಸಂಭವಿಸಿದುದು. ಪಾಂಡವರು ಹೇಗೆಂದರೂ ತನ್ನ ಮಾತನ್ನು ವಿರೋಧಿಸುವವರಲ್ಲ. ಆದರೆ ಕೌರವನ ಪಕ್ಷದಲ್ಲಿದ್ದ ಭೀಷ್ಮ,ದ್ರೋಣ ಕರ್ಣ ಯಾರಿಂದಲೂ ಗಾಂಡೀವಿಯನ್ನು ಎದುರಿಸಲು ಸಾಧ್ಯವಾಗಲಿಲ್ಲ. ಇನ್ನಾದರೂ ಅರ್ಥ ಮಾಡಿಕೊಂಡು ಸಂಧಿ ಮಾಡಿಕೊಳ್ಳುವುದು ಉಚಿತವೆಂದು ಧೃತರಾಷ್ಟ್ರನು ದುರ್ಯೋಧನನನಿಗೆ ಬುದ್ಧಿ ಹೇಳಿದನು.

೨.ದುರ್ಯೋಧನನ ತಂದೆತಾಯಿಯರು ಅವನನ್ನು ಸಂಧಿಗಾಗಿ ಪ್ರಾರ್ಥಿಸಿದ ರೀತಿಯನ್ನು ವಿವರಿಸಿ.

ಮಹಾಭಾರತ ಯುದ್ಧದಲ್ಲಿ ತಮ್ಮ ತೊಂಬತ್ತೊಂಬತ್ತು ಮಕ್ಕಳನ್ನು ಕಳೆದುಕೊಂಡ ಧೃತರಾಷ್ಟ್ರ ಗಾಂಧಾರಿಯರು ಉಳಿದ ದುರ್ಯೋಧನನನೊಬ್ಬನನ್ನಾದರೂ ಉಳಿಸಿಕೊಳ್ಳಬೇಕೆಂಬ ಉದ್ದೇಶದಿಂದ ಯುದ್ಧಭೂಮಿಗೆ ಬಂದು ಅವನನ್ನು ಸಂಧಿಸುವರು. ಈ ಭೂಮಿಯನ್ನು(ರಾಜ್ಯವನ್ನು) ಸಮಪಾಲು ಮಾಡಿಕೊಳ್ಳೋಣವೆಂದರೆ ಪಾಂಡವರು ಖಂಡಿತವಾಗಿಯೂ ವಿರೋಧಿಸುವವರಲ್ಲ.ಯುದ್ಧವು ಸಂಭವಿಸಿದುದೇ ನಿನ್ನಿಂದ.ನಿನ್ನವರಾರಿಂದಲೂ ಗಾಂಡೀವಿಯನ್ನುಸೋಲಿಸಲು

ಸಾಧ್ಯವಾಗಲಿಲ್ಲ.ಇನ್ನಾದರೂ ದ್ವೇಷವನ್ನು ಬಿಡು.ಅರ್ಥಶಾಸ್ತ್ರದಲ್ಲಿ ಹೇಳಿದ ಹಾಗೆ ದ್ವೇಷ ನಂಟುಗಳು ಏರ್ಪಡುವುದು ರಾಜನ ಕಾರ್ಯಗಳಿಂದ ,ನೀನಿದ್ದರೆ ಎಲ್ಲರೂ ಇದ್ದ ಹಾಗೆ.ಮಗನೆ ನೀನೊಬ್ಬನುಳಿದರೆ ನಮಗೆ ಮನದಲ್ಲಿ ಯಾವ ಚಿಂತೆಯೂ ಇಲ್ಲ.ಅದು ಹೇಗೆಂದರೆ ಸೂರ್ಯನೊಬ್ಬನೇ ಸಾಲದೇ? ಹಗಲಿನಲ್ಲಿ ಎಷ್ಟು ದೀವಿಗೆಗಳು ಉರಿದರೇನು? ಆರಿದರೇನು?

ಅದಲ್ಲದೆಯೂ ಪಾಂಡವರಾದರೋ ನನ್ನೊಡನೆ ಪಾಂಡುರಾಜನೊಂದಿಗೆ ಹೇಗೆ ವಿಧೇಯರಾಗಿದ್ದರೋ ಅಷ್ಟೇ ವಿಧೇಯರಾಗಿದ್ದಾರೆ.ಅವನೊಂದಿಗೆ ಹೇಗೆ ನಡೆದುಕೊಳ್ಳುತ್ತಿದ್ದರೋ ಹಾಗೆಯೇ ನಡೆದುಕೊಳ್ಳುವವರು.ನಾನು ಹೇ ಳಿದುದನ್ನು ಅವರು ಮೀರುವುದಿಲ್ಲ.ಅವರನ್ನು ನಾನು ಹೇಗಾದರೂ ಒಪ್ಪಿಸಿ ನೀನು ಹೇಳಿದುದಕ್ಕೆ ಒಪ್ಪಿಕೊಳ್ಳುವ ಹಾಗೆ ಮಾಡುವೆನು.ಇದಕ್ಕೆ ನೀನು ಪ್ರತಿಯಾಡದೆ ಒಪ್ಪಿಕೊ.ನಿನ್ನನ್ನು ಕೈಯೊಡ್ಡಿ ಬೇಡಿಕೊಳ್ಳುವೆನು ಎಂದು ಧೃತರಾಷ್ಟ್ರನು ದುರ್ಯೋಧನನಿಗೆ ಹೇಳಿದಾಗ ಅವನ ಮಾತಿಗೆ ಬೆಂಬಲವಾಗಿ ಗಾಂಧಾರಿಯು ಕುರುಕುಲವೆನ್ನುವ ನಂದನವನವು ಪವನನಂದನನೆಂಬ (ಭೀಮ)ಮದದಿಂದ ಅಂಧನಾದ ಆನೆಯ ಕೋಪದ ದಾಳಿಗೆ ತುತ್ತಾಗಿ ಧ್ವಂಸವಾಯಿತು.ಪುಣ್ಯದಿಂದ ಒಂದು ದೊಡ್ಡ ಮರವು ಉಳಿವ ಹಾಗೆ ನೀನೊಬ್ಬನು ನಮ್ಮ ಪಾಲಿಗೆ ಉಳಿದಿದ್ದೀಯೆ.ಇನ್ನು ಯುದ್ಧ ಮಾಡಿವವರು ಯಾರೂ ಇಲ್ಲ.ಮುದುಕರು ,ಕುರುಡರು ಎನ್ನದೆ ನಮ್ಮ ಮಾತನ್ನು ಕೇಳು ಮಗನೆ.ತಂದೆಯ ಮಾತನ್ನು ಒಪ್ಪಿಕೋ ಎಂದು ದುರ್ಯೋಧನನಿಗೆ ಹೇಳಿದಳು.

ಸಂದರ್ಭ ಸಹಿತ ಸ್ವಾರಸ್ಯವನ್ನು ವಿವರಿಸಿ.

೧. ''ಎನಗಂ ಪಾಂಡುಗಮಿಲ್ಲ ಭೇದಂ''

ಈ ಮೇಲಿನ ವಾಕ್ಯವನ್ನು ಪಂಪಕವಿಯು ಬರೆದ ವಿಕ್ರಮಾರ್ಜುನ ವಿಜಯ ಕಾವ್ಯದಿಂದ ಆರಿಸಿದ ಎಮ್ಮನುಡಿಗೇಳ್ ಎಂಬ ಪದ್ಯಭಾಗದಿಂದ ಆಯ್ದುಕೊಳ್ಳಲಾಗಿದೆ.

ಈ ಮಾತನ್ನು ಧೃತರಾಷ್ಟ್ರನು ದುರ್ಯೋಧನನಿಗೆ ಹೇಳಿದನು.

ಸಂದರ್ಭ: ಯುದ್ಧದಲ್ಲಿ ತನ್ನವರೆಲ್ಲರನ್ನೂ ಕಳೆದುಕೊಂಡು ಏಕಾಂಗಿಯಾಗಿ ನಿಂತ ದುರ್ಯೋಧನನನ್ನು ಉಳಿಸಿಕೊಳ್ಳಬೇಕೆಂಬ ಆಕಾಂಕ್ಷೆಯಿಂದ ಯುದ್ಧಭೂಮಿಯಲ್ಲಿ ಅವನನ್ನು ಸಂಧಿಸಿದ ಧೃತರಾಷ್ಟ್ರ ಗಾಂಧಾರಿಯರು ಅವನು ಪಾಂಡವರೊಂದಿಗೆ ಸಂಧಿ ಮಾಡಿಕೊಳ್ಳುವಂತೆ ಅವನ ಮನವೊಲಿಸುವ ಪ್ರಯತ್ನ ಮಾಡುವರು.ಈ ಸಂದರ್ಭದಲ್ಲಿ ಸಂಧಿಯೇ ಉಚಿತವೆಂದು ಸಮರ್ಥಿಸುತ್ತ ಪಾಂಡವರು ತನ್ನ ಮಾತನ್ನು ಒಪ್ಪುವವರು ,ವಿರೋಧಿಸುವವರಲ್ಲ ಎನ್ನುತ್ತ ಧೃತರಾಷ್ಟ್ರನು ಮೇಲಿನಂತೆ ಹೇಳುವನು.

ಸ್ವಾರಸ್ಯ : ಧೃತರಾಷ್ಟ್ರ ಮತ್ತು ಪಾಂಡು ಸಹೋದರರಾಗಿದ್ದರಿಂದ ತಮ್ಮಿಬ್ಬರಲ್ಲಿ ಅಂತಹ ವ್ಯತ್ಯಾಸವೇನಿಲ್ಲ ,ಪಾಂಡವರು ತಂದೆಗೆ ಕೊಡುವ ಗೌರವವನ್ನೇ ತನಗೂ ಸಲ್ಲಿಸುವರೆಂಬ ಧೃತರಾಷ್ಟ್ರನ ಮನೋಭಾವನೆ ಇಲ್ಲಿ ವ್ಯಕ್ತವಾಗಿದೆ.

೨. '' ಈ ಕಲಹಮುಂ ನಿನ್ನಿಂದಮಾಯ್ತೆಂದೊಡಿಂ ಮುನಿವೈ''

ಈ ಮೇಲಿನ ವಾಕ್ಯವನ್ನು ಪಂಪಕವಿಯು ಬರೆದ ವಿಕ್ರಮಾರ್ಜುನ ವಿಜಯ ಕಾವ್ಯದಿಂದ ಆರಿಸಿದ ಎಮ್ಮನುಡಿಗೇಳ್ ಎಂಬ ಪದ್ಯ ಭಾಗದಿಂದ ಆಯ್ದುಕೊಳ್ಳಲಾಗಿದೆ.

ಈ ಮಾತನ್ನು ಧೃತರಾಷ್ಟ್ರನು ದುರ್ಯೋಧನನಿಗೆ ಹೇಳಿದನು.ದುರ್ಯೋಧನನನ್ನು ಪಾಂಡವರೊಂದಿಗೆ ಸಂಧಿ ಮಾಡಿಕೊಳ್ಳುವಂತೆ ಮನವೊಲಿಸಬೇಕೆಂಬ ಉದ್ದೇಶದಿಂದ ಧೃತರಾಷ್ಟ್ರನು ಗಾಂಧಾರಿಯೊಂದಿಗೆ ಯುದ್ಧಭೂಮಿಗೆ ಬಂದು ದುರ್ಯೋಧನನನ್ನು ಸಂಧಿಸುವನು.

ನನಗೂ ಪಾಂಡುವಿಗೂ ಭೇದವಿಲ್ಲ; ಈ ಭೂಮಿಯನ್ನು(ರಾಜ್ಯವನ್ನು) ಭಾಗ ಮಾಡಿಕೊಂಡು ಆಳೋಣ.ಆ ಪಾಂಡುವಿನ ಮಕ್ಕಳು (ಪಾಂಡವರು)ನಿನ್ನೊಂದಿಗೆ ಹೊಂದಾಣಿಕೆಯಿಂದ ನಡೆದುಕೊಳ್ಳುವವರೇ ಆಗಿದ್ದಾರೆ.ನಿನ್ನಿಂದಲೇ ಈ ಕಲಹವು ಸಂಭವಿಸಿತು ಎಂದರೆ ನೀನು ಇನ್ನೂ ಕೋಪಿಸಿಕೊಳ್ಳುತ್ತೀಯೆ.ಭೀಷ್ಮ,ದ್ರೋಣ, ಕರ್ಣರಿಗೂ ಅಸಾಧ್ಯವಾದ (ಸೋಲಿಸಲು ಸಾಧ್ಯವಿಲ್ಲದ) ಆ ಅರ್ಜುನ(ಗಾಂಡೀವಿ) ನೊಂದಿಗೆ ಕೋಪದಿಂದ ಯುದ್ಧ ಮಾಡುವವರು ಯಾರಿದ್ದಾರೆ?ಆದ್ದರಿಂದ ಅವರೊಂದಿಗೆ (ಪಾಂಡವರೊಂದಿಗೆ) ಸಂಧಿ ಮಾಡಿಕೊಳ್ಳುವುದೇ ಉಚಿತವಾದುದುಎಂದು ಧೃತರಾಷ್ಟ್ರನು ದುರ್ಯೋಧನನಿಗೆ ಹೇಳುವಾಗ ಮೇಲಿನ ಮಾತು ಬಂದಿದೆ.

ಸ್ವಾರಸ್ಯ : ಮಹಾಭಾರತ ಯುದ್ಧವು ದುರ್ಯೋಧನನ ಅವಿವೇಕದ ಅಹಂಕಾರದ ಫಲ ಎಂಬ ದೃತರಾಷ್ಟ್ರನ ಅಭಿಪ್ರಾಯ ಇಲ್ಲಿ ವ್ಯಕ್ತವಾಗಿದೆ.

೩. ''ಪಗೆಗೆ ಕಣಿಯೊಂದುಂಟೇ''

ಈ ಮೇಲಿನ ವಾಕ್ಯವನ್ನು ಪಂಪಕವಿಯು ಬರೆದ ವಿಕ್ರಮಾರ್ಜುನ ವಿಜಯ ಕಾವ್ಯದಿಂದ ಆರಿಸಿದ ಎಮ್ಮನುಡಿಗೇಳ್ ಎಂಬ ಪದ್ಯ ಭಾಗದಿಂದ ಆಯ್ದುಕೊಳ್ಳಲಾಗಿದೆ.

ಈ ಮಾತನ್ನು ಧೃತರಾಷ್ಟ್ರನು ದುರ್ಯೋಧನನಿಗೆ ಹೇಳಿದನು.

ಸಂದರ್ಭ: ಯುದ್ಧವನ್ನು ನಿಲ್ಲಿಸಿ ಪಾಂಡವರೊಂದಿಗೆ ಸಂಧಿ ಮಾಡಿಕೊಳ್ಳುವಂತೆ ಧೃತರಾಷ್ಟ್ರನು ದುರ್ಯೋಧನನಿಗೆ ಸಲಹೆ ನೀಡುತ್ತ ಪಾಂಡವರು ನಾನು ಹೇಳಿದ ಮಾತನ್ನು ವಿರೋಧಿಸುವವರಲ್ಲ. ಯುದ್ಧವು ನಿನ್ನಿಂದಾಗಿಯೇ ಸಂಭವಿಸಿತುಎಂದರೆ ನೀನು ಕೋಪಿಸಿಕೊಳ್ಳುವೆ.ಅರ್ಜುನನನ್ನು

ಎದುರಿಸುವುದು ನಿನ್ನ ಜೊತೆಯಿದ್ದವರೊಬ್ಬರಿಂದಲೂ ಸಾಧ್ಯವಾಗಲಿಲ್ಲ.ಇನ್ನಾದರೂ ಸಂಧಿಯನ್ನು ಮಾಡಿಕೋ ಎಂದು ಹೇಳುತ್ತ ಮೇಲಿನಂತೆ ಹೇಳುವನು.

ಸ್ವಾರಸ್ಯ :ಹಗೆಗೂ ನಂಟಿಗೂ ಪ್ರತ್ಯೇಕವಾದ ನೆಲೆಗಳೇನಿಲ್ಲ ,ಅದನ್ನು ಸೃಷ್ಟಿಸಿಕೊಳ್ಳುವವರು ನಾವೇ ಎನ್ನುವುದು ಮೇಲಿನ ವಾಕ್ಯದ ತಾತ್ಪರ್ಯವಾಗಿದೆ.

೪.''ಪಗೆಯುಂ ನಣ್ಪುಂ ಕಯ್ಕೊಂಡ ಕಜ್ಜದಿನಲ್ತೆ.''

ಈ ಮೇಲಿನ ವಾಕ್ಯವನ್ನು ಪಂಪಕವಿಯು ಬರೆದ ವಿಕ್ರಮಾರ್ಜುನ ವಿಜಯ ಕಾವ್ಯದಿಂದ ಆರಿಸಿದ ಎಮ್ಮನುಡಿಗೇಳ್ ಎಂಬ ಪದ್ಯಭಾಗದಿಂದ ಆಯ್ದುಕೊಳ್ಳಲಾಗಿದೆ.

ಈ ಮಾತನ್ನು ಧೃತರಾಷ್ಟ್ರನು ದುಯೋರ್ಧನನಿಗೆ ಹೇಳಿದನು.

ಯುದ್ಧವನ್ನು ನಿಲ್ಲಿಸಿ ಪಾಂಡವರೊಂದಿಗೆ ಸಂಧಿ ಮಾಡಿಕೊಳ್ಳುವಂತೆ ದುಯೋರ್ಧನನಿಗೆ ಸಲಹೆ ನೀಡುತ್ತ ಧೃತರಾಷ್ಟ್ರನು  ಹಗೆತನಕ್ಕೆ ಒಂದು ಗಣೆಯಿದೆಯೆ? ಸ್ನೇಹಕ್ಕೆ ಒಂದು ಮನೆಯಿದೆಯೆ? ನೀನೇ ಆಲೋಚಿಸು.ಅರಸರಿಗೆ ಶತ್ರುತ್ವ ಮತ್ತು ಮಿತ್ರತ್ವಗಳೆರಡೂ ಅವರು ಕೈಗೊಳ್ಳುವ ಕಾರ್ಯದಿಂದಲ್ಲವೇ ಹುಟ್ಟುವುದು ಎಂದು ರಾಜರಿಗೆ ಯೋಗ್ಯವಾದ ಅರ್ಥಶಾಸ್ತ್ರದಲ್ಲಿ ಹೇಳಿಲ್ಲವೇ? ಅರ್ಥಶಾಸ್ತ್ರದಲ್ಲಿ ಹೇಳಿರುವ ''ಕೈಗೊಂಡ ಕಾರ್ಯವೇ ಸ್ನೇಹದ್ವೇಷಗಳಿಗೆ ಕಾರಣ''ವೆಂಬ ನೀತಿ ವಾಕ್ಯದಂತೆ ನೀನೇಕೆ ಮಾಡುವುದಿಲ್ಲ ? ಎಂದು ಬುದ್ಧಿ ಹೇಳುವ ಸಂದರ್ಭದಲ್ಲಿ ಮೇಲಿನ ಮಾತು ಬಂದಿದೆ.

ಸ್ವಾರಸ್ಯ : ನಮ್ಮ ಕಾರ್ಯಗಳೇ ನಮಗೆ ಶತ್ರುಗಳನ್ನೂ ಮಿತ್ರರನ್ನೂ ಸೃಷ್ಟಿಸುತ್ತವೆ ಎಂಬುದನ್ನು ಮೇಲಿನ ವಾಕ್ಯ ಸೂಚಿಸುವುದು.

೫. ''ಪಗಲೆನಿತಾನುಂ ದೀವಿಗೆಗಳುರಿದೊಡೇಂ''

ಈ ಮೇಲಿನ ವಾಕ್ಯವನ್ನು ಪಂಪಕವಿಯು ಬರೆದ ವಿಕ್ರಮಾರ್ಜುನ ವಿಜಯ ಕಾವ್ಯದಿಂದ ಆರಿಸಿದ ಎಮ್ಮನುಡಿಗೇಳ್ ಎಂಬ ಪದ್ಯಭಾಗದಿಂದ ಆಯ್ದುಕೊಳ್ಳಲಾಗಿದೆ.

ಈ ಮಾತನ್ನು ಧೃತರಾಷ್ಟ್ರನು ದುಯೋರ್ಧನನಿಗೆ ಹೇಳಿದನು.

ಪಾಂಡವರೊಂದಿಗೆ ಯುದ್ಧ ನಿಲ್ಲಿಸಿ ಸಂಧಿ ಮಾಡಿಕೊಳ್ಳುವಂತೆ ದುಯೋರ್ಧನನ ಮನವೊಲಿಸಲು ಯತ್ನಿಸಿದ ಧೃತರಾಷ್ಟ್ರನು

ನೀನಿದ್ದರೆ ಎಲ್ಲರೂ ಇದ್ದ ಹಾಗೆ.ಮಗನೆ ನೀನೊಬ್ಬನುಳಿದರೆ ನಮಗೆ ಮನದಲ್ಲಿ ಯಾವ ಚಿಂತೆಯೂ ಇಲ್ಲ.ಅದು ಹೇಗೆಂದರೆ ಸೂರ್ಯನೊಬ್ಬನೇ ಸಾಲದೇ?ಹಗಲಿನಲ್ಲಿ ಎಷ್ಟು ದೀವಿಗೆಗಳು ಉರಿದರೇನು? ಆರಿದರೇನು?ಎಂದು ಹೇಳಿದನು.

ಸ್ವಾರಸ್ಯ :ಹಗಲಿನಲ್ಲಿ ಎಷ್ಟು ದೀವಿಗೆಗಳು ಉರಿದರೂ ಸೂರ್ಯನ ಮಹತ್ವ ಅವುಗಳಿಗೆ ದೊರೆಯುವುದಿಲ್ಲ.ಸೂರ್ಯನ ಪ್ರಭೆಯ ಮುಂದೆ ದೀವಿಗೆಗಳ ಬೆಳಕು ಕಂದಿ ಹೋಗುತ್ತದೆ.ಅಷ್ಟು ಪ್ರಾಮುಖ್ಯತೆ ಪಡೆಯುವುದಿಲ್ಲ. ಹಾಗೆಯೇ ದುರ್ಯೋಧನನೊಬ್ಬನು ಉಳಿದರೆ ಅವನ ತಂದೆ ತಾಯಿಗಳಿಗೆ ಉಳಿದ ಮಕ್ಕಳನ್ನು ಕಳೆದುಕೊಂಡ ದುಃಖ ಅಷ್ಟಾಗಿ ಕಾಡಲಾರದೇನೋ ಎಂಬುದು ಮೇಲಿನ ವಾಕ್ಯದ ತಾತ್ಪರ್ಯವಾಗಿದೆ.

೬. ''ಪೆರ್ಮರನುಳಿವಂತೆ ನೀನುಳಿದೆ.''

ಈ ಮೇಲಿನ ವಾಕ್ಯವನ್ನು ಪಂಪಕವಿಯು ಬರೆದ ವಿಕ್ರಮಾರ್ಜುನ ವಿಜಯ ಕಾವ್ಯದಿಂದ ಆರಿಸಿದ ಎಮ್ಮನುಡಿಗೇಳ್ ಎಂಬ ಪದ್ಯಭಾಗದಿಂದ ಆಯ್ದುಕೊಳ್ಳಲಾಗಿದೆ.

ಈ ಮಾತನ್ನು ಗಾಂಧಾರಿಯು ದುರ್ಯೋಧನನಿಗೆ ಹೇಳಿದಳು.

ಯುದ್ಧವನ್ನು ನಿಲ್ಲಿಸಿ ಸಂಧಿ ಮಾಡಿಕೊಳ್ಳುವಂತೆ ಧೃತರಾಷ್ಟ್ರನು ದುರ್ಯೋಧನನಿಗೆ ಬುದ್ಧಿ ಹೇಳಿದಾಗ ಗಾಂಧಾರಿಯು ಧೃತರಾಷ್ಟ್ರನ ಮಾತನ್ನು ಅನುಮೋದಿಸುತ್ತ ಕುರುಕುಲವೆನ್ನುವ ನಂದನವನವು ಪವನನಂದನನೆಂಬ (ಭೀಮ)ಮದದಿಂದ ಅಂಧನಾದ ಆನೆಯ ಕೋಪದ ದಾಳಿಗೆ ತುತ್ತಾಗಿ ಧ್ವಂಸವಾಯಿತು.ಪುಣ್ಯದಿಂದ ಒಂದು ದೊಡ್ಡ ಮರವು ಉಳಿವ ಹಾಗೆ ನೀನೊಬ್ಬನು ನಮ್ಮ ಪಾಲಿಗೆ ಉಳಿದಿದ್ದೀಯೆ.ಇನ್ನು ಯುದ್ಧ ಮಾಡಿವವರು ಯಾರೂ ಇಲ್ಲ.ಮುದುಕರು ,ಕುರುಡರು ಎನ್ನದೆ ನಮ್ಮ ಮಾತನ್ನು ಕೇಳು ಮಗನೆ.ತಂದೆಯ ಮಾತನ್ನು ಒಪ್ಪಿಕೋ. ಎಂದು ಗಾಂಧಾರಿಯು ದುರ್ಯೋಧನನಿಗೆ ಹೇಳಿದಳು.

ಸ್ವಾರಸ್ಯ: ಗಾಂಧಾರಿ ಧೃತರಾಷ್ಟ್ರರ ಅಭಿಪ್ರಾಯದಲ್ಲಿ ದುರ್ಯೋಧನನ ಉಳಿಯುವಿಕೆಯ ಮಹತ್ವವನ್ನು ಮೇಲಿನ ಮಾತು ವ್ಯಕ್ತಪಡಿಸಿದೆ.

ಮೊದಲೆರಡು ಪದಗಳಿಗಿರುವ ಸಂಬಂಧದಂತೆ ಮೂರನೆಯ ಪದಕ್ಕೆ ಸಂಬಂಧಿಸಿದ ಪದ ಬರೆಯಿರಿ.

೧. ಪಾಂಡು-ಕುಂತಿ::ಧೃತರಾಷ್ಟ್ರ-ಗಾಂಧಾರಿ

೨.ಗದಾಯುದ್ಧ-ರನ್ನ :: ವಿಕ್ರಮಾರ್ಜುನ ವಿಜಯ-ಪಂಪ

೩. ಬಾನು -ಆಕಾಶ ::ಭಾನು -ಸೂರ್ಯ

೪. ಕುರುಕುಳನಂದನ-ದುರ್ಯೋಧನ :: ಪವನನಂದನ-ಭೀಮ

೫.ಘಟಸಂಭೂತ -ದ್ರೋಣ :: ಗಾಂಡೀವಿ-ಅರ್ಜುನ

ಕೊಟ್ಟಿರುವ ಪದ್ಯದ ಸಾಲುಗಳಿಗೆ ಗಣವಿಭಾಗ ಮಾಡಿ ಪ್ರಸ್ತಾರ ಹಾಕಿ ಛಂದಸ್ಸನ್ನು ಹೆಸರಿಸಿ ಲಕ್ಷಣ

ಬರೆಯಿರಿ.

ಸ ಭ ರ ನ ಮ ಯ ಲ+ಗು

UU- | - UU | - U - |U UU| - - - |U - - | U_
ಎನಗಂ| ಪಾಂಡುಗ| ಮಿಲ್ಲ ಭೇ|ದ ಮಿಳ್|ಯಂ ಪಚ್ಚಾ|ಳ್ವಮಾ ಪಾಂ| ಡುನಂ

<u>ಮತ್ತೇಭ ವಿಕ್ರೀಡಿತವೃತ್ತ</u> -

ಕುರುಕುಳನಂದನಂ ಪವನನಂದನನೆಂಬ ಮದಾಂಧ ಗಂಧಸಿಂ

ತತ್ಸಮ-ತದ್ಭವ ಬರೆಯಿರಿ.

ಅಮೃತ - ಅಮರ್ದು , ಕಾರ್ಯ-ಕಜ್ಜ , ದೀವಿಗೆ-ದೀಪ ,ಪುಣ್ಯ-ಪುನ್ನೆ,ಕಣಿ-ಗಣಿ

ವಿಗ್ರಹಿಸಿ ಸಮಾಸ ಹೆಸರಿಸಿ

ಪೆರ್ಮಗ -ಹಿರಿಯ+ ಮಗ =ಕರ್ಮಧಾರಯ ಸಮಾಸ

ಘಟಸಂಭೂತ -ಘಟದಲ್ಲಿ +ಸಂಭೂತನಾದವನು ಯಾರೋ ಅವನು(ದ್ರೋಣ) =ಬಹುವ್ರಿಹಿ ಸಮಾಸ

ಗಾಂಡೀವಿ-ಗಾಂಡೀವ ಎಂಬ ದನುಸ್ಸನ್ನು ಹೊಂದಿರುವವನು ಯಾರೋ ಅವನು

(ಅರ್ಜುನ)=ಬಹುವ್ರಿಹಿ ಸಮಾಸ

ಪವನನಂದನ =ಪವನನ(ವಾಯುವಿನ) ಮಗನು ಯಾರೋ ಅವನು (ಭೀಮ)= ಬಹುವ್ರಿಹಿ ಸಮಾಸ

ಮದಾಂಧ =ಮದದಿಂದ +ಅಂಧ =ತತ್ಪುರುಷ ಸಮಾಸ

*ಪೆರ್ಮರ =ಪಿರಿದು+ ಮರ= ಕರ್ಮಧಾರಯ ಸಮಾಸ*

*ವ್ಯಾಕರಣ ಪ್ರಶ್ನೆಗಳು*

*ಪೆರ್ಮರನುಳಿವಂತೆ ನೀನುಳಿದೆ.*

*ಉಪಮೇಯ: ನೀನು (ದುರ್ಯೋಧನ)*

*ಉಪಮಾನ: ಪೆರ್ಮರ*

*ಉಪಮಾವಾಚಕ: ಅಂತೆ*

*ಸಮಾನಧರ್ಮ: ಉಳಿಯುವುದು*

*ಉಪಮೇಯವಾದ ದುರ್ಯೋಧನ (ಜೀವಂತವಾಗಿರುವುದನ್ನು) ನನ್ನು ಉಪಮಾನವಾದ ಪೆರ್ಮರಕ್ಕೆ ಹೋಲಿಸಿ ವರ್ಣಿಸಿರುವುದರಿಂದ ಇದು ಉಪಮಾ ಅಲಂಕಾರವಾಗಿದೆ.*

*೧. 'ಪಗೆಗೆ' ಪದದ ಹೊಸಗನ್ನಡ ರೂಪವಿದು -----(ಹಗೆಗೆ)*

*೨. 'ಚರಣಕ್ಕೆ ' ಪದದಲ್ಲಿರುವ ವಿಭಕ್ತಿಯಿದು-----(ಚತುರ್ಥಿ)*

*೩.'ಪಗಲು'ಪದದ ಹೊಸಗನ್ನಡ ರೂಪ--- (ಹಗಲು)*

*೪.'ನುಡಿಗೇಳ್'ಪದವು ಈ ಸಮಾಸದ ಉದಾಹರಣೆಯಾಗಿದೆ.----- (ಕ್ರಿಯಾ ಸಮಾಸ)*

*೫.' ಉತ್ತಮಾಂಗ' ಪದವು ಈ ಸಂಧಿಗೆ ಉದಾಹರಣೆಯಾಗಿದೆ. –- (ಸವರ್ಣದೀರ್ಘ ಸಂಧಿ)*

*೬. 'ಸಮರೋತ್ಸಾಹ'ಪದದಲ್ಲಿರುವ ಸಂಧಿಯಿದು --- (ಗುಣಸಂಧಿ)*

*೭. 'ವಿದ್ಯೆ 'ಪದದ ತದ್ಭವ ರೂಪವಿದು--- (ಬಿಜ್ಜೆ)*

*೮. ಮುತ್ತರ್‌ಪದದ ಅರ್ಥವಿದು----ಮುದುಕರು*

*೯.ಮದಾಂಧಪದವು ಈ ಸಂಧಿಗೆ ಉದಾಹರಣೆಯಾಗಿದೆ. (ಸವರ್ಣದೀರ್ಘ ಸಂಧಿ)*

*೧೦.ಸಂಭೂತ ಪದದ ಅರ್ಥವಿದು--(ಹುಟ್ಟಿದ)*

**ಪದ್ಯ ಪಾಠ ಹಕ್ಕಿ ಹಾರುತಿದೆ ನೋಡಿದಿರಾ**

**- ಅಂಬಿಕಾತನಯದತ್ತ**

**ಕವಿ ಪರಿಚಯ**

**ಅಂಬಿಕಾತನಯದತ್ತ ಎಂಬ ಕಾವ್ಯನಾಮದಿಂದ ಪ್ರಸಿದ್ಧರಾಗಿರುವ ಕವಿ ದತ್ತಾತ್ರೇಯ ರಾಮಚಂದ್ರ ಬೇಂದ್ರೆಯವರು ಕ್ರಿ.ಶ. ೧೮೯೬ರಲ್ಲಿ ಧಾರವಾಡ ಜಿಲ್ಲೆಯ ಸಾಧನಕೇರಿಯಲ್ಲಿ ಜನಿಸಿದರು. ಇವರು ನವೋದಯ ಸಾಹಿತ್ಯದ ಪ್ರಮುಖ ಕವಿಗಳಲ್ಲಿ ಒಬ್ಬರಾಗಿದ್ದು ನಾಕು ತಂತಿ ಕವನ ಸಂಕಲನದ ಮೂಲಕ ಅತ್ಯುನ್ನತ ಸಾಹಿತ್ಯಪ್ರಶಸ್ತಿಯಾದ ಜ್ಞಾನಪೀಠ ಪ್ರಶಸ್ತಿಯನ್ನು ಕನ್ನಡಕ್ಕೆ ತಂದುಕೊಟ್ಟವರು. ಗರಿ ,ಗಂಗಾವತರಣ, ನಾದಲೀಲೆ, ಮೇಘದೂತ ,ಸಖೀಗೀತ ,ಸೂರ್ಯಪಾನ,ನಗೆಯ ಹೊಗೆ ,ಸಾಹಿತ್ಯವಿರಾಟ್ ಸ್ವರೂಪ ಮೊದಲಾದವು ಇವರು ಬರೆದ ಪ್ರಮುಖ ಕೃತಿಗಳು. ಇವರಿಗೆ ಅರಳು -ಮರಳು ಕವನ ಸಂಕಲನಕ್ಕೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ದೊರೆತಿದೆ.**

**ಪ್ರಶ್ನೋತ್ತರಗಳು**

**ಒಂದೊಂದು ವಾಕ್ಯದಲ್ಲಿ ಉತ್ತರಿಸಿ.**

**೧. ಹಕ್ಕಿ ಯಾವ ವೇಗದಲ್ಲಿ ಹಾರುತ್ತಿದೆ?**

**ಹಕ್ಕಿಯು ಕಣ್ಣುರೆಪ್ಪೆ ಮುಚ್ಚಿತೆರೆಯುವ ವೇಗದಲ್ಲಿ ಹಾರುತ್ತಿದೆ.**

**೨. ಹಕ್ಕಿಯ ಗರಿಯಲ್ಲಿ ಯಾವ ಬಣ್ಣಗಳಿವೆ?**

GOVT HIGH SCHOL BEGUR BANGALURU -68

ಹಕ್ಕಿಯ ಗರಿಯಲ್ಲಿ ಬಿಳಿ ಹೊಳೆ ಬಣ್ಣಗಳಿವೆ.

೩. ಹಕ್ಕಿಯ ಕಣ್ಣುಗಳು ಯಾವುವು

ಹಕ್ಕಿಯ ಕಣ್ಣುಗಳು ಸೂರ್ಯಚಂದ್ರರು .

೪. ಹಕ್ಕಿಯು ಯಾರ ನೆತ್ತಿಯನ್ನು ಕುಕ್ಕಿದೆ?

ಹಕ್ಕಿಯು ಸಾರ್ವಭೌಮರ ನೆತ್ತಿಯನ್ನು ಕುಕ್ಕಿದೆ.

೫. ಹಕ್ಕಿ ಯಾರನ್ನು ಹರಸಿದೆ ?

ಹಕ್ಕಿಯು ಹೊಸಗಾಲದ ಹಸುಮಕ್ಕಳನ್ನು ಹರಸಿದೆ.

೬. ಹಕ್ಕಿಯು ಯಾವುದರ ಸಂಕೇತವಾಗಿದೆ?

ಹಕ್ಕಿಯು ಕಾಲದ ಸಂಕೇತವಾಗಿದೆ.

ಎರಡು ಮೂರು ವಾಕ್ಯಗಳಲ್ಲಿ ಉತ್ತರಿಸಿ.

೧. ಹಕ್ಕಿಯ ಹಾರಾಟವನ್ನು ಆಕಾಶಕ್ಕೆ ಹೇಗೆ ಹೋಲಿಸಿದ್ದಾರೆ ?

ಕಾಲದ ಹಕ್ಕಿಯ ಬಣ್ಣ ನೀಲ ಮೇಘ ಸದೃಶ.ನೀಲಿ ಅಂದರೆ ವೈಶಾಲ್ಯ.ನೀಲಮೇಘಮಂಡಲದಂತೆ ಸಮಬಣ್ಣವೂ ಹೌದು.ಕಾಲದ ದೃಷ್ಟಿ ತರತಮರಹಿತ.ಕಾಲದ ಹಕ್ಕಿಯು ನೀಲಮೇಘಮಂಡಲದಂತೆ ಅಗಾಧ,ವ್ಯಾಪಕ -ವಿಶಾಲ ಎಷ್ಟೆಂದರೆ ಆಕಾಶಕ್ಕೆ ರೆಕ್ಕೆಗಳು ಮೂಡಿ ಆಕಾಶವೇ ಹಾರುತ್ತ ಸಾಗಿದಂತೆ! ಕಾಲದ ಹಕ್ಕಿಯ ಹಾರಾಟ ಅಂಥದು.ಅನಾದಿಯೆಂಬ ಮುಗಿಲಿಗೆ ಮೂಡಿದ ರೆಕ್ಕೆಗಳೊಡನೆ ,ಅನಂತವೆಂಬ ನೀಲಮೇಘಮಂಡಲದಲ್ಲಿ ,ದಿನ ಮಾಸವರ್ಷ ಯುಗ ಮನ್ವಂತರ ಕಲ್ಪಗಳೆಂಬ ನಕ್ಷತ್ರ ಗಳ ಮಾಲೆ ಧರಿಸಿ ದಿನ ರಾತ್ರಿ ಗಳೆಂಬ ಸೂರ್ಯ ಚಂದ್ರರನ್ನು ಕಣ್ಣುಗಳಾಗಿ ಹೊಂದಿ ,ನೋಡುತ್ತ ತೋರುತ್ತ ,ತೋರಿಸುತ್ತ ಕಾಲದ ಹಕ್ಕಿಯು ಹಾರುತ್ತಿದೆ.

೨. ಹೊಸಗಾಲದ ಹಸುಮಕ್ಕಳನ್ನು ಹಕ್ಕಿ ಹೇಗೆ ಹರಸಿದೆ ?

ಯುಗಯುಗಗಳ ಆಗುಹೋಗುಗಳನ್ನೆಲ್ಲ ತಿಕ್ಕಿ ತೀಡಿ ,ಚರಿತ್ರೆಯನ್ನು ಹಿಂದೆ ಬಿಟ್ಟು,ಮನ್ವಂತರಗಳ ಭಾಗ್ಯಕ್ಕೆಸಾಕ್ಷಿಯಾಗಿ ,ರೆಕ್ಕೆಯ ಬೀಸುತ್ತ ಚೇತನಗೊಳಿಸಿ ಹೊಸಗಾಲದ ಹಸುಮಕ್ಕಳನ್ನು ಹರಸಿ ಕಾಲದ ಹಕ್ಕಿಯು ಹಾರುವುದು.ಹೊಸಯುಗಕ್ಕೊಮ್ಮೆ ಆ ಯುಗದ ಹಣೆಬರಹವನ್ನು ಒರಸುವುದು ಈ ಕಾಲಪಕ್ಷಿಯ ಕೆಲಸ.ಕಾಲಪಕ್ಷಿಯು ಕೇವಲ ವಿನಾಶಕಾರಿಯಲ್ಲ.ನಿರ್ಜೀವ ಮನ್ವಂತರಗಳಿಗೆ ಚೈತನ್ಯ ನೀಡುವುದು ಕಾಲಪಕ್ಷಿ,ಹೊಸಕಾಲದ ಎಳೆಯ ಮಕ್ಕಳಿಗೆ ಹಾರೈಸಿ ಬೆಳೆಸುವುದು ಈ ಕಾಲಪಕ್ಷಿ.

ಎಂಟು- ಹತ್ತು ವಾಕ್ಯಗಳಲ್ಲಿ ಉತ್ತರಿಸಿ.

mamatabhagwat1@gmail.com

ಹಕ್ಕಿಯನ್ನು ಕಾಲಗತಿಗೆ ಹೋಲಿಸುತ್ತಾ ಕವಿ ಹೇಳಿರುವ ಮಾತುಗಳು ಯಾವುವು ?
ಚಲನಶೀಲತೆ ಜೀವಂತಿಕೆಯ ಗುಣ .ನಿಸರ್ಗದ ಹೊಂದಾಣಿಕೆಯಂತೆ ಕಾಲ ಉರುಳುತ್ತದೆ.ಅದಕ್ಕೆ ತಡೆ ಎಂಬುದಲ್ಲ. ಎಂತಹ ಪ್ರಭಾವಶಾಲಿಯಾದರೂ ನಿಸರ್ಗದತ್ತವಾದ ಕಾಲಚಕ್ರದ ಎದುರಿನಲ್ಲಿ ತಲೆಬಾಗಲೇಬೇಕು.ಅದಕ್ಕೆ ಹೊಂದಿಕೊಳ್ಳಬೇಕು.ಆಯಾ ಕಾಲದಲ್ಲಿ ನಡೆದ ಪ್ರತಿಯೊಂದು ಘಟನೆಯೂ ಕಾಲ ಉರುಳಿದಂತೆ ಇತಿಹಾಸವಾಗುತ್ತ ಹೋಗುತ್ತದೆ.
ವಿಶ್ವವ್ಯಾಪಿ ಕಾಲವು ಕೇವಲ ಗತಿಶೀಲವಲ್ಲ ,ಪ್ರಗತಿಶೀಲ ಕೇವಲ ಕಣ್ಣು ಮಿಟುಕಿಸುವ ಸಮಯದಲ್ಲಿ ಈ ಕಾಲಪಕ್ಷಿ ಸುದೂರ ಗಮಿಸಬಲ್ಲುದು.ಭೂತಕಾಲ,ವರ್ತಮಾನಕಾಲ.ಭವಿಷ್ಯತ್ ಕಾಲಗಳು ಕಾಲಪಕ್ಷಿಯ ಚಲನೆಯ ಅಂಶಗಳು.ಎಲ್ಲ ಜನಾಂಗಗಳನ್ನೂ ಈ ಕಾಲಪಕ್ಷಿ ಹೊತ್ತು ಮುನ್ನಡೆದಿದೆ.ಆಕಾಶ ಅನಂತವಾದದ್ದು.ಹಾಗೆಯೇ ಕಾಲಪಕ್ಷಿಯೂ ಅನಂತವಾದದ್ದು.ಕಾಲಪಕ್ಷಿಯು ಚಿಕ್ಕೆಗಳ ಮಾಲೆಯನ್ನು ಅಂದರೆ ಆಕಾಶಗಂಗೆಯೇ ಮೊದಲಾದ ವಿಶ್ವಗಳನ್ನು ಸೆಕ್ಕಿಸಿಕೊಂಡಿದೆ.ಸೂರ್ಯಚಂದ್ರರು ಕಾಲಪಕ್ಷಿಯ ಕಣ್ಣುಗಳು.ಸಣ್ಣ ಪುಟ್ಟ ರಾಜ್ಯಗಳನ್ನು ಹುಟ್ಟಿಸಿ ಬೆಳೆಯಿಸುವ ಕಾಲಪಕ್ಷಿಯು ಅವುಗಳನ್ನು ನಾಶ ಮಾಡುವ ಕಾರ್ಯವನ್ನು ಮಾಡುವುದು.ಕಾಲ ಪಕ್ಷಿಯ ಮುಂದೆ ಯಾವ ಸಾರ್ವಭೌಮರ ಆಟವೂ ನಡೆಯಲಾರದು ಎಲ್ಲರೂ ಕಾಲ ಪಕ್ಷಿಗೆ ತಲೆಬಾಗಲೇ ಬೇಕು.ಕಾಲಪಕ್ಷಿಯು ಹೊಸಯುಗಕ್ಕೊಮ್ಮೆ ಅದರ ಹಣೆಬರಹವನ್ನು ಬರೆಯುವ ಮತ್ತು ಹಳೆಯ ಯುಗದ ಹಣೆಬರಹ ಒರೆಸುವ ಕಾರ್ಯವನ್ನು ಮಾಡುವುದು.ಯುಗಯುಗಗಳನ್ನು ಮನ್ವಂತರಗಳನ್ನು ತನ್ನ ಅಧೀನದಲ್ಲಿಟ್ಟುಕೊಂಡಿದೆ.ಹೊಸಕಾಲದ ಎಳೆಯ ಮಕ್ಕಳಿಗೆ ಹಾರೈಸಿ ಬೆಳೆಸುವುದು ಈ ಕಾಲಪಕ್ಷಿ ಎಂದು ಬೇಂದ್ರೆಯವರು ಕಾಲಪಕ್ಷಿಯನ್ನು ವರ್ಣಿಸಿದ್ದಾರೆ.
ಸಂದರ್ಭದೊಂದಿಗೆ ಸ್ವಾರಸ್ಯವನ್ನು ಬರೆಯಿರಿ.
೧. ''ರಾಜ್ಯದ ಸಾಮ್ರಾಜ್ಯದ ತೆನೆ ಒಕ್ಕಿ''
ಈ ಮೇಲಿನ ವಾಕ್ಯವನ್ನು ದ.ರಾ.ಬೇಂದ್ರೆಯವರು ಬರೆದ 'ಗರಿ' ಕವನಸಂಕಲನದಿಂದ ಆರಿಸಲಾದ 'ಹಕ್ಕಿ ಹಾರುತಿದೆ ನೋಡಿದಿರಾ 'ಎನ್ನುವ ಪದ್ಯಭಾಗದಿಂದ ಆಯ್ದುಕೊಳ್ಳಲಾಗಿದೆ.ಈ ಮಾತನ್ನು ಕವಿ ಹೇಳಿದ್ದಾರೆ.
ಸಂದರ್ಭ : ಬೇಂದ್ರೆಯವರು ಕಾಲದ ಗತಿಯನ್ನು ಹಾರುವ ಹಕ್ಕಿಗೆ ಸಮೀಕರಿಸಿ ಈ ಕವನವನ್ನು ಬರೆದಿದ್ದಾರೆ.ಬೇಂದ್ರೆಯವರ ಈ ಕಾಲಪಕ್ಷಿ ಕೇವಲ ಸಮಯದ ಪಕ್ಷಿ ಅಲ್ಲ.ವಿಶ್ವವನ್ನೇ ತನ್ನ ಚಲನೆಯಲ್ಲಿ ಬದಲಾಯಿಸುತ್ತಿರುವ ಬೃಹತ್ ಚೈತನ್ಯ ಪಕ್ಷಿ.ಸಣ್ಣ ಪುಟ್ಟ ರಾಜ್ಯಗಳನ್ನು ,ದೊಡ್ಡ ದೊಡ್ಡ ಸಾಮ್ರಾಜ್ಯಗಳನ್ನು

ಹುಟ್ಟಿಸಿ ಬೆಳೆಯಿಸುವುದೇ ಈ ಕಾಲಪಕ್ಷಿ .ಅವುಗಳ ತೆನೆ ಒಕ್ಕುವುದು ಅಂದರೆ ಅವುಗಳ ಫಲಿತವನ್ನು ಕೊಯ್ಲು ಮಾಡುವುದು ಈ ಕಾಲಪಕ್ಷಿಯ ಕೆಲಸ.ಈ ತರಹ ಬೆಳೆದು ನಿಂತ ತೆನೆಗಳನ್ನು ಮುಕ್ಕುವದೂ ಸಹ ಈ ಕಾಲ ಪಕ್ಷಿಯೇ!ಎಂದು ಕವಿ ಹೇಳಿದ್ದಾರೆ.

ಸ್ವಾರಸ್ಯ : ಇಡೀ ಭೂಮಂಡಲವು ಕಾಲಪಕ್ಷಿಯ ಸ್ವಾಧೀನಕ್ಕೆ ಒಳಪಟ್ಟಿದೆ. ಸಾಮ್ರಾಜ್ಯದ ಒಳಿತು ಕೆಡುಕುಗಳನ್ನು ಬೇರ್ಪಡಿಸುವ ಕಾರ್ಯವನ್ನು ಅದು ಮಾಡುವುದು ಎಂದು ಈ ವಾಕ್ಯದ ಸ್ವಾರಸ್ಯವಾಗಿದೆ.

೨. ''ಸಾರ್ವಭೌಮರಾ ನೆತ್ತಿಯ ಕುಕ್ಕಿ''

ಈ ಮೇಲಿನ ವಾಕ್ಯವನ್ನು ದ.ರಾ.ಬೇಂದ್ರೆಯವರು ಬರೆದ 'ಗರಿ' ಕವನಸಂಕಲನದಿಂದ ಆರಿಸಲಾದ 'ಹಕ್ಕಿ ಹಾರುತಿದೆ ನೋಡಿದಿರಾ 'ಎನ್ನುವ ಪದ್ಯ ಭಾಗದಿಂದ ಆಯ್ದುಕೊಳ್ಳಲಾಗಿದೆ.ಈ ಮಾತನ್ನು ಕವಿ ಹೇಳಿದ್ದಾರೆ.

ಸಂದರ್ಭ: ಸಾಮ್ರಾಜ್ಯದ ಭರ್ಜರಿ ತೆನೆಗಳನ್ನೆಲ್ಲ ಒಕ್ಕಿ, ಚಿಕ್ಕಪುಟ್ಟ ಕೋಟೆಕೊತ್ತಲಗಳನ್ನೆಲ್ಲ ಮುಕ್ಕಿ ,ಖಂಡಖಂಡಗಳನ್ನೇ ತೇಲಿಸಿ-ಮುಳುಗಿಸಿ ,ಸಾರ್ವಭೌಮರೆಲ್ಲರ ನೆತ್ತಿಯ ಕುಕ್ಕುವ ಕಾಲದ ಹಕ್ಕಿಯು ಹಾರುತಿದೆ ಎಮದು ಕವಿ ಹೇಳಿದ್ದಾರೆ.

ಸ್ವಾರಸ್ಯ :ಧರಣಿ ಮಂಡಲದಲ್ಲಿರುವ ಏಳು ಖಂಡಗಳನ್ನು ಈ ಹಕ್ಕಿ ತೇಲಿಸುತ್ತದೆ ಹಾಗೂ ಮುಳುಗಿಸುತ್ತದೆ.ಈ ಖಂಡಗಳಿಗೆ ತಾವೇ ಸಾರ್ವಭೌಮರೆಂದು ಬೀಗುವವರ ನೆತ್ತಿಯನ್ನು ಕುಕ್ಕಿ ಅವರ ಅಹಂಕಾರವನ್ನು ಕಾಲಪಕ್ಷಿ ಮೆಟ್ಟಿನಿಲ್ಲುವುದು .ಕಾಲಪಕ್ಷಿಯ ಮುಂದೆ ಯಾರ ಆಟವೂ ನಡೆಯದು ಎನ್ನುವುದು ವಾಕ್ಯದ ಸ್ವಾರಸ್ಯವಾಗಿದೆ.

೩. ''ಮನ್ವಂತರಗಳ ಭಾಗ್ಯವ ತೆರೆಸಿ ''

ಈ ಮೇಲಿನ ವಾಕ್ಯವನ್ನು ದ.ರಾ.ಬೇಂದ್ರೆಯವರು ಬರೆದ 'ಗರಿ' ಕವನಸಂಕಲನದಿಂದ ಆರಿಸಲಾದ 'ಹಕ್ಕಿ ಹಾರುತಿದೆ ನೋಡಿದಿರಾ 'ಎನ್ನುವ ಪದ್ಯ ಭಾಗದಿಂದ ಆಯ್ದುಕೊಳ್ಳಲಾಗಿದೆ.ಈ ಮಾತನ್ನು ಕವಿ ಹೇಳಿದ್ದಾರೆ.

ಈ ವಿಶ್ವ ,ಈ ಭೂಮಿ ,ಈ ಭೂಮಿಯ ಮೇಲಿನ ಜೀವಜಂತುಗಳು, ಇವೆಲ್ಲವುಗಳ ಉಗಮವಾಗಿ ಯಾವ ಕಾಲವಾಯಿತೋ ,ಹೊಸ ಯುಗಕ್ಕೊಮ್ಮೆ ಆ ಯುಗದ ಹಣೆಬರಹವನ್ನು ಬರೆಯುವುದು ,ಹಳೆಯ ಯುಗದ ಹಣೆಬರಹವನ್ನು ಒರೆಸುವುದು ಈ ಕಾಲಪಕ್ಷಿಯ ಕೆಲಸ.ಭೂಮಿಯ ಮೇಲಿನ ಶಿಲಾಯುಗ,ಲೋಹಯುಗ,ಪರಮಾಣು ಯುಗ ಇವೆಲ್ಲವೂ ಕಾಲದ ಅಧೀನವೇ.ಕಾಲಪಕ್ಷಿಯ ಮಹಿಮೆ ಅಪಾರ.ಎಂದು ಕವಿ ಹೇಳಿದ್ದಾರೆ.

ಸ್ವಾರಸ್ಯ:ಕಾಲಪಕ್ಷಿಯು ಯುಗಯುಗಗಳನ್ನು,ಮನ್ವಂತರಗಳನ್ನು ತನ್ನ ಅಧೀನದಲ್ಲಿಟ್ಟುಕೊಂಡಿದೆ. ಕಾಲ ಪಕ್ಷಿಯ ಕೆಲಸ ಕೇವಲ ವಿನಾಶಕಾರಿಯಲ್ಲ.ಹೊಸ ಮನ್ವಂತರದ ಶುಭೋದಯವಾಗುವುದು ಕಾಲಪಕ್ಷಿಯಿಂದ ಎನ್ನುವುದು ಈ ವಾಕ್ಯದ ಸ್ವಾರಸ್ಯವಾಗಿದೆ.

೪. '' ಹೊಸಗಾಲದ ಹಸುಮಕ್ಕಳ ಹರಸಿ''

ಈ ಮೇಲಿನ ವಾಕ್ಯವನ್ನು ದ.ರಾ.ಬೇಂದ್ರೆಯವರು ಬರೆದ 'ಗರಿ' ಕವನಸಂಕಲನದಿಂದ ಆರಿಸಲಾದ 'ಹಕ್ಕಿ ಹಾರುತಿದೆ ನೋಡಿದಿರಾ 'ಎನ್ನುವ ಪದ್ಯಭಾಗದಿಂದ ಆಯ್ದುಕೊಳ್ಳಲಾಗಿದೆ.ಈ ಮಾತನ್ನು ಕವಿ ಹೇಳಿದ್ದಾರೆ.

ಸಂದರ್ಭ: ಕಾಲವೆನ್ನುವ ಪಕ್ಷಿಯು ತನ್ನ ರೆಕ್ಕೆಗಳನ್ನು ಬೀಸುವ ಮೂಲಕ ಪ್ರಾಣವಾಯುವನ್ನು ಕೊಟ್ಟು ಈ ನಿರ್ಜೀವ ಮನ್ವಂತರಗಳಿಗೆ ಚೈತನ್ಯ ನೀಡುವುದು ಅಂದರೆ ಸಜೀವಗೊಳಿಸುವುದು .ನಮ್ಮ ಭೂಮಂಡಲದಲ್ಲಿ ನಡೆದ ಸಾಂಸ್ಕೃತಿಕ

ಬದಲಾವಣೆಗಳು ,ಪುನಶ್ಚೇತನಗಳು ಎಲ್ಲವೂ ಈ ಕಾಲಪಕ್ಷಿಯ ಮಹಿಮೆಯೇ.ಹೊಸಕಾಲದ ಎಳೆಯ ಮಕ್ಕಳಿಗೆ ಹಾರೈಸಿ ಬೆಳೆಸುವುದು ಈ ಕಾಲಪಕ್ಷಿಯೇ ಎಂದು ಕವಿ ಹೇಳಿದ್ದಾರೆ.

ಸ್ವಾರಸ್ಯ:ಬದಲಾದ ಲೋಕಕ್ಕೆ ಕಣ್ಣು ತೆರೆದ ಅಂದಂದಿನ ಜನರನ್ನು -ಜೀವಿಗಳನ್ನು ಮುನ್ನಡೆಸಿ ಮತ್ತು ಇಂದಿನ ಲೋಕಕ್ಕೆ ಕಣ್ಣು ತೆರೆದಿರುವವರನ್ನು ಮುನ್ನಡೆಸುವುದು ಕಾಲಪಕ್ಷಿಯ ಕಾರ್ಯ ಎಂಬುದು ಈ ವಾಕ್ಯದ ಸ್ವಾರಸ್ಯವಾಗಿದೆ.

ಹೊಂದಿಸಿ ಬರೆಯಿರಿ.

| (ಅ) | (ಬ) |
|---|---|
| ೧. ಹಕ್ಕಿ | ಜ್ಞಾನಪೀಠಪ್ರಶಸ್ತಿ |
| ೨.ನಾಕುತಂತಿ | ಪಕ್ಷಿ |
| ೩.ನೀಲಮೇಘಮಂಡಲ | ಖಂಡಖಂಡಗಳ |
| ೪. ರಾಜ್ಯದ ಸಾಮ್ರಾಜ್ಯದ | ತೆನೆ ಒಕ್ಕಿ |
| ೫.ತೇಲಿಸಿ ಮುಳುಗಿಸಿ | ಸಮಬಣ್ಣ |
| | ಭಾಗ್ಯವ ತೆರೆಸಿ |

ಹಕ್ಕಿ - ಪಕ್ಷಿ          ನಾಕುತಂತಿ-ಜ್ಞಾನಪೀಠಪ್ರಶಸ್ತಿ

ನೀಲಮೇಘಮಂಡಲ- ಸಮಬಣ್ಣ ರಾಜ್ಯದ ಸಾಮ್ರಾಜ್ಯದ -ತೆನೆಒಕ್ಕಿ ತೇಲಿಸಿಮುಳುಗಿಸಿ-

ಖಂಡಖಂಡಗಳ

ಸಮಾನಾರ್ಥಕಪದ ಬರೆಯಿರಿ.

ಸೂರ್ಯ-ಭಾಸ್ಕರ,ರವಿ,ಭಾನು,ನೇಸರ ಎದೆ-ಹೃದಯ ಮೇಘ-ಮೋಡ

ಗಡ-ಚಿಕ್ಕಕೋಟೆ ಹರಸು- ಆಶೀರ್ವದಿಸು ಕೆನ್ನ-ಕೆಂಪು

ಒಕ್ಕಿ-ತೆನೆಯಿಂದ ಕಸಕಡ್ಡಿಬೇರ್ಪಡಿಸುವುದು.

ತತ್ಸಮ ತದ್ಭವ ಬರೆಯಿರಿ.

ಹಕ್ಕಿ-ಪಕ್ಷಿ, ಬ್ರಹ್ಮ-ಬೊಮ್ಮ ಚಂದ್ರ-ಚಂದಿರ

ಸಂಧಿ ವಿಗ್ರಹಿಸಿ ಹೆಸರಿಸಿ

ಇರುಳಳಿದು-ಇರುಳು+ಅಳಿದು=ಲೋಪಸಂಧಿ

ತೆರೆದಿಕ್ಕುವ -ತೆರೆದು+ಇಕ್ಕುವ =ಲೋಪಸಂಧಿ

ಹೊಸಗಾಲ-ಹೊಸ+ಕಾಲ=ಆದೇಶಸಂಧಿ

## ವ್ಯಾಕರಣಪ್ರಶ್ನೆಗಳು

ಕೆಳಗಿನಪ್ರಶ್ನೆಗಳಿಗೆ ನಾಲ್ಕುಆಯ್ಕೆಗಳನ್ನುನೀಡಲಾಗಿದೆ.ಅವುಗಳಲ್ಲಿ ಸರಿಯಾದ ಉತ್ತರವನ್ನುಆರಿಸಿ ಬರೆಯಿರಿ.

೧.'ಹಕ್ಕಿ' ಪದದ ತತ್ಸಮ ರೂಪವಿದು

ಎ) ಅಕ್ಕಿ ಬಿ)ಪಕ್ಷಿ ಸಿ)ಅಕ್ಷಿ ಡಿ)ಪುಕ್ಕ

೨. 'ಇರುಳು ಇರುಳು' ಪದವು ಈ ವ್ಯಾಕರಣಾಂಶದ ಉದಾಹರಣೆಯಾಗಿದೆ.

ಎ) ದ್ವಿರುಕ್ತಿ ಬಿ)ಜೋಡುನುಡಿ ಸಿ)ನುಡಿಗಟ್ಟು ಡಿ)ಅನುಕರಣಾವ್ಯಯ

೩.'ಸುತ್ತಮುತ್ತ ' ಪದವು ಈ ವ್ಯಾಕರಣಾಂಶದ ಉದಾಹರಣೆಯಾಗಿದೆ

ಎ)ದ್ವಿರುಕ್ತಿ ಬಿ)ಜೋಡುನುಡಿ ಸಿ)ಅನುಕರಣಾವ್ಯಯ ಡಿ)ನುಡಿಗಟ್ಟು

೪.'ಸೂರ್ಯಚಂದ್ರರು' ಪದವು ಈ ಸಮಾಸದ ಉದಾಹರಣೆಯಾಗಿದೆ

ಎ) ಗಮಕ ಬಿ)ದ್ವಿಗು ಸಿ)ದ್ವಂದ್ವ ಡಿ) ತತ್ಪುರುಷ

೫.'ಬಣ್ಣಬಣ್ಣ' ಪದದಲ್ಲಿರುವ ವ್ಯಾಕರಣಾಂಶವಿದು

ಎ)ದ್ವಿರುಕ್ತಿ ಬಿ) ಜೋಡುನುಡಿ ಸಿ)ಅನುಕರಣಾವ್ಯಯ ಡಿ)ನುಡಿಗಟ್ಟು

೬.'ಮಂಡಲಗಿಂಡಲ' ಪದದಲ್ಲಿರುವ ವ್ಯಾಕರಣಾಂಸವಿದು –

ಎ) ದ್ವಿರುಕ್ತಿ ಬಿ)ಜೋಡುನುಡಿ ಸಿ)ಅನುಕರಣಾವ್ಯಯ ಡಿ)ನುಡಿಗಟ್ಟು

೭.'ಖಂಡ ಖಂಡ 'ಪದದಲ್ಲಿರುವ ವ್ಯಾಕರಣಾಂಶವಿದು

ಎ)ದ್ವಿರುಕ್ತಿ ಬಿ)ನುಡಿಗಟ್ಟು ಸಿ)ಜೋಡುನುಡಿ ಡಿ)ಅನುಕರಣಾವ್ಯಯ

೮.'ಮನ್ವಂತರ ' ಪದವು ಈ ಸಂಧಿಗೆ ಉದಾಹರಣೆಯಾಗಿದೆ

ಎ)ಲೋಪ ಬಿ)ಆಗಮ ಸಿ)ಆದೇಶ ಡಿ) ಯಣ್

೯.'ಯುಗ ಯುಗ' ಪದವು ಈ ವ್ಯಾಕರಣಾಂಶದ ಉದಾಹರಣೆಯಾಗಿದೆ.

ಎ) ದ್ವಿರುಕ್ತಿ ಬಿ)ನುಡಿಗಟ್ಟು ಸಿ)ಜೋಡುನುಡಿ ಡಿ)ಅನುಕರಣಾವ್ಯಯ

೧೦.'ಹೊಸಗಾಲ' ಈ ಪದದಲ್ಲಿರುವ ಸಂಧಿ

ಎ)ಆಗಮ ಬಿ)ಆದೇಶ ಸಿ)ಲೋಪ ಡಿ)ಜಶ್ತ್ವ

೧೧.'ಹೊಸಗಾಲ' ಪದವು ಈ ಸಮಾಸದ ಉದಾಹರಣೆಯಾಗಿದೆ.

ಎ) ಕರ್ಮಧಾರಯಸಮಾಸ ಬಿ)ತತ್ಪುರುಷ ಸಮಾಸ ಸಿ)ದ್ವಿಗು ಸಮಾಸ ಡಿ)ದ್ವಂದ್ವ ಸಮಾಸ

೧೨.'ಎವೆತೆರೆದು ' ಪದವು ಈ ಸಮಾಸಕ್ಕೆ ಉದಾಹರಣೆಯಾಗಿದೆ.

ಎ)ಕ್ರಿಯಾ ಬಿ) ಕರ್ಮಧಾರಯ ಸಿ)ಗಮಕ ಡಿ) ದ್ವಂದ್ವ

೧೩.'ದಿನದಿನ' ಪದದಲ್ಲಿರುವ ವ್ಯಾಕರಣಾಂಶವಿದು

ಎ) ಅನುಕರಣಾವ್ಯಯ ಬಿ)ಜೋಡುನುಡಿ ಸಿ)ದ್ವಿರುಕ್ತಿ ಡಿ)ನುಡಿಗಟ್ಟು

೧೪.'ನೀಲಮೇಘ' ಪದವು ಈ ಸಮಾಸದ ಉದಾಹರಣೆಯಾಗಿದೆ

ಎ)ತತ್ಪುರುಷ ಬಿ)ಗಮಕ ಸಿ)ಕ್ರಿಯಾ ಡಿ)ಕರ್ಮಧಾರಯ

ಉತ್ತರಗಳು

೧.ಬಿ)ಪಕ್ಷಿ ೨.ಎ)ದ್ವಿರುಕ್ತಿ ೩.ಬಿ)ಜೋಡುನುಡಿ ೪.ಸಿ)ದ್ವಂದ್ವ ೫. ಎ)ದ್ವಿರುಕ್ತಿ
೬.ಬಿ)ಜೋಡುನುಡಿ ೭.ಎ)ದ್ವಿರುಕ್ತಿ ೮.ಡಿ)ಯಣ್ ೯.ಎ)ದ್ವಿರುಕ್ತಿ ೧೦.ಬಿ )ಆದೇಶ ಸಂಧಿ
೧೧.ಎ)ಕರ್ಮಧಾರಯ ೧೨.ಎ)ಕ್ರಿಯಾ ಸಮಾಸ ೧೩.ಸಿ)ದ್ವಿರುಕ್ತಿ ೧೪.ಡಿ)ಕರ್ಮಧಾರಯ

ಪಧ್ಯ ಪಾಠ. ... ಹಲಗಲಿ ಬೇಡರು

ಜನಪದ

ಪ್ರಶ್ನೋತ್ತರಗಳು

ಒಂದು ಪೂ ರ್ಣ ವಾಕ್ಯದಲ್ಲಿ ಉತ್ತರಿಸಿ.

೧.ಕುಂಪಣಿ ಸರ್ಕಾರ ಹೊರಡಿಸಿದ ಆದೇಶ ಯಾವುದು ?

ಬ್ರಿಟಿಷ್ ಭಾರತ ಸರಕಾರದ ಅನುಮತಿಯಿಲ್ಲದೆ ಭಾರತೀಯರು ಯಾವುದೇ ಬಗೆಯ ಶಸ್ತ್ರಾಸ್ತ್ರಗಳನ್ನು ಹೊಂದುವ ಹಾಗಿಲ್ಲ, ಮತ್ತು ತಮ್ಮಲ್ಲಿರುವ ಆಯುಧಗಳನ್ನು ಸರ್ಕಾರಕ್ಕೆ ಒಪ್ಪಿಸಬೇಕು . ಎನ್ನುವುದು ಕುಂಪಣಿಸರಕಾರ ಹೊರಡಿಸಿದ ಆದೇಶ.

೨. ಹಲಗಲಿಯ ನಾಲ್ವರು ಪ್ರಮುಖರು ಯಾರು ?

ಪೂಜೇರಿ ಹನುಮ, ಬಾಲ, ಜಡಗ, ರಾಮರು ಹಲಗಲಿಯ ನಾಲ್ವರು ಪ್ರಮುಖರು .

೩. ಹಲಗಲಿ ಗುರುತು ಉಳಿಯದಂತಾದುದು ಏಕೆ ?

ಕುಂಪಣಿ ಸರಕಾರದ ದಂಡು ಹಲಗಲಿ ಊರಿಗೇ ಬೆಂಕಿ ಹಚ್ಚಿದ್ದರಿಂದ ಅದು ಸುಟ್ಟು ಬೂದಿಯಾಗಿ ಅದರ ಗುರುತು ಉಳಿಯದಂತಾಯಿತು .

೪. ಯಾವ ಘಟನೆ ಹಲಗಲಿ ಲಾವಣಿಗೆ ಕಾರಣವಾಗಿದೆ ?

ಹಲಗಲಿ ಬೇಡರ ದಂಗೆ , ಹಲಗಲಿ ಬೇಡರ ಮೇಲೆ ಕುಂಪಣಿ ಸರಕಾರ ನಡೆಸಿದ ದೌರ್ಜನ್ಯ ಹಲಗಲಿ ಬೇಡರ ಕುರಿತ ಲಾವಣಿಗೆ ಕಾರಣವಾಗಿದೆ .

೫.ಹಲಗಲಿ ಗ್ರಾಮ ಎಲ್ಲಿದೆ?

ಹಲಗಲಿ ಗ್ರಾಮವು ಇಂದಿನ ಬಾಗಲಕೋಟೆ ಜಿಲ್ಲೆಯಲ್ಲಿದೆ.

ಎರಡು ಮೂ ರು ವಾಕ್ಯಗಳಲ್ಲಿ ಉತ್ತರಿಸಿ.

ಹಲಗಲಿಯ ಬೇಡರು ದಂಗೆ ಏಳಲು ಕಾರಣವೇನು ?

೧೮೫೭ ರ ಪ್ರಥಮ ಸ್ವಾತಂತ್ರ್ಯ ಸಂಗ್ರಾಮದ ನಂತರ ನಿಶ್ಶಸ್ತ್ರೀಕರಣ ಕಾಯ್ದೆ ಜಾರಿಗೆ ತಂದ ಬ್ರಿಟಿಷ್ ಸರಕಾರ ಕಂಪನಿ ಸರಕಾರಕ್ಕೆ ಎಲ್ಲ ಭಾರತೀಯರ ಬಳಿ ಇರುವ ಆಯುಧಗಳನ್ನು ಕಸಿದು ಕೊಳ್ಳುವಂತೆ ಆದೇಶ ನೀಡಿತು .. ಹಲಗಲಿ ಬೇಡರು ಇದನ್ನು ವಿರೋಧಿಸಿದರು . ಆಯುಧಗಳು ಹೋದರೆ ತಮ್ಮ ಜೀವವೇ ಹೋದಂತೆ ಎಂದು ತಿಳಿದ ಬೇಡರು ಹನುಮ , ಬಾಲ, ಜಡಗ, ರಾಮರ ನೇತೃತ್ವದಲ್ಲಿ ಕಂಪನಿ ಸರ್ಕಾರದ ವಿರುದ್ಧ ದಂಗೆ ಎದ್ದರು .

೨. ಹಲಗಲಿಗೆ ದಂಡು ಬರಲು ಕಾರಣವೇನು ?

ಬ್ರಿಟಿಷರ ನಿಶ್ಯಸ್ತ್ರೀಕರಣ ಕಾಯ್ದೆವಿರೋಧಿಸಿದ ಹಲಗಲಿ ಬೇಡರು ಕಂಪನಿ ಸರಕಾರದ ವಿರುದ್ಧ ದಂಗೆ ಎದ್ದರು . ಆಯುಧ ಕೇಳಲು ಬಂದ ಸಿಪಾಯಿಗಳ ಕೆನ್ನೆಗೆ ಬಾರಿಸಿದರು .ವಿಷಯ ತಿಳಿದ ಕಂಪನಿ ಅಧಿಕಾರಿಯು ಕೆಲವು ಜನರನ್ನು ಕಳಿಸಿದಾಗ ಅವರನ್ನೂ ಬೇಡರು ಹಿಮ್ಮೆಟ್ಟಿಸಿದರು . ಆದ್ದರಿಂದ ಬೇಡರನ್ನು ಹತ್ತಿಕ್ಕಲು ಕಂಪನಿಯ ದೊಡ್ಡ ದಂಡು ಹಲಗಲಿಗೆ ಆಗಮಿಸಿತು .

೩. ಲಾವಣಿಗಳನ್ನು ಏಕೆ ವೀರಗೀತೆಗಳೆಂದು ಕರೆಯಲಾಗಿದೆ ?

ತ್ಯಾಗ ಬಲಿದಾನಗಳಿಂದ ಅಮರರಾದ ವೀರಕಲಿಗಳ ವೀರಸಾಹಸ , ಉಜ್ವಲ ಜೀವನವನ್ನು ಲಾವಣಿಗಳಲ್ಲಿ ವರ್ಣಿಸಲಾಗಿದೆ. ಆದ್ದರಿಂದ ಲಾವಣಿಗಳನ್ನು ವೀರಗೀತೆಗಳು ಎಂದು ಕರೆಯಲಾಗಿದೆ.

೪. ದಂಡು ಹಲಗಲಿಯ ಮೇಲೆ ಹೇಗೆ ದಾಳಿ ನಡೆಸಿತು ?

ಬೇಡರು ನಿಶ್ಯಸ್ತ್ರೀಕರಣ ಕಾಯ್ದೆಯನ್ನು ವಿರೋಧಿಸಿದಾಗ ಅವರ ಮೇಲೆ ದಾಳಿ ನಡೆಯಿತು . ಅವರ ಮನವೊಲಿಸಲು ಪ್ರಯತ್ನಿಸಿದ ಹೆಬಲಕ್ ಎಂಬ ಅಧಿಕಾರಿಯನ್ನು ಬೇಡರು ಹತ್ಯೆಗೈದರು. ಇದರಿಂದ ಕೋಪಗೊಂಡ ಕಂಪನಿಯ ಕಾರಾಸಾಹೇಬ ಎಂಬ ಅಧಿಕಾರಿ ಹಲಗಲಿ ಬೇಡರ ಊರನ್ನು ಲೂಟಿ ಮಾಡುವಂತೆ ಆದೇಶಿಸಿದನು .ಕಂಡ ಕಂಡಲ್ಲಿ ಬೇಡರ ಹತ್ಯೆಗಯ್ಯಲಾಯಿತು . . ರಕ್ತದ ಹೊಳೆ ಹರಿಯಿತು . ಹಲಗಲಿಗೆ ಬೆಂಕಿ ಇಟ್ಟು ಇಡಿ ಊರನ್ನೇ ಬೂದಿ ಮಾಡಲಾಯಿತು .

ಬಿಟ್ಟ ಸ್ಥಳ ತುಂಬಿರಿ.

೧. ಹಲಗಲಿ ಬಂಟರ ಕದನ ವೀರರಸ ಪ್ರಧಾನವಾದ ಲಾವಣಿ

೨. ಹಲಗಲಿಯ ಜಿಲ್ಲಾ ಸ್ಥಾನವಾಗಿದ್ದ ಸ್ಥಳ..ಕಲಾದಗಿ.

೩.ಕುಂಪಣಿ ಸರ್ಕಾರ ಜಾರಿಗೆ ತಂದ ಶಾಸನ . ನಿಶ್ಯಸ್ತ್ರೀಕರಣ

೪. ಲಾವಣಿಕಾರ ಅಂಕಿತಗೊಳಿಸಿದ ದೈವ.. ಕಲ್ಮೇಶ.

೫.ವಿಲಾತಿ ಪದದ ಸಮನಾರ್ಥಕ ಪದ..ವಿಲಾಯತಿ.

.

ಸಂದರ್ಭಾನುಸಾರ ಸ್ವಾರಸ್ಯ ಬರೆಯಿರಿ.

೧."ಎಲ್ಲ ಜನರಿಗೆ ಜೋರು ಮಾಡಿ ಕಸಿದು ಕೊಳ್ಳಿರಿ ಹತಾರ ."

ಈ ಮೇಲಿನ ವಾಕ್ಯವನ್ನು ಜನಪದ ಸಾಹಿತ್ಯ ದಿಂದ ಆರಿಸಲಾದ ಹಲಗಲಿ ಬೇಡರು ಎನ್ನು ಜನಪದ ಲಾವಣಿಗಳಿಂದ ಆಯ್ದುಕೊಳ್ಳಲಾಗಿದೆ.ಈ ಮಾತು ಭಾರತೀಯರನ್ನು ಉದ್ದೇಶಿಸಿ ಹೇಳಲಾಗಿದೆ.

ಸಂದರ್ಭ:೧೮೫೭ ರ ಸಿಪಾಯಿ ದಂಗೆಯ ನಂತರ ನಿಶ್ಯಸ್ತ್ರೀಕರಣ ಕಾಯ್ದೆಯನ್ನು ಜಾರಿಗೊಳಿಸಿದ

ಬ್ರಿಟಿಷ್ ಭಾರತ ಸರ್ಕಾರವು ಭಾರತೀಯರ ಬಳಿ ಇರುವ ಆಯು ಧಗಳನ್ನು ಕಸಿದು ಕೊಳ್ಳುವಂತೆ ಭಾರತದಲ್ಲಿರುವ ಕಂಪನಿ ಸರಕಾರಕ್ಕೆ ಆದೇಶ ಹೊರಡಿಸಿದ ಸಂದರ್ಭದಲ್ಲಿ ಈ ಮೇಲಿನ ಮಾತು ಬಂದಿದೆ.

ಸ್ವಾರಸ್ಯ: ಜನರು ಬ್ರಿಟಿಷ್ ಸರ್ಕಾರದ ಅನುಮತಿಯಿಲ್ಲದೇ ಆಯುಧಗಳನ್ನು ಇರಿಸಿಕೊಳ್ಳುವ ಹಾಗಿಲ್ಲ,ಅವರು ತಮ್ಮಲ್ಲಿರುವ ಆಯುಧಗಳನ್ನು ಹಿಂದಿರುಗಿಸಲೇ ಬೇಕು ಇಲ್ಲವಾದರೆ ಅವರನ್ನು ಹೆದರಿಸಿಯಾದರೂ ಆಯುಧಗಳನ್ನು ಪಡೆಯಬೇಕು ಎಂಬ ಕಂಪನಿ ಸರ್ಕಾರದ ಮನೋಭಾವ ಇಲ್ಲಿ ವ್ಯಕ್ತವಾಗಿದೆ.

೨.'' ಜೀವ ಸತ್ತು ಹೋಗುವುದು ಗೊತ್ತ".

ಈ ಮೇಲಿನ ವಾಕ್ಯವನ್ನು ಜನಪದ ಸಾಹಿತ್ಯ ದಿಂದ ಆರಿಸಲಾದ ಹಲಗಲಿ ಬೇಡರು ಎನ್ನುವ ಜನಪದ ಲಾವಣಿಗಳಿಂದ ಆಯ್ದುಕೊಳ್ಳಲಾಗಿದೆ. ಈ ಮಾತನ್ನು ಹಲಗಲಿ ಬೇಡರ ಮುಖಂಡರು ಹೇಳಿದ್ದಾರೆ. ಭಾರತೀಯರ ಬಳಿ ಇರು ವ ಆಯುಧಗಳನ್ನು ಕಸಿಯಲು ಕಂಪನಿ ಸರಕಾರ ಮುಂದಾದಾಗ ಹಲಗಲಿ ಬೇಡರ ಮುಧೋಳದ ಬಳಿ ಸೇರಿ ಆಯುಧಗಳನ್ನು ಮರಳಿಸದಿರುವರ ತೀರ್ಮಾನ ತೆಗೆದುಕೊಂಡರು . ಆ ಗುಂಪಿನ ನಾಯಕತ್ವವನ್ನು ವಹಿಸಿದ್ದ ರಾಮ , ಬಾಲ, ಜಡಗ , ಹನುಮರು ಆಯುಧಗಳು ಹೋದರೆ ನಮ್ಮ ಜೀವವೇ ಹೋದ ಹಾಗೆ ಆದ್ದರಿಂದ ಆಯುಧಗಳನ್ನು ಮರಳಿಸಬಾರದು ಎಂದು ಹೇಳುವಾಗ ಮೇಲಿನ ಮಾತು ಬಂದಿದೆ.

ಸ್ವಾರಸ್ಯ: ಹಲಗಲಿ ಬೇಡರಿಗೆ ಅವರ ಆಯುಧಗಳೇ ಜೀವ ಅದಿಲ್ಲವಾದರೆ ಅವರ ಜೀವವೇ ಹೋದಂತೆ ಎಂಬ ಬೇಡರ ಮನೋಭಾವ ಇಲ್ಲಿ ವ್ಯಕ್ತವಾಗಿದೆ.

೩.'' ಹೊಡೆದರೊ ಗುಂಡ ಕರುಣ ಇಲ್ಲದಂಗ ".

ಈ ಮೇಲಿನ ವಾಕ್ಯವನ್ನು ಜನಪದ ಸಾಹಿತ್ಯ ದಿಂದ ಆರಿಸಲಾದ ಹಲಗಲಿ ಬೇಡರು ಎನ್ನುವ ಜನಪದ ಲಾವಣಿಗಳಿಂದ ಆಯ್ದುಕೊಳ್ಳಲಾಗಿದೆ.ಹಲಗಲಿ ಬೇಡರಿಗೂ ಕಂಪನಿ ಸರಕಾರದವರಿಗೂ ನಡೆದ ಘರ್ಷಣೆ ವಿವರಿಸುವ ಸಂದರ್ಭದಲ್ಲಿ ಮೇಲಿನ ಮಾತು ಬಂದಿದೆ.

ಸಂದರ್ಭ :ಬ್ರಿಟಿಷರ ನಿಶ್ಯಸ್ತ್ರೀಕರಣ ಕಾಯ್ದೆಯನ್ನು ವಿರೋಧಿಸಿದ ಬೇಡರು ಕಂಪನಿ ಸರಕಾರದ ವಿರುದ್ಧ ದಂಗೆ ಎದ್ದರು . .ಪರಸ್ಪರ ಗುಂಡಿನ ಕಾಳಗ ನಡೆಯಿತು . ಕಂಪನಿ ಅಧಿಕಾರಿಗಳು ಬೇಡರ ಮೇಲೆ ಕರುಣೆಯಿಲ್ಲದೆ ದಾಳಿ ನಡೆಸಿದರು ಎನ್ನುವಾಗ ಮೇಲಿನ ಮಾತು ಬಂದಿದೆ.

ಸ್ವಾರಸ್ಯ : ಆಯುಧಗಳನ್ನು ಬೇಡರಿಂದ ಮನವೊಲಿಸಿ ಮರಳಿ ಪಡೆಯಲು ಕಂಪನಿ ಸರ್ಕಾರ ವಿಫಲವಾದಾಗ ಅವರು ಅಮಾನವೀಯವಾಗಿ ಬೇಡರೊಡನೆ ನಡೆದ ಬಗೆಯನ್ನು ಮೇಲಿನ ವಾಕ್ಯವು ಸ್ಪಷ್ಟಪಡಿಸುತ್ತದೆ.

೪. ''ಕೆಟ್ಟು ವರ್ಣಿಸಿ ಹೇಳಿದೆ ಕಂಡಷ್ಟು''.

ಈ ಮೇಲಿನ ವಾಕ್ಯವನ್ನು ಜನಪದ ಸಾಹಿತ್ಯ ದಿಂದ ಆರಿಸಲಾದ ಹಲಗಲಿ ಬೇಡರು ಎನ್ನುವ ಜನಪದ ಲಾವಣಿಗಳಿಂದ ಆಯ್ದುಕೊಳ್ಳಲಾಗಿದೆ.

ಬ್ರಿಟಿಷರು ಜಾರಿಗೆ ತಂದ ನಿಶ್ಯಸ್ತ್ರೀಕರಣ ಕಾಯ್ದೆ ವಿರೋಧಿಸಿದ ಹಲಗಲಿ ಬೇಡರು ದಂಗೆಯಲ್ಲಿ ಜೀವದ ಹಂಗು ತೊರೆದು ಕಾದಾಡಿದರು. ಅವರ ದಂಗೆಯ ನಾಯಕತ್ವ ವಹಿಸಿದವರು ವೀರ ಮರಣ ಹೊಂದಿದರು . ಹಲಗಲಿ ಬೇಡರ ಊರನ್ನು ಲೂಟಿ ಮಾಡಿ ಸುಟ್ಟು ಹಾಕಲಾಯಿತು ಅದರ ಕುರಿತು ತನಗೆ ಹೊಳೆದಷ್ಟು ವರ್ಣಿಸಿರುವುದಾಗಿ ಜನಪದ ರಚನೆಕಾರ ಮೇಲಿನಂತೆ ಹೇಳಿದ್ದಾನೆ.

ಸ್ವಾರಸ್ಯ : ಕಂಪನಿ ಸರ್ಕಾರ ಬೇಡರ ಮೇಲೆ ನಡೆಸಿದ ಶೋಷಣೆಯನ್ನು ಜನಪದ ರಚನಕಾರ (ಪ್ರಸ್ತುತ ಲಾವಣಿಯ )ಅಸಹಾಯಕನಾಗಿ ವಿವರಿಸಿದ ಬಗೆಯನ್ನು ಮೇಲಿನ ವಾಕ್ಯವು ಸ್ಪಷ್ಟಪಡಿಸುವುದು.

ಪದಗಳನ್ನು ವಿಗ್ರಹಿಸಿ ಸಮಾಸ ಹೆಸರಿಸಿ

ಮುಂಗೈ = ಕೈಯ +ಮುಂದು =ಅಂಶಿಸಮಾಸ

ನಡು ರಾತ್ರಿ =ರಾತ್ರಿಯ +ನಡುವೆ=ಅಂಶಿ ಸಮಾಸ

ಹನು ಮಭೀಮರಾಯ =ಹನುಮನೂ +ಭೀಮನೂ +ರಾಮನೂ =ದ್ವಂದ್ವ ಸಮಾಸ

ಮೋಸಮಾಡು =ಮೋಸವನ್ನು+ ಮಾಡು = ಕ್ರಿಯಾಸಮಾಸ

ಹಲಗಲಿ ಬೇಡರು ( ಪದ್ಯಪಾಠ,೧೦ ನೇ ತರಗತಿ ಪ್ರಥಮ ಬಾಷೆ ಕನ್ನಡ )

ಲಾವಣಿ ಸಾರಾಂಶ

ಪ್ರಸ್ತುತ ಲಾವಣಿಯಲ್ಲಿ ಹಲಗಲಿಯ ಬೇಡರು ನಡೆಸಿದ ಬಂಡಾಯದ ಪ್ರಸ್ತಾಪವೇ ಪ್ರಮುಖ ಅಂಶವಾಗಿರು ವುದು . ಲಾವಣಿಕಾರ ಬೇಡರನ್ನು ಕತ್ತಿ ಹಿಡಿಯು ವ ಜನ ಎಂದು ಕರೆಯಲು ಕಾರಣ ಅವರಲ್ಲಿನ ಶೂ ರತೆ ಮತ್ತು ಕತ್ತಿ ಹಿಡಿಯು ವ ಕಾಯಕ ಅವರಿಗೆ ಅನಿವಾರ್ಯ ಎಂಬು ದನ್ನು ಪ್ರತಿಬಿಂಬಿಸು ತ್ತದೆ.ಕತ್ತಿ ಶೂ ರರಾದ ಹಲಗಲಿ ಬೇಡರಿಗೆ ಕತ್ತಿ ಹಿಡಿಯು ವ ಸಮಯ ಸನ್ನಿಹಿತವಾಯಿತು .. ಆದರೆ ಬೇಡರ ಬಂಡಾಯವು ನಿರೀಕ್ಷಿತ ಯಶಸ್ಸು ಪಡೆಯಲು ವಿಫಲವಾಯಿತು (ಮು ಟ್ಟಲಿಲ್ಲ ದಡಕ ).

ಬ್ರಿಟಿಷ್ ಸರಕಾರವು ನಿಶ್ಯಸ್ತ್ರೀಕರಣ ಕಾಯಿದೆಯನ್ನು ಜಾರಿಗೆ ತಂದಿತು .(೧೮೫೭ ಪ್ರಥಮ ಸ್ವಾತಂತ್ರ್ಯ ಸಂಗ್ರಾಮ ಅಥವಾ ಸಿಪಾಯಿ ದಂಗೆ ಯ ನಂತರ ) ಆದರಂತೆ ಎಲ್ಲ ಭಾರತೀಯರನ್ನು ಒಪ್ಪಿಸಿ ಅಥವಾ ಬೆದರಿಸಿಯಾದರೂ ಅವರ ಬಳಿಯಿರು ವ ಆಯು ಧ (ಹತಾರ)ಗಳನ್ನು ಕಸಿದು ಕೊಳ್ಳಬೇಕೆಂದು ಕಂಪನಿಯ ಸರ್ಕಾರ ಮುಂದಾದಾಗ ಹಲಗಲಿ ಬೇಡರು ಮು ಧೋಳದ ಬಳಿ ಸೇರಿದರು . ಪೂ ಜೇರಿ ಹನು ಮ ,ಬೇಡರ ಬಾಲ ,ಜಡಗ, ರಾಮ ಮೊದಲಾದವರು ಸೇರಿ ನಾವು ನಾಲ್ವರೂ ಜೊತೆಗಿರೋಣ ಯಾವುದೇ ಕಾರಣಕ್ಕೂ ನಮ್ಮ ಬಳಿಯಿರು ವ ಆಯು ಧಗಳನ್ನು ಕೊಡಬಾರದು ಹತಾರಗಳು (ಆಯು ಧಗಳು ) ಹೋದರೆ ನಮ್ಮ ಜೀವವೇ ಹೋದಂತೆ ಎಂದು ತೀರ್ಮಾನಿಸಿದರು . ಬೇಡರೆಲ್ಲರೂ ಕಲೆತು ನಾವೆಲ್ಲರೂ ನಿಮ್ಮ ಜೊತೆಗಿದ್ದೇವೆ. ನೀವು ಮುಂದಾಗಿ ಯುದ್ಧ ಮಾಡಿರಿ ; ನಿಮ್ಮ ಬೆಂಬಲಕ್ಕೆ ನಾವಿದ್ದೇವೆ ಎಂದು ತಮ್ಮ ಮು ಖಂಡರಿಗೆ ವಚನ ನೀಡಿದರು .ಕಾಯಿದೆಯನ್ನು ಜಾರಿಗೊಳಿಸಲು ಅಂದರೆ ಆಯು ಧ ಕೇಳಲು ಬ್ರಿಟಿಷ್ ಅಧಿಕಾರಿ(ಸೆಟನ್ ಕರ್) ಪರವಾಗಿ ಬಂದ ಕಾರಭಾರಿಯ ಕೆನ್ನೆಗೆ ಹೊಡೆದರು .ಇದರಿಂದ ದು ಖಿತನಾದ ಕಾರಬಾರಿ(ಕಾರಕೂ ನ) ಈ ವಿಷಯವನ್ನು ತನ್ನ ಸಾಹೇಬನಿಗೆ ತಿಳಿಸಿದನು ..

ಸಾಹೇಬ ಪರಿಸ್ಥಿತಿಯ ಗಂಭೀರತೆಯನ್ನು ಅರಿತು ತನ್ನ ಕೆಲವು ಜನರನ್ನು (ಅಶ್ವದಳ) ಹಲಗಲಿಗೆ ಕಳಿಸಿದಾಗ ಮುಂಗಾರಿನ ಸಿಡಿಲು ಸಿಡಿದ ಹಾಗೆ ಊರೊಳಗಿಂದ ಗುಂಡಿನ ಮಳೆಗರೆಯು ತ್ತದೆ. (ಬೇಡರು ಆಯು ಧ ಕಸಿಯಲು ಬಂದವರ ಮೇಲೆ ಗುಂಡಿನ ಮಳೆ ಸು ರಿಸಿದರು )
ಬಂದವರು ಬೇಡರ ಧಾಳಿಗೆ ತು ತ್ತಾಗಿ ಗಾಯಗೊಂಡು ದಂಗಾಗಿ ಹಿಮ್ಮೆಟ್ಟುತ್ತಾರೆ.ಸಾಹೇಬ ವಿಧಿಯಿಲ್ಲದೆ ತನ್ನ ಮೇಲಧಿಕಾರಿಗೆ ಕಾಗದ ಬರೆದು ದಂಡನ್ನು ಕಳಿಸು ವಂತೆ ಕೋರಿದಾಗ ತ ರಾತು ರಿಯಿಂದ ಹಲಗಲಿಗೆ ದಂಡು ಆಗಮಿಸಿತು .

ಬೇಡರನ್ನು ಕಂಡ ಕಂಡಲ್ಲಿ ಹತ್ಯೆಗೈಯ್ಯಲಾಯಿತು .ಸಿಕ್ಕಸಿಕ್ಕಲ್ಲಿ ಗುಂಡು ಹೊಡೆದು ಸಾಯಿಸಲಾಯಿತು ಚಟಕಾರ 'ಜಾಯಿತ ಸಾಹೇಬ' (ಜಿ.ಬಿ.ಸೆಟನ್ ಕರ್, ದಕ್ಷಿಣ ಮಹಾರಾಷ್ಟ್ರದ ರಾಜಕೀಯ ಪ್ರತಿನಿಧಿ ಲೆಫ್ಟಿನೆಂಟ್ ಕರ್ನಲ್ ) ಕಾವಲು ಕಾಯು ತ್ತ ಬೇಡರ ಬಿಡಾರಗಳಿಗೆ ನು ಗ್ಗಿ ಬೇಡರಿಗೆ ತೊಂದರೆ ನೀಡಿದನು .ಊರಿನ ಮು ಖ್ಯ ದ್ವಾರಕ್ಕೆ ಬಂದು ಹೆಬಲಕ್ ಸಾಹೇಬ (ವಿಲಿಯಂ ಹೆನ್ರಿ ಹೆವಲಾಕ್) ಬೇಡರಿಗೆ ಅನ್ಯಥಾ ಸಾಯದೇ ಆಯು ಧಗಳನ್ನು ಮರಳಿಸು ವಂತೆ ಕೇಳಿಕೊಳ್ಳುತ್ತಾನೆ.ಆದರೆ ಬೇಡರ ಹನು ಮನಿಗೆ ಹೆಬಲಕ್ ಸಾಹೇಬನ ಮಾತಿನಲ್ಲಿ ನಂಬಿಕೆ ಮೂಡುವುದಿಲ್ಲ.

ಬ್ರಿಟಿಷರು ಘಾತಕರು , ವಿಶ್ವಾಸಘಾತ ಮಾಡಿರು ವರು ಇವರ ಮೇಲೆ ನಮಗೆ ನಂಬಿಗೆ ಇಲ್ಲ . ಇವರು ಪಿತೂ ರಿ ಮಾಡಿ ಮೋಸದಿಂದ ನಮ್ಮ ದೇಶ ಗೆಲ್ಲುವವರು , ಮುಂದೆ ನಮಗೆ ಘೋರ ವಿಪತ್ತು ಇವರಿಂದ ಕಾದಿದೆ ಎಂದು ಬಗೆದ ಜಡಗ ಬು ದ್ಧಿವಾದ ಹೇಳಲು ಬಂದ ಅಧಿಕಾರಿ(ಹೆಬಲಕ್) ಯ ಮೇಲೆ ಗುಂಡು ಹಾರಿಸಿ ಕಳು ಹಿಸಿದನು. . ಇದರಿಂದ ಸಿಟ್ಟಾದ ಬ್ರಿಟಿಷರ ಇನ್ನೊಬ್ಬ ಅಧಿಕಾರಿ ಬೇಡರ ಊರನ್ನೇ ಲೂ ಟಿ ಮಾಡು ವಂತೆ ತನ್ನ ಜನರಿಗೆ ಆದೇಶ ನೀಡಿದನು..ಸಿಟ್ಟಿನಿಂದ ಬ್ರಿಟಿಷರು ಒಂದೇ ಸಮನೆ ಗುಂಡಿನ ಮಳೆ ಸು ರಿಸಿದರು..ಹನು ಮ , ಬಾಲ, ಜಡಗ ,ರಾಮರ ಹೋರಾಟ ವ್ಯರ್ಥವಾಯಿತು.ಎಲ್ಲೆಡೆಯೂ ರಕ್ತದ ಕಾಲು ವೆ ಹರಿಯಿತು .ಆದರೆ ಬೇಡರ ಹೋರಾಟ ಫಲಕಾರಿಯಾಗದೆ ನಾಲ್ಕು ಮಂದಿ ಬೇಡರ ಮು ಖಂಡರು ವೀರ ಮರಣವನ್ನು ಹೊಂದಿದರು .

ಬೇಡರ ಕೃಷಿ ಉಪಕರಣಗಳು ಆಹಾರ ಪದಾರ್ಥಗಳು ಮನೆಯಲ್ಲಿ ದಿನನಿತ್ಯ ಬಳಸು ತ್ತಿದ್ದ ವಸ್ತು ಗಳು ಸ್ತ್ರೀಯರ ಮಂಗಳಸೂ ತ್ರ , ಬೀಸು ವ ಕಲ್ಲು ಅಂದರೆ ಹಲಗಲಿ ಬೇಡರ ಊರಿನಲ್ಲಿ ಮನೆಗಳಲ್ಲಿ ಸಿಕ್ಕ ಸಿಕ್ಕ ವಸ್ತು ಗಳೆಲ್ಲವನ್ನು ಬ್ರಿಟಿಷರು ದೋಚಿದರು . ಕೊನೆಗೆ ಇಡೀ ಊರಿಗೆ ಬೆಂಕಿ ಇಟ್ಟರು .ಹಲಗಲಿ ಊರು ಸು ಟ್ಟು ಬೂ ದಿಯಾಯಿತು .ಗುರು ತೇ ಸಿಗದಂತೆ ನಾಶವಾಯಿತು .ಕು ರ್ತಕೋಟಿ ಕಲ್ಲೇಶನ ದಯದಿಂದ ಲಾವಣಿಕಾರ ಈ ಎಲ್ಲ ವಿಷಯಗಳನ್ನು ತಾನು ಕಂಡಷ್ಟು ವರ್ಣಿಸಿರು ವುದಾಗಿ ಹೇಳಿದ್ದಾನೆ .

ಗ್ರಾಮ್ಯ ಪದಗಳಿಗೆ ಗ್ರಂಥಸ್ಥ ರೂಪ ಬರೆಯಿರಿ.

ಹೀಂಗ- ಹೀಗೆ,ಮ್ಯಾಗ -ಮೇಲೆ, ಕಳು ವ್ಯಾರೆ-ಕಳಿಸಿದರು ,

ಇಲ್ಲದಂಗ - ಇಲ್ಲದ ಹಾಗೆ, ಇಸವಾಸ- ವಿಶ್ವಾಸ, ಸಕ್ಕಾರಿ- ಸಕ್ಕರೆ.

ಅಲಂಕಾರವನ್ನು ಹೆಸರಿಸಿ ಸಮನ್ವಯಿಸಿ.

''ಒಳಗಿನ ಮಂದಿ ಗುಂಡು ಹೊಡೆದರೊ ಮುಂಗಾರಿ ಸಿಡಿಲು ಸಿಡಿದಾಂಗ ''.

ಉಪಮೇಯ : ಒಳಗಿನ ಮಂದಿ ಹೊಡೆದ ಗುಂಡು

ಉಪಮಾನ :ಮುಂಗಾರಿನ ಸಿಡಿಲು

ಉಪಮಾವಾಚಕ : ಹಾಂಗ (ಹಾಗೆ)

ಸಮಾನಧರ್ಮ :ಸಿಡಿಯು ವುದು

ಅಲಂಕಾರ :ಉಪಮಾ

ಸಮನ್ವಯ : ಉಪಮೇಯವಾದ ಒಳಗಿನ ಮಂದಿ ಹೊಡೆದ ಗುಂಡನ್ನು ಉಪಮಾನವಾದ

ಮುಂಗಾರಿನ ಸಿಡಿಲು ಸಿಡಿಯುವುದಕ್ಕೆ ಹೋಲಿಸಿ ವರ್ಣಿಸಿರುವದರಿಂದ ಇದು ಉಪಮಾ ಅಲಂಕಾರವಾಗಿದೆ.

೨ ''ಸಿಡಿಲ ಸಿಡಿದಾಂಗ ಗುಂಡು ಸುರಿದಾವ ''.

ಉಪಮೇಯ_ ಸುರಿದ ಗುಂಡು (ಗುಂಡು ಸುರಿಯುವುದು )

ಉಪಮಾನ -ಸಿಡಿದ ಸಿಡಿಲು (ಸಿಡಿಲು ಸಿಡಿಯುವುದು )

ಉಪಮಾವಾಚಕ -ಹಾಂಗ (ಹಾಗೆ)

ಸಮಾನ ಧರ್ಮ – ಸಿಡಿಯು ವುದು

ಅಲಂಕಾರ -ಉಪಮಾ

ಸಮನ್ವಯ - ಉಪಮೇಯವಾದ ಗುಂಡು ಸುರಿಯುವುದನ್ನು ಉಪಮಾನವಾದ ಸಿಡಿಲು ಸಿಡಿಯುವುದಕ್ಕೆ ಹೋಲಿಸಿ ವರ್ಣಿಸಿರುವುದರಿಂದ ಇದು ಉಪಮಾಲಂಕಾರವಾಗಿದೆ.

ದೇಶ್ಯ ಅನ್ಯ ದೇಶ್ಯ ಪದಗಳನ್ನು ಗುರುತಿಸಿ.

ದೇಶ್ಯ-ಹೊತ್ತು , ಬಂಟರು , ಮುಂಗೈ, ಮುಂಗಾರು

ಅನ್ಯದೇಶ್ಯ_ಹತಾರ, ಮಸಲತ್ತು, ಹುಕುಮ, ಸಾಹೇಬ,ಕಾರಕೂನ,ಸಿಪಾಯಿ .

ಎಂಟು ಹತ್ತು ವಾಕ್ಯದಲ್ಲಿ ಉತ್ತರಿಸಿ .

೧. ಹಲಗಲಿ ದಂಗೆಗೆ ಕಾರಣವೇನು ?ಸರಕಾರ ಅದನ್ನು ಹೇಗೆ ನಿಯಂತ್ರಿಸಿತು ?

೧೮೫೭ ರ ಸಿಪಾಯಿದಂಗೆ ಅಥವಾ ಭಾರತದ ಪ್ರಥಮ ಸ್ವಾತಂತ್ರ್ಯಸಂಗ್ರಾಮದ ನಂತರ ಬ್ರಿಟಿಷರು ನಿಶ್ಯಸ್ತ್ರೀಕರಣ ಕಾಯಿದೆಯನ್ನು ಜಾರಿಗೆ ತಂದರು . ಅದರಪ್ರಕಾರ ಭಾರತೀಯರು ಬ್ರಿಟಿಷರ ಅನುಮತಿಯಿಲ್ಲದೆ ಆಯುಧಗಳನ್ನು ಹೊಂದುವ ಹಾಗಿರಲಿಲ್ಲ.ಮತ್ತು ಈಗಾಗಲೇ ಹೊಂದಿರುವ ಆಯುಧಗಳನ್ನು ಮರಳಿಸಬೇಕಿತ್ತು . ಹಲಗಲಿ ಬೇಡರಿಗೆ ಆಯುಧಗಳೆ ಜೀವವಾಗಿತ್ತು . ಆಯುಧಗಳನ್ನುಮರಳಿಸಲು ಒಪ್ಪದ ಹಲಗಲಿ ಬೇಡರು ಹನುಮ, ಬಾಲ, ಜಡಗ, ರಾಮರ ನೇತೃತ್ವದಲ್ಲಿ ಕಂಪನಿ ಸರಕಾರದ ವಿರುದ್ಧ ದಂಗೆ ಎದ್ದರು ..ಸಿಪಾಯಿಗಳ ಕೆನ್ನೆಗೆ ಬಾರಿಸಿದರು . ಮನವೊಲಿಸಲು ಬಂದ ಹೆಬಲಕ್ ಎಂಬ ಅಧಿಕಾರಿಯನ್ನು ಕೊಂದರು . ಕೋಪಗೊಂಡ ಕಂಪನಿಯ ಸರಕಾರ ಬೇಡರನ್ನುಕಂಡ ಕಂಡಲ್ಲಿ ಸಾಯಿಸಿತು .. ಬೇಡರ ಮುಖಂಡರನ್ನು ನಿರ್ದಾಕ್ಷಿಣ್ಯವಾಗಿ ಹತ್ಯೆಗೈಯ್ಯಲಾಯಿತು .. ಹಲಗಲಿ ಊರನ್ನುಲೂ ಟಿ ಮಾಡಿ ಬೆಂಕಿ ಹಚ್ಚಲಾಯಿತು . ಹೀಗೆ ಹಲಗಲಿ ದಂಗೆಯನ್ನುಸರಕಾರ ನಿಯಂತ್ರಿಸಿತು .

೨. ಹಲಗಲಿ ದಂಗೆಯ ಪರಿಣಾಮವೇನು ?

೧೮೫೭ ರ ಸಿಪಾಯಿದಂಗೆ ಅಥವಾ ಭಾರತದ ಪ್ರಥಮ ಸ್ವಾತಂತ್ರ್ಯಸಂಗ್ರಾಮದ ನಂತರ ಬ್ರಿಟಿಷರು ನಿಶ್ಶಸ್ತ್ರೀಕರಣ ಕಾಯಿದೆಯನ್ನು ಜಾರಿಗೆ ತಂದರು . ಅದರಪ್ರಕಾರ ಭಾರತೀಯರು ಬ್ರಿಟಿಷರ ಅನುಮತಿಯಿಲ್ಲದೆ ಆಯುಧಗಳನ್ನು ಹೊಂದುವ ಹಾಗಿರಲಿಲ್ಲ.ಮತ್ತು ಈಗಾಗಲೇ ಹೊಂದಿರುವ ಆಯುಧಗಳನ್ನು ಮರಳಿಸಬೇಕಿತ್ತು . ಹಲಗಲಿ ಬೇಡರಿಗೆ ಆಯುಧಗಳೆ ಜಿವವಾಗಿತ್ತು . ಆಯುಧಗಳನ್ನುಮರಳಿಸಲು ಒಪ್ಪದ ಹಲಗಲಿ ಬೇಡರು ಹನುಮ, ಬಾಲ, ಜಡಗ, ರಾಮರ ನೇತೃತ್ವದಲ್ಲಿ ಕಂಪನಿ ಸರಕಾರದ ವಿರುದ್ಧ ದಂಗೆ ಎದ್ದರು. .ಸಿಪಾಯಿಗಳ ಕೆನ್ನೆಗೆ ಬಾರಿಸಿದರು . ಬೇಡರ ಮನವೊಲಿಸಲು ಬಂದ ಅಧಿಕಾರಿಯನ್ನೇ ಕೊಂದು ಹಾಕಿದರು . ಕ್ರೋಧಗೊಂಡ ಕಾರಾಸಾಹೇಬನ ಆದೇಶದಂತೆ ಕಂಪನಿಯ ದಂಡು ಬೇಡರನ್ನು ಕಂಡ ಕಂಡಲ್ಲಿ ಬೇಟೆಯಾಡಿತು .. ಹನುಮ ,ಭೀಮ. ಜಡಗ , ರಾಮ , ಬಾಲರು ಮಾಡಿದ ಪ್ರಯತ್ನ ವಿಫಲವಾಯಿತು . ನಿರ್ದಯವಾಗಿ ಅವರನ್ನುಸಾಯಿಸಲಾಯಿತು .ಬೇಡರ ಊರನ್ನು ಏನೂ ಉಳಿಸದಂತೆ ಲೂಟಿ ಮಾಡಲಾಯಿತು . .ಊರಿಗೆ ಬೆಂಕಿ ಇಟ್ಟುಗುರುತು ಸಿಗದಂತೆ ಬೂದಿ ಮಾಡಲಾಯಿತು

ಕೆಳಗಿನ ಪ್ರಶ್ನೆಗಳಿಗೆ ನಾಲ್ಕುಆಯ್ಕೆಗಳನ್ನುನೀಡಲಾಗಿದೆ.ಅವುಗಳಲ್ಲಿ ಸರಿಯಾದ ಉತ್ತರವನ್ನುಆರಿಸಿ ಬರೆಯಿರಿ.

೧.ಮುಂಗೈ ಪದವು ಈ ಸಮಾಸಕ್ಕೆ ಉದಾಹರಣೆಯಾಗಿದೆ.

ಎ) ತತ್ಪುರುಷ ಬಿ)ಗಮಕ ಸಿ)ಅಂಶಿ ಡಿ)ಕರ್ಮಧಾರಯ

೨.ನಡುರಾತ್ರಿ ಪದದಲ್ಲಿರುವ ಸಮಾಸವಿದು

ಎ) ಅಂಶಿ ಬಿ)ಕರ್ಮಧಾರಯ ಸಿ)ಗಮಕ ಡಿ)ತತ್ಪುರುಷ

೩.ಮೋಸಮಾಡು ಪದವು ಈ ಸಮಾಸಕ್ಕೆಉದಾಹರಣೆಯಾಗಿದೆ

ಎ)ಗಮಕ ಬಿ)ಕ್ರಿಯಾ ಸಿ)ಅಂಶಿ ಡಿ)ದ್ವಿಗು

ಉತ್ತರಗಳು

೧. ಸಿ)ಅಂಶಿ ೨.ಎ)ಅಂಶಿ ೩.ಬಿ) ಕ್ರಿಯಾಸಮಾಸ

ಮೊದಲೆರಡು ಪದಗಳಿಗೆ ಇರುವ ಸಂಬಂಧದಂತೆ ಮೂರನೆಯ ಪದಕ್ಕೆ ಸರಿಸಂಬಂಧ ಹೊಂದುವ ಪದ ಬರೆಯಿರಿ.

೧.ಮತ್ತ :ಮತ್ತೆ : : ಹತ್ತರ : ____

೨.ಸುತ್ತಮುತ್ತ : ಜೋಡುನುಡಿ : : ಬೆನ್ನಬೆನ್ನತ್ತಿ : ____

೩.ಮ್ಯಾಗ : ಮೇಲೆ : :ಹಿಂಗ : ___

೪.ಸಕ್ಕಾರಿ : ಸಕ್ಕರೆ : : ಕೇಳರಿ : ___

೫.ಚೊಂಬು : ಪೋರ್ಚುಗೀಸ್ : : ಹುಕುಂ : ___

೬.ಕಾಗದ : ಹಿಂದೂಸ್ಥಾನಿ : : ಪೆನ್ನು : ___

೭.ಇಲ್ಲದ್ಹಂಗ : ಇಲ್ಲದ ಹಾಗೆ : : ಇಸವಾಸ : ___

೮.ಹನುಮಭೀಮರಾಮ: ದ್ವಂದ್ವ ಸಮಾಸ : : ಮೋಸಮಾಡು : ___

ಉತ್ತರಗಳು

೧.ಹತ್ತಿರ ೨.ದ್ವಿರುಕ್ತಿ ೩.ಹೀಗೆ ೪. ಕೇಳಿರಿ ೫. ಹಿಂದೂಸ್ಥಾನಿ ೬.ಇಂಗ್ಲಿಷ್ ೭. ವಿಶ್ವಾಸ ೮. ಕ್ರಿಯಾಸಮಾಸ

ಪದ್ಯಪಾಠ ವಚನ ಸೌರಭ

ವಚನಕಾರರ ಪರಿಚಯ

ಜೇಡರ ದಾಸಿಮಯ್ಯ ನವರ ಕಾಲ ಸುಮಾರು ೧೧ ನೆಯ ಶತಮಾನ .ಇವರು ಯಾದಗಿರಿ ಸನಿಹದ ಮುದೇನೂರಿನವರು. 'ರಾಮನಾಥ' ಎನ್ನುವುದು ಇವರ ಅಂಕಿತ . ಇವರ ೧೫೦ ವಚನಗಳು ದೊರೆತಿವೆ.

ಫ.ಗು.ಹಳಕಟ್ಟಿಯವರು ಸಂಪಾದಿಸಿರುವ ದಾಸಿಮಯ್ಯನ ವಚನಗಳು ಕೃತಿಯಿಂದ ಪ್ರಸ್ತುತ ವಚನವನ್ನು ಆಯ್ದುಕೊಳ್ಳಲಾಗಿದೆ.

ಬಸವಣ್ಣ

೧೨ ನೆಯ ಶತಮಾನದ ಆದ್ಯ ವಚನಕಾರರಲ್ಲಿ ಒಬ್ಬರಾದ ಬಸವಣ್ಣನವರು ವಿಜಯಪುರ ಜಿಲ್ಲೆಯ ಬಾಗೇವಾಡಿಯವರು.ಕೂಡಲಸಂಗಮದೇವ ಎಂಬ ಅಂಕಿತದಿಂದ ಇವರು ವಚನಗಳನ್ನುರಚಿಸಿದ್ದಾರೆ. ಸಂ.ಶಿ.ಭೂಸನೂರು ಮಠ ಅವರು ಸಂಪಾದಿಸಿರುವ ವಚನ ಸಾಹಿತ್ಯ ಸಂಗ್ರಹದಿಂದ ಪ್ರಸ್ತುತ ವಚನಗಳನ್ನು ಸಂಗ್ರಹಿಸಲಾಗಿದೆ

ಪ್ರಶ್ನೋತ್ತರಗಳು

ಒಂದೊಂದು ವಾಕ್ಯದಲ್ಲಿ ಉತ್ತರಿಸಿ .

*೧. ಶಿವನಿಗೆ ಯಾರ ಭಕ್ತಿ ಹಿತವೆನಿಸುತ್ತದೆ?*

ಸತಿಪತಿಗಳು ಒಂದಾಗಿ ಸಲ್ಲಿಸಿದ ಭಕ್ತಿ ಶಿವನಿಗೆ ಹಿತವೆನಿಸುತ್ತದೆ.

*೨. ನಿಷ್ಠೆಯುಳ್ಳ ಭಕ್ತನಿಗೆ ನಟ್ಟಡವಿಯೂ ಏನೆನಿಸುತ್ತದೆ?*

ನಿಷ್ಠೆಯುಳ್ಳ ಭಕ್ತನಿಗೆ ನಟ್ಟಡವಿಯೂ ಪಟ್ಟಣವೆಂದೆನಿಸುವುದು.

*೩. ವಚನಕಾರರು ಯಾವುದನ್ನು ಮರನೇರಿದ ಮರ್ಕಟ ಎಂದಿದ್ದಾರೆ?*

ಬೆಂದಮನ (ಚಂಚಲ ಮನ)ವನ್ನು ವಚನಕಾರರು ಮರನೇರಿದ ಮರ್ಕಟವೆಂದಿದ್ದಾರೆ.

*೪. ಮಾನವನ ಸ್ವಭಾವವನ್ನು ವಚನಕಾರರು ಯಾವುದಕ್ಕೆ ಹೋಲಿಸಿದ್ದಾರೆ?*

ಮಾನವನ ಸ್ವಭಾವವನ್ನು ವಚನಕಾರರು ಅಂದಣವನೇರಿದ ಸೊಣಗಕ್ಕೆ ಹೋಲಿಸಿದ್ದಾರೆ.

*೫. ಕೂಡಲ ಸಂಗಮದೇವ ಯಾವಾಗ ಒಲಿಯುವುದಿಲ್ಲ?*

ನುಡಿಯೊಳಗಾಗಿ ನಡೆಯದಿದ್ದರೆ (ನುಡಿದಂತೆ ನಡೆಯದಿದ್ದರೆ) ಕೂಡಲ ಸಂಗಮ ದೇವ ಒಲಿಯುವುದಿಲ್ಲ.

ಮೂರು -ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿ.

*೧. ಭಕ್ತಿ ಮತ್ತು ನಿಷ್ಠೆಯ ಬಗ್ಗೆ ಜೇಡರ ದಾಸಿಮಯ್ಯನ ಅಭಿಪ್ರಾಯವೇನು?*

ಭಕ್ತಿ ಮತ್ತು ನಿಷ್ಠೆ ಬದುಕಿನ ವಿಶಿಷ್ಠ ಜೀವನ ಮೌಲ್ಯಗಳು ..ಜೀವನದಲ್ಲಿ ದಾಂಪತ್ಯ ಅತ್ಯಂತ ಪವಿತ್ರವಾದ ಸಂಬಂಧ.ಮನಃಪೂರ್ವಕವಾಗಿ ಒಂದಾದ ಸತಿಪತಿಯರ ಭಕ್ತಿ ಭಗವಂತನಿಗೆ ಅತ್ಯಂತ ಪ್ರಿಯವಾದುದು. .ನಿಷ್ಕಲ್ಮಶವಾದ ಭಕ್ತಿ ಸರ್ವಶ್ರೇಷ್ಠವಾದುದು . .ಹೊಂದಾಣಿಕೆಯಿರದ ಭಕ್ತಿ ಅದಕ್ಕೆ ವಿರುದ್ಧವಾದುದು .ಸತಿಪತಿಗಳಲ್ಲಿ ಹೊಂದಾಣಿಕೆಯಿರದೆ ದೇವರಿಗೆ ಭಕ್ತಿ ಸಲ್ಲಿಸಿದರೆ ಅದು ಅಮೃತದಲ್ಲಿ ವಿಷ ಬೆರೆತಂತ ಪರಿಣಾಮವನ್ನು ನೀಡುವುದು.

ನಿಷ್ಠೆಯನ್ನು ಹೊಂದಿರುವ ಭಕ್ತ ದಟ್ಟವಾದ ಕಾಡಿನ ಮಧ್ಯೆ ಇದ್ದರೂ ಅದು ಅವನಿಗೆ ಪಟ್ಟಣವಾಗಿ ಪರಿಣಮಿಸುವುದು ..ಅಂತವನಿಗೆ ದೇವರು ಒಲಿಯುವನು . ಆದರೆ ನಿಷ್ಠೆಯಿಲ್ಲದ ಭಕ್ತ ಪಟ್ಟಣದಲ್ಲಿದ್ದರೂ ಅದು ಅವನಿಗೆ ಅರಣ್ಯವಾಗಿ ಪರಿಣಮಿಸುವುದು . ಅಂದರೆ ಅವನಿಗೆ ಯಾವುದೇ ಕಾರ್ಯದಲ್ಲೂ ಯಶಸ್ಸು ಸಿಗದೇ ನೆಮ್ಮದಿಯಿಲ್ಲದೇ ಬದುಕಬೇಕಾಗಬಹುದು .. ಆದ್ದರಿಂದ ಜೀವನದಲ್ಲಿ ಭಕ್ತಿ ಮತ್ತು ನಿಷ್ಠೆ ಅತಿ ಮಹತ್ವವಾದುದು ಎಂದು ಜೇಡರ ದಾಸಿಮಯ್ಯನವರು ಹೇಳಿದ್ದಾರೆ.

*೨. ಬಸವಣ್ಣನ ವಚನಗಳಲ್ಲಿ ಕಂಡುಬರುವ ಚಂಚಲ ಮನಸ್ಸು ಮತ್ತು ಸ್ವಭಾವಗಳನ್ನು ವಿವರಿಸಿ.*

ಮನವು ಮರ್ಕಟನಂತೆ.ಮರವನೇರಿದ ಮಂಗವು ಹೇಗೆ ನಿಂತಲ್ಲಿ ನಿಲ್ಲದೇ ಕೊಂಬೆಯಿಂದ ಕೊಂಬೆಗೆ ಜಿಗಿಯುವುದೋಹಾಗೆ ಮನವೂ ಕೂಡ ಒಂದೆಡೆ ನಿಲ್ಲುವುದಿಲ್ಲ.ಅಂತಹ ಚಂಚಲ ಮನವನ್ನು ನಂಬುವುದು ಹೇಗೆ?ನಾಯಿಯು ಪಲ್ಲಕ್ಕಿಯನ್ನೇರಿದರೂ ತನ್ನ ಮೂಲ ಸ್ವಭಾವವನ್ನು ಬಿಡದ ಹಾಗೆ ಚಂಚಲವಾದ ಮನವು ಬೇಡದ ಕಾಮನೆಗಳ ಕಡೆ ಹರಿಯುವುದು .ಪ್ರತಿದಿನವೂ ದೇವರನ್ನು ನೆನೆಯಲು ಬಿಡದು . ಎಂದು ಬಸವಣ್ಣನವರು ಚಂಚಲ ಮನಸ್ಸು ಮತ್ತು ಸ್ವಭಾವದ ಕುರಿತು ಹೇಳಿದ್ದಾರೆ.ದೇವರಲ್ಲಿ ಶರಣು ಹೋದರೆ ಚಂಚಲ ಮನಸ್ಸಿಗೆ ಕಡಿವಾಣ ಹಾಕಬಹುದು ಎಂದು ಬಸವಣ್ಣನವರ ಅಭಿಮತವಾಗಿದೆ.

*೩. ಮಾತಿನ ಮಹತ್ವವನ್ನು ಬಸವಣ್ಣನವರು ಹೇಗೆ ವಿಶ್ಲೇಷಿಸಿದ್ದಾರೆ?*

ನುಡಿಯು ಮುತ್ತಿನ ಹಾರದಂತೆ ಸುಂದರ ಪದಗಳ ಸಂಯೋಜನೆಯಿಂದ ಕೂಡಿರಬೇಕು . ಆಕರ್ಷಕವಾಗಿರಬೇಕು .ಅರ್ಥಪೂರ್ಣವಾಗಿರಬೇಕು .ಮಾಣಿಕ್ಯದ ದೀಪ್ತಿಯಂತೆ ಪ್ರಕಾಶಮಾನವಾಗಿರಬೇಕು . ಕೇಳುಗರಿಗೆ ಜ್ಞಾನದ ಬೆಳಕು ನೀಡುವಂತಿರಬೇಕು ..ಸ್ಫಟಿಕದ ಶಲಾಕೆಯಂತೆ ನೇರ ಮತ್ತು ಸ್ಪಷ್ಟವಾಗಿರಬೇಕು .ನಾವಾಡುವ ಮಾತನ್ನು ಕೇಳಿದ ದೇವರೂ ಕೂಡ ಮೆಚ್ಚಿ ತಲೆದೂಗುವಂತೆ ಸರಳವಾದ ಸತ್ಯವಾದ ಮಾತುಗಳನ್ನು ಆಡಬೇಕು .ಆದರೆ ಮಾತಿಗೆ ಮಹತ್ವ ಬರುವುದೇ ಆಡಿದ ಮಾತಿನಂತೆ ನಡೆದಾಗ ಮಾತ್ರ.ನಡೆ ನುಡಿ ಒಂದಾಗಿದ್ದಾಗ ಮಾತ್ರ ದೇವರು ಒಲಿಯುವನು . ಎಂದು ಬಸವಣ್ಣನವರು ಮಾತಿನ ಮಹತ್ವವನ್ನು ವಿಶ್ಲೇಷಿಸಿದ್ದಾರೆ.

ಸಂದರ್ಭದೊಂದಿಗೆ ಸ್ವಾರಸ್ಯ ವಿವರಿಸಿ.

*೧." ನಿಷ್ಠೆಯಿಲ್ಲದ ಭಕ್ತ ಪಟ್ಟಣದಲ್ಲಿದ್ದಡೂ ಅದು ನಟ್ಟಡವಿ."*

ಈ ಮೇಲಿನ ವಾಕ್ಯವನ್ನು ಜೇಡರದಾಸಿಮಯ್ಯನವರು ಬರೆದ (ಫ.ಗು. .ಹಳಕಟ್ಟಿ ಸಂಪಾದಿಸಿರುವ ದಾಸಿಮಯ್ಯನ ವಚನಗಳು )ವಚನ ಸೌರಭ ಎನ್ನುವ ಪದ್ಯ ಭಾಗದಿಂದ ಆಯ್ದುಕೊಳ್ಳಲಾಗಿದೆ.

ಈ ಮಾತನ್ನು ಜೇಡರ ದಾಸಿಮಯ್ಯ ಹೇಳಿದ್ದಾರೆ.

ಭಕ್ತಿ ಮತ್ತು ನಿಷ್ಠೆ ಬದುಕಿನ ವಿಶಿಷ್ಠ ಜೀವನ ಮೌಲ್ಯಗಳು .ನಿಷ್ಕಲ್ಮಶವಾದ ಭಕ್ತಿಯೇ ಸರ್ವಶ್ರೇಷ್ಠ .ಭಕ್ತಿಯ ಸಾಕಾರಕ್ಕೆ ನಿಷ್ಠೆ ಮುಖ್ಯ.ಸಾತ್ವಿಕ ಬದುಕಿನ ಸಾರ್ಥಕತೆ ದೃಢವಾದ ಸಾಮರಸ್ಯದ ಭಕ್ತಿ ಮತ್ತು ನಿಷ್ಠೆಯಿಂದ ಸಾಕ್ಷಾತ್ಕಾರವಾಗಬಲ್ಲುದು.

ನಿಷ್ಠೆಯನ್ನು ಹೊಂದಿರುವ ಭಕ್ತ ಅವನು ದಟ್ಟವಾದ ಅರಣ್ಯದಲ್ಲಿದ್ದರೂ ಅದು ಅವನಿಗೆ ಅರಣ್ಯವೆನ್ನಿಸದೆ ಅದು ಪಟ್ಟಣವೆಂದೆನಿಸುವುದು ..ಆದರೆ ಜೀವನದಲ್ಲಿ ದೇವರ ಕುರಿತು ನಿಷ್ಠೆ ಹೊಂದಿರದವನಿಗೆ

**ಅವನು ಪಟ್ಟಣದಲ್ಲಿ ವಾಸಿಸಿದರೂ ಅದು ದಟ್ಟವಾದ ಅರಣ್ಯವಾಗಿ ಪರಿಣಮಿಸು ವುದು .ಎಂದು ಜೇಡರ ದಾಸಿಮಯ್ಯನವರು ನಿಷ್ಠೆ ಮತ್ತು ಭಕ್ತಿಯ ಕುರಿತು ವಿವರಿಸುವಾಗ ಮೇಲಿನಂತೆ ಹೇಳಿದ್ದಾರೆ.**

**ಸ್ವಾರಸ್ಯ : ದೇವರ ಮೇಲೆ ಅಚಲವಾದ ಭಕ್ತಿ ಹೊಂದಿರುವವನು ಎಂತಹ ಕಷ್ಟ ಬಂದರೂ ಎದುರಿಸಿ ನಡೆಯಬಲ್ಲ,ಆದರೆ ನಿಷ್ಟೆ ಹೊಂದಲಾರದವನಿಗೆ ಎಲ್ಲವೂ ಸಮಸ್ಯೆಗಳೇ ಆಗಿ ಪರಿಣಮಿಸುತ್ತವೆ ಎಂಬುದು ಮೇಲಿನ ವಾಕ್ಯದ ಸ್ವಾರಸ್ಯವಾಗಿದೆ.**

***೨. "ಸುಡು! ಸುಡು! ಮನವಿದು ವಿಷಯಕ್ಕೆ ಹರಿವಿದು!"***

**ಈ ಮೇಲಿನ ವಾಕ್ಯವನ್ನು ಬಸವಣ್ಣನವರು ಬರೆದ ಸಂ.ಶಿ.ಭೂಸನೂರು ಮಠ ಅವರು ಸಂಪಾದಿಸಿರುವ ವಚನ ಸಾಹಿತ್ಯ ಸಂಗ್ರಹದಿಂದ ಆರಿಸಲಾದ ವಚನ ಸೌರಭ ಎನ್ನುವ ಪದ್ಯ ಭಾಗದಿಂದ ಆಯ್ದು ಕೊಳ್ಳಲಾಗಿದೆ.**

**ಮಾನವನ ಚಂಚಲ ಮನಸ್ಸು ಮತ್ತು ಸ್ವಭಾವದ ಕುರಿತು ಹೇಳುವಾಗ ಬಸವಣ್ಣನವರು ಮೇಲಿನಂತೆ ಹೇಳಿದ್ದಾರೆ.**

**ಚಂಚಲವಾದ ಮನಸ್ಸು ಪಲ್ಲಕ್ಕಿಯನೇರಿದ ನಾಯಿಯ ಹಾಗೆ, ನಾಯಿಯನ್ನು ಎಲ್ಲಿ ತೆಗೆದು ಕೊಂಡು ಹೋಗಿ ಕೂರಿಸಿದರೂ ಅದು ತನ್ನ ಮೂಲ ಸ್ವಭಾವವನ್ನು ಬಿಡದ ಹಾಗೆ ಚಂಚಲವಾದ ಮನವೂ ಕೂಡ ಬೇಡವಾದ ಕಾಮನೆಗಳ ಕಡೆ ಹರಿಯುವುದು .. ದಿನವೂ ದೇವರನ್ನು ನೆನೆಯಲು ಬಿಡದು .ಕಾಯಕದಲ್ಲಿ ತೊಡಗಲು ಅವಕಾಶ ಕೊಡದು ..ಆದ್ದರಿಂದ ಅಂತಹ ಚಂಚಲ ಮನಕ್ಕೆ ಕಡಿವಾಣ ಹಾಕಿಸಿ ದೇವರ ಚರಣವನ್ನು ನೆನೆವಂತೆ ಅನುಗ್ರಹಿಸು ಎಂದು ಕೂಡಲ ಸಂಗಮದೇವನಲ್ಲಿ ಬಸವಣ್ಣನವರು ಬೇಡಿಕೊಂಡಿದ್ದಾರೆ.**

**ಸ್ವಾರಸ್ಯ :ಮನಸ್ಸು ಚಂಚಲವಾದುದು ಅದು ಒಮ್ಮೆ ಇದ್ದಂತೆ ಇನ್ನೊಮ್ಮೆ ಇರಲಾರದು ,ಆದರ ನಿಗ್ರಹದ ಅವಶ್ಯಕತೆಯನ್ನು ಮೇಲಿನ ವಾಕ್ಯವು ಹೇಳುತ್ತದೆ.**

***೩." ಹಲವು ಕೊಂಬೆಗೆ ಹಾಯುತಲಿದೆ."***

**ಈ ಮೇಲಿನ ವಾಕ್ಯವನ್ನು ಬಸವಣ್ಣನವರು ಬರೆದ ಸಂ.ಶಿ.ಭೂಸನೂರು ಮಠ ಅವರು ಸಂಪಾದಿಸಿರುವ ವಚನ ಸಾಹಿತ್ಯ ಸಂಗ್ರಹದಿಂದ ಆರಿಸಲಾದ ವಚನ ಸೌರಭ ಎನ್ನುವ ಪದ್ಯ ಭಾಗದಿಂದ ಆಯ್ದು ಕೊಳ್ಳಲಾಗಿದೆ.**

**ಬಸವಣ್ಣನವರು ನೈತಿಕ ಬದುಕಿಗೆ ಹೆಚ್ಚು ಮಹತ್ವ ನೀಡಿದವರು ..ಅವರ ಅಭಿಪ್ರಾಯದಲ್ಲಿ ಮಾನವನ ಚಂಚಲವಾದ ಮನಸ್ಸು ಮರವನ್ನೇರಿದ ಮರ್ಕಟದ ಹಾಗೆ .ಮರವನೇರಿದ ಮಂಗವು ಕೂತಲ್ಲಿ ಕೂರದೇ**

ಕ್ಷಣ ಕ್ಷಣಕ್ಕೂ ಕೊಂಬೆಯಿಂದ ಕೊಂಬೆಗೆ ನೆಗೆವಂತೆ ಮನವು ಚಂಚಲವಾದುದು ..ಅಂತಹ ಬೆಂದ ಮನವನ್ನು ಹೇಗೆ ನಂಬಿ , ಮೆಚ್ಚಿ ಬಾಳಲು ಸಾಧ್ಯ ? ಈ ರೀತಿಯ ಚಂಚಲ ಮನವು ಕೂಡಲ ಸಂಗಮ ದೇವನನ್ನು ನೆನೆಯಲು ಬಿಡದು .ಆದ್ದರಿಂದ ಚಂಚಲ ಮನಕ್ಕೆ ಕಡಿವಾಣ ಹಾಕಿ ಒಳ್ಳೆಯ ವಿಷಯಗಳ ಕಡೆ ಸೆಳೆಯಬೇಕು ಎಂದು ಹೇಳಿದ್ದಾರೆ .

ಸ್ವಾರಸ್ಯ:ಮನವು ಮರ್ಕಟದ ಹಾಗೆ ಇದ್ದಲ್ಲಿ ಇರಲಾರದು,ಕಂಡ ಕಂಡ ವಿಷಯದ ಕಡೆ ಹೋಗುವುದು ಆದರೆ ಅದರ ನಿಯಂತ್ರಣ ಅವಶ್ಯ ಎಂಬುದನ್ನು ವಚನಕಾರರು ಹೇಳಿದ್ದಾರೆ.

*೪. "ನುಡಿದರೆ ಮಾಣಿಕ್ಯದ ದೀಪ್ತಿಯಂತಿರಬೇಕು ".*

ಈ ಮೇಲಿನ ವಾಕ್ಯವನ್ನು ಬಸವಣ್ಣನವರು ಬರೆದ ಸಂ.ಶಿ.ಭೂಸನೂರು ಮಠ ಅವರು ಸಂಪಾದಿಸಿರುವ ವಚನ ಸಾಹಿತ್ಯ ಸಂಗ್ರಹದಿಂದ ಆರಿಸಲಾದ ವಚನ ಸೌರಭ ಎನ್ನುವ ಪದ್ಯ ಭಾಗದಿಂದ ಆಯ್ದು ಕೊಳ್ಳಲಾಗಿದೆ.

ಮಾತಿನ ಮಹತ್ವವನ್ನು ಕುರಿತು ಹೇಳುತ್ತ ಬಸವಣ್ಣನವರು ಮಾತು ಮುತ್ತಿನ ಹಾರದಂತೆ ಸುಂದರ ಪದಗಳ , ವಾಕ್ಯಗಳ ಪೋಣಿಸುವಿಕೆಯಿಂದ ಕೂಡಿರಬೇಕು . ಮಾಣಿಕ್ಯದ ದೀಪ್ತಿಯಂತೆ ಪ್ರಕಾಶಮಾನವಾಗಿರಬೇಕು ..ಅಜ್ಞಾನದಿಂದ ಜ್ಞಾನದ ಕಡೆ ಎಲ್ಲರನ್ನು ಕರೆದೊಯ್ಯುವಂತಿರಬೇಕು ..ಸ್ಫಟಿಕದ ಶಲಾಕೆಯಂತೆ ನೇರವಾಗಿರಬೇಕು .ಸ್ಪಷ್ಟವಾಗಿರಬೇಕು . .ನಾವಾಡುವ ಮಾತು ದೇವರೂ ಕೂಡ ಮೆಚ್ಚುವಂತಿರಬೇಕು ..ಆದರೆ ನುಡಿಗೆ ಮಹತ್ವ ಬರುವುದು ನಾವು ನುಡಿದಂತೆ ನಡೆದಾಗ ಮಾತ್ರ.ನಡೆ ನುಡಿ ಒಂದಾಗಿದ್ದಾಗ ಮಾತ್ರ ದೇವರು ಒಲಿಯುವನು. ಅರ್ಥಪೂರ್ಣವಾದ ಮಾತಿನಂತೆ ನಡೆದಾಗ ಸುಖೀ ಸಮಾಜ ನಿರ್ಮಾಣವಾಗುವುದು ಎಂದು ಬಸವಣ್ಣನವರು ಹೇಳಿದ್ದಾರೆ.

ಸ್ವಾರಸ್ಯ: ನುಡಿಯು ಮಾಣಿಕ್ಯದ ತೂಕವನ್ನು ಹೊಂದಿದೆ. ಆಡುವ ಮಾತಿನಲ್ಲಿ ಗಾಂಭೀರ್ಯ ಕಾಯ್ದುಕೊಳ್ಳುವುದು ಅವಶ್ಯವಾದುದು ಎಂಬುದನ್ನು ಮೇಲಿನ ವಾಕ್ಯವು ಸೂಚಿಸುವುದು.

*ಮೊದಲಿನೆರಡು ಪದಗಳಿಗಿರುವ ಸಂಬಂಧದಂತೆ ಮೂರನೆಯ ಪದಕ್ಕೆ ಸಂಬಂಧಿಸಿದ ಪದ ಬರೆಯಿರಿ.*

೧. ಅಲ್ಲಮಪ್ರಭು -ಗುಹೇಶ್ವರಾ :: ಜೇಡರ ದಾಸಿಮಯ್ಯ -ರಾಮನಾಥ

೨. ಅಟವಿ _ಅಡವಿ::ಅಮೃತ - ಅಮದರ್ು

೩.ಮನದೊಳಗೆ-ಲೋಪಸಂಧಿ :: ಮನೆಯೊಳಗೆ -ಆಗಮ ಸಂಧಿ

೪. ಹುಸಿ _ನನ್ನಿ:: ಮಿಥ್ಯ-ಸತ್ಯ

೫.ಸೂರ್ಯ ಚಂದ್ರರು -ದ್ವಂದ್ವ ಸಮಾಸ:: ನಟ್ಟಡವಿ -ಅಂಶಿಸಮಾಸ

GOVT HIGH SCHOL BEGUR BANGALURU -68

ಕೆಳಗಿನ ಪ್ರಶ್ನೆಗಳಿಗೆ ನಾಲ್ಕು ಆಯ್ಕೆಗಳನ್ನು ನೀಡಲಾಗಿದೆ.ಅವುಗಳಲ್ಲಿ ಸರಿಯಾದ ಉತ್ತರವನ್ನು ಆರಿಸಿ ಬರೆಯಿರಿ.

೧.'ಸತಿಪತಿ' ಪದವು ಈ ವ್ಯಾಕರಣಾಂಶದ ಉದಾಹರಣೆ -

ಎ)ದ್ವಿರುಕ್ತಿ ಬಿ)ಜೋಡುನುಡಿ ಸಿ)ಅನುಕರಣಾವ್ಯಯ ಡಿ)ನುಡಿಗಟ್ಟು

೨.'ಭಕ್ತಿ ' ಪದದ ತದ್ಭವ ರೂಪವಿದು

ಎ) ಬಕುತಿ ಬಿ)ಭಕುತಿ ಸಿ)ಭಕ್ತ ಡಿ)ಗೌರವ

೩.'ಶಿವಂಗೆ' ಪದದಲ್ಲಿರುವ ವಿಭಕ್ತಿ ---

ಎ)ಪ್ರಥಮಾ ಬಿ)ದ್ವಿತೀಯಾ ಸಿ)ತೃತೀಯಾ ಡಿ)ಚತುರ್ಥಿ

೪.'ಅಮೃತ' ಪದದ ತದ್ಭವ ರೂಪವಿದು –

ಎ) ಅಮರ್ದು ಬಿ)ವಿಷ ಸಿ)ಅಮರತ ಡಿ) ಅಮೃತಾ

೫.'ನಟ್ಟಡವಿ' ಪದವು ಈ ಸಮಾಸಕ್ಕೆ ಉದಾಹರಣೆಯಾಗಿದೆ

ಎ) ಗಮಕ ಬಿ)ಕರ್ಮಧಾರಯ ಸಿ)ತತ್ಪುರುಷ ಡಿ)ಅಂಶಿ

೬.'ಸೊಣಗ' ಪದದ ತತ್ಸಮ ರೂಪವಿದು

ಎ)ನಾಯಿ ಬಿ)ಶುನಕ ಸಿ)ಕುನ್ನಿ ಡಿ)ಸೊನಗ

೭.'ಬೆಂದಮನ' ಪದವು ಈ ಸಮಾಸದ ಉದಾಹರಣೆಯಾಗಿದೆ

ಎ) ಗಮಕ ಬಿ)ಅಂಶಿ ಸಿ)ಕರ್ಮಧಾರಯ ಡಿ)ತತ್ಪುರುಷ

೮.'ಪಟ್ಟಣ 'ಪದದ ತದ್ಭವ ರೂಪ

ಎ)ಪೊಟ್ಟಣ ಬಿ)ನಗರ ಸಿ)ಪತ್ತನ ಡಿ)ಪಟ್ಟನ

೯.'ಅಟವಿ ' ಪದದ ತದ್ಭವ ರೂಪ --

ಎ)ಅರಣ್ಯ ಬಿ)ಅಡವಿ ಸಿ)ಕಾಡು ಡಿ)ಕಾನನ

೧. ಬಿ)ಜೋಡುನುಡಿ ೨. ಎ)ಬಕುತಿ ೩. ಡಿ)ಚತುರ್ಥಿ ೪. ಎ)ಅಮರ್ದು ೫.ಡಿ)ಅಂಶಿ ೬. ಬಿ)ಶುನಕ ೭.ಎ)ಗಮಕ ೮. ಸಿ)ಪತ್ತನ ೯. ಬಿ)ಅಡವಿ

ಅಲಂಕಾರ ಹೆಸರಿಸಿ ಸಮನ್ವಯಿಸಿ

.ಅಮೃತದೊಳು ವಿಷ ಬೆರೆತಂತೆ

mamatabhagwat1@gmail.com

ಉಪಮೇಯ : ಸತಿಪತಿಗಳೊಂದಾಗದವನ ಭಕ್ತಿ

ಉಪಮಾನ : ಅಮೃತದೊಳು ವಿಷ ಬೆರೆಯುವುದು

ಉಪಮಾವಾಚಕ :ಅಂತೆ

ಸಮಾನಧರ್ಮ : ಲುಪ್ತವಾಗಿದೆ

ಉಪಮೇಯವಾದ ಸತಿಪತಿಗಳೊಂದಾಗದವನ ಭಕ್ತಿಯನ್ನು ಉಪಮಾನವಾದ ಅಮೃತದೊಳು ವಿಷ ಬೆರೆಯುವುದಕ್ಕೆ ಹೋಲಿಸಿರುವುದರಿಂದ ಇದು ಉಪಮಾಲಂಕಾರವಾಗಿದೆ.

ಮರನನೇರಿದ ಮರ್ಕಟನಂತೆ

ಉಪಮೇಯ :ಲುಪ್ತವಾಗಿದೆ

ಉಪಮಾನ : ಮರನನೇರಿದ ಮರ್ಕಟ

ಉಪಮಾವಾಚಕ : ಅಂತೆ

ಸಮಾನಧರ್ಮ : ಲುಪ್ತವಾಗಿದೆ

ಅಲಂಕಾರ : ಉಪಮಾ

ಅಂದಣವನೇರಿದ ಸೊಣಗನಂತೆ

ಉಪಮೇಯ : ಲುಪ್ತವಾಗಿದೆ.

ಉಪಮಾನ: ಅಂದಣವನೇರಿದ ಸೊಣಗ

ಉಪಮಾವಾಚಕ : ಅಂತೆ

ಸಮಾನಧರ್ಮ:ಲುಪ್ತವಾಗಿದೆ

ಅಲಂಕಾರ : ಉಪಮಾ

***ಪಧ್ಯಪಾಠ ಸಂಕಲ್ಪ ಗೀತೆ***

***- ಜಿ.ಎಸ್.ಶಿವರುದ್ರಪ್ಪ***

***ಕವಿ ಪರಿಚಯ***

***ಜಿ.ಎಸ್.ಶಿವರುದ್ರಪ್ಪನವರ ಪೂರ್ಣ ಹೆಸರು ಗುಗ್ಗರಿ ಶಾಂತವೀರಪ್ಪ ಶಿವರುದ್ರಪ್ಪ ಇವರು ಶಿವಮೊಗ್ಗ ಜಿಲ್ಲೆಯ ಶಿಕಾರಿಪುರದಲ್ಲಿ ೭-೨-೧೯೨೬ ರಲ್ಲಿ ಜನಿಸಿದರು (ಮರಣ: ೨೩-೧೨-೨೦೧೩)***

***ಸಾಮಗಾನ, ಚೆಲುವು ಒಲವು, ದೇವ ಶಿಲ್ಪಿ ದೀಪದ ಹೆಜ್ಜೆ, ಅನಾವರಣ, ವಿಮರ್ಶೆಯ ಪೂರ್ವಪಶ್ಚಿಮ, ಮಾಸ್ಕೋದಲ್ಲಿ ಇಪ್ಪತ್ತೆರಡು ದಿನಗಳು, ಸೌಂದರ್ಯಸಮೀಕ್ಷೆ ಮೊದಲಾದವು ಇವರು ಬರೆದ ಕೃತಿಗಳು***

***ಪ್ರಸ್ತುತ ಪಧ್ಯದ ಆಕರ ಕೃತಿ : ಎದೆ ತುಂಬಿ ಹಾಡಿದೆನು***

***ಸಾಧನೆ-ಪ್ರಶಸ್ತಿಗಳು : ಕಾವ್ಯಾರ್ಥ ಚಿಂತನ ಕೃತಿಗೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ಹಂಪಿ ಕನ್ನಡ ವಿಶ್ವವಿದ್ಯಾಲಯದ ಪಂಪ ಪ್ರಶಸ್ತಿ, ಬೆಂಗಳೂರು ಮತ್ತು ಕುವೆಂಪು ವಿಶ್ವವಿದ್ಯಾನಿಲಯದ ಗೌರವ ಡಿ.ಲಿಟ್ ಪದವಿ, ರಾಷ್ಟ್ರಕವಿ ಅಭಿದಾನ ಮತ್ತು ಪಂಪ ಪ್ರಶಸ್ತಿ ಇವರಿಗೆ ದೊರೆತಿದೆ.***

**ಸಾರಾಂಶ _ ಭಾವಾರ್ಥ**

**ಜೀವನದಲ್ಲಿ ಎಲ್ಲವೂ ನಾವಂದುಕೊಂಡಂತೆಯೇ ನಡೆಯುವುದಿಲ್ಲ . ಸಮಸ್ಯೆಗಳು ಕಷ್ಟಗಳು ಜೀವಿಯ ಬಾಳಿನಲ್ಲಿ ಸಹಜವಾದವು.ಇವುಗಳು ಜೀವಿಯ ಬಾಳಿನಲ್ಲಿ ನಿರಾಶೆ, ಭಯ , ಅಜ್ಞಾನ ,ದ್ವೇಷ ಮೊದಲಾದ ಬೇಡವಾದ ಭಾವನೆಗಳನ್ನು ಸೃಷ್ಟಿಸಿದರೆ ಅದರಲ್ಲೇನೂ ಆಶ್ಚರ್ಯವಿಲ್ಲ. ಅಂಧಕಾರವನ್ನು ಹೋಗಲಾಡಿಸಲು ದೀಪದ ಅವಶ್ಯಕತೆ ಇರುವಂತೆ ಬದುಕಿನಲ್ಲಿ ಅಥವ ಮನಸ್ಸಿನಲ್ಲಿ ಕವಿದ ನಿರಾಶೆಯ ,ಅಜ್ಞಾನದ ಕತ್ತಲೆಯನ್ನು ಹೋಗಲಾಡಿಸಲು ಜ್ಞಾನದ ಮತ್ತು ಪ್ರೀತಿಯ ಹಣತೆಯನ್ನು ಹಚ್ಚಬೇಕು.ಬಿರುಗಾಳಿ ಬೀಸಿದಾಗ ಹಡಗನ್ನು ಎಚ್ಚರದಿಂದ ಮುನ್ನಡೆಸುವ ಹಾಗೆ ಬದುಕಿನಲ್ಲಿ ಆಗಾಗ ಬರುವ ಸಮಸ್ಯೆಗಳೆನ್ನುವ ಬಿರುಗಾಳಿ ಬೀಸಿದಾಗ ಅದನ್ನು ನಿವಾರಿಸಿಕೊಳ್ಳುತ್ತ ಎಚ್ಚರದಿಂದ ಈ ಜೀವನವೆನ್ನುವ ಹಡಗನ್ನು ಮುನ್ನಡೆಸಬೇಕು.ಅಸ್ಪಷ್ಟತೆಯಿಂದ ಸ್ಪಷ್ಟತೆಯೆಡೆಗೆ ದೃಢವಾದ ಹೆಜ್ಜೆಗಳನ್ನಿಡುತ್ತ ಮುಂದೆ ಸಾಗಬೇಕು.ಅಜ್ಞಾನ,ನಿರಾಶೆಗಳ ದಾರಿಯಲ್ಲಿ ಕವಿದ ಕತ್ತಲೆಯನ್ನು ಹೋಗಲಾಡಿಸಲು ಜ್ಞಾನದ ,ಪ್ರೀತಿಯ ಹಣತೆಯ ಹಚ್ಚಿ ಸಮಸ್ಯೆಗಳಿಂದ ಬದುಕಿನ ಹಡಗು ಮುಳುಗಿ ಹೋಗದಂತೆ ಎಚ್ಚರದಿಂದ ಜೀವನವನ್ನು ನಡೆಸಬೇಕು.**

**ಕಲುಷಿತವಾದ ನದಿ ನೀರನ್ನು ಸುರಿದ ಮುಂಗಾರಿನ ಮಳೆಯು ಪರಿಶುದ್ಧಗೊಳಿಸುವ ಹಾಗೆ ಭ್ರಷ್ಟವಾಗಿರುವ ಸಮಾಜದಲ್ಲಿ ತುಂಬಿರುವ ಭೇದ ಭಾವ ,ಅಸಹನೆ ,ದ್ವೇಷ ,ಅಸೂಯೆ ,ಹಿಂಸೆ ,ಭಯ ಸಂಶಯ ಮೊದಲಾದವುಗಳನ್ನು ಪ್ರೀತಿ ,ವಿಶ್ವಾಸ ,ಭರವಸೆಗಳೆನ್ನುವ ಮುಂಗಾರಿನ ಮಳೆ**

ಸುರಿಸುವ ಮೂಲಕ ತೊಡೆದು ಹಾಕಲು ಪ್ರಯತ್ನಿಸೋಣ.ಒಣಗಿ ಹೋಗಿರುವ ಗಿಡಮರಗಳು ವಸಂತ ಕಾಲದಿಂದ ಚಿಗುರುವ ಹಾಗೆ ಮನುಷ್ಯನ ಮನಸ್ಸಿನಲ್ಲಿ ಕವಿದ ಅಥವಾ ಸಮಾಜದಲ್ಲಿ ತುಂಬಿದ ನಿರಾಶೆಯೆನ್ನುವ ಒಣಗಿ ಹೋದ ಗಿಡಮರಗಳನ್ನು ಪ್ರೀತಿ,ವಿಶ್ವಾಸ,ಆತ್ಮವಿಶ್ವಾಸ,ಭರವಸೆ ಗಳೆನ್ನುವ ವಸಂತಕಾಲವನ್ನು ಮೂಡಿಸಿ ಸಂತೃಪ್ತಿ ಎನ್ನುವ ಹೊಸಚಿಗುರನ್ನು ಮೂಡಿಸೋಣ.

ಯಾವುದನ್ನೇ ಆಗಲಿ ,ನಿರ್ಮಿಸುವುದು ಕಷ್ಟ.ಆದರೆ ಅದನ್ನೇ ಕ್ಷಣ ಮಾತ್ರದಲ್ಲಿ ನಾಶ ಮಾಡಬಹುದು.ಬಿದ್ದು ಹೋಗಿರುವ ನಿರೀಕ್ಷೆಯ ಆಶಾಸೌಧವನ್ನು ಹೊಸ ಭರವಸೆಗಳ ಮೂಲಕ ಮತ್ತೆ ನಿಲ್ಲಿಸಬೇಕಾದ ಪರಿಸ್ಥಿತಿಯ ಅನಿವಾರ್ಯತೆ ಇದೆ.ಮಾನಸಿಕವಾಗಿ ಅಧಃಪತನಕ್ಕೆ ಕುಸಿದು ಹೋಗಿರುವ ಜನರಲ್ಲಿ ಅವರಲ್ಲಿರುವ ಭಯ ಬೀತಿಯ ಭಾವವನ್ನು ತೊಡೆದು ಹಾಕಿ ಧೈರ್ಯ ವನ್ನು ತುಂಬಲು ಪ್ರಯತ್ನಿಸೋಣ.

ಜಾತಿ,ಮತ,ಮೇಲು ಕೀಳು,ಅಸೂಯೆಯಿಂದ ಕೂಡಿದ ಪೈಪೋಟಿಗಳು ,ದ್ವೇಷ ಅಸಹನೆಯ ಭಾವಗಳು ಮನುಷ್ಯರು ಪರಸ್ಪರ ಒಂದುಗೂಡಿ ಪ್ರೀತಿ ವಿಶ್ವಾಸದಿಂದ ಬಾಳಲು ಇರುವ ಅಡ್ಡಗೋಡೆಗಳಾಗಿವೆ.ಅಂತಹ ವೈರುಧ್ಯದ ಭಾವನೆಗಳನ್ನು ತೊಡೆದು ಹಾಕಬೇಕಾದ ಅಗತ್ಯವಿದೆ.ಪರಸ್ಪರರನ್ನು ದ್ವೇಷಿಸುವ ,ಅನುಮಾನದಿಂದ ನೋಡುವ ಮನುಷ್ಯ ಮನುಷ್ಯರಲ್ಲಿ ಕಂದಕ ನಿರ್ಮಾಣಮಾಡುವಭಾವಗಳನ್ನುಕೆಡವಿಹಾಕಿಪರಸ್ಪರರಲ್ಲಿಪ್ರೀತಿ ,ಕರುಣೆ,ನಂಬಿಕೆ,ಆತ್ಮಸ್ಥೈರ್ಯ,ಮಾನವೀಯ ಭಾವಗಳನ್ನು ನಿರ್ಮಾಣ ಮಾಡಿ ಎಲ್ಲರನ್ನೂ ಒಂದುಗೂಡಿಸುವ ಸೇತುವೆಯಾಗುವ ಪ್ರಯತ್ನ ಮಾಡೋಣ.

ಪ್ರತಿಯೊಂದು ಮತಕ್ಕೂ ಅದರದೇ ಆದ ದಾರಿಯಿದೆ ಎನ್ನುವ ಎಚ್ಚರದಲ್ಲಿ ಬದುಕೋಣ.ಎಲ್ಲ ಧರ್ಮಗಳೂ ಜೀವನಕ್ಕೆ ಬೇಕಾದ ಒಳ್ಳೆಯ ಮಾರ್ಗ ತೋರಿಸುತ್ತವೆ ಎನ್ನುವ ಅರಿವಿರಬೇಕು.ಎಲ್ಲ ಧರ್ಮಗಳನ್ನೂ,ಧರ್ಮದ ಜನರನ್ನೂ ಪರಸ್ಪರ ಗೌರವಿಸುವ ಮನೋಭಾವವಿರಬೇಕು.ಭಿನ್ನತೆಯಿದ್ದರೂ ಸಹ ಭಾವನೆ ಒಂದೆ ಎಂಬ ಅರಿವು ಮೂಡಿಸಲು ಯತ್ನಿಸೋಣ.ಪರಸ್ಪರರಲ್ಲಿ ಮೂಡಿರುವ ಸಂಶಯ ,ಅಸಹನೆ , ಭಯ ಗಳಿಂದ ಉಂಟಾಗಿರುವ ನಿರಾಶೆಯನ್ನು ಹೋಗಲಾಡಿಸಿ ನಾಳಿನ ಭವಿಷ್ಯದ ಕುರಿತಾಗಿ ಹೊಸ ಕನಸುಗಳನ್ನು ಬಿತ್ತುವ ,ಭರವಸೆಗಳನ್ನು ಮೂಡಿಸುವ ,ಎಲ್ಲರೂ ಒಂದಾಗಿ ಬದುಕುವಂತೆ ಸಮಾಜದಲ್ಲಿ ಉತ್ಸಾಹ,ಆದರ್ಶಗಳ ವಾತಾವರಣ ಬೆಳೆಯುವಂತೆ ಮಾಡೋಣ.ಭಯ ಮತ್ತು ಅನುಮಾನ ಆವರಿಸಿರುವ ಸಮಾಜವನ್ನು ದೃಢನಿಷ್ಠೆಯಿಂದ ಸ್ವಾಸ್ಥ್ಯದ ನೆಲೆಯಾಗಿಸುವ ಸಂಕಲ್ಪ ಮಾಡೋಣ.

## ಪ್ರಶ್ನೋತ್ತರಗಳು

ಒಂದೊಂದು ವಾಕ್ಯದಲ್ಲಿ ಉತ್ತರಿಸಿ.

೧. ಯಾವುದನ್ನು ಎಚ್ಚರದಲಿ ಮುನ್ನಡೆಸಬೇಕು ?

ಬಿರುಗಾಳಿಗೆ ಹೊಯ್ದಾಡುವ ಹಡಗನ್ನು ಎಚ್ಚರದಲಿ ಮುನ್ನಡೆಸಬೇಕು.

೨.ನದೀಜಲಗಳು ಏನಾಗಿವೆ ?

ನದೀಜಲಗಳು ಕಲುಷಿತವಾಗಿವೆ.

೩.ಯಾವುದಕ್ಕೆ ಮುಂಗಾರಿನ ಮಳೆಯಾಗಬೇಕು ?

ಕಲುಷಿತವಾದ ನದೀಜಲಗಳಿಗೆ ಮುಂಗಾರಿನ ಮಳೆಯಾಗಬೇಕು.

೪.ಕಾಡುಮೇಡುಗಳ ಸ್ಥಿತಿ ಹೇಗಿದೆ?

ಕಾಡುಮೇಡುಗಳು ಬರಡಾದ ಸ್ಥಿತಿ ತಲುಪಿವೆ.

೫.ಯಾವ ಎಚ್ಚರದೊಳು ಬದುಕಬೇಕಿದೆ?

ಮತಗಳೆಲ್ಲವೂ ಪಥಗಳು ಎನ್ನುವ ಎಚ್ಚರದೊಳು ಬದುಕಬೇಕಿದೆ.

ಇನ್ನಿತರ ಸಂಭವನೀಯ ಪ್ರಶ್ನೆಗಳು

೧. ಯಾವ ಹಣತೆಯನ್ನು ಹಚ್ಚಬೇಕೆಂದು ಕವಿ ಆಶಿಸಿದ್ದಾರೆ.

ನಿರಾಶೆಯ ಕತ್ತಲೆಯನ್ನು ಓಡಿಸಲು ಪ್ರೀತಿಯ ಹಣತೆಯನ್ನು ಹಚ್ಚಬೇಕೆಂದು ಕವಿ ಆಶಿಸಿದ್ದಾರೆ.

೨. ಕಾಡು ಮೇಡುಗಳನ್ನು ಹೇಗೆ ಮುಟ್ಟಬೇಕೆಂದು ಕವಿ ಹೇಳಿದ್ದಾರೆ.

ಕಾಡುಮೇಡುಗಳನ್ನು ವಸಂತವಾಗುತ ಮುಟ್ಟಬೇಕೆಂದು ಕವಿ ಹೇಳಿದ್ದಾರೆ.

೩. ಹೊಸಭರವಸೆಗಳನ್ನು ಹೇಗೆ ಕಟ್ಟಬೇಕು

ಬಿದ್ದುದನ್ನು ಮೇಲೆಬ್ಬಿಸಿ ನಿಲ್ಲಿಸಿ ಹೊಸ ಭರವಸೆಗಳನ್ನು ಕಟ್ಟಬೇಕು .

೪. ನಾಳಿನ ಕನಸನ್ನು ಎಲ್ಲಿ ಬಿತ್ತಬೇಕು ?

ಭಯ ಸಂಶಯದೊಳು ಕಂದಿದ ಕಣ್ಣಿನಲ್ಲಿ ನಾಳಿನ ಕನಸನ್ನು ಬಿತ್ತಬೇಕು .

ಎರಡು ಮೂರು ವಾಕ್ಯಗಳಲ್ಲಿ ಉತ್ತರಿಸಿ.

೧.ಹಡಗನ್ನು ಯಾವುದರ ಬೆಳಕಿನಲ್ಲಿ ಮುನ್ನಡೆಸಬೇಕಿದೆ?

ಅಂಧಕಾರವನ್ನು ಹೋಗಲಾಡಿಸಲು ದೀಪದ ಅವಶ್ಯಕತೆ ಇರುವಂತೆ ಬದುಕಿನಲ್ಲಿ ಅಥವ ಮನಸ್ಸಿನಲ್ಲಿ ಕವಿದ ನಿರಾಶೆಯ ,ಅಜ್ಞಾನದ ಕತ್ತಲೆಯನ್ನು ಹೋಗಲಾಡಿಸಲು ಜ್ಞಾನದ ಮತ್ತು ಪ್ರೀತಿಯ ಹಣತೆಯನ್ನು ಹಚ್ಚಬೇಕು.ಬಿರುಗಾಳಿ ಬೀಸಿದಾಗ ಹಡಗನ್ನು ಎಚ್ಚರದಿಂದ ಮುನ್ನಡೆಸುವ ಹಾಗೆ ಬದುಕಿನಲ್ಲಿ ಆಗಾಗ ಬರುವ ಸಮಸ್ಯೆಗಳೆನ್ನುವ ಬಿರುಗಾಳಿ ಬೀಸಿದಾಗ ಅದನ್ನು ನಿವಾರಿಸಿಕೊಳ್ಳುತ್ತ ಎಚ್ಚರದಿಂದ ಈ ಜೀವನವೆನ್ನುವ ಹಡಗನ್ನು ಮುನ್ನಡೆಸಬೇಕು.ಅಸ್ಪಷ್ಟತೆಯಿಂದ ಸ್ಪಷ್ಟತೆಯೆಡೆಗೆ ದೃಢವಾದ ಹೆಜ್ಜೆಗಳನ್ನಿಡುತ್ತ ಮುಂದೆ ಸಾಗಬೇಕು.ಅಜ್ಞಾನ,ನಿರಾಶೆಗಳ ದಾರಿಯಲ್ಲಿ ಕವಿದ

ಕತ್ತಲೆಯನ್ನು ಹೋಗಲಾಡಿಸಲು ಜ್ಞಾನದ ,ಪ್ರೀತಿಯ ಹಣತೆಯ ಹಚ್ಚಿ ಸಮಸ್ಯೆಗಳಿಂದ ಬದುಕಿನ ಹಡಗು ಮುಳುಗಿ ಹೋಗದಂತೆ ಎಚ್ಚರದಿಂದ ಜೀವನವನ್ನು ನಡೆಸೋಣ.

೨.ಕಾಡುಗಳಿಗೆ ಹೇಗೆ ಮುಟ್ಟಬೇಕಿದೆ ?

ಕಲುಷಿತವಾದ ನದಿ ನೀರನ್ನುಸುರಿದ ಮುಂಗಾರಿನ ಮಳೆಯು ಪರಿಶುದ್ಧಗೊಳಿಸುವ ಹಾಗೆಭ್ರಷ್ಟವಾಗಿರುವ ಸಮಾಜದಲ್ಲಿ ತುಂಬಿರುವ ಭೇದ ಭಾವ ,ಅಸಹನೆ ,ದ್ವೇಷ ,ಅಸೂಯೆ ,ಹಿಂಸೆ ,ಭಯ ಸಂಶಯ ಮೊದಲಾದವುಗಳನ್ನು ಪ್ರೀತಿ ,ವಿಶ್ವಾಸ ,ಭರವಸೆಗಳೆನ್ನುವ ಮುಂಗಾರಿನ ಮಳೆ ಸುರಿಸುವ ಮೂಲಕ ತೊಡೆದು ಹಾಕಲು ಪ್ರಯತ್ನಿಸಬೇಕಿದೆ.ಒಣಗಿ ಹೋಗಿರುವ ಗಿಡಮರಗಳು ವಸಂತ ಕಾಲದಿಂದ ಚಿಗುರುವ ಹಾಗೆ ಮನುಷ್ಯನ ಮನಸ್ಸಿನಲ್ಲಿ ಕವಿದ ಅಥವಾ ಸಮಾಜದಲ್ಲಿ ತುಂಬಿದ ನಿರಾಶೆಯೆನ್ನುವ ಒಣಗಿ ಹೋದ ಗಿಡಮರಗಳನ್ನುಪ್ರೀತಿ,ವಿಶ್ವಾಸ,ಆತ್ಮವಿಶ್ವಾಸ,ಭರವಸೆ ಗಳೆನ್ನುವ ವಸಂತಕಾಲವನ್ನು ಮೂಡಿಸಿ ಸಂತೃಪ್ತಿ ಎನ್ನುವ ಹೊಸಚಿಗುರನ್ನು ಮೂಡಿಸೋಣ.

೩.ಹೊಸ ಭರವಸೆಗಳನ್ನು ಮೂಡಿಸಿ ಯಾವುದರ ನಡುವೆ ಸೇತುವೆಯಾಗಬೇಕಿದೆ?

ಜಾತಿ,ಮತ,ಮೇಲು ಕೀಳು,ಅಸೂಯೆಯಿಂದ ಕೂಡಿದ ಪೈಪೋಟಿಗಳು ,ದ್ವೇಷ ಅಸಹನೆಯ ಭಾವಗಳು ಮನುಷ್ಯರು ಪರಸ್ಪರ ಒಂದುಗೂಡಿ ಪ್ರೀತಿ ವಿಶ್ವಾಸ ದಿಂದ ಬಾಳಲು ಇರುವ ಅಡ್ಡಗೋಡೆಗಳಾಗಿವೆ.ಅಂತಹ ವೈರುಧ್ಯದ ಭಾವನೆಗಳನ್ನು ತೊಡೆದು ಹಾಕಬೇಕಾದ ಅಗತ್ಯವಿದೆ.ಪರಸ್ಪರರನ್ನು ದ್ವೇಷಿಸುವ ,ಅನುಮಾನದಿಂದ ನೋಡುವ ಮನುಷ್ಯ ಮನುಷ್ಯರಲ್ಲಿ ಕಂದಕ ನಿರ್ಮಾಣ ಮಾಡುವ ಭಾವಗಳನ್ನು ಕೆಡವಿ ಹಾಕಿ ಪರಸ್ಪರರಲ್ಲಿ ಪ್ರೀತಿ,ಕರುಣೆ,ನಂಬಿಕೆ,ಆತ್ಮಸ್ಥೈರ್ಯ,ಮಾನವೀಯ ಭಾವಗಳನ್ನು ನಿರ್ಮಾಣ ಮಾಡಿ ಎಲ್ಲರನ್ನೂ ಒಂದುಗೂಡಿಸುವ ಸೇತುವೆಯಾಗುವ ಪ್ರಯತ್ನ ಮಾಡಬೇಕಿದೆ.

೪.ನಾಳಿನ ಕನಸನ್ನು ಬಿತ್ತಬೇಕಾದರೆ ನಾವು ಹೇಗೆ ಬದುಕಬೇಕು ?

ಪ್ರತಿಯೊಂದು ಮತಕ್ಕೂ ಅದರದೇ ಆದ ದಾರಿಯಿದೆ ಎನ್ನುವ ಎಚ್ಚರದಲ್ಲಿ ಬದುಕೋಣ.ಭಿನ್ನತೆಯಿದ್ದರೂ ಸಹ ಭಾವನೆ ಒಂದೆ ಎಂಬ ಅರಿವು ಮೂಡಿಸಲು ಯತ್ನಿಸೋಣ.ಪರಸ್ಪರರಲ್ಲಿ ಮೂಡಿರುವ ಸಂಶಯ ,ಅಸಹನೆ , ಭಯ ಗಳಿಂದ ಉಂಟಾಗಿರುವ ನಿರಾಶೆಯನ್ನು ಹೋಗಲಾಡಿಸಿ ನಾಳಿನ ಭವಿಷ್ಯದ ಕುರಿತಾಗಿ ಹೊಸ ಕನಸುಗಳನ್ನು ಬಿತ್ತುವ ,ಭರವಸೆಗಳನ್ನು ಮೂಡಿಸುವ ,ಎಲ್ಲರೂ ಒಂದಾಗಿ ಬದುಕುವಂತೆ ಸಮಾಜದಲ್ಲಿ ಉತ್ಸಾಹ,ಆದರ್ಶಗಳ ವಾತಾವರಣ ಬೆಳೆಯುವಂತೆ ಮಾಡೋಣ.ಭಯ ಮತ್ತು ಅನುಮಾನ ಆವರಿಸಿರುವ ಸಮಾಜವನ್ನು ದೃಢನಿಷ್ಠೆಯಿಂದ ಸ್ವಾಸ್ಥ್ಯದ ನೆಲೆಯಾಗಿಸುವ ಸಂಕಲ್ಪ ಮಾಡೋಣ.

ಎಂಟು -ಹತ್ತು ವಾಕ್ಯಗಳಲ್ಲಿ ಉತ್ತರಿಸಿ.

೧. ನಾವು ಯಾವ ಸಂಕಲ್ಪ ಕೈಗೊಳ್ಳಬೇಕೆಂದು ಕವಿ ಶಿವರುದ್ರಪ್ಪನವರ ಆಶಯ ?

ಜೀವನದಲ್ಲಿ ಧನಾತ್ಮಕ ಭಾವನೆಯನ್ನು ಧೃಢ ಸಂಕಲ್ಪವನ್ನು ಹೊಂದಿರಬೇಕು.ಕಾರಣಾಂತರಗಳಿಂದ ನಮ್ಮಲ್ಲಿ ಮನೆ ಮಾಡಿರುವ ಅಜ್ಞಾನ,ನಿರಾಶೆ,ಭಯ ಹಿಂಸೆಗಳೆನ್ನುವ ಕತ್ತಲನ್ನು ಹೋಗಲಾಡಿಸಲು ಪ್ರೀತಿಯ ಹಣತೆಯನ್ನು ಹಚ್ಚಬೇಕು,ಸಮಸ್ಯೆಗಳಿಂದ ನಿರಾಶೆಗಳಿಂದ ಹೊಯ್ದಾಡುತ್ತಿರುವ ಜೀವನವೆನ್ನುವ ಹಡಗನ್ನು ಎಚ್ಚರದಲ್ಲಿ ಮುನ್ನಡೆಸುವ ಸಂಕಲ್ಪವನ್ನು ಮಾಡಬೇಕು.ಸುತ್ತಲಿನ ಸಮಾಜದಲ್ಲಿ ತುಂಬಿರುವ ಹಿಂಸೆ, ಬ್ರಷ್ಟಾಚಾರ ,ಜಾತೀಯತೆ ,ಶೋಷಣೆ ಮೊದಲಾದ ಅಸಹನೀಯವಾದ ಭಾವಗಳನ್ನು ತೊಡೆದುಹಾಕಲು ಸ್ವತಃ ನಮ್ಮಲ್ಲಿ ಮೊದಲು ಮೌಲ್ಯಗಳನ್ನು ರೂಢಿಸಿಕೊಂಡು ಆ ಮೂಲಕ ಸಮಾಜದಲ್ಲಿ ತುಂಬಿರುವ ಕೊಳಕು ತೊಳೆದುಹಾಕಲು ,ಸಮಾಜವೆನ್ನುವ ನದೀಜಲವನ್ನು ಪರಿಶುದ್ಧಗೊಳಿಸುವ ಮುಂಗಾರಿನ ಮಳೆಯಾಗುವ ಆಶಯವನ್ನು ಹೊಂದೋಣ.ನಿರಾಶೆಯಿಂದ ತುಂಬಿರುವ ಸಮಾಜದ ಜನರಲ್ಲಿ ಹೊಸ ಕನಸುಗಳನ್ನು ಚಿಗುರಿಸೋಣ.ಬಿದ್ದುಹೋಗಿರುವ ಆಶಾ ಗೋಪುರವನ್ನು ಮೇಲಕ್ಕೆತ್ತಿ ಹೊಸಭರವಸೆಗಳನ್ನು ಮೂಡಿಸಲು ಪ್ರಯತ್ನಿಸೋಣ.ಮನುಷ್ಯ ಮನುಷ್ಯರ ನಡುವೆ ನೆಲೆಸಿರುವ ಅಸಮಾನತೆ ,ಮತಾಂಧತೆ ಮೊದಲಾದ ಭಾವನೆಗಳನ್ನು ಬೀಳಿಸಿ ಎಲ್ಲರನ್ನೂ ಒಂದುಗೂಡಿಸುವ ಏಕತೆಯ ಸೇತುವೆಯಾಗಲು ಪ್ರಯತ್ನಿಸೋಣ.ಎಲ್ಲ ಧರ್ಮಗಳೂ ಹೇಳುವ ನೀತಿ ಒಂದೇ ಎನ್ನುವ ಎಚ್ಚರವನ್ನು ಬೆಳೆಸಿಕೊಂಡು ಎಲ್ಲರೂ ಕೂಡಿ ಬಾಳಲು ಪ್ರಯತ್ನಿಸೋಣ.ನಾಳೆ ಏನೋ ಹೇಗೋ ಎಂಬ ಭಯ ಸಂಶಯವನ್ನು ಹೋಗಲಾಡಿಸಿ ಹೊಸ ಕನಸುಗಳನ್ನು ಅದನ್ನು ಈಡೇರಿಕೊಳ್ಳುವ ಛಲವನ್ನು ಮೂಡಿಸಲು ಪ್ರಯತ್ನಿಸೋಣ ಇವೇ ಮೊದಲಾದ ಸಂಕಲ್ಪಗಳನ್ನು ಕೈಗೊಳ್ಳಬೇಕೆಂದು ಕವಿ ಜಿ.ಎಸ್.ಶಿವರುದ್ರಪ್ಪನವರ ಆಶಯವಾಗಿದೆ.

೨.ಸಂಕಲ್ಪ ಮತ್ತು ಅನುಷ್ಠಾನದ ಕುರಿತು ಕವಿ ಶಿವರುದ್ರಪ್ಪನವರ ಅಭಿಪ್ರಾಯವನ್ನು ವಿವರಿಸಿ.

ಸಂಕಲ್ಪದಿಂದ ಧೃಢನಿರ್ಧಾರದಿಂದ ಕಾರ್ಯಶೀಲರಾದರೆ ಅಸಾಧ್ಯವಾದುದೂ ಯಾವುದೂ ಇಲ್ಲ .ಪ್ರತಿಫಲದ ಅಪೇಕ್ಷೆಯಿಲ್ಲದೇ ಕಾರ್ಯನಿರ್ವಹಿಸುವ ಮೂಲಕ ಸಮಾಜದಲ್ಲಿ ತುಂಬಿರುವ ಅಜ್ಞಾನ,ಹಿಂಸೆಗಳ ಕತ್ತಲೆಯನ್ನು ಪ್ರೀತಿಯ ಹಣತೆಯನ್ನು ಹಚ್ಚುವ ಮೂಲಕ ಹೋಗಲಾಡಿಸಿ ಹಲವು ತುಮುಲಗಳಿಂದ ಹೊಯ್ದಾಡುತ್ತಿರುವ ಬದುಕಿಗೆ ಭದ್ರತೆ ಕಲ್ಪಿಸುವತ್ತ ಕಾರ್ಯೋನ್ಮುಖರಾಗಬೇಕು.ನಮ್ಮ ಸುತ್ತಮುತ್ತಲೂ ತುಂಬಿರುವ ಹಿಂಸೆ,ಅನಾಚಾರ ,ಶೋಷಣೆ ಗಳನ್ನು ತೊಡೆದುಹಾಕಿ ಸ್ವಷ್ಥ ಮನಸಿನ ಸುಂದರ ವಾತಾವರಣ ಕಲ್ಪಸಲು ಯತ್ನಿಸಬೇಕಿದೆ.ಏನು ಮಾಡಿದರೂ ನಿರರ್ಥಕ ಎಂಬ ಭಾವನೆಯಿಂದ ಹೊರತಂದು ಭರವಸೆಗಳನ್ನು ಮೂಡಿಸಿ ನಮ್ಮ ಮಧ್ಯೆ ಮೂಡಿರುವ ಪ್ರತ್ಯೇಕತೆಯನ್ನು ಇಲ್ಲವಾಗಿಸಿ ನಾವೆಲ್ಲರೂ ಒಂದು ಎಂಬ ಭಾವನೆಯನ್ನು ಸಮಾಜದ ಜನರಲ್ಲಿ ಮೂಡಿಸಬೇಕಿದೆ.ಎಲ್ಲ ಧರ್ಮಗಳ ಉದ್ದೇಶವೂ ಜೀವನದ ಸನ್ಮಾರ್ಗವನ್ನು ತೋರಿಸುವುದೇ ಆಗಿದೆ.ಹಾಗಾಗಿ ಎಲ್ಲ ಧರ್ಮಗಳನ್ನೂ ಗೌರವಿಸುವ ಎಲ್ಲರೂ ಒಂದಾಗಿ ಬಾಳುವ ಸದಾಶಯವನ್ನು ರೂಪಿಸಲು ಯತ್ನಿಸಬೇಕು.ನಾಳಿನ ಭವಿಷ್ಯದ ಕುರಿತಾದ ಸಂಶಯ ಮತ್ತು

ಭಯದ ಭಾವಗಳನ್ನು ಹೋಗಲಾಡಿಸಿ ಹೊಸ ಕನಸುಗಳನ್ನು ಬಿತ್ತುವ ಧೃಢ ಸಂಕಲ್ಪ ಮಾಡಬೇಕು.ಜೀವನದಲ್ಲಿ ಧನಾತ್ಮಕ ಭಾವನೆಯನ್ನು,ಧೃಢ ಸಂಕಲ್ಪವನ್ನು ಹೊಂದಿರಬೇಕು.ಹೋಗಬೇಕಾದ ದಾರಿ ತಲುಪಬೇಕಾದ ಗುರಿ ಸ್ಪಷ್ಟವಾಗಿದ್ದರೆ ಅರ್ಧ ಯಶಸ್ಸನ್ನು ಪಡೆದ ಹಾಗೆ.ಸಾಧಕನು ತಾನು ಕಂಡ ಕನಸನ್ನು ಅದೆಷ್ಟೇ ತೊಡಕುಗಳೂ ಬಂದರೂ, ಅಡ್ಡಿ ಆತಂಕಗಳು ಎದುರಾದರೂ ನನಸಾಗಿಸುತ್ತಾನೆ.ಯಾವುದೇ ರೀತಿಯ ಸವಾಲುಗಳು ಎದುರಾದಾಗಲೂ ಆತ್ಮವಿಶ್ವಾಸದ ಸಂಕಲ್ಪ ನಿಷ್ಠೆಯಿಂದ ಕ್ರಿಯಾಶೀಲರಾದಾಗ ಯಶಸ್ಸು ಲಭಿಸುತ್ತದೆ.ಭೇದಭಾವಗಳನ್ನು ಹೋಗಲಾಡಿಸಿ ಐಕ್ಯದಿಂದ ಪ್ರಯತ್ನಶೀಲರಾದಾಗ ಬಲ ವರ್ಧಿಸುತ್ತದೆ.ಭಯ ಮತ್ತು ಅನುಮಾನ ಆವರಿಸಿರುವ ಸಮಾಜವನ್ನು ಧೃಢನಿಷ್ಠೆಯಿಂದ ಸ್ವಾಸ್ಥ್ಯದ ನೆಲೆಯಾಗಿಸುವ ಹಣತೆ ಹಚ್ಚಿದಾಗ ಕತ್ತಲೆ ದೂರವಾಗುತ್ತದೆ ಎಂದು ಸಂಕಲ್ಪ ಮತ್ತು ಅನುಷ್ಠಾನದ ಕುರಿತು ಕವಿ ಜಿ.ಎಸ್.ಶಿವರುದ್ರಪ್ಪನವರು ಅಭಿಪ್ರಾಯಪಟ್ಟಿದ್ದಾರೆ.

ಸಂದರ್ಭಾನುಸಾರ ಸ್ವಾರಸ್ಯವನ್ನು ಬರೆಯಿರಿ.

೧.''ಪ್ರೀತಿಯ ಹಣತೆಯ ಹಚ್ಚೋಣ.''

ಈ ಮೇಲಿನ ವಾಕ್ಯವನ್ನು ಡಾ|| ಜಿ.ಎಸ್.ಶಿವರುದ್ರಪ್ಪನವರು ಬರೆದ ಸಂಕಲ್ಪಗೀತೆ ಎನ್ನುವ ಪದ್ಯಭಾಗದಿಂದ ಆಯ್ದುಕೊಳ್ಳಲಾಗಿದೆ.ಈ ಮಾತನ್ನು ಕವಿ ಹೇಳಿದ್ದಾರೆ.

ಸಂದರ್ಭ :ಬಿರುಗಾಳಿ ಬೀಸಿದಾಗ ಹಡಗನ್ನು ಎಚ್ಚರದಿಂದ ಮುನ್ನಡೆಸುವ ಹಾಗೆ ಬದುಕಿನಲ್ಲಿ ಆಗಾಗ ಬರುವ ಸಮಸ್ಯೆಗಳೆನ್ನುವ ಬಿರುಗಾಳಿ ಬೀಸಿದಾಗ ಅದನ್ನು ನಿವಾರಿಸಿಕೊಳ್ಳುತ್ತ ಎಚ್ಚರದಿಂದ ಈ ಜೀವನವೆನ್ನುವ ಹಡಗನ್ನು ಮುನ್ನಡೆಸಬೇಕು.ಅಸ್ಪಷ್ಟತೆಯಿಂದ ಸ್ಪಷ್ಟತೆಯೆಡೆಗೆ ಧೃಢವಾದ ಹೆಜ್ಜೆಗಳನ್ನಿಡುತ್ತ ಮುಂದೆ ಸಾಗಬೇಕು.ಅಜ್ಞಾನ,ನಿರಾಶೆಗಳ ದಾರಿಯಲ್ಲಿ ಕವಿದ ಕತ್ತಲೆಯನ್ನು ಹೋಗಲಾಡಿಸಲು ಜ್ಞಾನದ ,ಪ್ರೀತಿಯ ಹಣತೆಯ ಹಚ್ಚಿ ಸಮಸ್ಯೆಗಳಿಂದ ಬದುಕಿನ ಹಡಗು ಮುಳುಗಿ ಹೋಗದಂತೆ ಎಚ್ಚರದಿಂದ ಜೀವನವನ್ನು ನಡೆಸಬೇಕೆಂದು ಕವಿ ಆಶಿಸಿದ್ದಾರೆ.

ಸ್ವಾರಸ್ಯ : ಜೀವನದಲ್ಲಿ ಪರಸ್ಪರ ಪ್ರೀತಿ ವಿಶ್ವಾಸದ ಅರಿವು ಅಗತ್ಯ ಎನ್ನುವುದು ಮೇಲಿನ ವಾಕ್ಯದ ಸ್ವಾರಸ್ಯವಾಗಿದೆ.

೨.''ಮುಂಗಾರಿನ ಮಳೆಯಾಗೋಣ.''

ಈ ಮೇಲಿನ ವಾಕ್ಯವನ್ನು ಡಾ||ಜಿ.ಎಸ್.ಶಿವರುದ್ರಪ್ಪನವರು ಬರೆದ ಸಂಕಲ್ಪಗೀತೆ ಎನ್ನುವ ಪದ್ಯಭಾಗದಿಂದ ಆಯ್ದುಕೊಳ್ಳಲಾಗಿದೆ.ಇದನ್ನು ಕವಿ ಹೇಳಿದ್ದಾರೆ.

ಸಂದರ್ಭ : ಕಲುಷಿತವಾದ ನದಿ ನೀರನ್ನು ಸುರಿದ ಮುಂಗಾರಿನ ಮಳೆಯು ಪರಿಶುದ್ಧಗೊಳಿಸುವ ಹಾಗೆ ಭ್ರಷ್ಟವಾಗಿರುವ ಸಮಾಜದಲ್ಲಿ ತುಂಬಿರುವ ಭೇದ ಭಾವ ,ಅಸಹನೆ ,ದ್ವೇಷ ,ಅಸೂಯೆ ,ಹಿಂಸೆ ,ಭಯ ಸಂಶಯ ಮೊದಲಾದವುಗಳನ್ನು ಪ್ರೀತಿ ,ವಿಶ್ವಾಸ ,ಭರವಸೆಗಳೆನ್ನುವ ಮುಂಗಾರಿನ ಮಳೆ

ಸುರಿಸುವ ಮೂಲಕ ತೊಡೆದು ಹಾಕಲು ಪ್ರಯತ್ನಿಸೋಣವೆಂದು ಕವಿ ಹೇಳಿದ್ದಾರೆ.
ಸ್ವಾರಸ್ಯ:ಬರಿದಾಗಿರುವ ಭೂಮಿಯಲ್ಲಿ ಹಸಿರು ತುಂಬಲು , ಕ್ರೌರ್ಯದಿಂದ ತುಂಬಿರುವ ಮನುಷ್ಯನ ಮನಸ್ಸಿನ ಕೊಳೆ ಹೋಗಿಸಲು ಮುಂಗಾರಿನ ಮಳೆಯಾಗಬೇಕು ಎಂಬ ಭಾವ ವ್ಯಕ್ತವಾಗಿದೆ.

೩.''ಹೊಸ ಭರವಸೆಗಳ ಕಟ್ಟೋಣ.''

ಈ ಮೇಲಿನ ವಾಕ್ಯವನ್ನು ಡಾ|| ಜಿ.ಎಸ್.ಶಿವರುದ್ರಪ್ಪನವರು ಬರೆದ ಸಂಕಲ್ಪಗೀತೆ ಎನ್ನುವ ಪದ್ಯಭಾಗದಿಂದ ಆಯ್ದುಕೊಳ್ಳಲಾಗಿದೆ.
ನಿರ್ಮಿಸುವುದು ಕಷ್ಟ.ಆದರೆ ಅದನ್ನೇ ಕ್ಷಣ ಮಾತ್ರದಲ್ಲಿ ನಾಶ ಮಾಡಬಹುದು.ಬಿದ್ದು ಹೋಗಿರುವ ನಿರೀಕ್ಷೆಯ ಆಶಾಸೌಧವನ್ನು ಹೊಸ ಭರವಸೆಗಳ ಮೂಲಕ ಮತ್ತೆ ನಿಲ್ಲಿಸಬೇಕಾದ ಪರಿಸ್ಥಿತಿಯ ಅನಿವಾರ್ಯತೆ ಇದೆ.ಮಾನಸಿಕವಾಗಿ ಅಧಃಪತನಕ್ಕೆ ಕುಸಿದು ಹೋಗಿರುವ ಜನರಲ್ಲಿ ಅವರಲ್ಲಿರುವ ಭಯ ಬೀತಿಯ ಭಾವವನ್ನು ತೊಡೆದು ಹಾಕಿ ಧೈರ್ಯ ವನ್ನು ತುಂಬಲು ಪ್ರಯತ್ನಿಸೋಣವೆಂದು ಕವಿ ಆಶಿಸಿದ್ದಾರೆ.
ಸ್ವಾರಸ್ಯ: ಭರವಸೆಯೇ ಜೀವಿಗಳನ್ನು ಜೀವಂತವಾಗಿಡುವುದು ಎಂಬ ಭಾವ ಮೇಲಿನ ವಾಕ್ಯದಲ್ಲಿ ವ್ಯಕ್ತವಾಗಿದೆ.

೪.''ಹೊಸ ಎಚ್ಚರದೊಳು ಬದುಕೋಣ.''

ಈ ಮೇಲಿನ ವಾಕ್ಯವನ್ನುಡಾ|| ಜಿ.ಎಸ್.ಶಿವರುದ್ರಪ್ಪನವರು ಬರೆದ ಸಂಕಲ್ಪಗೀತೆ ಎನ್ನುವ ಪದ್ಯಭಾಗದಿಂದ ಆಯ್ದುಕೊಳ್ಳಲಾಗಿದೆ.
ಪ್ರತಿಯೊಂದು ಮತಕ್ಕೂ ಅದರದೇ ಆದ ದಾರಿಯಿದೆ ಎನ್ನುವ ಎಚ್ಚರದಲ್ಲಿ ಬದುಕೋಣ.ಎಲ್ಲ ಧರ್ಮಗಳನ್ನೂ,ಎಲ್ಲ ಧರ್ಮಗಳ ಜನರನ್ನೂ ಪರಸ್ಪರ ಗೌರವಿಸುವ ಭಾವನೆ ಬೆಳೆಸಿಕೊಳ್ಳೋಣ.ಭಿನ್ನತೆಯಿದ್ದರೂ ಸಹ ಭಾವನೆ ಒಂದೆ ಎಂಬ ಅರಿವು ಮೂಡಿಸಲು ಯತ್ನಿಸೋಣ ಎಂದು ಕವಿ ಹೇಳಿದ್ದಾರೆ.
ಸ್ವಾರಸ್ಯ : ಸಮಾಜದಲ್ಲಿ ಸಾಮರಸ್ಯದ ಬಾಳ್ವೆಗೆ ಧರ್ಮ ಸಾಮರಸ್ಯ ಅತೀ ಅಗತ್ಯವಾದುದು ಎಂಬ ಎಚ್ಚರವಿರಬೇಕು ಎಂಬ ತತ್ವ ಇಲ್ಲಿ ವ್ಯಕ್ತವಾಗಿದೆ.

ಬಿಟ್ಟ ಜಾಗವನ್ನು ಸೂಕ್ತ ಪದದಿಂದ ತುಂಬಿ.

೧. 'ಸಂಕಲ್ಪ ಗೀತೆ 'ಪದ್ಯವನ್ನು---------- ಕವನ ಸಂಕಲನದಿಂದ ಆರಿಸಿಕೊಳ್ಳಲಾಗಿದೆ. (ಎದೆ ತುಂಬಿ ಹಾಡಿದೆನು )

೨. ಕತ್ತಲೆಯೊಳಗೆ ಪ್ರೀತಿಯ-------- ಹಚ್ಚೋಣ.(ಹಣತೆಯ )

೩. ಬಿದ್ದುದನ್ನು ಮೇಲೆಬ್ಬಿಸಿ ನಿಲ್ಲಿಸಿ ಹೊಸ ------- ಕಟ್ಟೋಣ.(ಭರವಸೆಗಳ)

೪. ನಾಳಿನ ಕನಸನು ------- ನಲ್ಲಿ ಬಿತ್ತೋಣ.(ಭಯ ಸಂಶಯದೊಳು ಕಂದಿದ ಕಣ್ಣು)

೫. ಜಿ.ಎಸ್. ಶಿವರುದ್ರಪ್ಪನವರು ------ಯಲ್ಲಿ ಸಮಾವೇಶಗೊಂಡ ಅಖಿಲಭಾರತ ಕನ್ನಡ ಸಾಹಿತ್ಯ

ಸಮ್ಮೇಳನದ ಅಧ್ಯಕ್ಷರಾಗಿದ್ದರು.ದಾವಣಗೆರೆ (೧೯೯೨,೬೧ ನೇ)

೧. ನೀಡಿರುವ ಪದಗಳ ಧಾತುಗಳನ್ನು ಗುರುತಿಸಿ ಬರೆಯಿರಿ.

ನಿಲ್ಲಿಸು , ನಡೆಸು , ಹಚ್ಚುವುದು, ಮುಟ್ಟೋಣ, ಕಟ್ಟುವುದು, ಆಗೋಣ

ನಿಲ್ಲಿಸು -ನಿಲ್ಲು ಹಚ್ಚುವುದು-ಹಚ್ಚು ಮುಟ್ಟೋಣ -ಮುಟ್ಟು ಕಟ್ಟುವುದು-ಕಟ್ಟು ,ಆಗುವುದು-ಆಗು ನಡೆಸು -ನಡೆ

೨. ವಿಭಕ್ತಿಪ್ರತ್ಯಯಗಳನ್ನುಪ್ರತ್ಯೇಕಿಸಿ ಬರೆಯಿರಿ.

ಪ್ರೀತಿಯ ,ಬಿರುಗಾಳಿಗೆ,ಜಲಕ್ಕೆ ಬಿದುದ್ದನ್ನು ಭರವಸೆಗಳ

ಪ್ರೀತಿಯ -ಅ-ಷಷ್ಠಿ ಬಿರುಗಾಳಿಗೆ- ಗೆ -ಚತುರ್ಥಿ, ಜಲಕ್ಕೆ-ಕ್ಕೆ-ಚತುರ್ಥಿ

ಬಿದುದ್ದನ್ನು-ಅನ್ನು-ದ್ವಿತೀಯಾ ಭರವಸೆಗಳ-ಅ-ಷಷ್ಠಿ

ಮೊದಲಿನ ಎರಡು ಪದಗಳಿಗಿರುವ ಸಂಬಂಧದಂತೆ ಮೂರನೆಯ ಪದಕ್ಕೆಸಂಬಂಧಿಸಿದ ಪದವನ್ನು ಬರೆಯಿರಿ.

೧. ಹೊಸಚಿಗುರು : ಕರ್ಮಧಾರಯಸಮಾಸ :ಮುಂಗಾರು : _ (ಅಂಶಿಸಮಾಸ)

೨. ಕಾಡುಮೇಡು :ಜೋಡುನುಡಿ :ಅಡ್ಡಗೋಡೆ :__(ನುಡಿಗಟ್ಟು)

೩. ನದೀ:ನದಿ : :ಪ್ರಣತಿ :_(ಹಣತೆ)

mamatabhagwat1@gmail.com

೪. ವಸಂತ :ಬಸಂತ : : ಯಶ: _(ಜಸ)

ಅಲಂಕಾರ ಹೆಸರಿಸಿ ಸಮನ್ವಯಿಸಿ.

ಪ್ರೀತಿಯ ಹಣತೆ

ಉಪಮೇಯ : ಪ್ರೀತಿ

ಉಪಮಾನ : ಹಣತೆ

ಅಲಂಕಾರ : ರೂಪಕ

ಉಪಮೇಯವಾದ ಪ್ರೀತಿಯನ್ನು ಉಪಮಾನವಾದ ಹಣತೆಎಂದು ಅಬೇಧ ಕಲ್ಪಿಸಿ ಹೇಳಿರುವುದರಿಂದ ಇದು ರೂಪಕ ಅಲಂಕಾರವಾಗಿದೆ.

ಕೆಳಗಿನ ಪ್ರಶ್ನೆಗಳಿಗೆ ನಾಲ್ಕು ಆಯ್ಕೆಗಳನ್ನು ನೀಡಲಾಗಿದೆ. ಅವುಗಳಲ್ಲಿ ಸರಿಯಾದ ಉತ್ತರವನ್ನು ಆರಿಸಿ ಬರೆಯಿರಿ.

೧.ಮುಂಗಾರು ಪದದಲ್ಲಿರುವ ಸಮಾಸ --

ಎ) ಕ್ರಿಯಾ ಬಿ)ಅಂಶಿ ಸಿ)ಗಮಕ ಡಿ)ದ್ವಂದ್ವ

೨.ಕಾಡುಮೇಡು ಪದವು ಈ ವ್ಯಾಕರಣಾಂಶದ ಉದಾಹರಣೆಯಾಗಿದೆ –

ಎ) ಜೋಡುನುಡಿ ಬಿ)ದ್ವಿರುಕ್ತಿ ಸಿ) ದ್ವಂದ್ವ ಡಿ)ಕರ್ಮಧಾರಯ

ಉತ್ತರಗಳು

೧.ಬಿ)ಅಂಶಿ ೨. ಎ)ಜೋಡುನುಡಿ

ಮೊದಲಿನ ಎರಡು ಪದಗಳ ಸಂಬಂಧದಂತೆ ಮೂರನೆಯ ಪದಕ್ಕೆಸರಿಸಂಬಂಧ ಹೊಂದುವ ಪದ ಬರೆಯಿರಿ.

೧.ಹಣತೆಯ : ಷಷ್ಠಿ ವಿಭಕ್ತಿ : : ಬಿರುಗಾಳಿಗೆ :_____

೨.ಹಡಗನು : ಪ್ರಥಮಾ : : ಮನುಜರ : ---

೩.ವಸಂತ : ಬಸಂತ : : ಹಣತೆ : ---

ಉತ್ತರಗಳು

೧.ಚತುರ್ಥಿ ೨.ಷಷ್ಠಿ ೩.ಪ್ರಣತಿ

ಪದ್ಯಪಾಠ - ಕೌರವೇಂದ್ರನ ಕೊಂದೆ ನೀನು ಪೂರ್ವಕಥೆ(ಹಿನ್ನೆಲೆ)

''ದಾಯಾದಿ ಮತ್ಸರ ಸರ್ವ ನಾಶಕ್ಕೆಹೇತು'' ಎನ್ನುವ ಹಾಗೆ ಕೌರವರು ಮತ್ತು ಪಾಂಡವರಲ್ಲಿನ ವೈಮನಸ್ಯ ಬೆಳೆದು ಹೆಮ್ಮರವಾಗಿ ಕಪಟದ ಪಗಡೆಯಾಟವಾ ಕೌರವರು ಪಾಂಡವರನ್ನು ರಾಜ್ಯಭ್ರಷ್ಟರಾಗಿ ಮಾಡಿ ,ಪಾಂಡವರು ೧೨ ವರ್ಷ ವನವಾಸ ಮತ್ತು ಒಂದು ವರ್ಷದ ಅಜ್ಞಾತವಾಸವನ್ನು ಅನುಭವಿಸುವ ಸಂದರ್ಭ ಎದುರಾಗುವುದು.ವನವಾಸ ಮತ್ತು ಅಜ್ಞಾತವಾಸದ ಸಂದರ್ಭದಲ್ಲಿಯೂ ಕೌರವರಿಂದ ಎದುರಾದ ಎಲ್ಲ ತೊಂದರೆಗಳನ್ನೂ ಎದುರಿಸಿ, ಅದನ್ನು ಯಶಸ್ವಿಯಾಗಿ ಮುಗಿಸಿ ಬಂದ ಪಾಂಡವರು ತಮ್ಮ ಪಾಲಿನ ರಾಜ್ಯವನ್ನು ಕೇಳಲು ಕೌರವರ ಬಳಿ ಬಂದಾಗ ಒಂದು ಸೂಜಿಯ ಮೊನೆಯಷ್ಟೂ ಕೂಡ ಜಾಗವನ್ನು ಕೊಡುವುದಿಲ್ಲ ಎಂಬ ದುರ್ಯೋಧನನ ಪ್ರತಿಕ್ರಿಯೆ ಎದುರಾಗುತ್ತದೆ.ಆದ್ದರಿಂದ ಕೌರವರೊಂದಿಗೆ ಸಂಧಾನ ಮಾಡಿಕೊಂಡು ರಾಜ್ಯವನ್ನು ಮರಳಿ ಪಡೆಯಲೋಸುಗ ಧರ್ಮರಾಯನು ಸಂಧಾನಕ್ಕಾಗಿ ಶ್ರೀ ಕೃಷ್ಣನನ್ನು ಕಳಿಸುತ್ತಾನೆ.ಶ್ರೀಕೃಷ್ಣನು ವಿದುರನ ಮೂಲಕ ದುರ್ಯೋಧನನ ಬಲವನ್ನು ಕುಗ್ಗಿಸುವ ಪ್ರಯತ್ನ ಮಾಡಿದಾಗ ತುಂಬಿದ ಸಭೆಯಲ್ಲಿ ದುರ್ಯೋಧನನು ವಿದರನನ್ನು ಹೀಗೆಳೆಯುತ್ತಾನೆ.ಕುಪಿತನಾದ ವಿದುರ ತನ್ನ ಬಿಲ್ಲನ್ನು ಮುರಿದು ಯುದ್ಧದಿಂದ ವಿಮುಖನಾಗುತ್ತಾನೆ.ಆದರೆ ಯುದ್ಧ ನಿಲ್ಲಿಸುವ ಸಂಧಾನದ ಪ್ರಯತ್ನ ವಿಫಲವಾಗುತ್ತದೆ.ಯುದ್ಧವೊಂದೇ ಪರಿಹಾರ ಎಂಬ ತೀರ್ಮಾನಕ್ಕೆ ಬಂದಾಗ ಕೌರವ ಸೇನೆಯಲ್ಲಿ ದುರ್ಯೋಧನನಿಗೆ ನಿಷ್ಠನಾಗಿದ್ದು ಪಾಂಡವರನ್ನು ಸೋಲಿಸಬಲ್ಲ ಬಲಶಾಲಿ ಕರ್ಣನಿಂದ

ಪಾಂಡವರನ್ನುರಕ್ಷಿಸಲೇಬೇಕೆಂದು ಸಂಕಲ್ಪ ಮಾಡಿದ ಶ್ರೀಕೃಷ್ಣನು ಅದಕ್ಕಾಗಿ ವೇದಿಕೆಯೊಂದನ್ನು ಸಿದ್ಧಪಡಿಸಿ ತನ್ನೊಂದಿಗೆ ಕರ್ಣನನ್ನು ಕರೆದೊಯ್ಯುತ್ತಾನೆ.ಅವರಿಬ್ಬರ ನಡುವೆ ನಡೆದ ಸಂವಾದವೇ ಪ್ರಸ್ತುತ ಪಠ್ಯಭಾಗ.

ಕೌರವೇಂದ್ರನ ಕೊಂದೆ ನೀನು ಮೂಲ ನುಡಿ ಮತ್ತು ಹೊಸಗನ್ನಡ ರೂಪ

-(ಕುಮಾರವ್ಯಾಸ)

ಇನತನೂಜನ ಕೂಡೆ ಮೈದುನ
ತನದ ಸರಸವನೆಸಗಿ ರಥದೊಳು
ದನುಜರಿಪು ಬರಸೆಳೆದು ಕುಳ್ಳಿರಿಸಿದನು ಪೀಠದಲಿ
ಎನಗೆ ನಿಮ್ಮಡಿಗಳಲಿ ಸಮಸೇ
ವನೆಯೆ ದೇವ ಮುರಾರಿಯಂಜುವೆ
ವೆನಲು ತೊಡೆ ಸೋಂಕಿನಲಿ ಸಾರಿದು ಶೌರಿಯಿಂತೆಂದ ||೧||

ರಾಕ್ಷಸ ಸಂಹಾರಕನಾದ ಕೃಷ್ಣನು ಸೂರ್ಯನ ಮಗನಾದ ಕರ್ಣನೊಡನೆ ಮೈದುನತನದ ಸರಸದಿಂದ (ಪ್ರೀತಿಯಿಂದ ) ಬರಸೆಳೆದು ರಥದ ಪೀಠದಲ್ಲಿ ಕುಳ್ಳಿರಿಸಿದನು.'' ನಿಮ್ಮೊಡನೆ ನಾನು ಸರಿಸಮಾನನಾಗಿ ಕುಳಿತುಕೊಳ್ಳಬಹುದೇ? ದೇವ ಮುರಾರಿ , ನನಗೇಕೋ ಭಯವಾಗುತ್ತಿದೆ.''ಎಂದು ಕರ್ಣನು ಹೇಳಲು , ಶ್ರೀಕೃಷ್ಣನು ಅವನ ಪಕ್ಕಕ್ಕೆ ತೊಡೆ ಸೋಕುವಂತೆ ಕುಳಿತು ಹೀಗೆಂದನು.

ಭೇದವಿಲ್ಲೆಲೆ ಕರ್ಣ ನಿಮ್ಮೊಳು
ಯಾದವರು ಕೌರವರೊಳಗೆ ಸಂ
ವಾದಿಸುವಡನ್ವಯಕೆ ಮೊದಲೆರಡಿಲ್ಲ ನಿನ್ನಾಣೆ
ಮೇದಿನೀಪತಿ ನೀನು ಚಿತ್ತದೊ
ಳಾದುದರಿವಿಲ್ಲೆನುತ ದಾನವ
ಸೂದನನು ರವಿಸುತನ ಕಿವಿಯಲಿ ಬಿತ್ತಿದನು ಭಯವ ||೨||

ಕರ್ಣ,ಕೌರವರು ಯಾದವರಿಗೆ ಭೇದವಿಲ್ಲ.ವಿಚಾರಿಸಿದರೆ ಇಬ್ಬರೂ ಒಂದೇ ವಂಶದವರು. (ಯಯಾತಿಯ ಮಕ್ಕಳು ಪುರು, ಯದು ,ಪುರುವಿನ ವಂಶದವರು ಕೌರವರು. ಯದುವಿನ ವಂಶದವರು ಯಾದವರು) ನಿನ್ನಾಣೆಯಾಗಿಯೂ ನೀನೇ ರಾಜ (ಮೇದಿನಿಪತಿ ) ಆದರೆ ನಿನಗೆ ಅದರ ಅರಿವಿಲ್ಲ ಎಂದು ಹೇಳುವ ಮೂಲಕ ದಾನವರ ವೈರಿಯಾದ ಶ್ರೀಕೃಷ್ಣನು ರವಿಸುತ (ಕರ್ಣ ) ನ ಕಿವಿಯಲ್ಲಿ ಭಯವನ್ನು ಬಿತ್ತಿದನು.

ಲಲನೆಪಡೆದೀಯೈದು ಮಂತ್ರಂ

ಗಳಲಿ ಮೊದಲಿಗ ನೀನು ನಿನ್ನಯ
ಬಳಿ ಯುಧಿಷ್ಠಿರದೇವ ಮೂರನೆಯಾತ ಕಲಿಭೀಮ
ಫಲುಗುಣನು ನಾಲ್ಕನೆಯಲೈದನೆ
ಯಲಿ ನಕುಲ ಸಹದೇವರಾದರು
ಬಳಿಕ ಮಾದ್ರಿಯಲೊಂದು ಮಂತ್ರ ದೊಳಿಬ್ಬರುದಿಸಿದರು ||೩||

ಪಾಂಡವರ ತಾಯಿಯಾದ ಕುಂತಿಯು ದೂರ್ವಾಸ ಮುನಿಗಳಿಂದ ಪಡೆದ ಐದು ಮಂತ್ರ ಗಳಲ್ಲಿ ಮೊದಲನೆಯವನು ನೀನು ,ನಿನ್ನ ನಂತರದಲ್ಲಿ ಜನಿಸಿದವನು ಯುಧಿಷ್ಠಿರ ,ಮೂರನೆಯಾತ ಶೂರನಾದ ಭೀಮನು ,ಅರ್ಜುನನು ನಾಲ್ಕನೆಯವನು ಆನಂತರದಲ್ಲಿ ಮಾದ್ರಿಗೆ (ಪಾಂಡುವಿನ ಎರಡನೇ ಪತ್ನಿಗೆ ಮೊದಲ ಪತ್ನಿಯಾದ ಕುಂತಿಯ ಕೃಪೆಯಿಂದ) ಮಂತ್ರ ದಿಂದ ನಕುಲ ಸಹದೇವರು ಜನಿಸಿದರುಎಂದು ಶ್ರೀ ಕೃಷ್ಣನು ಕರ್ಣನಿಗೆ ಅವನ ಜನ್ಮ ವೃತ್ತಾಂತವನ್ನು ಹೇಳಿದನು .

ನಿನಗೆ ಹಸ್ತಿನಪುರದ ರಾಜ್ಯದ
ಘನತೆಯನು ಮಾಡುವೆನು ಪಾಂಡವ
ಜನಪ ಕೌರವ ಜನಪರೋಲೈಸುವರು ಗದ್ದುಗೆಯ
ನಿನಗೆ ಕಿಂಕರವೆರಡು ಸಂತತಿ
ಯೆನಿಸಲೊಲ್ಲದೆ ನೀನು ದುರಿಯೋ
ಧನನ ಬಾಯ್ದುಂಬುಲಕೆ ಕೈಯಾನುವರೆ ಹೇಳೆಂದ ||೪||

ನಿನಗೆ ಹಸ್ತಿನಪುರದ ರಾಜನ ಹಿರಿಮೆಯನ್ನುಕೊಡಿಸುವೆನು.ಪಾಂಡವ ಕೌರವ ರಾಜರೆಲ್ಲರೂ ನಿನ್ನನ್ನು ಓಲೈಸುವರು.ಈ ಎರಡೂ ಸಂತತಿಯವರೂ ನಿನಗೆ ಸೇವಕರೆನಿಸಿಕೊಳ್ಳುವ ಹಿರಿಮೆಯನ್ನು ತಿರಸ್ಕರಿಸಿ ನೀನು ದುಯೋರ್ಧನನ ಬಾಯ್ದುಂಬುಲಕೆ ಕೈಯೊಡ್ಡುವುದು ಸರಿಯೇ ?ಹೇಳು ಎಂದು ಶ್ರೀಕೃಷ್ಣನು ಕರ್ಣನನ್ನುಪ್ರಶ್ನಿಸುವನು.

ಎಡದ ಮೈಯಲಿ ಕೌರವೇಂದ್ರರ
ಗಡಣ ಬಲದಲಿ ಪಾಂಡು ತನಯರ
ಗಡಣವಿದಿರಲಿ ಮಾದ್ರ ಮಾಗಧ ಯಾದವಾದಿಗಳು
ನಡುವೆ ನೀನೋಲಗದೊಳೊಪ್ಪುವ
ಕಡು ವಿಲಾಸವ ಬಿಸುಟು ಕುರುಪತಿ
ನುಡಿಸೆ ಜೀಯ ಹಸಾದವೆಂಬುದು ಕಷ್ಟ ನಿನಗೆಂದ ||೫||

ನಿನ್ನ ಎಡ ಭಾಗದಲ್ಲಿ ಕೌರವನ ಸಮೂಹದವರು ,ಬಲ ಭಾಗದಲ್ಲಿ ಪಾಂಡವರ ಸಮೂಹ (ಪಾಂಡು ರಾಜನ ಮಕ್ಕಳು ),ಇದಿರಿನಲ್ಲಿ ಮಾದ್ರಿ, ಮಾಗಧ, ಯಾದವಾದಿಗಳು ಇವರೆಲ್ಲರ ನಡುವೆ ನೀನು

ಓಲಗದಲ್ಲಿ ಶೋಭಿಸುವ ನೀನು ಇಂತಹ ಮಹಾ ಸೌಭಾಗ್ಯವನ್ನು ಅತ್ತ ಎಸೆದು ಕುರುಪತಿ (ಕೌರವ ,ದುರ್ಯೋಧನ) ನಿನಗೇನಾದರೂ ಹೇಳಿದರೆ 'ಜೀಯಾ, ಮಹಾಪ್ರಸಾದ' ಎಂದು ಒಪ್ಪಿಕೊಳ್ಳುವುದು ನಿನಗೆ ಕಷ್ಟವಾಗುವುದು ಎಂದು ಶ್ರೀಕೃಷ್ಣನು ಕರ್ಣನಿಗೆ ಹೇಳಿದನು.

ಕೊರಳ ಸೆರೆ ಹಿಗ್ಗಿದವು ದೃಗುಜಲ
ಉರವಣಿಸಿ ಕಡು ನೊಂದನಕಟಾ
ಕುರುಪತಿಗೆ ಕೇಡಾದುದೆಂದನು ತನ್ನ ಮನದೊಳಗೆ
ಹರಿಯ ಹಗೆ ಹೊಗೆದೋರದುರುಹದೆ
ಬರಿದೆ ಹೋಹುದೆ ತನ್ನ ವಂಶದ
ನರುಹಿ ಕೊಂದನು ಹಲವು ಮಾತೇನೆಂದು ಚಿಂತಿಸಿದ ||೬||

ಕರ್ಣನ ಕೊರಳ ನರಗಳು ಹಿಗ್ಗಿದವು (ಗದ್ಗದ )ಕಣ್ಣೀರು ಧಾರೆಯಾಗಿ ಸುರಿಯಿತು.ಅವನು ಬಹಳವಾಗಿ ನೊಂದು ''ಅಯ್ಯೋ!ಕುರುಪತಿಗೆ ಕೇಡಾಯಿತು''ಎಂದು ತನ್ನ ಮನದೊಳಗೆ ಅಂದುಕೊಂಡು ''ಕೃಷ್ಣನ ದ್ವೇಷದ ಬೆಂಕಿ ಹೊಗೆಯಾಡಿದ ಮೇಲೆ ಅದು ಪೂರ್ತಿಯಾಗಿ ಸುಡದೆ ಹಾಗೇ ಬಿಡುವುದೇ? ಬರಿದೆ ನನ್ನ ಜನ್ಮವೃತ್ತಾಂತವನ್ನು ಹೇಳಿ ಕೊಂದನು .ಹಲವು ಮಾತೇಕೆ ? ''ಎಂದು ಚಿಂತಿಸಿದನು .

ಏನು ಹೇಳೈ ಕರ್ಣ ಚಿತ್ತ
ಗ್ಲಾನಿ ಯಾವುದು ಮನಕೆ ಕುಂತೀ
ಸೂನುಗಳ ಬೆಸಕೈಸಿಕೊಂಬುದು ಸೇರದೆ
ಹಾನಿಯಿಲ್ಲೆನ್ನಾಣೆ ನುಡಿ ನುಡಿ
ಮೌನವೇತಕೆ ಮರುಳುತನ ಬೇ
ಡಾನು ನಿನ್ನಪದೆಸೆಯೆ ಬಯಸುವನಲ್ಲ ಕೇಳೆಂದ ||೭||

ಎಲವೋ ಕರ್ಣನೇ ಹೇಳು, ನಿನ್ನ ಮನಸಿನ ಜಡತೆ ವ್ಯಾಕುಲಕೆ ಕಾರಣವೇನು ?ಕುಂತಿ ಪುತ್ರರಿಂದ ಓಲೈಸಿಕೊಳ್ಳುವುದು ನಿನಗೆ ಇಷ್ಟವಾಗುವುದಿಲ್ಲವೇ? ಅದು ಬೇಡವಾದರೆ ಏನೂ ಹಾನಿ ಇಲ್ಲ ,ಸುಮ್ಮನೇ ನುಡಿ ,ಮೌನವೇತಕೆ ? ಈ ಮರುಳುತನ ಬೇಡ , ನಿನ್ನ ಹಾನಿಯನ್ನು(ಅಪದೆಸೆ , ಕೇಡು ) ಬಯಸುವವನಲ್ಲ ನಾನು ಎಂದು ಕೃಷ್ಣನು ಕರ್ಣನಿಗೆ ಸಾಂತ್ವನ ಹೇಳುವನು.

ಮರುಳು ಮಾಧವ ಮಹಿಯ ರಾಜ್ಯದ
ಸಿರಿಗೆ ಸೋಲುವನಲ್ಲ ಕೌಂತೇ
ಯರು ಸುಯೋಧನರೆನಗೆ ಬೆಸಕೈವಲ್ಲಿ ಮನವಿಲ್ಲ.
ಹೊರೆದ ದಾತಾರಂಗೆ ಹಗೆವರ

ಶಿರವನರಿದೊಪ್ಪಸುವೆನೆಂಬೀ
ಭರದೊಳಿರ್ದೆನು ಕೌರವೇಂದ್ರನ ಕೊಂದೆ ನೀನೆಂದ ||೮||

ಮರಳು ಮಾಧವನೇ ,ಈ ಭೂಮಿರಾಜ್ಯದ ಸಿರಿಗೆ ಸೋಲುವಂತವನು ನಾನಲ್ಲ. ಕೌಂತೇಯರು (ಪಾಂಡವರು ) , ಕೌರವರು ನನಗೆ ಒಲ್ಲೈಸಬೆಕೆನ್ನುವುದರಲ್ಲಿ ನನಗೆ ಯಾವುದೇ ಆಸಕ್ತಿಯಿಲ್ಲ. (ಇಚ್ಛೆಯಿಲ್ಲ )ನನ್ನನ್ನು ಸಲಹಿದ ನನ್ನ ಒಡೆಯನಿಗೆ (ದಾನಿ -ದಾತೃ ) ಅವನನ್ನು ವಿರೋಧಿಸುವ ಶತ್ರುಗಳ ತಲೆಯನ್ನು ಕಡಿದು ಒಪ್ಪಿಸುವೆನು ಎನ್ನು ಆತುರದಲ್ಲಿದ್ದೇನೆ .ಕೌರವೇಂದ್ರನನ್ನು ನೀನು ಕೊಂದೆ ಎಂದು ಕರ್ಣನು ಶ್ರೀಕೃಷ್ಣನಿಗೆ ಹೇಳಿದನು.

ವೀರ ಕೌರವರಾಯನೇ ದಾ
ತಾರನಾತನ ಹಗೆಯ ಹಗೆ ಕೈ
ವಾರವೇ ಕೈವಾರವಾದಂತಹೆನು ಕುರುನೃಪತಿ
ಶೌರಿ ಕೇಳ್ಕೆ ನಾಳೆ ಸಮರದ
ಸಾರದಲಿ ತೋರುವೆನು ನಿಜಭುಜ
ಶೌರಿಯದ ಸಂಪನ್ನತನವನು ಪಾಂಡುತನಯರಲಿ ||೯||

ವೀರ ಕೌರವರಾಯನೇ ನನಗೆ ಒಡೆಯನು,ಆತನ ಶತ್ರುಗಳೇ ನನ್ನ ಶತ್ರುಗಳು ,ಅವನ ಅಭಿಮಾನವೇ (ಹೊಗಳಿಕೆಯೇ ) ನನಗೆ ಅಭಿಮಾನ .ಅವನಿಗೆ ಆಗುವುದೇ ನನಗೆ ಆಗಲಿ ,ಕೃಷ್ಣನೇ ಕೇಳು, ನಾಳೆ ಯುದ್ಧಭೂಮಿಯಲ್ಲಿ ನನ್ನ ಭುಜಬಲಶೌರ್ಯದ ಪರಾಕ್ರಮವನ್ನುಪಾಂಡುತನಯ (ಪಾಂಡವರು)ರ ಮೇಲೆ ತೋರಿವೆನು ಎಂದು ಕರ್ಣನು ಹೇಳಿದನು.

ಮಾರಿಗೌತಣವಾಯ್ತು ನಾಳಿನ
ಭಾರತವು ಚತುರಂಗಬಲದಲಿ
ಕೌರವನ ಋಣ ಹಿಂಗೆರಣದಲಿ ಸುಭಟಕೋಟಿಯನು
ತೀರಿಸಿಯೆ ಪತಿಯವಸರಕ್ಕೆಶ
ರೀರವನು ನೂಕುವೆನು ನಿನ್ನಯ
ವೀರರೈವರ ನೋಯಿಸೆನು ರಾಜೀವಸಖನಾಣೆ ||೧೦||

ನಾಳೆ ಬರಲಿರುವ ಭಾರತ(ಮಹಾಭಾರತ)ಯುದ್ಧವು ಮಾರಿಗೆ ಔತಣವಾಗುವುದು.ಆ ಯುದ್ಧದಲ್ಲಿ ಚತುರಂಗಬಲವನ್ನು ಸೋಲಿಸಿ, ಅಸಂಖ್ಯಾತ ಯೋಧರನ್ನು ಸಾಯಿಸಿ , ನನ್ನ ಒಡೆಯ ದುರ್ಯೋಧನನಿಗಾಗಿ ನನ್ನ ದೇಹವನ್ನು ಬಲಿಕೊಡುವೆನು (ಪ್ರಾಣ ಬಿಡುವೆನು )ನಿನ್ನ ಧೀರರಾದ ಪಾಂಡವರನ್ನು ಸೂರ್ಯನಾಣೆ ಯಾಗಿಯೂ ಯಾವುದೇ ಕಾರಣಕ್ಕೂ ನೋಯಿಸುವುದಿಲ್ಲ ಎಂದು ಕರ್ಣನು ಶ್ರೀಕೃಷ್ಣನಿಗೆ ಹೇಳಿದನು.

**ಕವಿ ಪರಿಚಯ**

**ಕುಮಾರವ್ಯಾಸ ನ ಕಾಲ ಸುಮಾರು ಕ್ರಿ.ಶ . ೧೪೩೦.ಇವನು ಗದಗ ಜಿಲ್ಲೆಯ ಕೋಳಿವಾಡದವನು. ಇವನ ನಿಜವಾದ ಹೆಸರು ಗದುಗಿನ ನಾರಣಪ್ಪ .ಇವನ ಕರ್ಣಾಟ ಭಾರತ ಕಥಾಮಂಜರಿ ಬಹಳ ಪ್ರಸಿದ್ಧವಾದ ಕಾವ್ಯ .ಇವನು ಐರಾವತ ಎಂಬ ಇನ್ನೊಂದು ಕಾವ್ಯವನ್ನು ರಚಿಸಿದ್ದಾನೆಂದು ತಿಳಿದುಬಂದಿದೆ. ಇವನನ್ನು ರೂಪಕ ಸಾಮ್ರಾಜ್ಯ ಚಕ್ರವರ್ತಿ ಎಂದು ಕರೆಯುತ್ತಾರೆ**

**ಕರ್ನಾಟಕ ಭಾರತ ಕಥಾ ಮಂಜರಿಯನ್ನು ಗದುಗಿನ ಭಾರತ ,ಕನ್ನಡ ಭಾರತ ,ಕುಮಾರವ್ಯಾಸ ಭಾರತ ಎಂದೂ ಕರೆಯುತ್ತಾರೆ.**

**ಕೌರವೇಂದ್ರನ ಕೊಂದೆ ನೀನು ಪದ್ಯವನ್ನು ಇವನು ರಚಿಸಿದ ಕರ್ಣಾಟಭಾರತ ಕಥಾ ಮಂಜರಿಯಿಂದ ಆಯ್ದುಕೊಳ್ಳಲಾಗಿದೆ.**

**ಒಂದೊಂದು ವಾಕ್ಯದಲ್ಲಿ ಉತ್ತರಿಸಿ.**

**೧. ಶ್ರೀಕೃಷ್ಣನು ಕರ್ಣನನ್ನು ರಥದಲ್ಲಿ ಕೂರಿಸಿಕೊಳ್ಳುವಾಗ ಏನೆಂದು ಕರೆದನು?**

**ಶ್ರೀಕೃಷ್ಣನು ಕರ್ಣನನ್ನು ರಥದಲ್ಲಿ ಕೂರಿಸಿಕೊಳ್ಳುವಾಗ ಮೇದಿನಿ ಪತಿ ಎಂದು ಕರ್ಣನನ್ನು ಕರೆದನು.**

**೨. ಕುಮಾರವ್ಯಾಸನ ಆರಾಧ್ಯದೈವ ಯಾರು ?**

**ಕುಮಾರವ್ಯಾಸನ ಆರಾಧ್ಯದೈವ ವೀರನಾರಾಯಣ**

**೩. ಅಶ್ವಿನೀದೇವತೆಗಳ ವರಬಲದಿಂದ ಜನಿಸಿದವರು ಯಾರು ?**

**ಅಶ್ವಿನೀದೇವತೆಗಳ ವರಬಲದಿಂದ ಜನಿಸಿದವರು ನಕುಲಸಹದೇವರು.**

**೪. ಕುಮಾರವ್ಯಾಸನಿಗಿರುವ ಬಿರುದು ಯಾವುದು ?**

**ಕುಮಾರವ್ಯಾಸನಿಗಿರುವ ಬಿರುದು ರೂಪಕ ಸಾಮ್ರಾಜ್ಯ ಚಕ್ರವರ್ತಿ**

**೫. ನಾರಣಪ್ಪನಿಗೆ ಕುಮಾರವ್ಯಾಸನೆಂಬ ಹೆಸರು ಏಕೆ ಬಂತು ?**

**ವ್ಯಾಸರು ಸಂಸ್ಕೃತದಲ್ಲಿ ಬರೆದ ಮಹಾಭಾರತವನ್ನು ನಾರಣಪ್ಪನು ಕನ್ನಡದಲ್ಲಿ ರಚಿಸಿ ತನ್ನನ್ನು ಅವರ ಮಗ ಎಂಬ ಅರ್ಥದಲ್ಲಿ ಕುಮಾರವ್ಯಾಸನೆಂದು ಕರೆದುಕೊಂಡಿದ್ದಾನೆ.**

**ಮೂರು -ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿ.**

**೧. ಕೃಷ್ಣನು ಕರ್ಣನ ಮನದಲ್ಲಿ ಯಾವ ರೀತಿಯಲ್ಲಿ ಭಯವನ್ನು ಬಿತ್ತಿದನು ?**

**ಕರ್ಣ,ಕೌರವರು ಯಾದವರಿಗೆ ಭೇದವಿಲ್ಲ.ವಿಚಾರಿಸಿದರೆ ಇಬ್ಬರೂ ಒಂದೇ ವಂಶದವರು. (ಯಯಾತಿಯ ಮಕ್ಕಳು ಪುರು, ಯದು ,ಪುರುವಿನ ವಂಶದವರು ಕೌರವರು. ಯದುವಿನ ವಂಶದವರು ಯಾದವರು)ನಿನ್ನಾಣೆಯಾಗಿಯೂ ನೀನೇ ರಾಜ (ಮೇದಿನಿಪತಿ )ಆದರೆ ನಿನಗೆ ಅದರ ಅರಿವಿಲ್ಲ ಎಂದು ಹೇಳುವ ಮೂಲಕ ದಾನವರ ವೈರಿಯಾದ ಶ್ರೀಕೃಷ್ಣನು ರವಿಸುತ (ಕರ್ಣ )ನ**

ಕಿವಿಯಲ್ಲಿ ಭಯವನ್ನು ಬಿತ್ತಿದನು.

೨.ಕುಂತಿ , ಮಾದ್ರಿಯರು ಯಾರ್ಯಾರ ಅನುಗ್ರಹದಿಂದ ಮಕ್ಕಳನ್ನು ಪಡೆದರು?

ಕುಂತಿಯು ತಾನು ಪಡೆದ ಮಂತ್ರೋಪದೇಶದಿಂದ ಮೊದಲು ಸೂರ್ಯನನ್ನು ಸ್ಮರಿಸಿ ಕರ್ಣನನ್ನು ನಂತರದಲ್ಲಿ ಯಮದೇವನ ಅನುಗ್ರಹದಿಂದ ಧರ್ಮರಾಯನನ್ನೂ ಆನಂತರ ವಾಯುದೇವನನ್ನು ನೆನೆದು ಅವನ ಅನುಗ್ರಹದಿಂದ ಕಲಿಭೀಮನನ್ನೂ ದೇವೇಂದ್ರನನ್ನು ಸ್ಮರಿಸಿ ಅವನ ಕೃಪೆಯಿಂದ ಅರ್ಜುನನನ್ನೂ ಪಡೆದಳು.ತಾನು ಪಡೆದ ಮಂತ್ರಗಳಲ್ಲಿ ಒಂದನ್ನು ತನ್ನ ಸವತಿಯಾದ (ಪಾಂಡುವಿನ ಇನ್ನೊಬ್ಬ ಪತ್ನಿ)ಮಾದ್ರಿಗೆ ಕರುಣಿಸಿದಾಗ ಅವಳು ಅಶ್ವಿನಿ ದೇವತೆಗಳನ್ನು ಸ್ಮರಿಸಿ ಅವರ ಅನುಗ್ರಹದಿಂದ ನಕುಲ ಸಹದೇವರನ್ನು ಮಕ್ಕಳಾಗಿ ಪಡೆದಳು.

೩.ಕೃಷ್ಣನು ಆಮಿಷಗಳನ್ನು ಒಡ್ಡಿದಾಗ ಕರ್ಣನ ಮನದಲ್ಲಿ ಮೂಡಿದ ಭಾವನೆಗಳೇನು ?

ಕರ್ಣನ ಜನ್ಮ ವೃತ್ತಾಂತವನ್ನು ಕೃಷ್ಣನು ಹೇಳಿ ಅವನಿಗೆ ಇಡೀ ಹಸ್ತಿನಾಪುರದ ರಾಜ್ಯಭಾರವನ್ನು ಕೊಡಿಸುವುದಾಗಿ ಹೇಳಿದಾಗ ಕರ್ಣನ ಕೊರಳ ನರಗಳು ಹಿಗ್ಗಿದವು (ಗದ್ಗದ )ಕಣ್ಣೀರು ಧಾರೆಯಾಗಿ ಸುರಿಯಿತು.ಅವನು ಬಹಳವಾಗಿ ನೊಂದು ''ಅಯ್ಯೋ!ಕುರುಪತಿಗೆ ಕೇಡಾಯಿತು''ಎಂದು ತನ್ನ ಮನದೊಳಗೆ ಅಂದುಕೊಂಡು ''ಕೃಷ್ಣನ ದ್ವೇಷದ ಬೆಂಕಿ ಹೊಗೆಯಾಡಿದ ಮೇಲೆ ಅದು ಪೂರ್ತಿಯಾಗಿ ಸುಡದೆ ಹಾಗೇ ಬಿಡುವುದೇ?ಬರಿದೆ ನನ್ನ ಜನ್ಮವೃತ್ತಾಂತವನ್ನು ಹೇಳಿ ಕೊಂದನು .ಹಲವು ಮಾತೇಕೆ ? ''ಎಂದು ಚಿಂತಿಸಿದನು .

೪. ಕೃಷ್ಣನು ಕೌರವೇಂದ್ರನನ್ನು ಕೊಂದನು ಎಂದು ಕರ್ಣ ಹೇಳಲು ಕಾರಣವೇನು ?

ಮರಳು ಮಾಧವನೇ ,ಈ ಭೂಮಿರಾಜ್ಯದ ಸಿರಿಗೆ ಸೋಲುವಂತವನು ನಾನಲ್ಲ. ಕೌಂತೇಯರು (ಪಾಂಡವರು ) , ಕೌರವರು ನನಗೆ ಓಲೈಸಬೇಕೆನ್ನುವುದರಲ್ಲಿ ನನಗೆ ಯಾವುದೇ ಆಸಕ್ತಿಯಿಲ್ಲ. (ಇಚ್ಛೆಯಿಲ್ಲ )ನನ್ನನ್ನು ಸಲಹಿದ ನನ್ನ ಒಡೆಯನಿಗೆ (ದಾನಿ -ದಾತೃ ) ಅವನನ್ನು ವಿರೋಧಿಸುವ ಶತ್ರುಗಳ ತಲೆಯನ್ನು ಕಡಿದು ಒಪ್ಪಿಸುವೆನು ಎನ್ನು ಆತುರದಲ್ಲಿದ್ದೇನೆ .ಕೌರವೇಂದ್ರನನ್ನು ನೀನು ಕೊಂದೆ ಎಂದು ಕರ್ಣನು ಶ್ರೀಕೃಷ್ಣನಿಗೆ ಹೇಳಿದನು.ಪಾಂಡವರು ದುರ್ಯೋಧನನ ಶತ್ರುಗಳು.ಅವರನ್ನು ನಾಶಮಾಡವುದೇ ತನ್ನ ಧರ್ಮ ಅದು ತನ್ನ ಸ್ವಾಮಿ ಮತ್ತು ಮಿತ್ರನಾದ ದುರ್ಯೋಧನನಿಗೆ ತಾನು ಸಲ್ಲಿಸಬಹುದಾದ ಕಾಣಿಕೆ ಎಂದು ಕಾಯುತ್ತಿದ್ದವನಿಗೆ ಪಾಂಡವರು ಅವನ ಸೋದರರೆಂದು ತಿಳಿದಾಗ ಅವರನ್ನು ತನ್ನ ಕೈಯಾರೆ ಸಾಯಿಸಲಾಗದ ದೌರ್ಬಲ್ಯ ಕಾಡುವುದು ಸಹಜ.ಅವರನ್ನು ನಾಶ ಮಾಡದಿದ್ದರೆ ಕೌರವನ ಸಾವು ಖಚಿತ.ಇದಕ್ಕೆ ಕೃಷ್ಣನೇ ಕಾರಣ ಎಂದು ಕರ್ಣನ ಅಭಿಪ್ರಾಯವಾಗಿದೆ.

೫.ಯುದ್ಧದ ವಿಚಾರದಲ್ಲಿ ಕರ್ಣನ ತೀರ್ಮಾನವೇನು ?

ವೀರ ಕೌರವರಾಯನೇ ನನಗೆ ಒಡೆಯನು,ಆತನ ಶತ್ರುಗಳೇ ನನ್ನ ಶತ್ರುಗಳು ,ಅವನ ಅಭಿಮಾನವೇ (ಹೊಗಳಿಕೆಯೇ ) ನನಗೆ ಅಭಿಮಾನ .ಅವನಿಗೆ ಆಗುವುದೇ ನನಗೆ ಆಗಲಿ ,ಕೃಷ್ಣನೇ ಕೇಳು, ನಾಳೆ ಯುದ್ಧಭೂಮಿಯಲ್ಲಿ ನನ್ನ ಭುಜಬಲಶೌರ್ಯದ ಪರಾಕ್ರಮವನ್ನು ಪಾಂಡುತನಯ

(ಪಾಂಡವರು)ರ ಮೇಲೆ ತೋರಿವೆನುನಾಳೆ ಬರಲಿರುವ ಭಾರತ(ಮಹಾಭಾರತ) ಯುದ್ಧವು ಮಾರಿಗೆ ಔತಣವಾಗುವುದು.ಆ ಯುದ್ಧದಲ್ಲಿ ಚತುರಂಗ ಬಲವನ್ನು ಸೋಲಿಸಿ, ಅಸಂಖ್ಯಾತ ಯೋಧರನ್ನು ಸಾಯಿಸಿ , ನನ್ನ ಒಡೆಯ ದುರ್ಯೋಧನನಿಗಾಗಿ ನನ್ನ ದೇಹವನ್ನು ಬಲಿಕೊಡುವೆನು (ಪ್ರಾಣ ಬಿಡುವೆನು ) ನಿನ್ನ ಧೀರರಾದ ಪಾಂಡವರನ್ನು ಸೂರ್ಯನಾಣೆ ಯಾಗಿಯೂ ಯಾವುದೇ ಕಾರಣಕ್ಕೂ ನೋಯಿಸುವುದಿಲ್ಲ ಎಂದು ಕರ್ಣನು ಶ್ರೀಕೃಷ್ಣನಿಗೆ ಹೇಳಿದನು.

## ಎಂಟು ಹತ್ತು ವಾಕ್ಯಗಳಲ್ಲಿ ಉತ್ತರಿಸಿ.

೧. ಕರ್ಣನಿಗೆ ಶ್ರೀಕೃಷ್ಣನು ಒಡ್ಡಿದ್ದ ಆಮಿಷಗಳೇನು ?

ಕೌರವರಿಗೂ ಪಾಂಡವರಿಗೂ ಯುದ್ಧ ನಡೆಯುವುದು ಖಚಿತವಾದಾಗ ಕೌರವನಸೇನೆಯಲ್ಲಿ ಪಾಂಡವರನ್ನು ಕೊಲ್ಲಬಲ್ಲ ಬಲಶಾಲಿ ಕರ್ಣನಿರುವುದರಿಂದ ಅವನಿಂದ ಪಾಂಡವರನ್ನು ರಕ್ಷಿಸಬೇಕೆಂದು ನಿರ್ಧರಿಸಿದ ಕೃಷ್ಣ ಅದಕ್ಕಾಗಿ ವೇದಿಕೆಯೊಂದನ್ನು ಸಿದ್ಧಪಡಿಸಿ ಕರ್ಣನನ್ನು ತನ್ನೊಡನೆ ಕರೆದೊಯ್ಯುತ್ತಾನೆ. ಶ್ರೀಕೃಷ್ಣನ ಪಕ್ಕದಲ್ಲಿ ಕುಳಿತುಕೊಳ್ಳಲು ಸಂಕೋಚಪಡುವ ಕರ್ಣನಿಗೆ ಶ್ರೀಕೃಷ್ಣನು ಕೌರವರು ಯಾದವರಲ್ಲಿ ಯಾವುದೇ ಭೇದವಿಲ್ಲ ,ಹಾಗೆ ನೋಡಿದರೆ ನೀನೇ ಮೇದಿನಿಪತಿ.ಹಿಂದೆ ನಡೆದುದು ನಿನಗೆ ಅರಿವಿಲ್ಲ .ಮಂತ್ರ ಗಳ ಸಹಾಯದಿಂದ ಕುಂತಿ ಪಡೆದ ಮಕ್ಕಳಲ್ಲಿ ನೀನೇ ಮೊದಲನೆಯವನು.ಪಾಂಡವರೆಲ್ಲರೂ ನಿನ್ನ ಸಹೋದರರು. ಆದ್ದರಿಂದ ಈ ಹಸ್ತಿನಪುರದ ರಾಜನನ್ನಾಗಿ ನಿನಗೆ ಅಧಿಕಾರ ಸಿಗುವಂತೆ ಮಾಡುವೆನು.ಪಾಂಡವರ ಕಡೆಯವರೂ ಕೌರವನ ಕಡೆಯವರೂ ನಿನ್ನನ್ನು ಒಲೈಸುವಂತೆ ಆಗುವುದು .ಅವೆರಡೂ ಸಂತತಿಯವರೂ ನಿನಗೆ ಕಿಂಕರರೆನಿಸುವರು.ನಿನ್ನ ಬಲಭಾಗದಲ್ಲಿ ಕೌರವನ ಕಡೆಯವರೂ, ಎಡಭಾಗದಲ್ಲಿ ಪಾಂಡವರ ಕಡೆಯವರೂ ,ನಿನ್ನ ಎದುರಿಗೆ ಮಾದ್ರ,ಮಾಗಧ,ಯಾದವರು ಮೊದಲಾದ ರಾಜರು ಅವರೆಲ್ಲರ ನಡುವೆ ನೀನು ಓಲಗದಲ್ಲಿ ಕಂಗೊಳಿಸುವ ಆ ವೈಭವವನ್ನು ಕಲ್ಪಿಸಿಕೋ .ಅದೆಲ್ಲವನ್ನು ಬಿಟ್ಟು ಕೌರವನ ಎದುರು ಜೀಯ ಪ್ರಸಾದ ಎಂದು ಅವನ ಸೇವಕನಂತೆ ಜೀವಿಸುವುದು ನಿನಗೆ ತರವಲ್ಲ.ನನ್ನಾಣೆಯಾಗಿಯೂ ಹೇಳುವೆ ಹಸ್ತಿನಪುರದ ರಾಜ್ಯವನ್ನು ವಹಿಸಿಕೊಂಡು ಕುಂತಿ ಮಕ್ಕಳಿಂದ ಸೇವೆಯನ್ನು ಪಡೆಯುವುದರಿಂದ ಯಾವುದೇ ಹಾನಿಯಿಲ್ಲಎಂದು ಶ್ರೀಕೃಷ್ಣನು ಕರ್ಣನಿಗೆ ಆಮಿಷಗಳನ್ನು ಒಡ್ಡಿದನು.

೨. ಪಾಂಡವರು ಸೋದರರೆಂದು ತಿಳಿದಾಗ ಕರ್ಣನ ಮನಸ್ಥಿತಿಯನ್ನು ತಿಳಿಸಿ.

ಪಾಂಡವರು ತನ್ನ ಸಹೋದರರು ಎಂಬ ಸತ್ಯವನ್ನು ಶ್ರೀಕೃಷ್ಣನು ಹೇಳಿದಾಗ ಕರ್ಣನ ಕೊರಳ ನರಗಳು ಬಿಗಿದವು.ಅವನ ಕಂಠ ಗದ್ಗದವಾಯಿತು.ಅವನ ಕಣ್ಣುಗಳಿಂದ ಧಾರಾಕಾರವಾಗಿ ನೀರು (ಕಣ್ಣೀರು ) ಸುರಿಯಲಾರಂಭಿಸಿತು.ಅಯ್ಯೋ ಕುರುಪತಿಗೇ ಕೇಡಾಯಿತು ಎಂದು ತನ್ನ ಮನದೊಳಗೆ ಮರುಗಿದನು.ಹರಿಯ ದ್ವೇಷದ ಹೊಗೆ ಹೆಚ್ಚಾಗದೇ ಇರುವುದೇ ? ಅಂದರೆ ಶ್ರೀಕೃಷ್ಣನು ಕೌರವನ

ಮೇಲೆ ಹಗೆ ಸಾಧಿಸದೇ ಬಿಡದಿರುವನೇ ! ಅಷ್ಟೇ ಅಲ್ಲ ಶ್ರೀಕೃಷ್ಣನು ತನ್ನ ವಂಶದ ವಿವರವನ್ನು ಹೇಳಿ ,ಪಾಂಡವರು ತನ್ನ ಸಹೋದರರು ಎಂದು ಹೇಳುವ ಮೂಲಕ ತನ್ನನ್ನು ದುರ್ಬಲನಾಗಿಸಿದನು.ಎಂದು ಮರುಗಿದನು.

೩. ಕರ್ಣನ ನಿರ್ಧಾರ ಸರಿ ಎನ್ನುವಿರಾ ?

ಕರ್ಣನ ದೃಷ್ಟಿಯಿಂದಲೇ ನೋಡಿದಾಗ ಅವನು ತೆಗೆದುಕೊಂಡ ನಿರ್ಧಾರವು ಸರಿ ಎನ್ನಿಸುವುದು. ಸೂತಪುತ್ರ ನೆಂದು ಸಮಾಜದಿಂದ ದೂಷಣೆಗೆ ಒಳಗಾದ ಸಂದರ್ಭದಲ್ಲಿ ಅವನಿಗೆ ಅಂಗರಾಜ್ಯವನ್ನು ನೀಡಿ ಅವನಿಗೊಂದು ಸ್ಥಾನವನ್ನು ಕಲ್ಪಿಸಿದವನು ದುರ್ಯೋಧನ ನಾದ್ದರಿಂದ ತನ್ನ ಬದುಕು ಅವನಿಗಾಗಿಯೇ ಮೀಸಲು ಎನ್ನುವ ಅವನ ಸ್ವಾಮಿನಿಷ್ಠೆಯನ್ನು ಎಂಥವರೂ ಮೆಚ್ಚಬೇಕಾದುದೇ .ಮಹಿಯ ಸಿರಿಗೆ ಸೋಲುವವನು ತಾನಲ್ಲ ,ಕೌಂತೇಯರೂ ಸುಯೋಧನರೂ ತನ್ನ ಸೇವಕರಾಗುವುದರಲ್ಲಿ ಯಾವುದೇ ಹಂಬಲವಿಲ್ಲ.ತನ್ನನ್ನು ಸಲಹಿದ ತನ್ನ ಒಡೆಯನ ಇಚ್ಛೆಯಂತೆ ಅವನ ಶತ್ರುಗಳ ತಲೆಯನ್ನು ಒಪ್ಪಿಸುವುದೇ ತನಗೆ ಇರುವ ಹಂಬಲ.ವೀರ ಕೌರವನೇ ತನ್ನ ಒಡೆಯ ಅವನ ಶತ್ರುಗಳು ನನಗೂ ಶತ್ರುಗಳುಎನ್ನುವ ಅವನ ಮಾತುಗಳಲ್ಲಿ ಕೌರವನ ಕುರಿತಾದ ಅಭಿಮಾನ ಮತ್ತು ಸ್ವಾಮಿನಿಷ್ಠೆಯನ್ನು ಗಮನಿಸಬಹುದು.ಕೌರವನ ಋಣ ಭಾರ ತನ್ನ ಮೇಲಿರುವುದರಿಂದ ಅವನಿಗಾಗಿ ತನ್ನ ದೇಹ ಮತ್ತು ಪ್ರಾಣವನ್ನು ತ್ಯಾಗ ಮಾಡಲೂ ಸಿದ್ಧ ಎಂಬ ಅವನ ಉದಾತ್ತ ಭಾವವೂ ಇಲ್ಲಿ ವ್ಯಕ್ತವಾಗಿರುವುದು.ಕರ್ಣನು ಶ್ರೀಕೃಷ್ಣನ ಮಾತಿಗೆ ಒಡಂಬಟ್ಟಿದ್ದೇ ಆದರೆ ಇಡೀ ಹಸ್ತಿನಪುರದ ರಾಜ್ಯವನ್ನು ಅವನು ಆಳಬಹುದಾಗಿತ್ತು.ಅಲ್ಲದೇ ಪಾಂಡವರೂ ಕೌರವರೂ ಅವನ ಸೇವಕರಾಗುವ ಅವಕಾಶ ಅವನದಾಗುತಿತ್ತು.ಆದರೆ ತಾನು ಪಾಂಡವರ ಸಹೋದರನೆಂದು ತಿಳಿದು ಅವನ ಮನವು ದುರ್ಬಲವಾದರೂ ತನ್ನನ್ನು ಆಪತ್ಕಾಲದಲ್ಲಿ ಓಲೈಸಿದ ದುರ್ಯೋಧನನನನ್ನು ತೊರೆಯುವುದು ಅವನಿಗೆ ಸರಿಕಾಣಲಿಲ್ಲ.ಸಹೋದರರರನ್ನು ನಾಶ ಮಾಡದೇ ತಾನೇ ಸಾಯುವುದು ಅನಿವಾರ್ಯ ಎಂದು ತಿಳಿದಾಗಲೂ ದುರ್ಯೋಧನನಿಗಾಗಿ ಎಲ್ಲ ತ್ಯಾಗಕ್ಕೂ ಅವನು ಸಿದ್ಧನಾಗಿದ್ದನು.ಆದ್ದರಿಂದ ಕರ್ಣನ ನಿಲುವು ಒಪ್ಪಲರ್ಹವೆನಿಸುವುದು.

ಸಂದರ್ಭ ಸಹಿತ ಸ್ವಾರಸ್ಯವಿವರಿಸಿ.

೧.ರವಿಸುತನ ಕಿವಿಯಲಿ ಬಿತ್ತಿದನು ಭಯವ

ಈ ಮೇಲಿನ ವಾಕ್ಯವನ್ನು ಕವಿ ಕುಮಾರವ್ಯಾಸನು ಬರೆದ ಕರ್ಣಾಟಭಾರತ ಕಥಾಮಂಜರಿ ಯಿಂದ ಆರಿಸಲಾದ ಕೌರವೇಂದ್ರನ ಕೊಂದೆ ನೀನು ಎನ್ನುವ ಪದ್ಯಭಾಗದಿಂದ ಆಯ್ದುಕೊಳ್ಳಲಾಗಿದೆ.ಈ ಮಾತನ್ನು ಕವಿ ಹೇಳಿದ್ದಾನೆ.

ಸಂದರ್ಭ: ಮಹಾಭಾರತ ಯುದ್ಧವನ್ನು ನಿಲ್ಲಿಸಬೇಕೆಂದು ಪಾಂಡವರ ಪರ ರಾಯಭಾರಿಯಾಗಿ

ಬಂದ ಶ್ರೀಕೃಷ್ಣನು ತನ್ನ ಪ್ರಯತ್ನದಲ್ಲಿ ವಿಫಲನಾದಾಗ ದುರ್ಯೋಧನನ ಪಡೆಯಲ್ಲಿದ್ದ ಕರ್ಣನಿಂದ ಪಾಂಡವರಿಗೆ ಕೇಡು ಖಚಿತ ಎಂದು ಅರಿತು ಅದನ್ನು ಹೇಗಾದರೂ ತಡೆಯಬೇಕೆಂದು ಉದ್ದೇಶಿಸಿ ಕರ್ಣನನ್ನು ತನ್ನ ಜೊತೆಯಲ್ಲಿ ಕರೆ ತರುತ್ತಾನೆ.ಪೀಠದಲ್ಲಿ ತನ್ನ ಜೊತೆ ಕೂರಿಸಿಕೊಂಡಾಗ ಕರ್ಣ ನಿನ್ನಜೊತೆ ನಾನು ಸಮನಲ್ಲ ಎಂದು ಹಿಂಜರಿಯುತ್ತಾನೆ.ಆ ಸಂದರ್ಭದಲ್ಲಿ ಶ್ರೀಕೃಷ್ಣನು ಯಾದವರೂ ಕೌರವರೂ ಒಂದೇ ವಂಶದವರು ,ಹಾಗೆ ನೋಡಿದರೆ ನೀನೂ ಸಹ ಅದೇ ವಂಶದವನಾಗಿದ್ದು ನೀನೇ ಮೇದಿನಿಪತಿ.ಹಿಂದೆ ಏನು ನಡೆದಿದೆ ಎಂದು ನಿನ್ನ ಅರಿವಿಗೆ ಬಂದಿಲ್ಲ ಎಂದು ಹೇಳುವ ಮೂಲಕ ಕರ್ಣನ ಮನದಲ್ಲಿ ಗೊಂದಲವನ್ನು ಉಂಟು ಮಾಡುತ್ತಾನೆ ಎಂದು ಹೇಳುವಾಗ ಮೇಲಿನ ಮಾತು ಬಂದಿದೆ.

ಸ್ವಾರಸ್ಯ : ಪಾಂಡವರು ತನ್ನ ಸೋದರರೆಂದು ತಿಳಿದಾಗ ಕರ್ಣನ ಮನದಲ್ಲಿ ತಾನು ಯಾರ ಪಕ್ಷ ವಹಿಸಿ ಯುದ್ಧ ಮಾಡಬೇಕು ಎಂಬ ಗೊಂದಲ ಉಂಟಾಗಬಹುದು , ತನ್ಮೂಲಕ ಕೌರವನ ಶಕ್ತಿ ಕುಂದಿಸಬಹುದು ಎಂಬ ಕೃಷ್ಣನ ಜಾಣ್ಮೆ ಇಲ್ಲಿ ವ್ಯಕ್ತವಾಗಿದೆ.

೨. ಬಾಯ್ದಂಬುಲಕೆ ಕೈಯಾನುವರೆ

ಈ ಮೇಲಿನ ವಾಕ್ಯವನ್ನು ಕವಿ ಕುಮಾರವ್ಯಾಸನು ಬರೆದ ಕರ್ಣಾಟಭಾರತ ಕಥಾಮಂಜರಿ ಯಿಂದ ಆರಿಸಲಾದ ಕೌರವೇಂದ್ರನ ಕೊಂದೆ ನೀನು ಎನ್ನುವ ಪದ್ಯ ಭಾಗದಿಂದ ಆಯ್ದುಕೊಳ್ಳಲಾಗಿದೆ.ಈ ಮಾತನ್ನು ಶ್ರೀಕೃಷ್ಣನು ಕರ್ಣನಿಗೆ ಹೇಳಿದ್ದಾನೆ.ನಿನಗೆ ಹಸ್ತಿನಪುರದ ರಾಜನ ಹಿರಿಮೆಯನ್ನುಕೊಡಿಸುವೆನು.ಪಾಂಡವ ಕೌರವ ರಾಜರೆಲ್ಲರೂ ನಿನ್ನನ್ನು ಓಲೈಸುವರು.ಈ ಎರಡೂ ಸಂತತಿಯವರೂ ನಿನಗೆ ಸೇವಕರೆನಿಸಿಕೊಳ್ಳುವ ಹಿರಿಮೆಯನ್ನು ತಿರಸ್ಕರಿಸಿ ನೀನು ದುರ್ಯೋಧನನ ಬಾಯ್ದಂಬುಲಕೆ ಕೈಯೊಡ್ಡುವುದು ಸರಿಯೇ ?ಹೇಳು ಎಂದು ಶ್ರೀಕೃಷ್ಣನು ಕರ್ಣನನ್ನು ಪ್ರಶ್ನಿಸುವನು.

ಸ್ವಾರಸ್ಯ: ಇಡೀ ಸಿಂಹಾಸನವೇ ತನ್ನದಾಗಬಹುದಾದ ಎಲ್ಲ ಸಾಧ್ಯತೆಗಳಿದ್ದು ಅದನ್ನು ಸದುಪಯೋಗ ಪಡಿಸಿಕೊಳ್ಳದೇ ದುರ್ಯೋಧನನ ಬಾಯ್ದಂಬುಲಕೆ ಕೈಯೊಡ್ಡುವುದ ಉಚಿತವಲ್ಲ ಎನ್ನುವ ಮೂಲಕ ಕೃಷ್ಣನು ಕರ್ಣನ ಆತ್ಮಾಭಿಮಾನವನ್ನು ಕೆಣಕುವುದು ಮೇಲಿನ ವಾಕ್ಯದ ಸ್ವಾರಸ್ಯವಾಗಿದೆ.

೩. ಜೀಯ ಹಸಾದವೆಂಬುದು ಕಷ್ಟ

ಈ ಮೇಲಿನ ವಾಕ್ಯವನ್ನು ಕವಿ ಕುಮಾರವ್ಯಾಸನು ಬರೆದ ಕರ್ಣಾಟಭಾರತ ಕಥಾಮಂಜರಿ ಯಿಂದ ಆರಿಸಲಾದ ಕೌರವೇಂದ್ರನ ಕೊಂದೆ ನೀನು ಎನ್ನುವ ಪದ್ಯ ಭಾಗದಿಂದ ಆಯ್ದುಕೊಳ್ಳಲಾಗಿದೆ. ಈ ಮಾತನ್ನು ಶ್ರೀಕೃಷ್ಣನು ಕರ್ಣನಿಗೆ ಹೇಳಿದ್ದಾನೆ.

ಸಂದರ್ಭ : ನಿನ್ನ ಎಡ ಭಾಗದಲ್ಲಿ ಕೌರವನ ಸಮೂಹದವರು ,ಬಲ ಭಾಗದಲ್ಲಿ ಪಾಂಡವರ ಸಮೂಹ (ಪಾಂಡು ರಾಜನ ಮಕ್ಕಳು ),ಇದಿರಿನಲ್ಲಿ ಮಾದ್ರಿ, ಮಾಗಧ, ಯಾದವಾದಿಗಳು ಇವರೆಲ್ಲರ ನಡುವೆ ನೀನು ಓಲಗದಲ್ಲಿ ಶೋಭಿಸುವ ನೀನು ಇಂತಹ ಮಹಾ ಸೌಭಾಗ್ಯವನ್ನು ಅತ್ತ ಎಸೆದು ಕುರುಪತಿ

(ಕೌರವ ,ದುಯೋ೯ಧನ)ನಿನಗೇನಾದರೂ ಹೇಳಿದರೆ 'ಜೀಯಾ, ಮಹಾಪ್ರಸಾದ' ಎಂದು ಒಪ್ಪಿಕೊಳ್ಳುವುದು ನಿನಗೆ ಕಷ್ಟವಾಗುವುದು ಎಂದು ಶ್ರೀಕೃಷ್ಣನು ಕರ್ಣನಿಗೆ ಹೇಳಿದನು.

ಸ್ವಾರಸ್ಯ : ಇಡೀ ಸಾಮ್ರಾಜ್ಯವೇ ತನ್ನ ಅಧೀನಕ್ಕೆ ಒಳಗಾಗುವ ಸಾಧ್ಯತೆಯಿದ್ದೂ ಅದರ ಬಗ್ಗೆ ಯೋಚಿಸದೇ ಕೌರವನ ಎದುರು ಜೀಯ ಪ್ರಸಾದ ಎಂದು ಅವನು ಹೇಳಿದ್ದಕ್ಕೆ ತಲೆಬಾಗುವುದು ಸರಿಯೇ ಎನ್ನುವ ಮೂಲಕ ಕರ್ಣನಲ್ಲಿ ಗೊಂದಲವನ್ನು ಮೂಡಿಸುವ ಕೃಷ್ಣನ ಪ್ರಯತ್ನ ಇಲ್ಲಿ ವ್ಯಕ್ತವಾಗಿದೆ.

೪.ನಿನ್ನಪದೆಸೆಯ ಬಯಸುವನಲ್ಲ

ಈ ಮೇಲಿನ ವಾಕ್ಯವನ್ನು ಕವಿ ಕುಮಾರವ್ಯಾಸನು ಬರೆದ ಕರ್ಣಾಟಭಾರತ ಕಥಾಮಂಜರಿ ಯಿಂದ ಆರಿಸಲಾದ ಕೌರವೇಂದ್ರನ ಕೊಂದೆ ನೀನು ಎನ್ನುವ ಪದ್ಯಭಾಗದಿಂದ ಆಯ್ದುಕೊಳ್ಳಲಾಗಿದೆ. ಈ ಮಾತನ್ನು ಶ್ರೀಕೃಷ್ಣನು ಕರ್ಣನಿಗೆ ಹೇಳಿದ್ದಾನೆ.

ಸಂದರ್ಭ : ಎಲವೋ ಕರ್ಣನೇ ಹೇಳು, ನಿನ್ನ ಮನಸಿನ ಜಡತೆ ವ್ಯಾಕುಲಕೆ ಕಾರಣವೇನು ?ಕುಂತಿ ಪುತ್ರರಿಂದ ಓಲೈಸಿಕೊಳ್ಳುವುದು ನಿನಗೆ ಇಷ್ಟವಾಗುವುದಿಲ್ಲವೇ? ಅದು ಬೇಡವಾದರೆ ಏನೂ ಹಾನಿ ಇಲ್ಲ ,ಸುಮ್ಮನೇ ನುಡಿ ,ಮೌನವೇತಕೆ ? ಈ ಮರುಳುತನ ಬೇಡ , ನಿನ್ನ ಹಾನಿಯನ್ನು(ಅಪದೆಸೆ, ಕೇಡು ) ಬಯಸುವವನಲ್ಲ ನಾನು ಎಂದು ಕೃಷ್ಣನು ಕರ್ಣನಿಗೆ ಸಾಂತ್ವನ ಹೇಳುವನು.

ಸ್ವಾರಸ್ಯ : ಕರ್ಣನು ಪಾಂಡವರಿಗೆ ಹಿರಿಯ ಸೋದರ ಎಂಬ ಸತ್ಯವನ್ನು ತಿಳಿಸುತ್ತಿರುವ ತನ್ನ ಕಾರ್ಯದಲ್ಲಿ ಕರ್ಣನ ಕುರಿತಾದ ಕಾಳಜಿಯಿದೆಯೇ ಹೊರತೂ ಕರ್ಣನಿಗೆ ಹಾನಿ ಮಾಡಬೇಕೆಂಬ ಯಾವ ಮನೋಭಾವವೂ ಇಲ್ಲ ಎಂಬ ಕೃಷ್ಣನ ನಿಲುವು ಇಲ್ಲಿ ವ್ಯಕ್ತವಾಗಿದೆ.

೫.''ಮಾರಿಗೌತಣವಾಯ್ತು ನಾಳಿನ ಭಾರತವು''

ಈ ಮೇಲಿನ ವಾಕ್ಯವನ್ನು ಕವಿ ಕುಮಾರವ್ಯಾಸನು ಬರೆದ ಕರ್ಣಾಟಭಾರತ ಕಥಾಮಂಜರಿ ಯಿಂದ ಆರಿಸಲಾದ ಕೌರವೇಂದ್ರನ ಕೊಂದೆ ನೀನು ಎನ್ನುವ ಪದ್ಯಭಾಗದಿಂದ ಆಯ್ದುಕೊಳ್ಳಲಾಗಿದೆ. ಈ ಮಾತನ್ನು ಕರ್ಣನು ಶ್ರೀಕೃಷ್ಣನಿಗೆ ಹೇಳಿದ್ದಾನೆ.

ನಾಳೆ ಬರಲಿರುವ ಭಾರತ(ಮಹಾಭಾರತ)ಯುದ್ಧವು ಮಾರಿಗೆ ಔತಣವಾಗುವುದು.ಆ ಯುದ್ಧದಲ್ಲಿ ಚತುರಂಗಬಲವನ್ನು ಸೋಲಿಸಿ, ಅಸಂಖ್ಯಾತ ಯೋಧರನ್ನು ಸಾಯಿಸಿ , ನನ್ನ ಒಡೆಯ ದುಯೋ೯ಧನನಿಗಾಗಿ ನನ್ನ ದೇಹವನ್ನು ಬಲಿಕೊಡುವೆನು (ಪ್ರಾಣ ಬಿಡುವೆನು )ನಿನ್ನ ಧೀರರಾದ ಪಾಂಡವರನ್ನು ಸೂರ್ಯನಾಣೆ ಯಾಗಿಯೂ ಯಾವುದೇ ಕಾರಣಕ್ಕೂ ನೋಯಿಸುವುದಿಲ್ಲ ಎಂದು ಕರ್ಣನು ಶ್ರೀಕೃಷ್ಣನಿಗೆ ಹೇಳಿದನು.

ಸ್ವಾರಸ್ಯ : ಕೌರವನ ಪಕ್ಷದಲ್ಲಿದ್ದು ಕೌರವನಿಗಾಗಿ ಹೋರಾಡಿ ಪಾಂಡವರನ್ನು ಮಾರಿಗೆ ಔತಣವಾಗಿ ಕೊಡುವೆನೆಂಬ ಕರ್ಣನ ಶೌರ್ಯ ವ್ಯಕ್ತವಾಗಿದೆ.

ಬಿಟ್ಟ ಸ್ಥಳವನ್ನು ಸೂಕ್ತ ಪದಗಳಿಂದ ತುಂಬಿರಿ.

೧.ಕರ್ನಾಟಭಾರತ ಕಥಾಮಂಜರಿಯನ್ನು-------- ರಚಿಸಿದನು.(ಕುಮಾರವ್ಯಾಸ )

೨.ಗದುಗಿನ ಭಾರತವು -------- ಷಟ್ಪದಿಯಲ್ಲಿ ರಚಿತವಾಗಿದೆ.(ಭಾಮಿನಿ )

೩.ಅಶ್ವಿನೀದೇವತೆಗಳ ವರಬಲದಿಂದ ------ ಜನಿಸಿದರು (ನಕುಲಸಹದೇವರು )

೪.ಕರ್ಣನು ------- ಅನುಗ್ರಹದಿಂದ ಜನಿಸಿದನು. (ಸೂರ್ಯದೇವ)

೫.ಗದುಗಿನ ಸಮೀಪ ----- ಕುಮಾರವ್ಯಾಸನು ಹುಟ್ಟಿದ ಸ್ಥಳ .(ಕೋಳಿವಾಡ )

ಅಲಂಕಾರ ಹೆಸರಿಸಿ ಸಮನ್ವಯಿಸಿ.

ಮಾರಿಗೌತಣವಾಯ್ತು ನಾಳಿನ ಭಾರತವು

ಉಪಮೇಯ : ನಾಳಿನ ಭಾರತ

ಉಪಮಾನ :ಮಾರಿಗೌತಣ

ಅಲಂಕಾರ : ರೂಪಕ

ಉಪಮೇಯವಾದ ನಾಳಿನ ಭಾರತವನ್ನು ಉಪಮಾನವಾದ ಮಾರಿಗೌತಣವೇ ಎಂದು ಹೇಳಿರುವುದರಿಂದ ಇದು ರೂಪಕ ಅಲಂಕಾರವಾಗಿದೆ.

ವಿಗ್ರಹಿಸಿ ಸಮಾಸವನ್ನು ಹೆಸರಿಸಿ

ಇನತನೂಜ ,ದನುಜರಿಪು,ಮುರಾರಿ,

ಮೇದಿನೀಪತಿ,ಕೈಯಾನು,ಮಾದ್ರಮಾಗಧಯಾದವರು,ಹೊಗೆದೋರು,ರಾಜೀವಸಖ

ಸೂರ್ಯನ (ಇನ )+ಮಗ ಯಾವನೋ ಅವನು = ಕರ್ಣ =ಬಹುವ್ರಿಹಿ ಸಮಾಸ

ದನುಜರಿಗೆ +ರಿಪು ಯಾರೋ ಅವನು =ಶ್ರೀಕೃಷ್ಣ =ಬಹುವ್ರೀಹಿ ಸಮಾಸ

ಮುರನ +ಅರಿ ಯಾರೋ ಅವನು =ಶ್ರೀಕೃಷ್ಣ =ಬಹುವ್ರೀಹಿ ಸಮಾಸ

ಮೇದಿನಿಗೆ +ಪತಿ =ತತ್ಪುರುಷಸಮಾಸ (ಮೇದಿನಿಯ +ಪತಿ )

ಕೈಯನ್ನು+ಆನು =ಕ್ರಿಯಾಸಮಾಸ

ಮಾದ್ರರೂ+ಮಾಗಧರೂ +ಯಾದವರೂ=ದ್ವಂದ್ವಸಮಾಸ

ಹೊಗೆಯನ್ನು+ತೋರು =ಕ್ರಿಯಾಸಮಾಸ

ರಾಜೀವ+ಸಖ ಯಾರೋ ಅವನು =ಸೂರ್ಯ =ಬಹುವ್ರೀಹಿ ಸಮಾಸ

ಪ್ರಸ್ತಾರ ಹಾಕಿ ,ಗಣ ವಿಭಾಗ ಮಾಡಿ ,ಛಂದಸ್ಸನ್ನು ಹೆಸರಿಸಿ ಲಕ್ಷಣ ಬರೆಯಿರಿ.

**_ U|_ _| _ U| _ _**
ಏನು ಹೇಳ್ವೆ ಕರ್ಣ ಚಿತ್ತ **3|4|3|4**

**_ U |_ U U |UUU| _ _**
ಗ್ಲಾನಿ ಯಾವುದು ಮನಕೆ ಕುಂತೀ **3|4|3|4**

**_ U |U UU U|_ U | _ U U| _ U| _ UU|_**

ಸೂನು| ಗಳ ಬೆ ಸ|ಕೈ ಸಿ |ಕೊಂಬುದು| ಸೇರ |ದೇ ನಿನ|ಗೆ|| 3|4|3|4|3|4|+2

ಭಾಮಿನಿ ಷಟ್ಪದಿ ಲಕ್ಷಣ

ಇದು ಆರು ಸಾಲುಗಳುಳ್ಳ ಪದ್ಯ .ಒಂದು,ಎರಡು,ನಾಲ್ಕು,ಐದನೆಯಪಾದಗಳು ಸಮವಾಗಿದ್ದು ಮೂರು ನಾಲ್ಕುಮಾತ್ರೆಗಳ ಎರಡೆರಡು ಗಣಗಳು ಇರುತ್ತವೆ.ಮೂರು ಮತ್ತು ಆರನೆಯ ಪಾದಗಳು ಸಮವಿದ್ದುಮೂರು ನಾಲ್ಕುಮಾತ್ರೆಗಳ ಮೂರು ಮೂರು ಗಣಗಳು ಕೊನೆಯಲ್ಲಿ ಒಂದು ಗುರು ಬರುತ್ತದೆ.

ಸಂಭವನೀಯ ಪ್ರಶ್ನೆಗಳು

ಒಂದು ವಾಕ್ಯದಲ್ಲಿ ಉತ್ತರಿಸಿ.

೧.ಶ್ರೀಕೃಷ್ಣನ ಪಕ್ಕದಲ್ಲಿ ಕೂರಲು ಕರ್ಣನು ಮುಜುಗರ ಪಡಲು ಕಾರಣವೇನು ?

ಶ್ರೀಕೃಷ್ಣನ ಜೊತೆ ಕೂರಲು ತಾನು ಅವನಿಗೆ ಸರಿ ಸಮನಲ್ಲ ಎಂದು ಕರ್ಣನು ಮುಜುಗರಕ್ಕೆ ಒಳಗಾಗುವನು.

2.ಯಾರುಯಾರಿಗೆ ಭೇದವಿಲ್ಲ ವೆಂದುಶ್ರೀಕೃಷ್ಣನು ಹೇಳಿದನು ?

ಯಾದವರಿಗೂ ಕೌರವರಿಗೂ ಭೇದವಿಲ್ಲ ಇಬ್ಬರೂ ಒಂದೇ ವಂಶದವರು ಎಂದುಶ್ರೀಕೃಷ್ಣನು ಕರ್ಣನಿಗೆ ಹೇಳಿದನು .

೩.ಕರ್ಣನಿಗೆ ಯಾವುದು ಕಷ್ಟ ಎಂದು ಕೃಷ್ಣನು ಹೇಳಿದನು ?

ಪಾಂಡವರೂ ಕೌರವರೂ ಅಲ್ಲದೇ ಮಾದ್ರ,ಮಾಗಧ, ಯಾದವರೆಲ್ಲರ ನಡುವೆ ಕರ್ಣನೇ ಓಲಗದಲ್ಲಿ ರಾಜನಾಗಿ ಮೆರೆಯುವುದನ್ನು ಬಿಟ್ಟು ಕೌರವನ ಎದುರು ಜೀಯ ಪ್ರಸಾದ ಎನ್ನುವುದು ಕಷ್ಟ ಎಂದು ಕೃಷ್ಣನು ಹೇಳಿದನು.

೪. ಯಾವುದಕ್ಕೆ ಸೋಲುವವನಲ್ಲ ಎಂದು ಕರ್ಣನು ಹೇಳಿದನು ?

ಮಹಿಯ ರಾಜ್ಯದ ಸಿರಿಗೆ ಸೋಲುವವನು ತಾನಲ್ಲ ಎಂದು ಕರ್ಣನು ಹೇಳಿದನು.

೫.ಕರ್ಣನುಶ್ರೀಕೃಷ್ಣನಿಗೆ ನೀಡಿದ ಮಾತು ಯಾವುದು ?

ಸೂರ್ಯನ ಆಣೆಯಾಗಿಯೂ ಮಹಾಭಾರತ ಯುದ್ಧದಲ್ಲಿ ಪಾಂಡವರೈವರನ್ನು ನೋಯಿಸುವುದಿಲ್ಲ (ಸಾಯಿಸಲಾರೆ ) ಎಂದು ಕರ್ಣನುಶ್ರೀಕೃಷ್ಣನಿಗೆ ಮಾತು ಕೊಟ್ಟನು.

೬.ರಾಜೀವ ಸಖ ಯಾರು ?

ರಾಜೀವ ಸಖ ಸೂರ್ಯ

೭.ಶ್ರೀಕೃಷ್ಣನಿಗೆ ಮುರಾರಿ ಎಂಬ ಹೆಸರು ಬರಲು ಕಾರಣವೇನು ?

ಶ್ರೀಕೃಷ್ಣನು ಮುರ ಎಂಬ ರಾಕ್ಷಸನನ್ನುಸಂಹರಿಸಿದ್ದರಿಂದ ಅವನಿಗೆ ಮುರಾರಿ ಎಂಬ ಹೆಸರು ಬಂದಿದೆ.

೮. ಚತುರಂಗಬಲದ ಅರ್ಥ ತಿಳಿಸಿ

ಆನೆ,ಕುದುರೆ ,ರಥ,ಕಾಲಾಳುಗಳನ್ನು ಒಳಗೊಂಡ ಸೈನ್ಯ ಸಮೂಹವನ್ನು ಚತುರಂಗಬಲ ಎನ್ನುವರು.

ಮೂರು -ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿ.

೧. ಕರ್ಣನನ್ನು ಹಸ್ತಿನಾಪುರದ ರಾಜನಾಗಿಸುವ ಕುರಿತು ಶ್ರೀಕೃಷ್ಣನು ಹೇಳಿದ ಮಾತುಗಳೇನು ?

ಪಾಂಡವರಲ್ಲಿ ನೀನೇ ಮೊದಲಿಗನಾಗಿದ್ದರಿಂದ ನಿನಗೆ ಹಸ್ತಿನಾಪುರದ ರಾಜ್ಯದ ಅಧಿಕಾರವನ್ನು ದೊರಕಿಸುತ್ತೇನೆ.ಪಾಂಡವ ಕೌರವರೆಲ್ಲರೂ ನಿನ್ನನ್ನು ಓಲೈಸುವರು.ನಿನ್ನ ಎಡ ಭಾಗದಲ್ಲಿ ಕೌರವರು ಬಲಭಾಗದಲ್ಲಿ ಪಾಂಡವರು ಎದುರಿಗೆ ಮಾದ್ರಿ,ಮಾಗಧ,ಯಾದವರು ಅವರೆಲ್ಲರ ನಡುವೆ ನೀನೇ ರಾಜನಾಗಿ ಮೆರೆಯುವ ಭಾಗ್ಯ ನಿನ್ನದು ಅದನ್ನು ಬಿಟ್ಟು ದುರ್ಯೋಧನನ ಬಾಯ್ದುಂಬುಲಕೆ ಕೈ ಚಾಚುವೆಯಾ ಎಂದು ಎಂದು ಕರ್ಣನನ್ನು ಹಸ್ತಿನಪುರದ ರಾಜನಾಗಿಸುವ ಕುರಿತು ಶ್ರೀಕೃಷ್ಣನು ಭರವಸೆ ನೀಡಿದನು.

೨. ಕರ್ಣನಿಗೆ ದುರ್ಯೋಧನನ ಮೇಲಿರುವ ಅಭಿಮಾನ , ಸ್ವಾಮಿನಿಷ್ಠೆ ಅವನ ಮಾತುಗಳಲ್ಲಿ ಹೇಗೆ ವ್ಯಕ್ತವಾಗಿದೆ ?

ಮಹಿಯ ರಾಜ್ಯದ ಸಿರಿಗೆ ಸೋಲುವವನು ನಾನಲ್ಲ ,ನನ್ನನ್ನು ಕಾಪಾಡಿದ ದುರ್ಯೋಧನನ ವೈರಿಗಳ ಶಿರವನ್ನು ಅರಿದು ಅವನಿಗೆ ಒಪ್ಪಿಸುವುದೇ ನನ್ನ ಆಶಯ. ನನಗೇ ದುರ್ಯೋಧನನೇ ಒಡೆಯನು.ಅವನ ಶತ್ರುಗಳೇ ನನ್ನ ಶತ್ರುಗಳು.ನಾಳಿನ ಯುದ್ಧದಲ್ಲಿ ಶತ್ರುಸೈನಿಕರನ್ನು ನಾಶ ಮಾಡಿ ನನ್ನ ದೇಹವನ್ನು(ಪ್ರಾಣವನ್ನು) ನನ್ನ ಒಡೆಯನಿಗೆ ಅರ್ಪಿಸುವೆನು ಎನ್ನುವಲ್ಲಿ ಕರ್ಣನಿಗೆ ದುರ್ಯೋಧನನ ಮೇಲಿರುವ ಅಭಿಮಾನ ,ಸ್ವಾಮಿನಿಷ್ಠೆ ವ್ಯಕ್ತವಾಗಿದೆ.

<u>ಸಂದರ್ಭ ಸಹಿತ ಸ್ವಾರಸ್ಯ ವಿವರಿಸಿ.</u>

೧. ''ನಿಮ್ಮಡಿಗಳಲಿ ಸಮ ಸೇವನೆಯೆ ''

ಈ ಮೇಲಿನ ವಾಕ್ಯವನ್ನು ಕವಿ ಕುಮಾರವ್ಯಾಸನು ಬರೆದ ಕರ್ಣಾಟಭಾರತ ಕಥಾಮಂಜರಿ ಯಿಂದ ಆರಿಸಲಾದ ಕೌರವೇಂದ್ರನ ಕೊಂದೆ ನೀನು ಎನ್ನುವ ಪದ್ಯಭಾಗದಿಂದ ಆಯ್ದುಕೊಳ್ಳಲಾಗಿದೆ.ಈ ಮಾತನ್ನು ಕರ್ಣನು ಶ್ರೀಕೃಷ್ಣನಿಗೆ ಹೇಳಿದ್ದಾನೆ.

ಸಂದರ್ಭ : ಕೌರವರಿಗೂ ಪಾಂಡವರಿಗೂ ಖಚಿತವಾದಾಗ ದುರ್ಯೋಧನನ ಪಕ್ಷದಲ್ಲಿರುವ ಕರ್ಣನಿಂದ ಪಾಂಡವರಿಗೆ ಎದುರಾಗುವ ತೊಂದರೆಯಿಂದ ತಪ್ಪಿಸುವ ಉದ್ದೇಶದಿಂದ ಕರ್ಣನನ್ನು ತನ್ನೊಡನೆ ಕರೆದೊಯ್ಯುವ

ರಾಕ್ಷಸ ಸಂಹಾರಕನಾದ ಕೃಷ್ಣನು ಸೂರ್ಯನ ಮಗನಾದ ಕರ್ಣನೊಡನೆ ಮೃದುನತನದ ಸರಸದಿಂದ (ಪ್ರೀತಿಯಿಂದ ) ಬರಸೆಳೆದು ರಥದ ಪೀಠದಲ್ಲಿ ಕುಳ್ಳಿರಿಸಿದನು.'' ನಿಮ್ಮೊಡನೆ ನಾನು ಸರಿಸಮಾನನಾಗಿ ಕುಳಿತುಕೊಳ್ಳಬಹುದೇ? ದೇವ ಮುರಾರಿ , ನನಗೇಕೋ ಭಯವಾಗುತ್ತಿದೆ.''ಎಂದು ಕರ್ಣನು ಈ ಸಂದರ್ಭದಲ್ಲಿ ಹೇಳುವನು.

೨. ''ಹರಿಯ ಹಗೆ ಹೊಗೆದೋರದುರುಹದೆ''
ಈ ಮೇಲಿನ ವಾಕ್ಯವನ್ನು ಕವಿ ಕುಮಾರವ್ಯಾಸನು ಬರೆದ ಕರ್ಣಾಟಭಾರತ ಕಥಾಮಂಜರಿ ಯಿಂದ ಆರಿಸಲಾದ ಕೌರವೇಂದ್ರನ ಕೊಂದೆ ನೀನು ಎನ್ನುವ ಪದ್ಯ ಭಾಗದಿಂದ ಆಯ್ದುಕೊಳ್ಳಲಾಗಿದೆ.ಈ ಮಾತನ್ನು ಕರ್ಣನು ತನ್ನ ಮನದೊಳಗೆ ಆಲೋಚಿಸುವನು.
ಸಂದರ್ಭ : ಶ್ರೀಕೃಷ್ಣನಿಂದ ತನ್ನ ಜನ್ಮವೃತ್ತಾಂತವನ್ನು ತಿಳಿದ ಕರ್ಣನ ಕೊರಳ ನರಗಳು ಬಿಗಿದವು.ಅವನು ಬಹಳವಾಗಿ ನೊಂದು ''ಅಯ್ಯೋ!ಕುರುಪತಿಗೆ ಕೇಡಾಯಿತು''ಎಂದು ತನ್ನ ಮನದೊಳಗೆ ಅಂದುಕೊಂಡು ''ಕೃಷ್ಣನ ದ್ವೇಷದ ಬೆಂಕಿ ಹೊಗೆಯಾಡಿದ ಮೇಲೆ ಅದು ಪೂರ್ತಿಯಾಗಿ ಸುಡದೆ ಹಾಗೇ ಬಿಡುವುದೇ?ಬರಿದೆ ನನ್ನ ಜನ್ಮವೃತ್ತಾಂತವನ್ನು ಹೇಳಿ ಕೊಂದನು .ಹಲವು ಮಾತೇಕೆ ? ''ಎಂದು ಚಿಂತಿಸಿದನು .
೩. ''ಕೌರವೇಂದ್ರನ ಕೊಂದೆ ನೀನು ''
ಈ ಮೇಲಿನ ವಾಕ್ಯವನ್ನು ಕವಿ ಕುಮಾರವ್ಯಾಸನು ಬರೆದ ಕರ್ಣಾಟಭಾರತ ಕಥಾಮಂಜರಿ ಯಿಂದ ಆರಿಸಲಾದ ಕೌರವೇಂದ್ರನ ಕೊಂದೆ ನೀನು ಎನ್ನುವ ಪದ್ಯ ಭಾಗದಿಂದ ಆಯ್ದುಕೊಳ್ಳಲಾಗಿದೆ.ಈ ಮಾತನ್ನು ಕರ್ಣನು ಕೃಷ್ಣನಿಗೆ ಹೇಳಿದನು.
ಸಂದರ್ಭ :ನೀನೇ ಪಾಂಡವರಲ್ಲಿ ಹಿರಿಯನಾದುದರಿಂದ ನಿನಗೆ ಹಸ್ತಿನಪುರದ ರಾಜ್ಯವನ್ನು ಒದಗಿಸುತ್ತೇನೆ ಎಂಬ ಶ್ರೀಕೃಷ್ಣನ ಆಮಿಷವನ್ನು ನಿರಾಕರಿಸಿದ ಕರ್ಣನು ಮರಳು ಮಾಧವನೇ ,ಈ ಭೂಮಿರಾಜ್ಯದ ಸಿರಿಗೆ ಸೋಲುವಂತವನು ನಾನಲ್ಲ. ಕೌಂತೇಯರು (ಪಾಂಡವರು ) , ಕೌರವರು ನನಗೆ ಓಲೈಸಬೆಕೆನ್ನುವುದರಲ್ಲಿ ನನಗೆ ಯಾವುದೇ ಆಸಕ್ತಿಯಿಲ್ಲ.(ಇಚ್ಛೆಯಿಲ್ಲ )ನನ್ನನ್ನು ಸಲಹಿದ ನನ್ನ ಒಡೆಯನಿಗೆ (ದಾನಿ -ದಾತೃ ) ಅವನನ್ನು ವಿರೋಧಿಸುವ ಶತ್ರುಗಳ ತಲೆಯನ್ನು ಕಡಿದು ಒಪ್ಪಿಸುವೆನು ಎನ್ನು ಆತುರದಲ್ಲಿದ್ದೇನೆ .ಕೌರವೇಂದ್ರನನ್ನು ನೀನು ಕೊಂದೆ ಎಂದು ಕರ್ಣನು ಶ್ರೀಕೃಷ್ಣನಿಗೆ ಹೇಳಿದನು.

ವ್ಯಾಕರಣಾಂಶಗಳು
೧. ಹಸಾದ ಪದದ ತತ್ಸಮ ರೂಪ ------ (ಪ್ರಸಾದ )
೨. ಮಾಧವ ಪದದಲ್ಲಿರುವ ಸಮಾಸ ------ (ಬಹುವ್ರೀಹಿ ಸಮಾಸ )
೩.ಸರಸವನೆಸಗಿ ಪದದಲ್ಲಿರುವ ಸಂಧಿ ------ (ಲೋಪ ಸಂಧಿ )
೪.ಸರಸವನೆಸಗಿ ಪದದಲ್ಲಿರುವ ಸಮಾಸ ----- (ಕ್ರಿಯಾ ಸಮಾಸ)
೫.ನಕುಲಸಹದೇವರು ಪದವು ಈ ಸಮಾಸದ ಉದಾಹರಣೆಯಾಗಿದೆ.------ (ದ್ವಂದ್ವ ಸಮಾಸ )
೬. ಬಾಯ್ದುಂಬುಲ ಪದವು ಈ ಸಂಧಿಗೆ ಉದಾಹರಣೆಯಾಗಿದೆ.------- (ಆದೇಶ ಸಂಧಿ )

೭.ಕೈಯಾನು ಪದದಲ್ಲಿರುವ ಸಂಧಿ -------(ಆಗಮ ಸಂಧಿ )

೮. ಕೌರವೇಂದ್ರ ಪದವು ಈ ಸಂಧಿಗೆ ಉದಾಹರಣೆಯಾಗಿದೆ.------- (ಗುಣ ಸಂಧಿ )

೯. ಕೌರವ ರಾಯನೇ ದಾತಾರನು ಇಲ್ಲಿ ವ್ಯಕ್ತವಾಗಿರುವ ಅಲಂಕಾರ ------ (ರೂಪಕ )

೧೦. ಮೊದಲನೆಯ,ಎರಡನೆಯ ,ಮೂರನೆಯ ಮೊದಲಾದ ಪದಗಳು ಈ ವ್ಯಾಕರಣಾಂಶದ ಉದಾಹರಣೆಗಳು -------- (ಸಂಖ್ಯೇಯವಾಚಕ )

೧೧.ಹೊಗೆದೋರು ಪದದಲ್ಲಿರುವ ಸಂಧಿ ------ (ಆದೇಶ ಸಂಧಿ )

ಕೆಳಗಿನ ಪ್ರಶ್ನೆಗಳಿಗೆ ನಾಲ್ಕು ಆಯ್ಕೆಗಳನ್ನು ನೀಡಲಾಗಿದೆ.ಅವುಗಳಲ್ಲಿ ಸರಿಯಾದ ಉತ್ತರವನ್ನು ಆರಿಸಿ ಬರೆಯಿರಿ.

೧.ಇನತನೂಜ ಪದವು ಈ ಸಮಾಸದ ಉದಾಹರಣೆಯಾಗಿದೆ --

ಎ)ಬಹುವ್ರೀಹಿ ಬಿ)ತತ್ಪುರುಷ ಸಿ)ಗಮಕ ಡಿ) ಕರ್ಮಧಾರಯ

೨.'ದನುಜ ರಿಪು' ಪದದಲ್ಲಿರುವ ಸಮಾಸ

ಎ)ಕರ್ಮಧಾರಯ ಬಿ)ಗಮಕ ಸಿ)ತತ್ಪುರುಷ ಡಿ)ಬಹುರ್ವಿಹಿ

೩.'ನಕುಲಸಹದೇವರು' ಪದದಲ್ಲಿರುವ ಸಮಾಸವಿದು ---

ಎ) ಗಮಕ ಬಿ)ದ್ವಂದ್ವ ಸಿ)ಕ್ರಿಯಾ ಡಿ)ಅಂಶಿ

೪.'ರಾಜೀವ ಸಖ ' ಪದವು ಈ ಸಮಾಸದ ಉದಾಹರಣೆಯಾಗಿದೆ.

ಎ)ತತ್ಪುರುಷ ಬಿ)ಕರ್ಮಧಾರಯ ಸಿ)ಬಹುರ್ವಿಹಿ ಡಿ)ದ್ವಿಗು

ಉತ್ತರಗಳು

೧.ಎ)ಬಹುರ್ವಿಹಿ ೨. ಡಿ )ಬಹುರ್ವಿಹಿ ೩. ಬಿ)ದ್ವಂದ್ವ ೪.ಸಿ)ಬಹುರ್ವಿಹಿ

ಮೊದಲಿನ ಎರಡು ಪದಗಳಿಗೆ ಇರುವ ಸಂಬಂಧದಂತೆ ಮೂರನೆಯ ಪದಕ್ಕೆ ಸರಿಸಂಬಂಧ ಹೊಂದುವ ಪದ ಬರೆಯಿರಿ.

೧.ಪೀಠದಲಿ : ಸಪ್ತಮಿ : : ಯಾದವರು : ---

೨.ಮೇದಿನೀಪತಿ : ತತ್ಪುರುಷ : : ರವಿಸುತ : ___

೩.ಬಾಯ್ದುಂಬುಲ : ಆದೇಶಸಂಧಿ : : ಮನದೊಳಗೆ :----

೪.ನುಡಿನುಡಿ : ದ್ವಿರುಕ್ತಿ : : ಮರುಳುತನ : ---

೫.ಭಾರತವು : ಪ್ರಥಮಾವಿಭಕ್ತಿ : : ಮಹಿಯ : ---

೬.ಅರಿವಿಲ್ಲ : ಲೋಪಸಂಧಿ : : ಹಾನಿಯಿಲ್ಲ : ___

೭.ವೀರ : ಬೀರ : : ಪ್ರಸಾದ : ---

೮.ದಾತಾರ : ಧಾತೃ : : ಋಣ : --

೯.ಮೇದಿನಿ : ಭೂಮಿ : : ದೃಗುಜಲ : ___

೧೦.ಗದುದ್ದಗೆ : ಪೀಠ : : ಕೈವಾರ :----

೧೧.ಗಡಣ : ಸಮೂಹ : : ಗ್ಲಾನಿ : ___

೧೨.ರಾಜೀವಸಖ : ಬಹುರ್ವಿಹಿ ಸಮಾಸ : : ಮಾದ್ರ ಮಾಗದ ಯಾದವರು : ___

೧೩.ಕೈಯಾನು : ಕ್ರಿಯಾ ಸಮಾಸ: : ಮುರಾರಿ : ___

೧.ಪ್ರಥಮಾ ೨. ಬಹುರ್ವಿಹಿ ೩)ಲೋಪಸಂಧಿ ೪.ನುಡಿಗಟ್ಟು ೫.ಷಷ್ಠಿ ೬. ಆಗಮಸಂಧಿ ೭. ಹಸಾದ ೮. ರಿಣ ೯. ಕಣ್ಣನೀರು ೧೦.ಹೊಗಳಿಕೆ ೧೧.ತಲ್ಲಣ ೧೨. ದ್ವಂದ್ವ ಸಮಾಸ ೧೩. ಬಹುರ್ವಿಹಿ .

ಪಧ್ಯಪಾಠ -ವೀರ ಲವ

- ಲಕ್ಷ್ಮೀಶ

<u>ಕವಿ ಪರಿಚಯ :</u>

ಲಕ್ಷ್ಮೀಶ ಕವಿಯ ಕಾಲ ಕ್ರಿ.ಶ.೧೫೫೦. ಇವರು ಚಿಕ್ಕಮಗಳೂರು ಜಿಲ್ಲೆ ಕಡೂರು ತಾಲೂಕು ದೇವನೂರಿನವರು .ಇವರಿಗೆ ಉಪಮಾಲೋಲ ,ಕರ್ಣಾಟ ಕವಿ ಚೂತವನ ಚೈತ್ರ ಎಂಬ ಬಿರುದುಗಳಿವೆ. ಇವರ ಜೈಮಿನಿ ಭಾರತ ಕೃತಿಯಿಂದ ವೀರಲವ ಪಧ್ಯವನ್ನು ಆಯ್ದುಕೊಳ್ಳಲಾಗಿದೆ.

ಕೃತಿ : ಜೈಮಿನಿಭಾರತ

<u>ಪ್ರಶ್ನೋತ್ತರಗಳು</u>

<u>ಒಂದೊಂದು ವಾಕ್ಯದಲ್ಲಿ ಉತ್ತರಿಸಿ.</u>

೧. ಜೈಮಿನಿ ಭಾರತ ಕಾವ್ಯವನ್ನು ಬರೆದ ಕವಿ ಯಾರು ?

ಜೈಮಿನಿಭಾರತವನ್ನುಬರೆದ ಕವಿ ಲಕ್ಷ್ಮೀಶ

೨.ಯಜ್ಞಾಶ್ವವನ್ನು ಕಟ್ಟಿದವರು ಯಾರು ?

ಯಜ್ಞಾಶ್ವವನ್ನು ಕಟ್ಟಿದವನು ಲವ

೩. ಕುದುರೆಯನ್ನು ಲವನು ಯಾವುದರಿಂದ ಕಟ್ಟಿದನು?

ಕುದುರೆಯನ್ನು ಲವನು ತನ್ನ ಉತ್ತರೀಯವನ್ನು ಹಗ್ಗವನ್ನಾಗಿ ಹೊಸೆದು ಅದರಿಂದ ಕಟ್ಟಿದನು.

೪. ಮುನಿಸುತರು ಹೆದರಲು ಕಾರಣವೇನು ?

ಯಜ್ಞಾಶ್ವವನ್ನು ಕಟ್ಟಲು ಬಿಟ್ಟರೆ ಶ್ರೀರಾಮನ ಕಡೆಯವರಿಂದ ಶಿಕ್ಷೆಗೆ ಒಳಗಾಗಬೇಕಾಗುವುದೆಂದು(ಹೊಡೆಸಿಕೊಳ್ಳಬೇಕಾಗುವುದೆಂದು ) ಮುನಿಸುತರು ಹೆದರಿದರು.

ಮೂರು - ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿ.

೧. ವಾಲ್ಮೀಕಿ ಆಶ್ರಮಕ್ಕೆ ಯಜ್ಞಾಶ್ವವು ಬಂದ ಬಗೆಯನ್ನು ವಿವರಿಸಿ

ಸೀತೆಯನ್ನು ಕಾಡಿಗೆ ಕಳುಹಿಸಿದ ಶ್ರೀರಾಮನು ಅವಳ ಅಗಲಿಕೆಯಿಂದ ನೊಂದಿರುವ ಸಂದರ್ಭದಲ್ಲಿಯೇ, ರಾವಣನ ಒದೆಯಿಂದ ಬ್ರಹ್ಮಹತ್ಯಾದೋಷ ಬಂದಿರುವುದನ್ನು ಪರಿಹರಿಸಿಕೊಳ್ಳಲು ಮಹರ್ಷಿಗಳ ಆದೇಶದಂತೆ ಅಶ್ವಮೇಧ ಯಾಗವನ್ನು ಕೈಗೊಳ್ಳುವನು.ಸಂಚಾರಕ್ಕೆ ತೆರಳಿದ ಕುದುರೆಯ ಬೆಂಗಾವಲಿಗೆ ತನ್ನ ಸಹೋದರ ಶತ್ರುಘ್ನನನ್ನು ಕಳುಹಿಸುವನು. ಬಲಶಾಲಿಗಳಾದ ರಾಜರೂ ಸಹ ಶ್ರೀರಾಮನ ಶ್ರೇಷ್ಠತೆಯ ವಿಚಾರವನ್ನು ಕೇಳಿಯೇ ಕುದುರೆಯನ್ನು ಕಟ್ಟಲು ಹೆದರಿ ,ಅದಕ್ಕೆ ನಮಸ್ಕರಿಸಿ ಅದನ್ನು ತಡೆಯದೇ ಇರಲು ,ಶ್ರೀರಾಮನ ಯಜ್ಞಾಶ್ವದ ಪ್ರೀತಿಯ ಕುದುರೆಯು ಇಡೀ ಭೂಮಂಡಲದಲ್ಲಿ ಚಲಿಸುತ್ತ, ವಾಲ್ಮೀಕಿಯ ತಪೋವನದ ಉಪವನದಲ್ಲಿ ಬೆಳೆದು ನಿಂತಿದ್ದ ಹುಲ್ಲಿನ ಹಸುರಿಗೆ ಮನಸೋತು ಆಕರ್ಷಣೆಗೆ ಒಳಗಾಗಿ ಅದನ್ನು ಪ್ರವೇಶಿಸಿತು.

೨. ಯಜ್ಞಾಶ್ವದ ಹಣೆಯಲ್ಲಿದ್ದ ಪಟ್ಟಿಯಲ್ಲಿ ಏನೆಂದು ಬರೆಯಲಾಗಿತ್ತು ?

ಈ ಭೂಮಿಯಲ್ಲಿ ಕೌಸಲ್ಯೆಯು ಪಡೆದ ಮಗನಾದ ಶ್ರೀರಾಮನೊಬ್ಬನೇ ವೀರ.ಅವನ ಯಜ್ಞ ತುರಗವಿದು.ಇದನ್ನು ಧರಿಸುವ ಸಮರ್ಥರು ಯಾರಾದರೂ ಇದ್ದರೆ ಈ ಕುದುರೆಯನ್ನು ತಡೆಯಿರಿ ಎಂದು ಯಜ್ಞಾಶ್ವದ ಹಣೆಯಲ್ಲಿದ್ದ ಪಟ್ಟಿಯಲ್ಲಿ ಬರೆಯಲಾಗಿತ್ತು.

೩.ಕುದುರೆಯನ್ನು ಕಟ್ಟುವ ವಿಚಾರದಲ್ಲಿ ಮುನಿಸುತರಿಗೂ ಲವನಿಗೂ ನಡೆದ ಸಂವಾದವನ್ನು ಬರೆಯಿರಿ.

ಶ್ರೀರಾಮನ ಅಶ್ವಮೇಧದ ಕುದುರೆಯು ಇಡೀ ಭೂಮಂಡಲದಲ್ಲಿ ಸಂಚರಿಸುತ್ತ ಕೊನೆಗೆ ವಾಲ್ಮೀಕಿಯ ಆಶ್ರಮದ ಉಪವನದಲ್ಲಿ ಬೆಳೆದು ನಿಂತಿದ್ದ ಹುಲ್ಲಿನ ಹಸುರಿಗೆ ಮನಸೋತು ಆಕರ್ಷಣೆಗೆ ಒಳಗಾಗಿ ಅದನ್ನು ಪ್ರವೇಶಿಸಲು ಅದನ್ನು ನೋಡಿದ ಆಶ್ರಮದ ಕಾವಲಿಗಿದ್ದ ಲವನು ಕುದುರೆಯ ಹತ್ತಿರಕ್ಕೆ ಬಂದು ಅದರ ಹಣೆಪಟ್ಟಿಯ ಮೇಲಿದ್ದ ಶ್ರೀರಾಮನೊಬ್ಬನೇ ವೀರನೆಂಬ ವಾಕ್ಯವನ್ನು ಓದಿ ಕೆರಳಿ ಶ್ರೀರಾಮನ ಗರ್ವವನ್ನು ಮುರಿಯಬೇಕೆಂದು ನಿರ್ಧರಿಸಿದನು.ಆದ್ದರಿಂದ ಲವನು ತನ್ನ ಉತ್ತರೀಯವನ್ನು ಹೊಸೆದು, ಅದನ್ನು ಕುದುರೆಯ ಕೊರಳಿಗೆ ಬಿಗಿದು ಬಾಳೆಯ ಮರಕ್ಕೆ ಕಟ್ಟಲು ಮುನಿಸುತರು ಅತಿಯಾಗಿ ನಡುಗಿ ,ಬೇಡ ಬೇಡ ಅರಸರ ಕುದುರೆಯನ್ನು ಬಿಟ್ಟುಬಿಡು,ಇಲ್ಲವಾದರೆ ನಮ್ಮನ್ನು ಹೊಡೆಯುವರು ಎಂದರು ಅದಕ್ಕೆ ಲವನು ನಗುತ್ತ ಬ್ರಾಹ್ಮಣರ ಮಕ್ಕಳು ಅಂಜುವರೆಂದರೆ ಜಾನಕಿಯ ಮಗನು ಇದಕ್ಕೆ ಹೆದರುವನೇ ? ಹೋಗಿ ನೀವು ಎಂದು ಶೌರ್ಯದಿಂದ ಬಿಲ್ಲನ್ನು ಹೆದೆಗೇರಿಸಿ ,ತೀಡಿ ಜೇಂಕಾರ ಮಾಡಿ ನಿಂತಿದ್ದನು .

ಎಂಟು ಹತ್ತು ವಾಕ್ಯಗಳಲ್ಲಿ ಉತ್ತರಿಸಿ.

೧. ಲವನು ಯಜ್ಞಾಶ್ವವನ್ನು ಕಟ್ಟಲು ಕಾರಣವೇನು ?

ರಾವಣನ ವಧೆಯಿಂದ ಬ್ರಹ್ಮಹತ್ಯಾದೋಷ ಬಂದಿರುವುದನ್ನು ಪರಿಹರಿಸಿಕೊಳ್ಳಲು ಶ್ರೀರಾಮನು ಮಹರ್ಷಿಗಳ ಸಲಹೆಯಂತೆ ಅಶ್ವಮೇಧ ಯಾಗವನ್ನು ಕೈಗೊಂಡು ಯಜ್ಞಾಶ್ವದ ಕುದುರೆಯ ಕಾವಲಿಗೆ ಶತ್ರುಘ್ನನನ್ನು ಕಳಿಸಿದನು. ದೇಶ ದೇಶಗಳನ್ನು ಸುತ್ತಾಡಿದ ಅಶ್ವಮೇಧದ ಕುದುರೆಯು ಒಂದುದಿನ ವಾಲ್ಮೀಕಿ ಮಹರ್ಷಿಗಳ ಆಶ್ರಮಕ್ಕೆ ಬರುತ್ತದೆ.ಅಲ್ಲಿ ಮಹರ್ಷಿಗಳ ಆಶ್ರಮದ ಉಪವನದ ಕಾವಲಿಗೆ ನಿಯೋಜಿತನಾಗಿದ್ದ ಲವನು ತನ್ನ ಜೊತೆಯವರ ಕೂಡಿ ಧನುರ್ಧಾರಿಯಾಗಿ ಬರುತ್ತಿದ್ದಾಗ ಅಲ್ಲಿದ್ದ ಕುದುರೆಯನ್ನು
ನೋಡಿ ಎಲ್ಲಿಯ ತುರಗವಿದು ? ಹೀಗೆ ಹೂದೋಟವನ್ನು ಹಾಳು ಮಾಡುತ್ತಿದೆಯಲ್ಲ ,ವರುಣನಿರುವಲ್ಲಿಗೆ ಹೋಗುವಾಗ ವಾಲ್ಮೀಕಿ ಮಹರ್ಷಿಗಳು ಈ ವನವನ್ನು ನೋಡಿಕೊಳ್ಳಲು ಹೇಳಿ ಹೊಗಿದ್ದಾರೆ.ಅವರು ಮರಳಿ ಬಂದು ಇದನ್ನು ನೋಡಿದರೆ ನನ್ನ ಮೇಲೆ ಮುನಿಸಿಕೊಳ್ಳುವರುಎಂದು ಯೋಚಿಸಿ ಕುದುರೆಯ ಬಳಿ ಬರಲು ಅದರ ಮೇಲಿದ್ದ ಹಣೆಪಟ್ಟಿಯನ್ನು ನೋಡಿದನು.ಅದರಲ್ಲಿ ಈ ಭೂಮಿಯಲ್ಲಿ ಕೌಸಲ್ಯೆಪಡೆದ ಅವಳ ಮಗ ಶ್ರೀರಾಮನೊಬ್ಬನೇ ವೀರನು ,ಆತನ ಯಜ್ಞತುರಗವಿದು.ಅದನ್ನು ಕಟ್ಟುವ ವೀರರು ಯಾರಾದರೂ ಇದ್ದರೆ ಕಟ್ಟಬಹುದುಎಂದಿದ್ದ ಲೇಖನವನ್ನೋದಿದ ವೀರಲವನು ಶ್ರೀರಾಮನ ಗರ್ವವನ್ನು ಬಿಡಿಸದಿದ್ದರೆ ನನ್ನ ತಾಯಿಯನ್ನು ಜನರು ಬಂಜೆಯೆಂದು ಕರೆದಿರುವರೇ! ತನ್ನಲ್ಲಿ ತೋಳ್ಬಲವಿದ್ದೂ ಏನು ಪ್ರಯೋಜನ? ಎಂದು ಆಲೋಚಿಸಿ ಶ್ರೀರಾಮನ ಯಜ್ಞದ ಕುದುರೆಯನ್ನು ಕಟ್ಟಿಹಾಕಿದನು.

೨. ಲವನ ನಡುವಳಿಕೆ ಮೆಚ್ಚುಗೆಯಾಯಿತೇ? ಏಕೆ ?

ಲವನ ನಡುವಳಿಕೆಯು ಮೆಚ್ಚುಗೆಯಾಯಿತು.ಇದನ್ನು ಮೂರು ಅಂಶಗಳಿಂದ ಸಮರ್ಥಿಸಬಹುದು.

ಮೊದಲನೆಯದಾಗಿ ಶ್ರೀರಾಮನ ಅಶ್ವಮೇಧದ ಕುದುರೆಯು ವಾಲ್ಮೀಕಿ ಮಹರ್ಷಿಗಳ ಆಶ್ರಮದ ಉಪವನದಲ್ಲಿದ್ದ ಹಸಿರಿಗೆ ಮನಸೋತು ಅಲ್ಲಿ ಪ್ರವೇಶಿಸಿದಾಗ ಉಪವನದ ಕಾವಲಿಗೆ ಮಹರ್ಷಿಗಳಿಂದ ನೇಮಕವಾಗಿದ್ದ ಲವನು ಅದನ್ನು ನೋಡಿ ಮಹರ್ಷಿಗಳು ತೋಟದ ಕಾವಲಿಗೆ ತನ್ನನ್ನು ನೇಮಿಸಿ ವರುಣನಲ್ಲಿಗೆ ಹೋಗಿರುವರು.ಅವರು ಮರಳಿ ಬಂದು ತೋಟದ ದುರವಸ್ಥೆಯನ್ನು ನೋಡಿ ಮುನಿಸಿಕೊಳ್ಳುವರು ಎಂದು ಆಲೋಚಿಸುವನು.ತೋಟದ ರಕ್ಷಣೆಗೆ ಮುಂದಾಗುವನು.ಇಲ್ಲಿ ಲವನಲ್ಲಿ ಜಾಗೃತವಾದ ಕರ್ತವ್ಯ ಪ್ರಜ್ಞೆಯನ್ನು ಗಮನಿಸಬಹುದು.
ಅಲ್ಲದೇ ಯಜ್ಞಾಶ್ವದ ಕುದುರೆಯ ಮೇಲಿದ್ದ ಹಣೆಪಟ್ಟಿಯಲ್ಲಿ ಈಭೂಮಿಯಲ್ಲಿಕೌಸಲ್ಯೆಯು ಮಗನಾದಶ್ರೀರಾಮನೊಬ್ಬನೇವೀರನು.ಯಜ್ಞಾಶ್ವವನ್ನು ಕಟ್ಟುವವರು ಯಾರಾದರೂ ಇದ್ದರೆ ಕಟ್ಟಬಹುದು ಎಂದು ಇರುವುದನ್ನು ಓದಿದ ಲವನು ಶ್ರೀರಾಮನೊಬ್ಬನೇ ವೀರನಾದರೆ ಅವನನ್ನು

ಹಡೆದ ತಾಯಿಯು ವೀರಮಾತೆಯೆನಿಸುವಳು .ತನ್ನಲ್ಲಿ ತೋಳ್ಬಲವಿದ್ದೂ ಏನೂ ಪ್ರಯೋಜನವಿಲ್ಲದ ಹಾಗಾಗಿ ತನ್ನ ತಾಯಿಯನ್ನು ಎಲ್ಲರೂ ಬಂಜೆಯೆಂದು ಕರೆಯುವಂತಾಗುವುದು.ಆದ್ದರಿಂದ ಶ್ರೀರಾಮನ ಗರ್ವವನ್ನು ಅಡಗಿಸಿ ತನ್ನ ತಾಯಿಗೆ ವೀರ ಮಾತೆಯೆಂಬ ಗೌರವವನ್ನು ಒದಗಿಸಬೇಕೆಂಬ ಭಾವವು ಅವನಲ್ಲಿ ಜಾಗೃತವಾಗುವುದು.ಇಲ್ಲಿ ತನ್ನನ್ನು ಹೊತ್ತು ಹೆತ್ತ ತಾಯಿಗೆ ಉನ್ನತ ಪದವಿ ಗೌರವಗಳು ಸಿಗುವಂತೆ ಮಾಡುವುದು ಅವಶ್ಯ ಎಂಬ ಮಾತೃ ಗೌರವ ಲವನಲ್ಲಿ ಮೈ ತಾಳಿದ್ದನ್ನು ಗಮನಿಸಬಹುದು.

ಶ್ರೀರಾಮನ ಕುದುರೆಯನ್ನು ಬಿಡದಿದ್ದರೆ ಅವನ ಕಡೆಯವರಿಂದ ಹೊಡೆಸಿಕೊಳ್ಳಬೇಕಾಗುವುದು. ಆದ್ದರಿಂದ ಕುದುರೆಯನ್ನು ಕಟ್ಟದಿರು ಎಂದು ಮುನಿಸುತರು ಲವನಲ್ಲಿ ಬೇಡಿಕೊಂಡಾಗ ಪಾರ್ವರ ಮಕ್ಕಳಾದ ನೀವು ಹೆದರುತ್ತೀರೆಂದರೆ ಜಾನಕಿಯ ಮಗನಾದ ನಾನಿದಕ್ಕೆ ಹೆದರುವೆನೇ ? ಎಂದು ಲವನು ಉತ್ತರಿಸುವನು .ಇಲ್ಲಿ ಲವನು ಚಿಕ್ಕ ಬಾಲಕನಾದರೂ ಲೋಕ ವೀರನೆನಿಸಿದ ಶ್ರೀರಾಮನಿಂದ ಮುಂದೆ ಎದುರಾಗಬಹುದಾದ ಅಪಾಯಕ್ಕೆ ಹೆದರದೇ ಅವನನ್ನು ಎದುರಿಸಲು ಸನ್ನದ್ಧನಾಗುವನು.ಇಲ್ಲಿ ಲವನಲ್ಲಿ ತಂದೆಯಾದ ಶ್ರೀರಾಮನ ಧೈರ್ಯ ಶೌರ್ಯಗಳು ವ್ಯಕ್ತವಾಗಿರುವುನ್ನು ಗಮನಿಸಬಹುದು.

<u>ಸಂದರ್ಭಾನುಸಾರ ಸ್ವಾರಸ್ಯವನ್ನು ಬರೆಯಿರಿ.</u>

೧. ''ರಘೂದ್ವಹನ ಸೊಲ್ಗೇಳಿ ನಮಿಸಲ್''

ಈ ಮೇಲಿನ ವಾಕ್ಯವನ್ನು ಲಕ್ಷ್ಮೀಶ ಕವಿಯು ಬರೆದ ದೇವುಡು ನರಸಿಂಹ ಶಾಸ್ತ್ರೀ ಮತ್ತು ಬಿ.ಶಿವಮೂರ್ತಿ ಶಾಸ್ತ್ರೀ ಇವರು ಸಂಪಾದಿಸಿದ ಜೈಮಿನಿ ಭಾರತ ದಿಂದ ಆರಿಸಲಾದ ವೀರಲವ ಎನ್ನುವ ಪದ್ಯಭಾಗದಿಂದ ಆಯ್ದುಕೊಳ್ಳಲಾಗಿದೆ.ಈ ಮಾತನ್ನು ಕವಿ ಹೇಳಿದ್ದಾರೆ.

ಸಂದರ್ಭ : ರಾವಣನ ಹತ್ಯೆಯಿಂದ ಬಂದೊದಗಿದ ಬ್ರಹ್ಮಹತ್ಯಾದೋಷ ನಿವಾರಣೆಗಾಗಿ ಮಹರ್ಷಿಗಳ ಸಲಹೆಯಂತೆ ಶ್ರೀರಾಮನು ಅಶ್ವಮೇಧ ಯಾಗವನ್ನು ಕೈಗೊಂಡು ಯಜ್ಞಾಶ್ವದ ರಕ್ಷಣೆಯ ಕುದುರೆಗೆ ಬೆಂಗಾವಲಾಗಿ ಶತ್ರುಘ್ನನನ್ನು ಕಳಿಸಿದನು.ಅದು ಇಡೀ ಭೂಮಂಡಲದೊಳಗೆ ಸಂಚರಿಸುತ್ತಿರಲು ಬಲಶಾಲಿಗಳಾದ ರಾಜರೂ ಸಹ ಶ್ರೀರಾಮನ ಶ್ರೇಷ್ಠತೆಯ ವಿಚಾರವನ್ನು ಕೇಳಿಯೆ ಕುದುರೆಯನ್ನು ಕಟ್ಟಲು ಹೆದರಿ ,ಅದಕ್ಕೆ ನಮಸ್ಕರಿಸಿ ಅದನ್ನು ತಡೆಯುವ ಯತ್ನವನ್ನು ಅವರು ಮಾಡಲಿಲ್ಲ ಎಂದು ಕವಿ ವಿವರಿಸಿದ್ದಾರೆ.

ಸ್ವಾರಸ್ಯ : ಯಜ್ಞಾಶ್ವದ ವಿಶೇಷತೆ ಮತ್ತು ಶ್ರೀರಾಮನ ಬಗ್ಗೆ ಇತರ ರಾಜರಲ್ಲಿ ಇದ್ದ ಭಯ ,ಭಕ್ತಿ ಗೌರವವನ್ನು ಮೇಲಿನ ವಾಕ್ಯವು ಸೂಚಿಸುತ್ತದೆ.

೨. ''ತನ್ನ ಮಾತೆಯಂ ಸರ್ವಜನಮುಂ ಬಂಜೆಯೆನ್ನದಿರ್ಪುದೆ''

ಈ ಮೇಲಿನ ವಾಕ್ಯವನ್ನು ಲಕ್ಷ್ಮೀಶ ಕವಿಯು ಬರೆದ ದೇವುಡು ನರಸಿಂಹ ಶಾಸ್ತ್ರೀ ಮತ್ತು

ಬಿ.ಶಿವಮೂರ್ತಿ ಶಾಸ್ತ್ರೀ ಇವರು ಸಂಪಾದಿಸಿದ ಜೈಮಿನಿ ಭಾರತ ದಿಂದ ಆರಿಸಲಾದ ವೀರಲವ ಎನ್ನುವ ಪದ್ಯಭಾಗದಿಂದ ಆಯ್ದುಕೊಳ್ಳಲಾಗಿದೆ.ಈ ಮಾತನ್ನು ಕವಿ ಹೇಳಿದ್ದಾರೆ.

ವಾಲ್ಮೀಕಿಯ ಆಶ್ರಮ ಪ್ರವೇಶಿಸಿದ ಶ್ರೀರಾಮನ ಯಜ್ಞಾಶ್ವದ ಕುದುರೆಯ ಹಣೆಪಟ್ಟಿಯ ಮೇಲಿದ್ದ ಬರಹದಲ್ಲಿ ಈ ಭೂಮಿಯಲ್ಲಿ ಕೌಸಲ್ಯೆಯು ಪಡೆದ ಮಗನಾದ ಶ್ರೀರಾಮನೊಬ್ಬನೇ ವೀರ.ಅವನ ಯಜ್ಞ ತುರಗವಿದು.ಇದನ್ನು ಧರಿಸುವ(ಕಟ್ಟುವ) ಸಮರ್ಥರು ಯಾರಾದರೂ ಇದ್ದರೆ ಈ ಕುದುರೆಯನ್ನು ತಡೆಯಿರಿ ಎಂದಿದ್ದನ್ನು ನೋಡಿ, ಓಹೋ ! ಅವನ (ಶ್ರೀರಾಮನ ) ಗರ್ವವನ್ನು ಮುರಿಯದಿದ್ದರೆ ನನ್ನ

ತಾಯಿಯನ್ನು ಎಲ್ಲರೂ ಬಂಜೆಯೆಂದು ಕರೆಯದಿರುವರೇ ? ಅಲ್ಲದೇ ನನ್ನ ತೋಳುಗಳಿದ್ದೂ ಏನು ಪ್ರಯೋಜನ ? ಎಂದರೆ ರಾಮನ ಗರ್ವವನ್ನು ಮುರಿಯುತ್ತೇನೆ ಎಂದು ಪ್ರತಿಜ್ಞೆಯನ್ನು ಮಾಡಿ ಲವನು ಉರಿದೆದ್ದನುಎಂದು ಕವಿ ವರ್ಣಿಸಿದ್ದಾರೆ .

ಸ್ವಾರಸ್ಯ : ಕುದುರೆಯನ್ನು ಕಟ್ಟದಿದ್ದರೆ ಶ್ರೀರಾಮನೊಬ್ಬನೇ ಸಮರ್ಥನು ,ಅವನನ್ನು ಎದುರಿಸುವವರು ಈ ಭೂಮಂಡಲದೊಳಗೆ ಯಾರೂ ಇಲ್ಲ ಎಂದು ಒಪ್ಪಿಕೊಂಡಂತಾಗುವುದು . ಹಾಗೆ ಮಾಡಿದರೆ ತನ್ನ ತಾಯಿಗೆ ತಾನು ಮಗನಿದ್ದೂ ಇಲ್ಲದಂತೆ ಎಂಬ ಲವನ ಭಾವನೆ ,ವೀರ ಮಾತೆ ಎಂಬ ಹೆಸರು ತನ್ನ ತಾಯಿಗೂ ಸಲ್ಲಬೇಕೆಂಬ ಲವನ ತಾಯಿಯ ಬಗೆಗಿನ ಗೌರವವನ್ನು ಮೇಲಿನ ವಾಕ್ಯ ಸೂಚಿಸುವುದು.

೩. ''ಅರಸುಗಳ ವಾಜಿಯಂ ಬಿಡು ''

ಈ ಮೇಲಿನ ವಾಕ್ಯವನ್ನು ಲಕ್ಷ್ಮೀಶ ಕವಿಯು ಬರೆದ ದೇವುಡು ನರಸಿಂಹ ಶಾಸ್ತ್ರೀ ಮತ್ತು ಬಿ.ಶಿವಮೂರ್ತಿ ಶಾಸ್ತ್ರೀ ಇವರು ಸಂಪಾದಿಸಿದ ಜೈಮಿನಿ ಭಾರತ ದಿಂದ ಆರಿಸಲಾದ ವೀರಲವ ಎನ್ನುವ ಪದ್ಯಭಾಗದಿಂದ ಆಯ್ದುಕೊಳ್ಳಲಾಗಿದೆ.ಈ ಮಾತನ್ನು ಮುನಿಸುತರು ಲವನಿಗೆ ಹೇಳಿದ್ದಾರೆ.

ಸಂದರ್ಭ : ಯಜ್ಞಾಶ್ವದ ಹಣೆಪಟ್ಟಿಯಲ್ಲಿದ್ದ ಬರಹವನ್ನು ಓದಿದ ಲವನು ಕೆರಳಿ ಲೋಕದಲ್ಲಿ ರಾಮನೊಬ್ಬನೇ ಸರ್ವಶ್ರೇಷ್ಠ ಎಂದು ಒಪ್ಪಿ ಅದನ್ನು ಕಟ್ಟದೇ ಹಾಗೆ ಬಿಟ್ಟರೆ ತನ್ನ ತಾಯಿಯನ್ನು ಎಲ್ಲ ಜನರೂ ಬಂಜೆಯೆಂದು ಕರೆದಾರು.ಅಲ್ಲದೇ ತನ್ನಲ್ಲಿ ತೋಳ್ಬಲವಿದ್ದೂ ಏನು ಪ್ರಯೋಜನ ? ಎಂದು ಯೋಚಿಸಿ ಅದನ್ನು ಕಟ್ಟಿ ಹಾಕಿದನು.ಆಗ ಅಲ್ಲಿದ್ದ ಮುನಿಸುತರು ಬೇಡ ಬೇಡ ಅರಸರ ಕುದುರೆಯನ್ನು ಬಿಟ್ಟುಬಿಡು ನಮಗೆ ತೊಂದರೆಯಾಗುವುದು ಎಂದು ಕುದುರೆಯನ್ನು ಕಟ್ಟಬೇಡವೆಂದು ಲವನನ್ನು ತಡೆಯುವಾಗ ಮೇಲಿನ ಮಾತು ಬಂದಿದೆ.

ಸ್ವಾರಸ್ಯ: ಕುದುರೆಯನ್ನು ಕಟ್ಟುವುದರಿಂದ ಶ್ರೀರಾಮನ ಕೋಪಕ್ಕೆ ತುತ್ತಾಗಬಹುದಾದ ಸಾಧ್ಯತೆಯ ಬಗ್ಗೆ ಮುನಿಕುಮಾರರಿಗೆ ಉಂಟಾದ ಭಯವನ್ನು, ಶ್ರೀರಾಮನ ಮೇಲಿನ ಭಕ್ತಿ ಗೌರವವನ್ನು ಪ್ರಸ್ತುತ ವಾಕ್ಯವು ವ್ಯಕ್ತಪಡಿಸುವುದು.

೪. '' ಜಾನಕಿಯ ಮಗನಿದಕೆ ಬೆದರುವನೆ ''

ಈ ಮೇಲಿನ ವಾಕ್ಯವನ್ನು ಲಕ್ಷ್ಮೀಶ ಕವಿಯು ಬರೆದ ದೇವುಡು ನರಸಿಂಹ ಶಾಸ್ತ್ರೀ ಮತ್ತು ಬಿ.ಶಿವಮೂರ್ತಿ ಶಾಸ್ತ್ರೀ ಇವರು ಸಂಪಾದಿಸಿದ ಜೈಮಿನಿ ಭಾರತ ದಿಂದ ಆರಿಸಲಾದ ವೀರಲವ ಎನ್ನುವ ಪದ್ಯಭಾಗದಿಂದ ಆಯ್ದುಕೊಳ್ಳಲಾಗಿದೆ.ಈ ಮಾತನ್ನು ಲವನು ಮುನಿಸುತರಿಗೆ ಹೇಳಿದ್ದಾನೆ.

ಸಂದರ್ಭ : ವಾಲ್ಮೀಕಿಯ ಆಶ್ರಮವನ್ನು ಶ್ರೀರಾಮನ ಅಶ್ವಮೇಧದ ಕುದುರೆಯು ಪ್ರವೇಶಿಸಿದಾಗ ಆಶ್ರಮದ ಕಾವಲಿಗಿದ್ದ ಲವನು ಅದನ್ನು ಕಟ್ಟಿಹಾಕಿದನು.ಆಗ ಅವನ ಜೊತೆಯಿದ್ದ ಮುನಿಕುಮಾರರು ಹೆದರಿ ಬೇಡ ಬೇಡ ಅರಸರ ಕುದುರೆಯನ್ನು ಬಿಟ್ಟುಬಿಡು ಇಲ್ಲವಾದರೆ ಅವರು ಬಂದು ನಮ್ಮನ್ನು ಹೊಡೆಯುವರು ಎಂದು ಲವನಿಗೆ ಹೇಳಿದರು.ಆಗ ಲವನು ನಗುತ್ತ ಬ್ರಾಹ್ಮಣರ ಮಕ್ಕಳು ಅಂಜುವರೆಂದರೆ ಜಾನಕಿಯ ಮಗನು ಇದಕ್ಕೆ ಹೆದರುವನೇ ?ಹೋಗಿ ನೀವು ಎಂದು ಶೌರ್ಯದಿಂದ ಬಿಲ್ಲನ್ನು ಹೆದೆಗೇರಿಸಿ ,ತೀಡಿ ಜೇಂಕಾರ ಮಾಡಿ ನಿಂತಿದ್ದನು ಎಂದು ಕವಿ ವರ್ಣಿಸಿದ್ದಾರೆ.

ಸ್ವಾರಸ್ಯ : ಜಾನಕಿಯ ಮಗನಾದ ತಾನು ಶ್ರೀರಾಮನಷ್ಟೇ ಸಮರ್ಥ, ರಾಮನಿಗೆ ಅಂಜಿ ಬಾಳುವವನಲ್ಲ ಎದುರಿಸಿಯೇ ಸಿದ್ಧ ಎಂಬ ಲವನ ಶೌರ್ಯ ಪ್ರಸ್ತುತ ವಾಕ್ಯದಲ್ಲಿ ಪ್ರಸ್ತಾಪಿತವಾಗಿದೆ.

ಹೊಂದಿಸಿ ಬರೆಯಿರಿ.

| ಅ. | ಬ |
|---|---|
| ೧. ದೇವನೂರು | ರಾಮ |
| ೨. ಕೌಸಲ್ಯೆ | ಲಕ್ಮೀಶ |
| ೩. ವರುಣ | ಅಶ್ವ |
| ೪. ವಾಲ್ಮೀಕಿ | ಅಬ್ಧಿಪ |
| ೫. ತುರಂಗ | ಮುನಿ |
| | ಮಳೆ |
| | ಶತ್ರುಘ್ನ |

೧.ದೇವನೂರು -ಲಕ್ಷ್ಮೀಶ ೨.ಕೌಸಲ್ಯೆ-ರಾಮ ೩.ವರುಣ -ಅಬ್ಧಿಪ ೪.ವಾಲ್ಮೀಕಿ -ಮುನಿ ೫.ಅಶ್ವ -ತುರಂಗ

೧. ವಿಗ್ರಹಿಸಿ ಸಮಾಸವನ್ನು ಹೆಸರಿಸಿ

ಸೊಲ್ಗೇಳಿ , ನಲ್ದುದುರೆ ,ಬಿಲ್ಗೊಂಡು , ಬಿಲ್ದಿರುವನೇರಿಸಿ, ಪೂದೋಟ

ಸೊಲ್ +ಕೇಳಿ =ಕ್ರಿಯಾ ಸಮಾಸ ನಲ್+ಕುದುರೆ =ಕರ್ಮಧಾರಯ ಸಮಾಸ ಬಿಲ್ಲನ್ನು +ಕೊಂಡು =ಕ್ರಿಯಾ ಸಮಾಸ

ಬಿಲ್ದಿರುವನು +ಏರಿಸಿ=ಕ್ರಿಯಾ ಸಮಾಸ ಪೂವಿನ (ಹೂವಿನ )+ತೋಟ =ತತ್ಪುರುಷ ಸಮಾಸ

೨. ತತ್ಸಮ ತದ್ಭವ ಬರೆಯಿರಿ.

ವೀರ ,ಯಜ್ಞ, ಬಂಜೆ

ವೀರ -ಬೀರ ಯಜ್ಞ-ಜನ್ನ ಬಂಜೆ -ವಂದ್ಯಾ

೩. ವಿಂಗಡಿಸಿ ಸಂಧಿಯ ಹೆಸರು ಬರೆಯಿರಿ.

ಚರಿಸುತದ್ವರದ ,

ನಿಜಾಶ್ರಮ, ಲೇಖನವನೋದಿ ,ತೆಗೆದುತ್ತರೀಯಮಂ ,

ಬೇಡಬೇಡರಸುಗಳ ,ನಿಂತಿರ್ದನು ,

ಚರಿಸುತ+ಅಧ್ವರದ =ಲೋಪ ಸಂಧಿ ನಿಜ +ಆಶ್ರಮ=ಸವರ್ಣದೀರ್ಘ ಸಂಧಿ

ತೆಗೆದು +ಉತ್ತರೀಯಮಂ =ಲೋಪಸಂಧಿ

ಬೇಡಬೇಡ+ಅರಸುಗಳ =ಲೋಪಸಂಧಿ ನಿಂತು+ಇರ್ದನು =ಲೋಪ ಸಂಧಿ

ಲೇಖನವನು +ಓದಿ =ಲೋಪ ಸಂಧಿ

ಪ್ರಸ್ತಾರ ಹಾಕಿ ಗಣ ವಿಭಾಗ ಮಾಡಿ ಛಂದಸ್ಸನ್ನು ಹೆಸರಿಸಿ ಲಕ್ಷಣ ಬರೆಯಿರಿ.

_ U _ | _ _ U|UUU U U| _ _U 5|5|5|5 =೨೦

ಊರ್ವಿಯೊಳ್| ಕೌಸಲ್ಯೆ ಪಡೆದ ಕುವ|ರಂ ರಾಮ

_ U _ | _ U _ | UU _ U|UUUUU 5|5|5|5| =೨೦

ನೋರ್ವನೇ| ವೀರನಾ| ತ ನ ಯಜ್ಞ ತುರಗಮಿದು

- U UU|_ U _| _ U _| UUU_ _U _ |UUU _ | _ 5|5|5|5|5|5+2(ಗುರು )

=೩೦+೨

ನಿರ್ವಹಿಸ|ಲಾರ್ಪರಾ|ರಾದೊಡಂ| ತಡೆಯಲೆಂ|ದಿರ್ದ ಲೇ|ಖನವನೋದಿ

ವಾರ್ಧಕ ಷಟ್ಪದಿ

ಲಕ್ಷಣ

ಆರು ಸಾಲುಗಳುಳ್ಳ ಪದ್ಯ . ಒಂದು ,ಎರಡು ,ನಾಲ್ಕುಮತ್ತು ಐದನೆಯ ಪಾದಗಳು ಮಾತ್ರಾ ಸಂಖ್ಯೆಯಲ್ಲಿ ಸಮಾನವಾಗಿದ್ದು ಐದು ಮಾತ್ರೆಗಳ ನಾಲ್ಕು ಗಣಗಳು ಪ್ರತಿ ಪಾದದಲ್ಲೂ ಇರುತ್ತವೆ. ಮೂರು ಮತ್ತು ಆರನೆಯ ಪಾದಗಳು ಸಮಾನವಾಗಿದ್ದು ಐದು ಮಾತ್ರ ಗಳ ಆರಾರು ಗಣಗಳು ಪ್ರತಿ ಪಾದದಲ್ಲೂ ಇದ್ದು ಕೊನೆಯಲ್ಲಿ ಒಂದು ಗುರು ಇರುತ್ತದೆ.

ಸಂಭವನೀಯ ಪ್ರಶ್ನೋತ್ತರಗಳು

ವ್ಯಾಕರಣಾಂಶಗಳು (ನಾಲ್ಕು ಆಯ್ಕೆಗಳಲ್ಲಿ ಸರಿಯಾದುದನ್ನು ಆರಿಸಿ ಬರೆಯಿರಿ)

೧. ಸೊಲ್ಗೇಳಿ ಪದದಲ್ಲಿರುವ ಸಂಧಿ ------- (ಆದೇಶ ಸಂಧಿ)

ಎ) ಗುಣ ಸಂಧಿ ಬಿ) ಆದೇಶ ಸಂಧಿ ಸಿ) ಜಶ್ತ್ವಸಂಧಿ ಡಿ) ಆಗಮ ಸಂಧಿ

೨. ನೆತ್ತಿಯೊಳ್ ಪದದಲ್ಲಿರುವ ವಿಭಕ್ತಿ ------ (ಸಪ್ತಮಿ)

ಎ) ಸಪ್ತಮಿ ಬಿ) ಪ್ರಥಮಾ ಸಿ) ತೃತೀಯಾ ಡಿ) ಚತುರ್ಥಿ

೩. ಲೇಖನವನೋದಿ ಪದದಲ್ಲಿರುವ ಸಮಾಸ ------ (ಕ್ರಿಯಾಸಮಾಸ)

ಎ) ಅಂಶಿ ಸಮಾಸ ಬಿ) ದ್ವಿಗು ಸಮಾಸ ಸಿ) ಕ್ರಿಯಾ ಸಮಾಸ ಡಿ) ತತ್ಪುರುಷ ಸಮಾಸ

೪. ಕದಳೀದ್ರುಮ ಇಲ್ಲಿರುವ ಸಮಾಸ - (ತತ್ಪುರುಷ ಸಮಾಸ)

ಎ) ತತ್ಪುರುಷ ಸಮಾಸ ಬಿ) ಕರ್ಮಧಾರಯ ಸಮಾಸ ಸಿ) ದ್ವಂದ್ವ ಸಮಾಸ ಡಿ) ಕ್ರಿಯಾ ಸಮಾಸ

೫. ಬೇಡ ಬೇಡ ಪದದಲ್ಲಿರುವ ವ್ಯಾಕರಣಾಂಶ ------ (ದ್ವಿರುಕ್ತಿ)

ಎ) ಅನುಕರಣಾವ್ಯಯ ಬಿ) ದ್ವಿರುಕ್ತಿ ಸಿ) ಜೋಡುನುಡಿ ಡಿ) ನುಡಿಗಟ್ಟು

೬. ಪೂದೋಟ ಇಲ್ಲಿರುವ ಸಂಧಿ ------ (ಆದೇಶಸಂಧಿ)

ಎ) ಆದೇಶ ಸಂಧಿ ಬಿ) ಆಗಮ ಸಂಧಿ ಸಿ) ಲೋಪ ಸಂಧಿ ಡಿ) ಗುಣ ಸಂಧಿ

೭. ಮುನಿಸುತಈ ಪದದಲ್ಲಿರುವ ಸಮಾಸ ----- (ತತ್ಪುರುಷ ಸಮಾಸ)

ಎ) ಕ್ರಿಯಾ ಸಮಾಸ ಬಿ) ತತ್ಪುರುಷಸಮಾಸ ಸಿ) ಗಮಕಸಮಾಸ ಡಿ) ದ್ವಂದ್ವ ಸಮಾಸ

೮. ಪಸುರು ಪದದ ಹೊಸಗನ್ನಡ ರೂಪವಿದು----- (ಹಸುರು)

ಎ) ಹಸುರು ಬಿ) ಹೆಸರು ಸಿ) ಉಸುರು ಡಿ) ಇರಿಸು

೯. ನೃಪರಂಜಿ ಪದದಲ್ಲಿರುವ ಸಮಾಸ ----- (ಕ್ರಿಯಾಸಮಾಸ)

ಎ) ಗಮಕ ಸಮಾಸ ಬಿ) ಅಂಶಿ ಸಿ) ಕ್ರಿಯಾ ಸಮಾಸ ಡಿ) ತತ್ಪುರುಷ ಸಮಾಸ

೧೦. ತೋಟಗಾವಲು ಪದದಲ್ಲಿರುವ ಸಮಾಸ ------- (ಆದೇಶ ಸಂಧಿ)

ಎ) ಅಂಶಿಸಮಾಸ ಬಿ) ತತ್ಪುರುಷ ಸಮಾಸ ಸಿ) ಕ್ರಿಯಾ ಸಮಾಸ ಡಿ) ಗಮಕ ಸಮಾಸ

೧೧. ಲೋಕದಿಂ ಪದದಲ್ಲಿರುವ ವಿಭಕ್ತಿ ------- (ತೃತೀಯಾ)

ಎ) ತೃತೀಯಾ ಬಿ) ಪಂಚಮಿ ಸಿ) ದ್ವಿತೀಯಾ ಡಿ) ಷಷ್ಠಿ

೧೨. ಲೋಕ ಪದದ ತದ್ಭವ ರೂಪ ---- (ಲೋಗ)

ಎ) ಜಗ ಬಿ) ಲೋಗ ಸಿ) ನಾಕ ಡಿ) ವಿಶ್ವ

೧೩. ಇಳೆ ಪದದ ತದ್ಭವ ರೂಪ------ (ಇಳಾ)

ಎ) ಭೂಮಿ ಬಿ) ಬುವಿ ಸಿ) ಇಳಾ ಡಿ) ಇಳಿಸು

೧೪. ನಲ್ಗುದುರೆ ಪದದಲ್ಲಿರುವ ಸಂದಿ ------ (ಆದೇಶ ಸಂಧಿ)

ಎ) ಆದೇಶ ಸಂಧಿ ಬಿ) ಆಗಮ ಸಂಧಿ ಬಿ) ಲೋಪ ಸಂಧಿ ಡಿ) ಜಶ್ತ್ವಸಂಧಿ

ಒಂದು ವಾಕ್ಯದಲ್ಲಿ ಉತ್ತರಿಸಿ

೧.ಶ್ರೀರಾಮ ಯಜ್ಞಾಶ್ವವು ಯಾರ ಆಶ್ರಮದ ಬಳಿ ಬಂದಿತು?

ಶ್ರೀರಾಮನ ಯಜ್ಞಾಶ್ವವು ವಾಲ್ಮೀಕಿ ಆಶ್ರಮದ ಬಳಿ ಬಂದಿತು.

೨. ಯಜ್ಞಾಶ್ವವು ವಾಲ್ಮೀಕಿಯ ಆಶ್ರಮವನ್ನು ಪ್ರವೇಶಿಸಲು ಕಾರಣವೇನು

ಶ್ರೀರಾಮನ ಅಶ್ವಮೇಧದ ಕುದುರೆಯು ದೇಶದೇಶಗಳನ್ನು ಸುತ್ತುತ್ತ ಬಂದು ವಾಲ್ಮೀಕಿಯ ಆಶ್ರಮದ ಸಮೀಪ ಬಂದಾಗ ಅಲ್ಲಿನ ಉಪವನದಲ್ಲಿದ್ದ ಹುಲ್ಲಿನ ಹಸುರಿಗೆ ಮನಸೋತು ಅದರೊಳಗೆ ಪ್ರವೇಶಿಸಿತು.

೩. ವಾಲ್ಮೀಕಿ ಉಪವನದ ರಕ್ಷಣೆ ಯಾರಿಗೆ ವಹಿಸಿದ್ದರು ?

ವಾಲ್ಮೀಕಿ ಮಹರ್ಷಿಗಳು ವರುಣನಲ್ಲಿಗೆ ಹೋಗುವಾಗ ಉಪವನದ ರಕ್ಷಣೆಯ ಜವಾಬ್ದಾರಿಯನ್ನು ಲವನಿಗೆ ವಹಿಸಿದ್ದರು.

೪. ಲವನು ಉರಿದೇಳಲು ಕಾರಣವೇನು ?

ಕುದುರೆಯ ಹಣೆಪಟ್ಟಿಯಲ್ಲಿ ಈ ಭೂಮಂಡಲದಲ್ಲಿ ಕೌಸಲ್ಯೆಯ ಮಗನಾದ ಶ್ರೀರಾಮನೊಬ್ಬನೇ ವೀರನು ಎಂದು ಬರೆದಿದ್ದನ್ನು ನೋಡಿ ಲವನು ಉರಿದೆದ್ದನು .

೫. ಲವನು ಏನೆಂದು ಪ್ರತಿಜ್ಞೆ ಮಾಡಿದನು ?

ಶ್ರೀರಾಮನ ಗರ್ವವನ್ನು ಅಡಗಿಸಿಯೇ ತೀರುವೆನೆಂದು ಲವನು ಪ್ರತಿಜ್ಞೆ ಮಾಡಿದನು .

೬.ಕುದುರೆಯನ್ನು ಲವನು ಎಲ್ಲಿ ಕಟ್ಟಿದನು ?

ಲವನು ತನ್ನ ಉತ್ತರೀಯವನ್ನೇ ಹಗ್ಗವಾಗಿ ಹೊಸೆದು ಅದನ್ನು ಕುದುರೆಯ ಕೊರಳಿಗೆ ಬಿಗಿದು ಬಾಳೆಯ ಮರಕ್ಕೆ ಕುದುರೆಯನ್ನು ಕಟ್ಟಿ ಹಾಕಿದನು.

ಎರಡು ಮೂರು ವಾಕ್ಯಗಳಲ್ಲಿ ಉತ್ತರಿಸಿ.

೧. ಉಪವನದಲ್ಲಿ ಯಜ್ಞಾಶ್ವವನ್ನು ನೋಡಿದ ಲವನು ಏನೆಂದು ಆಲೋಚಿಸಿದನು ?

ವರುಣನು ಕರೆದಿದ್ದರಿಂದ ಅಲ್ಲಿಗೆ ಹೋಗುವಾಗ ಮಹರ್ಷಿಗಳು ಲವನಿಗೆ ಉಪವನದ ರಕ್ಷಣೆಯ ಜವಾಬ್ದಾರಿ ವಹಿಸಿದ್ದರು.ಆ ಸಂದರ್ಭದಲ್ಲಿ ಶ್ರೀರಾಮನ ಯಜ್ಞಾಶ್ವದ ಕುದುರೆಯು ಉಪವನದ ಹಸುರಿಗೆ ಮನಸೋತು ಒಳಬಂದು ಅಲ್ಲಿ ಹಾನಿಯನ್ನು ಉಂಟು ಮಾಡಿತು .ವರುಣನ ಲೋಕದಿಂದ ಮರಳಿದ ಮಹರ್ಷಿಗಳು ಇದನ್ನು ನೋಡಿ ತನ್ನ ಮೇಲೆ ಮುನಿಸಿಕೊಳ್ಳದಿರುವರೇ ಎಂದು ಲವನು ಉಪವನದಲ್ಲಿ ಯಜ್ಞಾಶವವನ್ನು ನೋಡಿ ಆಲೋಚಿಸಿದನು.

೨. ಯಜ್ಞಾಶ್ವದ ಹಣೆಪಟ್ಟಿಯಲ್ಲಿನ ಬರಹವನ್ನು ನೋಡಿ ಲವನ ಮನದಲ್ಲಿ ಯಾವ ಆಲೋಚನೆ ಮೂಡಿತು ?

ಈ ಭೂಮಂಡಲದಲ್ಲಿ ಕೌಸಲ್ಯೆಪಡೆದ ಅವಳ ಮಗ ಶ್ರೀರಾಮನೊಬ್ಬನೇ ವೀರನು ಅವನ ಯಜ್ಞಾಶ್ವವಿದು .ಇದನ್ನು ಧರಿಸುವ ವೀರರು ಯಾರಾದರೂ ಇದ್ದರೆ ಇದನ್ನು ಕಟ್ಟಬಹುದು ಎಂಬ ಕುದುರೆಯ ಹಣೆಪಟ್ಟಿಯ ಮೇಲಿದ್ದ ಬರಹವನ್ನು ನೋಡಿ ,ಶ್ರೀರಾಮನೊಬ್ಬನೇ ವೀರನು ಎಂದು ಒಪ್ಪಿಕೊಂಡರೆ ತನ್ನಲ್ಲಿ ತೋಳ್ಬಲವಿದ್ದೂ ಏನು ಪ್ರಯೋಜನ ?ತನ್ನ ತಾಯಿಯನ್ನು ಎಲ್ಲರೂ ಬಂಜೆಯೆಂದು ಕರೆಯದಿರುವರೇ ?ಶ್ರೀರಾಮನ ಗರ್ವವನ್ನು ಮುರಿಯಲೇ ಬೇಕು ಎಂದು ಆಲೋಚಿಸಿದನು ?

ಪದ್ಯದ ಹೊಸಗನ್ನಡ ರೂಪ

ರಾವಣನನ್ನು ಸಂಹರಿಸಿದ ಶ್ರೀರಾಮನು ಸೀತಾ ಲಕ್ಷ್ಮಣ ಸಮೇತರಾಗಿ ಅಯೋಧ್ಯೆಗೆ ಮರಳಿ ರಾಜ್ಯಭಾರ ಮಾಡುತ್ತಿದ್ದ ಸಂದರ್ಭದಲ್ಲಿ ಸಾಮಾನ್ಯ ಪ್ರಜೆಯೊಬ್ಬನು ಸೀತೆಯ ಕುರಿತು ಕ್ಷುಲ್ಲಕವಾಗಿ ಮಾತನಾಡುವನು.ಪ್ರಜೆಗಳ ಅಭಿಪ್ರಾಯವೇ ಸರ್ವಸ್ವವೆಂದು ತಿಳಿದ ರಾಮನು ತುಂಬು ಗರ್ಭಿಣಿಯಾದ ಸೀತೆಯನ್ನು ಕಾಡಿಗೆ ಕಳಿಸುವ ನಿರ್ಧಾರ ಮಾಡುವನು.ಅಣ್ಣನ ಆಣತಿಯಂತೆ ಲಕ್ಷ್ಮಣನು ಸೀತೆಯನ್ನು ಕಾಡಿನಲ್ಲಿ ಏಕಾಂಗಿಯಾಗಿ ಬಿಟ್ಟುಬಂದಾಗ ,ಅಲ್ಲಿ ಅವಳ ರೋದನವನ್ನು ಕೇಳಿ ಆಗಮಿಸಿದ ವಾಲ್ಮೀಕಿ ಮಹರ್ಷಿಗಳು ಸೀತೆಯನ್ನು ತಮ್ಮ ಆಶ್ರಮಕ್ಕೆ ಕರೆದೊಯ್ಯುತ್ತಾರೆ.ಆಶ್ರಮದಲ್ಲಿ ಅವಳು ಅವಳಿ ಮಕ್ಕಳಿಗೆ ಜನ್ಮನೀಡುತ್ತಾಳೆ.ಅವರಿಗೆ ಲವ ಕುಶರೆಂದು ನಾಮಕರಣ ಮಾಡಿದ ಮಹರ್ಷಿಗಳು ಅವರಿಬ್ಬರನ್ನು ಸಕಲ ವಿದ್ಯಾಪಾರಂಗತರಾಗಿ ಮಾಡುತ್ತಾರೆ. ರಾವಣನ ವಧೆಯಿಂದ ಉಂಟಾದ ಬ್ರಹ್ಮಹತ್ಯಾದೋಷ ಬಂದಿರುವುದೆಂದು ಹೇಳಿದ ಮಹರ್ಷಿಗಳ ಆದೇಶದಂತೆ ಶ್ರೀರಾಮನು ಅಶ್ವಮೇಧ ಯಾಗವನ್ನು ಕೈಗೊಳ್ಳುತ್ತಾನೆ.ಶತ್ರುಘ್ನನ ಬೆಂಗಾವಲಿನೊಂದಿಗೆ ದೇಶ ದೇಶಗಳನ್ನು ಸುತ್ತಿದ ಅಶ್ವಮೇಧದ ಕುದುರೆಯು ವಾಲ್ಮೀಕಿ ಆಶ್ರಮದ ಆವರಣ ಪ್ರವೇಶಿಸಿದಾಗ ಶ್ರೀರಾಮನೇ ತನ್ನ ತಂದೆಯೆಂದು ತಿಳಿಯದ ಲವನು ಕುದುರೆಯನ್ನು ಕಟ್ಟುತ್ತಾನೆ.ಅದು ಪ್ರಸ್ತುತ ಪದ್ಯದಲ್ಲಿ ವ್ಯಕ್ತಗೊಂಡಿದೆ .

ಬಲ್ಲಿಯ್ದು ನೃಪರಂಜಿ ತಡೆಯದೆ ರಘೂದ್ವಹನ |
ಸೊಲ್ಗೇಳಿ ನಮಿಸಲಿಳೆಯೊಳ್ ಚರಿಸುತಧ್ವರದ |
ನಲ್ಲುದುರೆ ಬಂದು ವಾಲ್ಮೀಕಿಯ ನಿಜಾಶ್ರಮದ ವಿನಿಯೋಗದುಪವನದೊಳು||
ಪುಲ್ಗಳಪಸುರ್ಗಳಸಿ ಮೊಕ್ಕೊಡಾ ತೋಟಗಾ|
ವಲ್ಗೆತನ್ನೊಡನಾಡಿಗಳ ಕೂಡಿ ಲೀಲೆ ಮಿಗೆ |
ಬಿಲ್ಗೊಂಡು ನಡೆತಂದವಂ ಕಂಡನರ್ಚಿತ ಸುವಾಜಿಯಂ ವೀರಲವನು
ಬಲಶಾಲಿಗಳಾದ ರಾಜರೂ ಸಹ ಶ್ರೀರಾಮನ ಶ್ರೇಷ್ಠತೆಯ ವಿಚಾರವನ್ನು ಕೇಳಿಯೆ ಕುದುರೆಯನ್ನು

ಕಟ್ಟಲು ಹೆದರಿ ,ಅದಕ್ಕೆ ನಮಸ್ಕರಿಸಿ ಅದನ್ನು ತಡೆಯದೇ ಇರಲು ,ಶ್ರೀರಾಮನ ಯಜ್ಞಾಶ್ವದ ಪ್ರೀತಿಯ ಕುದುರೆಯು ಇಡೀ ಭೂಮಂಡಲದಲ್ಲಿ ಚಲಿಸುತ್ತ, ವಾಲ್ಮೀಕಿಯ ತಪೋವನದ ಉಪವನದಲ್ಲಿ ಬೆಳೆದು ನಿಂತಿದ್ದ ಹುಲ್ಲಿನ ಹಸುರಿಗೆ ಮನಸೋತು ಆಕರ್ಷಣೆಗೆ ಒಳಗಾಗಿ ಅದನ್ನು ಪ್ರವೇಶಿಸಿತು. ಅಲ್ಲಿ ತನ್ನ ಸ್ನೇಹಿತರೊಡನೆ (ಒಡನಾಡಿಗಳೊಡನೆ) ಆಟವಾಡಿ ಮುಗಿಸಿ ಬಿಲ್ಲಿನ ಸಮೇತನಾಗಿ ಬರುತ್ತಿದ್ದ ವೀರ ಲವನು ಆಶ್ರಮವನ್ನು ಪ್ರವೇಶಿಸಿದ್ದ ಪೂಜಿತ(ಪೂಜಿಸಲ್ಪಟ್ಟಿದ್ದ)ಸುಂದರ ಕುದುರೆಯನ್ನು ಕಂಡನು

ಎತ್ತಣ ತುರಂಗಮಿದು ಪೊಕ್ಕುಪೂದೋಟಮಂ|
ತೊತ್ತಳದುಳಿದುದು ವಾಲ್ಮೀಕಿ ಮುನಿನಾಥನೇ |
ಪೊತ್ತುಮಾರ್ಯೆವುದೆಂದೆನಗೆ ನೇಮಿಸಿ ಪೋದನಬ್ಧಿಪಂ ಕರೆಸಲಾಗಿ ||
ಮತ್ತೆ ವರುಣನ ಲೋಕದಿಂ ಬಂದು ಮುಳಿದಪನೆ
ನುತ್ತ ಹಯದೆಡೆಗೆ ನಡೆತಂದು ನೋಡಲ್ಕದರ |
ನೆತ್ತಿಯೊಳ್ ಮೆರವ ಪಟ್ಟದ ಲಿಖಿತಮಂ ಕಂಡು ಲವನೋದಿಕೊಳುತಿರ್ದನು
ಉಪವನದೊಳಕ್ಕೆನುಗ್ಗಿದ ಕುದುರೆಯನ್ನು ನೋಡಿದ ಲವನು ಎಲ್ಲಿಯ ಕುದುರೆಯಿದು ? ಉಪವನಕ್ಕೆನುಗ್ಗಿ ಹೂದೋಟವನ್ನು ಹಾಳು ಮಾಡಿದೆಯಲ್ಲ ! ವಾಲ್ಮೀಕಿ ಮುನಿಶ್ರೇಷ್ಠರು ವರುಣನು ಕರೆದಿದ್ದರಿಂದ ಅಲ್ಲಿಗೆ ಹೋಗುವಾಗ ನನಗೆ ಈ ಉಪವನವನ್ನು ಕಾಯಲು ಹೇಳಿ ಹೋಗಿದ್ದರು. ಮತ್ತೆ ಅವರು ವರುಣನ ಲೋಕದಿಂದ ಹಿಂದಿರುಗಿ ಬಂದಾಗ ಈ ಹೂದೋಟವು ಹಾಳಾದುದನ್ನು ನೋಡಿ ಮುನಿಸಿಕೊಳ್ಳುವರು ಎಂದು ಯೋಚಿಸುತ್ತ ಕುದುರೆಯೆಡೆಗೆ ಬಂದನು. ಆಗ ಲವನು ಅದರ ಹಣೆಯ ಮೇಲೆ ಬರಹದ ಪಟ್ಟಿಯು ಇದ್ದುದನ್ನು ನೋಡಿ ಅದನ್ನು ಓದತೊಡಗಿದನು.

ಊರ್ವಿಯೊಳ್ ಕೌಸಲ್ಯೆಪಡೆದ ಕುವರಂ ರಾಮ |
ನೋರ್ವನೇ ವೀರನಾತನ ಯಜ್ಞತುರಗಮಿದು |
ನಿರ್ವಹಿಸಲಾರ್ಪರಾರಾದೊಡಂ ತಡೆಯಲೆಂದಿರ್ದ ಲೇಖನವನೋದಿ ||
ಗರ್ವಮಂ ಬಿಡಿಸದಿರ್ದೊಡೆ ತನ್ನ ಮಾತೆಯಂ|
ಸರ್ವಜನಮುಂ ಬಂಜೆಯೆನ್ನದಿರ್ದಪುದೆ ತನ|
ಗುರ್ವತೋಳ್ಗಳಿವೇತಕೆಂದು ಸಲೆ ವಾಸಿಯಂ ತೊಟ್ಟು ಲವನುರಿದೆದ್ದನು .
ಈ ಭೂಮಿಯಲ್ಲಿ ಕೌಸಲ್ಯೆಯು ಪಡೆದ ಮಗನಾದ ಶ್ರೀರಾಮನೊಬ್ಬನೇ ವೀರ.ಅವನ ಯಜ್ಞ ತುರಗವಿದು.ಇದನ್ನು ಧರಿಸುವ ಸಮರ್ಥರು ಯಾರಾದರೂ ಇದ್ದರೆ ಈ ಕುದುರೆಯನ್ನು ತಡೆಯಿರಿ ಎಂದಿದ್ದನ್ನು ನೋಡಿ, ಓಹೋ ! ಅವನ (ಶ್ರೀರಾಮನ ) ಗರ್ವವನ್ನು ಮುರಿಯದಿದ್ದರೆ ನನ್ನ

ತಾಯಿಯನ್ನು ಎಲ್ಲರೂ ಬಂಜೆಯೆಂದು ಕರೆಯದಿರುವರೇ ? ಅಲ್ಲದೇ ನನ್ನ ತೋಳುಗಳಿದ್ದೂ ಏನು ಪ್ರಯೋಜನ ? ಎಂದರೆ ರಾಮನ ಗರ್ವವನ್ನು ಮುರಿಯುತ್ತೇನೆ ಎಂದು ಪ್ರತಿಜ್ಞೆಯನ್ನು ಮಾಡಿ ಲವನು ಉರಿದೆದ್ದನು.

ತೆಗೆದುತ್ತರೀಯಮಂ ಮುರಿದು ಕುದುರೆಯ ಗಳಕೆ |
ಬಿಗಿದು ಕದಳೀದ್ರುಮಕೆ ಕಟ್ಟಲ್ಕೆ ಮುನಿಸುತರ್ |
ಮಿಗೆ ನಡುಗಿ ಬೇಡಬೇಡ ರಸುಗಳ ವಾಜಿಯಂ ಬಿಡು ಬಡಿವರೆಮ್ಮನೆನಲು ||
ನಗುತೆ ಪಾರ್ವರ ಮಕ್ಕಳಂಜಿದೊಡೆ ಜಾನಕಿಯ |
ಮಗನಿದಕೆ ಬೆದರುವನೆ ಪೋಗಿ ನೀವೆಂದು ಲವ |
ನಗಡುತನದಿಂದೆ ಬಿಲ್ದಿರುವನೇರಿಸಿ ತೀಡಿ ಜೇಗೈದು ನಿಂತಿರ್ದನು

ಲವನು ತನ್ನ ಉತ್ತರೀಯವನ್ನು ಹೊಸೆದು, ಅದನ್ನು ಕುದುರೆಯ ಕೊರಳಿಗೆ ಬಿಗಿದು ಬಾಳೆಯ ಮರಕ್ಕೆ ಕಟ್ಟಲು ಮುನಿಸುತರು ಅತಿಯಾಗಿ ನಡುಗಿ ,ಬೇಡ ಬೇಡ ಅರಸರ ಕುದುರೆಯನ್ನು ಬಿಟ್ಟುಬಿಡು,ಇಲ್ಲವಾದರೆ ನಮ್ಮನ್ನು ಹೊಡೆಯುವರು ಎಂದರು ಅದಕ್ಕೆ ಲವನು ನಗುತ್ತ ಬ್ರಾಹ್ಮಣರ ಮಕ್ಕಳು ಅಂಜುವರೆಂದರೆ ಜಾನಕಿಯ ಮಗನು ಇದಕ್ಕೆ ಹೆದರುವನೇ ? ಹೋಗಿ ನೀವು ಎಂದು ಶೌರ್ಯದಿಂದ ಬಿಲ್ಲನ್ನು ಹೆದೆಗೇರಿಸಿ ,ತೀಡಿ ಜೇಂಕಾರ ಮಾಡಿ ನಿಂತಿದ್ದನು .

ಕೆಳಗಿನ ಪ್ರಶ್ನೆಗಳಿಗೆ ನಾಲ್ಕು ಆಯ್ಕೆಗಳನ್ನು ನೀಡಲಾಗಿದೆ.ಅವುಗಳಲ್ಲಿ ಸರಿಯಾದ ಉತ್ತರವನ್ನು ಆರಿಸಿ ಬರೆಯಿರಿ.

೧. 'ಸೊಲ್ಗೇಳಿ' ಪದವು ಈ ಸಮಾಸಕ್ಕೆ ಉದಾಹರಣೆಯಾಗಿದೆ
ಎ)ಗಮಕ ಬಿ)ಕ್ರಿಯಾ ಸಿ)ತತ್ಪುರುಷ ಡಿ)ದ್ವಿಗು
೨.'ನಲ್ಗುದುರೆ 'ಪದವು ಈ ಸಂಧಿಗೆ ಉದಾಹರಣೆಯಾಗಿದೆ
ಎ) ಆದೇಶ ಬಿ)ಜಶ್ತ್ವ ಡಿ) ಗುಣ ಡಿ)ಆಗಮ
೩.'ಬಿಲ್ಗೊಂಡು' ಪದದಲ್ಲಿರುವ ಸಮಾಸವಿದು
ಎ) ಅಂಶಿ ಬಿ) ಕ್ರಿಯಾ ಸಿ)ತತ್ಪುರುಷ ಡಿ)ಗಮಕ
೪.'ತೋಟಗಾವಲು' ಪದದಲ್ಲಿರುವ ಸಂಧಿಯಿದು
ಎ) ಆಗಮ ಬಿ)ಆದೇಶ ಸಿ)ಜಶ್ತ್ವ ಡಿ) ಗುಣ
೫.'ಪೂದೋಟ' ಪದವು ಈ ಸಮಾಸದ ಉದಾಹರಣೆಯಾಗಿದೆ
ಎ)ತತ್ಪುರುಷ ಬಿ)ಕ್ರಿಯಾ ಸಿ)ಕರ್ಮಧಾರಯ ಡಿ)ಗಮಕ
೬.'ಇಳೆಯೊಳ್' ಪದದಲ್ಲಿರುವ ವಿಭಕ್ತಿಯಿದು
ಎ)ಪ್ರಥಮಾ ಬಿ)ಸಪ್ತಮಿ ಸಿ)ದ್ವಿತೀಯಾ ಡಿ) ಪಂಚಮಿ

೭.'ಅಬ್ಧಿಪಂ' ಪದದಲ್ಲಿರುವ ವಿಭಕ್ತಿ --

ಎ) ಪ್ರಥಮಾ ಬಿ)ದ್ವಿತೀಯಾ ಸಿ)ತೃತೀಯಾ ಡಿ)ದ್ವಿತೀಯಾ

೮.ಬೇಡಬೇಡ ಪದವು ಈ ವ್ಯಾಕರಣಾಂಶ ಉದಾಹರಣೆಯಾಗಿದೆ.

ಎ) ನುಡಿಗಟ್ಟು ಬಿ)ದ್ವಿರುಕ್ತಿ ಸಿ)ಜೋಡುನುಡಿ ಡಿ)ಅನುಕರಣಾವ್ಯಯ

ಉತ್ತರಗಳು

೧. ಬಿ)ಕ್ರಿಯಾ ಸಿ)ಎ.ಆದೇಶ ೩.ಬಿ)ಕ್ರಿಯಾ ೪. ಬಿ)ಆದೇಶ ೫. ಎ)ತತ್ಪುರುಷ ೬. ಬಿ)ಸಪ್ತಮಿ

೭. ಎ)ಪ್ರಥಮಾ ೮.ಬಿ)ದ್ವಿರುಕ್ತಿ

ಮೊದಲಿನ ಎರಡು ಪದಗಳಿಗೆ ಇರುವ ಸಂಬಂಧದಂತೆ ಮೂರನೆಯ ಪದಕ್ಕೆಸರಿಸಂಬಂಧ ಹೊಂದುವ ಪದ ಬರೆಯಿರಿ.

೧.ಲೋಕದಿಂ: ತೃತೀಯಾ : : ಪೂದೋಟಮಂ : ----

೨.ಕುವರಂ : ಪ್ರಥಮಾ : : ಉತ್ತರೀಯಮಂ

೩.ಮುನಿಸುತರು : ತತ್ಪುರುಷಸಮಾಸ : : ಬಿಲ್ಗೊಂಡು : _____

೪.ಸೋಲ್ಗೇಳಿ : ಕ್ರಿಯಾಸಮಾಸ: : ಕದಳೀದ್ರುಮ : ---

೫.ವರುಣನ : ಷಷ್ಠಿ ವಿಭಕ್ತಿ : : ಮಾತೆಯಂ : ---

೬.ಬಿಲ್ದಿರುವನೇರಿಸಿ : ಕ್ರಿಯಾ ಸಮಾಸ : ನಲ್ಗುದುರೆ : _____

೭.ವೀರ : ಬೀರ : : ಯಜ್ಞ : ____

೮.ಬಂಜೆ : ವಂಧ್ಯಾ : : ಲೋಗ : __

೯.ಲೇಖವನೋದಿ : ಲೋಪಸಂಧಿ : : ನಿಜಾಶ್ರಮ : ___

೧೦.ನಿಂತಿರ್ದನು : ಲೋಪಸಂಧಿ : : ಪೂದೋಟ : ----

೧೧.ಬಿಲ್ಗೊಂಡು : ಆದೇಶ ಸಂಧಿ : : ಬೇಡಬೇಡರಸುಗಳ : ___

೧೨.ವಾಜಿ : ಕುದುರೆ : : ಚರಿಸು : ___

೧೩.ಗಳ : ಕೊರಳು : : ಕದಳಿ : ___

೧೪.ಮುಳಿ : ಕೋಪ : : ಅಗಡು : ___

೧೫.ತುರಂಗ : ಕುದುರೆ : : ಅಬ್ಧಿಪ : ----

ಉತ್ತರಗಳು

೧.ದ್ವಿತೀಯಾ ೨.ದ್ವಿತೀಯಾ ೩.ಕ್ರಿಯಾ ಸಮಾಸ ೪.ತತ್ಪುರುಷ ಸಮಾಸ ೫. ದ್ವಿತೀಯಾ

೬.ಕರ್ಮಧಾರಯ ೭.ಜನ್ನ ೮. ಲೋಕ ೯. ಸವರ್ಣದೀರ್ಘ ೧೦. ಆದೇಶ ಸಂಧಿ ೧೧. ಲೋಪ

## ಸಂಧಿ೧೨.ಸಂಚರಿಸು ೧೩. ಬಾಳಿ೧೪. ಶೌರ್ಯ ೧೫. ವರುಣ

ಪದ್ಯಪಾಠ -ಸಾರ್ಥಕತೆ

ಸಂಕಟಕೆ ಗಡಿ ಇಲ್ಲ

-ದು.ಸರಸ್ವತಿ

ಪರಿಚಯ : ದು.ಸರಸ್ವತಿ ಬಳ್ಳಾರಿಯವರಾಗಿದ್ದು ಪ್ರಸ್ತುತ ಬೆಂಗಳೂರಿನಲ್ಲಿ ನೆಲೆಸಿದ್ದಾರೆ . ಇವರು ಜನಿಸಿದ್ದು ೧೯೬೩ ನಲ್ಲಿ. ಹೆಣೆದರೆ ಜೇಡನಂತೆ ಮತ್ತು ಜೀವಸಂಪಿಗೆ ಇವರ ಕವನ ಸಂಕಲನಗಳು . ಈಗೇನ್ಮಾಡೀರಿ ? ಎಂಬುದು ಇವರು ಬರೆದ ಅನುಭವ ಕಥನ.

ಭಾವಾರ್ಥ

ಪ್ರಪಂಚದಲ್ಲಿ ಎಲ್ಲಾ ಪ್ರಾಣಿಗಳಿಗೂ ಬದುಕುವ ಹಕ್ಕಿದೆ .ನಿಸರ್ಗ ಸಮತೋಲನದಲ್ಲಿ ಎಲ್ಲ ಸ್ತರದ ಜೀವಿಗಳೂ ಅನಿವಾರ್ಯ.ಆದರೆ ಮಾನವನು ತನ್ನ ಬುದ್ಧಿಶಕ್ತಿಯಿಂದ ಇತರ ಎಲ್ಲ ಜೀವಿಗಳ ಮೇಲೆ ಹಿಡಿತ ಸಾಧಿಸಿದ್ದಾನೆ.ತನ್ನಲ್ಲಿರುವ ಅಪ್ರತಿಮ ಮೇಧಾಶಕ್ತಿ ಮತ್ತು ವಾಕ್ಚಾತುರ್ಯದಿಂದ ಇತರ ಎಲ್ಲ ಜೀವಿಗಳಿಗಿಂತ ಮೇಲಿನವನೆನಿಸಿಕೊಂಡು ಕೊನೆಗೆ ತನ್ನ ಜೊತೆಗೇ ಜೀವಿಸುತ್ತಿರುವ ಜೀವಿಗಳ ಮೇಲೂ ತನ್ನ ಸರ್ವಾಧಿಕಾರದ ಮನೋಭಾವನೆಯನ್ನು ವ್ಯಕ್ತಪಡಿಸುತ್ತ ಭೂಮಿಯ ಮೇಲಿನ ಹಕ್ಕು ಕೇವಲ ತನ್ನದೆಂದು ಭಾವಿಸುತ್ತ ಅಧಿಕಾರದ ಅಹಮ್ಮಿನಿಂದ ಬೀಗುತ್ತಿದ್ದಾನೆ.

ಮಾನವನ ಅಧಿಕಾರದ ಮೋಹ, ಗಡಿವಿಸ್ತರಣೆಯ ದಾಹ ಇಂದು ನಿನ್ನೆಯದಲ್ಲ.ಕ್ರಿಸ್ತಪೂರ್ವ ಕಾಲದಿಂದ ಇಲ್ಲಿಯವರೆಗೂ ಜಗತ್ತನ್ನು ಗೆಲ್ಲುವ ಅಪೇಕ್ಷೆ , ಗಡಿವಿಸ್ತರಣೆಯ ದಾಹ, ಜನಾಂಗದ ಶ್ರೇಷ್ಠತೆಯ ಹಂಬಲ ಸರ್ವಾಧಿಕಾರಿ ಧೋರಣೆಗಳಿಂದ ಯುದ್ಧ ಸಂಭವಿಸಿ ಎಷ್ಟೋಜನರ ಸಾವುನೋವುಗಳಿಗೆ ಕಾರಣವಾಗಿದ್ದೇ ಅಲ್ಲದೆ , ಕೊನೆಯಲ್ಲಿ ಸ್ವತಃ ಯುದ್ಧವೇ ಯುದ್ಧಕ್ಕೆ ಕಾರಣರಾದವರನ್ನು ದಹಿಸಿತೆಂಬುದು ಇಂದು ಇತಿಹಾಸ .

ಸಾಮ್ರಾಟರು ತಮ್ಮ ಸಾಮ್ರಾಜ್ಯದ ತಮ್ಮ ಗಡಿಯನ್ನು ನಿರ್ಧರಿಸಿ ಅದನ್ನು ಇನ್ನೂ ವಿಸ್ತರಿಸಬೇಕೆಂಬ ಮಹತ್ವಾಕಾಂಕ್ಷೆಯಿಂದ ನೆರೆಯ ರಾಜ್ಯಗಳ ಮೇಲೆ ಆಕ್ರಮಣ ಮಾಡಿ ಆ ರಾಜ್ಯಗಳೊಂದಿಗೆ ತಮ್ಮ ಸಾಮ್ರಾಜ್ಯದ ಸಾವುನೋವಿಗೆ ಕಾರಣರಾಗಿದ್ದರೆಂಬುದು ಇತಿಹಾಸದ ಅಧ್ಯಯನದಿಂದ ತಿಳಿದು ಬರುತ್ತದೆ .

ಮನುಷ್ಯನ ಗಡಿವಿಸ್ತರಣೆಯ ದಾಹದಿಂದಾಗಿ ಇತಿಹಾಸದಲ್ಲಿ ಎಷ್ಟೋ ಯುದ್ಧಗಳು ಸಂಭವಿಸಿವೆ .ಯುದ್ಧದಲ್ಲಿ ಭಾಗವಹಿಸಿದ ಎರಡೂ ಪಕ್ಷಗಳ ಜನರಿಗೂ ಹಾನಿ ಸಂಭವಿಸಿದೆ . ಎಷ್ಟೋ ಜೀವಗಳು ಹತವಾಗಿವೆ .ಆದರೆ ಎರಡೂ ಕಡೆಯಲ್ಲಿ ಯುದ್ಧದಲ್ಲಿ ಭಾಗವಹಿಸಿ ಸಾವನ್ನಪ್ಪಿದ ಜನರ ದೇಹದಿಂದ ಹರಿದ ರಕ್ತವೊಂದೇ ಆಗಿದೆ.ಅಂದರೆ ಸಾವು ನೋವು ಯುದ್ಧದಲ್ಲಿ ಭಾಗವಹಿಸಿದ ಎರಡೂ ಕಡೆಯವರೂ ಅನುಭವಿಸುವುದು ಅನಿವಾರ್ಯವೇ ನಿಜ .ಆದರೂ ಗಡಿಯ ಮ್ಯಾಜಿಕ್ ಗೆ ಒಳಗಾಗಿ ತಮ್ಮ ದೇಶದ ಗಡಿ ರಕ್ಷಣೆ ಮಾಡಬೇಕೆಂದೋ, ಗಡಿ ವಿಸ್ತರಿಸಬೇಕೆಂದೋ ಭಾಗವಹಿಸಿದವರು ಜೀವತೆರಬೇಕಾದುದು ಅನಿವಾರ್ಯವಾದಾಗ ಆ ಜೀವತೆತ್ತವರು ವೀರಮರಣ ಹೊಂದಿದವರೆಂಬ

ಬಿರುದಿಗೆ ಪಾತ್ರರಾದರೆ ,ಎದುರಿನ ಪಕ್ಷದ ಸಾವುನೋವಿಗೆ ಕಾರಣರಾದವರು ,ಎದುರಾಳಿಗಳ ಜೀವ ತೆಗೆದವರು ವೀರಯೋಧರು ಎಂಬ ಗೌರವಕ್ಕೆ ಪಾತ್ರರಾದರು .

ಆದರೆ ಸಾವು ನೋವಿನ ವಿಷಯದಲ್ಲಿ ಎಲ್ಲರೂ ಅನುಭವಿಸುವ ನೋವು ಒಂದೇ ಆಗಿದೆ .ಎರಡೂ ಪಕ್ಷದ ಜನರೂ ಆಸ್ತಿಪಾಸ್ತಿಗಳ ಜೊತೆ ತಮ್ಮ ಬಂಧುಬಾಂಧವರನ್ನು ಕಳೆದುಕೊಂಡೋ ,ಅಥವಾ ಯುದ್ಧದಲ್ಲಿ ಸ್ವತಃ ತಾವೇ ನೋವನ್ನು ಅನುಭವಿಸುವುದು ಸಹಜವೇ ಆದರೂ ಒಡಲು ಅನುಭವಿಸುವ ಸಂಕಟಕೆ ಆಚೆ -ಈಚೆಯ ಗಡಿಗಳೆಂಬ ಯಾವುದೇ ತಾರತಮ್ಯವಿಲ್ಲ.ನೋವು ಅನುಭವಿಸುವಿಕೆ , ಕಳೆದುಕೊಳ್ಳುವಿಕೆಯ ನೋವು , ಸಾವುನೋವುಗಳು ,ಅಗಲುವಿಕೆಯ ಸಂಕಟ ಎಲ್ಲರಿಗೂ ಒಂದೇ ಆಗಿದೆ . ಅದು ಅನುಭವಿಸುವವರಿಗೆ ಮಾತ್ರವೇ ವೇದ್ಯವಾಗುತ್ತದೆ .

ಜಾತಿಮತ ಪಂಥಗಳ ಮೌಢ್ಯ ಅಂಧಾನುಕರಣೆಯ ಫಲವಾಗಿ ಅಂತಃಕಲಹಗಳು ಸಂಭವಿಸಿ ನಿಜವಾಗಿಯೂ ಶ್ರಮಪಡುತ್ತಿರುವ ಜನರ ಶ್ರಮಕ್ಕೆ ,ನೋವಿಗೆ ಬೆಲೆಯಿಲ್ಲ.ಈ ನೋವು ಕಾಲ ದೇಶಗಳನ್ನು ದಾಟಿ ಹೋಗಿದೆಯಾದ್ದರಿಂದ ನೋವಿನ ವ್ಯಾಪ್ತಿ ಹಿರಿದಾದುದು ಎಂದು ಕವಯಿತ್ರಿಅಭಿಪ್ರಾಯಪಟ್ಟಿದ್ದಾರೆ .

ನನ್ನಾಸೆ - ಇಂದುಮತಿ ಲಮಾಣಿ

ಪರಿಚಯ : ಇಂದುಮತಿ ಲಮಾಣಿಯವರು ವಿಜಯಪುರ ಜಿಲ್ಲೆಯ ಬರಟಗಿಯ ಮೂರನೇ ತಾಂಡಾದಲ್ಲಿ ೧೯೫೯ ರಲ್ಲಿ ಜನಿಸಿದರು . ತಾಯಿಲೋಕ (ಕವನಸಂಕಲನ) ಭಾವಲೋಕ (ಜನಪದ ಕವನ ಸಂಕಲನ)ಏಕಾದಶ (ಕಥಾಸಂಕಲನ) ಕೊರಡು ಕೊನರುವುದು ಬರಡು ಹಯನಹುದು (ಕಾದಂಬರಿ) ಇತ್ಯಾದಿ ಇವರು ಬರೆದ ಕೃತಿಗಳು . 'ನನ್ನ ಸುತ್ತಲಿನ ಸತ್ಯಗಳು ' ಇವರು ಬರೆದ ಇನ್ನೊಂದು ಕವನಸಂಕಲನ .ಪ್ರಸ್ತುತ ಪದ್ಯ ನನ್ನ ಸುತ್ತಲಿನ ಸತ್ಯಗಳು ಕವನಸಂಕಲನದಿಂದ ಆಯ್ದುಕೊಳ್ಳಲಾಗಿದೆ .

ಸಾರಾಂಶ (ಭಾವಾರ್ಥ)

ಪರೋಪಕಾರಾರ್ಥಂ ಇದಂ ಶರೀರಂ ಎಂಬ ಉಪನಿಷತ್ತಿನ ವಾಕ್ಯದಂತೆ ಮಾನವ ತನಗೆ ಲಭಿಸಿದ ಈ ಜೀವನದ ಸಾರ್ಥಕತೆಯನ್ನು ಪರರಿಗೆ ಉಪಕಾರಿಯಾಗಿ ಬದುಕಬೇಕು ಎಂಬ ಸದಾಶಯ ಈ ಕವಿತೆಯಲ್ಲಿ ಮೂಡಿರುವುದನ್ನು ಕಾಣಬಹುದು . ದಿನಕರ ದೇಸಾಯಿಯವರ ಕವನದಲ್ಲಿ ಬಂದಿರುವ ಹಾಗೆ 'ನನ್ನ ದೇಹದ ಬೂದಿ ಗಾಳಿಯಲಿ ತೇಲಿ ಬಿಡಿ ,ಹೋಗಿ ಬೀಳಲಿ ಬತ್ತ ಬೆಳೆಯುವಲ್ಲಿ ,ಬೂದಿ ಗೊಬ್ಬರದಿಂದ ತೆನೆಯೊಂದು ನೆಗೆದು ಬರೆ ಧನ್ಯವಾಯಿತು ಹುಟ್ಟು ಸಾವಿನಲ್ಲಿ ' ಎಂಬ ರೀತಿಯ ಆಶಯವನ್ನೇ ಈ ಕವಿತೆಯೂ ವ್ಯಕ್ತ ಪಡಿಸುವುದನ್ನು ಕಾಣಬಹುದು . ಜೀವನ ಚೈತನ್ಯದಾಯಕವಾಗಿರಬೇಕಾದರೆ ,ಸಂತಸದಿಂದ ನೆಮ್ಮದಿಯಿಂದ ಕೂಡಿರಬೇಕಾದರೆ ನಿಸ್ವಾರ್ಥವಾದ ತ್ಯಾಗ ಜೀವನವನ್ನು ರೂಢಿಸಿಕೊಳ್ಳಬೇಕು .ಕವಯಿತ್ರಿ ಈ ಕವನದಲ್ಲಿ ಹೇಳುವಹಾಗೆ ಗೆಲ್ಲಬೇಕು ಎಲ್ಲ ರೀತಿಯ ಸಂದರ್ಭಗಳನ್ನೂ ,ಸಮಸ್ಯೆಗಳನ್ನೂ ,ಸವಾಲುಗಳನ್ನೂ . ಮನುಷ್ಯನ ಮೇಲೆ ಒಂದಿಲ್ಲೊಂದು ರೀತಿಯ ಸಮಸ್ಯೆಗಳು

ಬಲೆ ಬೀಸಲು ಸದಾಹೊಂಚು ಹಾಕುತ್ತಿರುತ್ತವೆ . ಹಾಗೆ ಬೀಸಿಬರುವ ಬಲೆಯಿಂದ ಬಿಡಿಸಿಕೊಳ್ಳುವ ಚಾಕಚಕ್ಯತೆ ನಮ್ಮದಾಗಿರಬೇಕು. ಜೀವನ ಕೇವಲ ತನಗಾಗಿ ಮಾತ್ರವಲ್ಲ. ತನ್ನವರಿಗಾಗಿ,ತನ್ನ ಸುತ್ತಲಿನವರಿಗಾಗಿ ,ಪರರಿಗಾಗಿ ಎಂಬುದನ್ನು ಮನಗಾಣಬೇಕು .ಬೆಳಕು ನೀಡುವ ಬತ್ತಿ ತನ್ನನ್ನು ತಾನು ದಹಿಸಿಕೊಂಡು ಸುತ್ತಲಿನವರಿಗೆ ಬೆಳಕು ನೀಡುವುದು . ಆ ರೀತಿಯ ಬತ್ತಿಯ ಬದುಕು ತನ್ನದಾಗಬೇಕು . ಮಣ್ಣಲ್ಲಿ ಮಣ್ಣಾಗಿ , ಮಣ್ಣ ಆಶ್ರಯದಲ್ಲಿ ಬೆಳೆದು ಪುಣ್ಯವಂತರಿಗೆ ನೆರಳು ನೀಡುವ ಮರವಾಗಬೇಕು ,ನೆರಳಾಗಬೇಕು . ಸದಾಕಾಲ ಚಿಮ್ಮುವ ಎಂದೂ ಬತ್ತದ ವರತೆಯಾಗಿ , ದಾಹದಿಂದ ಬಳಲುತ್ತಿರುವವರಿಗೆ ತಂಪು ನೀಡುವ ಚಿಲುಮೆಯಾಗಬೇಕು .ಅಳುವ ಕಂದನ ಸಾಂತ್ವನಗೊಳಿಸುವ ಏಕೈಕ ಧ್ವನಿ ಅಮ್ಮನ ಜೋಗುಳ ,ಆ ಜೋಗುಳ ತಾನಾಗಬೇಕು .

ಮನುಷ್ಯರಲ್ಲಿ ಹುದುಗಿರುವ ಅಜ್ಞಾನ ಮೌಢ್ಯಗಳನ್ನು ತೊಡೆದು ಹಾಕುವ ವಾಗ್ದೇವಿಯ ಕೈಯಲ್ಲಿನ ಗ್ರಂಥ ತಾನಾಗಬೇಕು,ಆ ಮೂಲಕ ಅವರಲ್ಲಿರುವ ಅಜ್ಞಾನದ ಕತ್ತಲೆ ಹೋಗಲಾಡಿಸಿ ಧನ್ಯತೆಯನ್ನು ಹೊಂದಬೇಕು .

ಸಮಾಜದಲ್ಲಿ ಎಷ್ಟೋ ಜನರು ದಿಕ್ಕಿಲ್ಲದೆ ಅನಾಥರಂತೆ ನರಳಾಡುತ್ತಿದ್ದಾರೆ . ಅಂತವರಿಗೆ ಆಸರೆಯಾಗುವ ಊರುಗೋಲು ತಾನಾಗಬೇಕು . ಕೊನೆಗೊಮ್ಮೆ ಶಕ್ತಿಹೀನವಾಗಿ ಇನ್ನೊಬ್ಬರಿಗೆ ಹೊರೆಯಾಗುವುದಕ್ಕೆ ಮೊದಲೇ ತಾನು ಅಂತ್ಯ ಕಾಣಬೇಕು .

ಕೇವಲ ತನ್ನ ಸುಖಕ್ಕಾಗಿ ಹಂಬಲಿಸದೇ , ಪರರ ಒಳಿತಿಗಾಗಿಯೂ ಬದುಕುವುದರಲ್ಲ ಸಮಾಧಾನ ,ಸಂತೃಪ್ತಿಗಳನ್ನು ಕಾಣಬೇಕು ಎಂಬುದು ಕವಯಿತ್ರಿಯ ಹಂಬಲವಾಗಿದೆ .

ಒಂದೊಂದು ವಾಕ್ಯದಲ್ಲಿ ಉತ್ತರಿಸಿ.

೧. ಮಾನವ ಗಡಿಯನ್ನು ಹೇಗೆ ನಿರ್ಮಿಸಿಕೊಂಡ ?

ಮಾನವನು ಮಣ್ಣಿನ ಮಾಲೀಕ ತಾನಾದೆನೆಂಬ ಮತ್ತಿನಲಿ ಗೆರೆ ಎಳೆದು ಗಡಿ ನಿರ್ಮಿಸಿಕೊಂಡನು .

೨. ಮಾನವನ ಕಾದಾಟಕ್ಕೆ ಕಾರಣವೇನು ?

ಮಾನವ ಹಮ್ಮಿನಲಿ ಬೀಗಿದುದೇ ಕಾದಾಟಕ್ಕೆ ಕಾರಣ

೩.ಸಂಕಟಕೆ ಗಡಿ ಇಲ್ಲ ಕಾವ್ಯದ ಆಕರಗ್ರಂಥ ಯಾವುದು ?

'ಹೆಣೆದರೆ ಜೇಡನಂತೆ 'ಇದು ಸಂಕಟಕೆ ಗಡಿ ಇಲ್ಲ ಪದ್ಯದ ಆಕರಗ್ರಂಥ .

೪.ಅಜ್ಞಾನ ತೊಲಗಿಸಲು ಕವಯಿತ್ರಿ ಏನಾಗ ಬಯಸಿದ್ದಾರೆ ?

ಅಜ್ಞಾನ ತೊಲಗಿಸಲು ಕವಯಿತ್ರಿ ವಾಗ್ದೇವಿಯ ಕೈಯಲ್ಲಿಯ ಗ್ರಂಥ ಆಗಬೇಕೆಂದು ಬಯಸಿದ್ದಾರೆ .

೫.ಸದಾ ಚಿಮ್ಮುವ ಚಿಲುಮೆಯಾಗಬೇಕು .ಏಕೆ?

ದಾಹಗೊಂಡವರ ತನುವ ತಣಿಸಲು ಸದಾ ಚಿಮ್ಮುವ ಚಿಲುಮೆಯಾಗಬೇಕು .

ಮೂರು -ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿ.

೧. ಗಡಿಯ ಆಚೆ -ಈಚೆ ಜೀವಿಗಳು ಏಕೆ ಶವವಾದವು ?

ಬುದ್ಧಿಶಕ್ತಿ,ಮಾತಿನ ಶಕ್ತಿಯಿಂದ ಮೇಲಿನವನೆಂದುಕೊಂಡಿರುವ ಮಾನವ ತಾನೇ ಸರ್ವಾಧಿಕಾರಿ , ತನಗೆ ಮಾತ್ರ

ಭೂಮಿಯ ಹಕ್ಕಿದೆ ಎಂದು ಭ್ರಮಿಸಿದ್ದಾನೆ . ಅದೇ ಅಹಂಕಾರದಿಂದ ಗಡಿಯನ್ನು ನಿರ್ಮಿಸಿಕೊಂಡು ಭೇದಭಾವದ ಅಸಮಾನತೆಯನ್ನು ಸೃಷ್ಟಿಸಿದ್ದಾನೆ.ಇದರಿಂದಾಗಿ ಕಾದಾಟದಲ್ಲಿ ಎಷ್ಟೋಜೀವಗಳು ನಾಶವಾಗಿವೆ .ಗಡಿಯ ಆಚೆ -ಈಚೆ ಜೀವಿಗಳು ಶವವಾಗಿವೆ .

೨. ನನ್ನಾಸೆ ಕವನದಲ್ಲಿ ಕವಯಿತ್ರಿಯವರ ಆಸೆಗಳೇನು ?ವಿವರಿಸಿ.

ಎಲ್ಲರಿಗೂ ಬೆಳಕು ನೀಡುವ ಬತ್ತಿಯಾಗಬೇಕು , ಮಣ್ಣ ಮೇಲಿನ ಮರವಾಗಿ ಪುಣ್ಯವಂತರಿಗೆ ನೆರಳು ನೀಡುವಂತಾಗಬೇಕು ,ಸದಾ ಚಿಮ್ಮುವ ಚಿಲುಮೆಯಾಗಿ ದಾಹಗೊಂಡವರ ತಣಿಸಬೇಕು ,ಅಮ್ಮನ ಕಂಠದ ಜೋಗುಳವಾಗಿ ಅಳುವ ಕಂದನ ನಗಿಸಬೇಕು ,ಅಜ್ಞಾನ ತೊಲಗಿಸಲು ವಾಗ್ದೇವಿಯ ಕೈಯ ಗ್ರಂಥವಾಗಬೇಕು ,ದಿಕ್ಕಿಲ್ಲದೆ ನರಳಾಡುವ ದೀನರ ಊರುಗೋಲಾಗಬೇಕು ,ಇನ್ನೊಬ್ಬರಿಗೆ ಹೊರೆಯಾಗುವುದಕ್ಕೆ ಮುನ್ನವೇ ಅಂತ್ಯ ಕಾಣಬೇಕು ಇವೇ ಮೊದಲಾದ ಆಶಯಗಳನ್ನು ಕವಯಿತ್ರಿ ನನ್ನಾಸೆ ಕವನದಲ್ಲಿ ವ್ಯಕ್ತಪಡಿಸಿದ್ದಾರೆ.

ಸಂದರ್ಭ ಸಹಿತ ಸ್ವಾರಸ್ಯ ವಿವರಿಸಿ.

೧.''ಗೆರೆ ಎಳೆದು ಗಡಿ ಎಂದ''

ಈ ಮೇಲಿನ ವಾಕ್ಯವನ್ನು ದು.ಸರಸ್ವತಿಯವರು ಬರೆದ ಸಂಕಟಕೆ ಗಡಿ ಇಲ್ಲ ಎಂಬ ಪದ್ಯಭಾಗದಿಂದ ಆಯ್ದುಕೊಳ್ಳಲಾಗಿದೆ.ಈ ಮಾತನ್ನು ಕವಯಿತ್ರಿ ಹೇಳಿದ್ದಾರೆ.

ಸಂದರ್ಭ :ಮಾನವನು ತನ್ನನ್ನು ತಾನು ಈ ಭೂಮಿಯ ಮಾಲೀಕ ಎಂದು ಭಾವಿಸಿದ್ದಾನೆ .ಅದೇ ಅಹಂಭಾವದಲ್ಲಿ ,ಮತ್ತಿನಲ್ಲಿ ಗಡಿ ರೇಖೆಗಳನ್ನು ಸೃಷ್ಟಿಸಿ ಆ ಭೂಮಿ ತನಗೆ ಸೇರಿದ್ದು ಎಂಬ ಅಧಿಕಾರದ ದರ್ಪವನ್ನು ತೋರುವನು ಎಂದು ಕವಯಿತ್ರಿ ವಿವರಿಸಿದ್ದಾರೆ.

ಗಡಿಯು ಮಾನವ ನಿರ್ಮಿತ,ಮಾನವನೇ ಈ ತಾರತಮ್ಯವನ್ನು ಸೃಷ್ಟಿಸಿಕೊಂಡಿದ್ದಾನೆ ಎಂಬುದು ಇದರ ಸ್ವಾರಸ್ಯವಾಗಿದೆ.

೨.'' ಗಡಿಯೂ ಇಲ್ಲ ಆಚೆ ಈಚೆಯೂ ಇಲ್ಲ. ''

ಈ ಮೇಲಿನ ವಾಕ್ಯವನ್ನು ದು.ಸರಸ್ವತಿಯವರು ಬರೆದ ಸಂಕಟಕೆ ಗಡಿ ಇಲ್ಲ ಎಂಬ ಪದ್ಯಭಾಗದಿಂದ ಆಯ್ದುಕೊಳ್ಳಲಾಗಿದೆ.ಈ ಮಾತನ್ನು ಕವಯಿತ್ರಿ ಹೇಳಿದ್ದಾರೆ.

ಮನುಷ್ಯನ ಅಧಿಕಾರದ ಮೋಹದಿಂದ ಗಡಿ ವಿಸ್ತರಣೆಯ ದಾಹದಿಂದ ಸಾಕಷ್ಟು ಯುದ್ಧಗಳು ನಡೆದು ಅದರಲ್ಲಿ ಭಾಗವಹಿಸಿದವರು ಸಾವು ನೋವುಗಳನ್ನು ಅನುಭವಿಸುವಂತೆ ಆಯಿತು .ಜೀವ ತೆತ್ತವರು ವೀರ ಮರಣ ಹೊಂದಿದವರೆಂಬ ಬಿರುದಿಗೆ ಪಾತ್ರರಾದರೆ ಜೀವ ತೆಗೆದವರು ವೀರ ಯೋಧರಾದರು .ಆದರೆ ಸಾವು ನೋವಿನ ಮುಂದೆ ಎಲ್ಲರೂ ಒಂದೇ .ಒಡಲು ಅನುಭವಿಸುವ ಸಂಕಟಕೆ ಗಡಿಯೂ ಇಲ್ಲ .ಆಚೆ ಈಚೆಯೂ ಇಲ್ಲ ಎಂದು ಕವಯಿತ್ರಿ ವಿವರಿಸಿದ್ದಾರೆ.

ಸ್ವಾರಸ್ಯ: ಭೂಮಿಯ ವಿಚಾರದಲ್ಲಿ ಮಾನವ ಗಡಿ ನಿರ್ಮಿಸಿಕೊಳ್ಳಬಹುದು . ಆದರೆ ಒಡಲು ಅನುಭವಿಸುವ ಸಂಕಟದ

ವಿಚಾರದಲ್ಲಿ ಗಡಿ ನಿರ್ಮಿಸಲು ಸಾಧ್ಯವೇ?ಸಾವು ನೋವಿನ ವಿಚಾರದಲ್ಲಿ ಎಲ್ಲರೂ ಒಂದೇ ಎಂಬುದು ಪ್ರಸ್ತುತ ವಾಕ್ಯದ ಸ್ವಾರಸ್ಯವಾಗಿದೆ.

೩.ಪುಣ್ಯವಂತರಿಗೆ ನೆರಳಾಗಬೇಕು .''

ಈ ಮೇಲಿನ ವಾಕ್ಯವನ್ನು ಇಂದುಮತಿ ಲಮಾಣಿಯವರು ಬರೆದ ನನ್ನಾಸೆ ಕವನದಿಂದ ಆಯ್ದುಕೊಳ್ಳಲಾಗಿದೆ .ಈ ಮಾತನ್ನು ಕವಯಿತ್ರಿ ಹೇಳಿದ್ದಾರೆ.

ನಮ್ಮ ಜೀವನ ಚೈತನ್ಯದಾಯಕವಾಗಿಯೂ ಆನಂದಮಯವಾಗಿಯೂ ಇರಬೇಕಾದಲ್ಲಿ ನಿಸ್ವಾರ್ಥವಾದ ತ್ಯಾಗ ಜೀವನ ನಮ್ಮದಾಗಿರಬೇಕು . ಈ ನಿಟ್ಟಿನಲ್ಲಿ ಯೋಚಿಸುವ ಕವಯಿತ್ರಿಯವರು ತಾನು ಬೆಳಕು ನೀಡುವ ಬತ್ತಿಯಾಗಬೇಕೆಂದೂ ಮಣ್ಣಲ್ಲಿ ಮಣ್ಣಾಗಿ ಮಣ್ಣ ಮೇಲೊಂದು ಮರವಾಗಿ ಪುಣ್ಯವಂತರಿಗೆ ನೆರಳಾಗಬೇಕು ಎಂದು ಬಯಸಿದ್ದಾರೆ .

ಸ್ವಾರಸ್ಯ: ನಾವು ಇನ್ನೊಬ್ಬರ ಪಾಲಿಗೆ ದಾರಿ ದೀಪವಾದಾಗ ,ನಮ್ಮ ಜೀವನದಲ್ಲಿ ಸಾರ್ಥಕ್ಯವನ್ನು ಪಡೆಯಬಹುದು ಎಂಬುದು ಈ ವಾಕ್ಯದ ಸ್ವಾರಸ್ಯವಾಗಿದೆ .

೪. ''ದೀನರ ಊರುಗೋಲು ನಾನಾಗಬೇಕು .''

ಈ ಮೇಲಿನ ವಾಕ್ಯವನ್ನು ಇಂದುಮತಿ ಲಮಾಣಿಯವರು ಬರೆದ ನನ್ನಾಸೆ ಕವನದಿಂದ ಆಯ್ದುಕೊಳ್ಳಲಾಗಿದೆ .ಈ ಮಾತನ್ನು ಕವಯಿತ್ರಿ ಹೇಳಿದ್ದಾರೆ.

ಜೀವನದ ಸಾರ್ಥಕತೆ ಇರುವುದು ಪರರಿಗೆಉಪಯುಕ್ತವಾಗಿ ಬಾಳುವುದರಲ್ಲಿ , ನಿಸ್ವಾರ್ಥವಾದ ತ್ಯಾಗ ಜೀವನ ನಡೆಸುವುದರಲ್ಲಿ ಎಂದು ವಿವರಿಸಿರುವ ಕವಯಿತ್ರಿ ಆ ನಿಟ್ಟಿನಲ್ಲಿ ಸ್ವತಃ ಬದುಕಿ ಅಂತ್ಯ ಕಾಣುವ ಆಸೆ ಹೊಂದಿದ್ದಾರೆ . ಅಳುವ ಕಂದನ ನಗಿಸಲು ತಾನು ಅಮ್ಮನ ಕಂಠದ ಜೋಗುಳವಾಗಬೇಕೆಂದೂ ,ಮಾನವನ ಅಜ್ಞಾನ ತೊಲಗಿಸಲು ವಾಗ್ದೇವಿಯ ಕೈಯ ಗ್ರಂಥವಾಗಬೇಕೆಂದೂ ಮುಸ್ಸಂಜೆ ಹೊತ್ತಿನಲ್ಲಿ ದಿಕ್ಕಿಲ್ಲದೆ ನರಳಾಡುವ ದೀನರ ಊರುಗೋಲಾಗಬೇಕೆಂದೂ ಹಂಬಲಿಸಿದ್ದಾರೆ .

ಸ್ವಾರಸ್ಯ: ಪರೋಪಕಾರಾರ್ಥಂ ಇದಂ ಶರೀರಂ ಎನ್ನುವಂತೆ ಮಾನವನು ಬೇರೆಯವರಿಗೆ ಒಂದಿಲ್ಲೊಂದು ರೀತಿಯಲ್ಲಿ ಉಪಕಾರಿಗಳಾಗಿ ಬದುಕುದರಲ್ಲಿ ಸಂತೃಪ್ತಿ ಕಾಣಬೇಕು ಎಂಬುದು ಪ್ರಸ್ತುತ ವಾಕ್ಯದ ಸ್ವಾರಸ್ಯವಾಗಿದೆ .

ಬಿಟ್ಟ ಸ್ಥಳವನ್ನು ಸೂಕ್ತ ಪದದಿಂದ ತುಂಬಿ .

೧. ''ಮಾನವ ಎಂಬೋನು ------- ಮಾಲೀಕ'' .(ಮಣ್ಣಿಗೆ)

೨. ಸದಾ ಚಿಮ್ಮುತಲಿರುವ ------------- ನಾನಾಗಿ .(ಚಿಲುಮೆ)

೩. ಅಮ್ಮನ ಕಂಠದ ________ ನಾನಾಗಬೇಕು (ಜೋಗುಳ)

೪.ವಾಗ್ದೇವಿಯ ಕೈಯಲ್ಲಿಯ -------- ನಾನಾಗಿ ಧನ್ಯಳಾಗಬೇಕು .(ಗ್ರಂಥ )

**ಕೆಳಗಿನ ಪ್ರಶ್ನೆಗಳಿಗೆ ನಾಲ್ಕು ಆಯ್ಕೆಗಳನ್ನು ನೀಡಲಾಗಿದೆ. ಅವುಗಳಲ್ಲಿ ಸರಿಯಾದ ಉತ್ತರವನ್ನು ಆರಿಸಿ ಬರೆಯಿರಿ.**

೧.'ಯೋಧ' ಪದದ ತದ್ಭವ ರೂಪವಿದು ---

ಎ) ಸೈನಿಕ ಬಿ)ಜೋಧ ಸಿ)ಜವಾನ್ ಡಿ)ಯೋಧಾ

೨. 'ಆದನೆಂಬ' ಪದದಲ್ಲಿರುವ ಸಂಧಿಯಿದು

ಎ) ಆಗಮ ಬಿ)ಆದೇಶ ಸಿ)ಲೋಪ ಡಿ)ಗುಣ

೩. 'ವೀರ ಯೋಧ' ಈ ಪದದಲ್ಲಿರುವ ವೀರ ಎನ್ನುವುದು ಈ ವ್ಯಾಕರಣಾಂಶದ ಉದಾಹರಣೆಯಾಗಿದೆ

ಎ)ಗುಣವಾಚಕ ಬಿ)ಕ್ರಿಯಾವಿಶೇಷಣ ಸಿ) ಕೃದಂತ ಡಿ)ಧಾತು

೪. 'ವಾಗ್ದೇವಿ' ಪದವು ಈ ಸಂಧಿಗೆ ಉದಾಹರಣೆಯಾಗಿದೆ

ಎ) ಜಶ್ತ್ವ ಬಿ)ಆದೇಶ ಸಿ)ಶ್ಚುತ್ವ ಡಿ)ಗುಣ

೫.'ಊರುಗೋಲು' ಪದವು ಈ ಸಮಾಸದ ಉದಾಹರಣೆಯಾಗಿದೆ

ಎ)ತತ್ಪುರುಷ ಬಿ)ಕ್ರಿಯಾ ಸಿ)ಗಮಕ ಡಿ)ದ್ವಂದ್ವ

೬.'ಮುಸ್ಸಂಜೆ' ಪದವು ಈ ಸಮಾಸಕ್ಕೆ ಉದಾಹರಣೆಯಾಗಿದೆ

ಎ) ಅಂಶಿ ಬಿ)ಗಮಕ ಸಿ)ಕ್ರಿಯಾ ಡಿ)ದ್ವಿಗು

೭.'ಹೊರೆಯಾಗುವ' ಪದವು ಈ ಸಂಧಿಗೆ ಉದಾಹರಣೆಯಾಗಿದೆ

ಎ)ಲೋಪ ಬಿ)ಆಗಮ ಸಿ)ಆದೇಶ ಡಿ)ಜಶ್ತ್ವ

೮.'ಪುಣ್ಯವಂತ' ಪದವು ಈ ವ್ಯಾಕರಣಾಂಶದ ಉದಾಹರಣೆಯಾಗಿದೆ

ಎ) ಕೃದಂತಭಾವನಾಮ ಬಿ)ತದ್ಧಿತಾಂತ ಅವ್ಯಯ ಸಿ) ತದ್ಧಿತಾಂತ ಭಾವನಾಮ ಡಿ)ತದ್ಧಿತಾಂತನಾಮ

೯.'ನೆಲಕ್ಕೆ' ಪದದಲ್ಲಿರುವ ವಿಭಕ್ತಿಯಿದು

ಎ) ಪ್ರಥಮಾ ಬಿ)ದ್ವಿತೀಯಾ ಸಿ)ಚತುರ್ಥಿ ಡಿ) ಪಂಚಮಿ

೧೦.'ಪುಣ್ಯ' ಪದದ ತದ್ಭವ ರೂಪ -

ಎ)ಪುಣ್ಯಾ ಬಿ) ಹೂನ್ಯ ಸಿ)ಅದೃಷ್ಟ ಡಿ) ವಿಧಿ

೧೧.'ಆಟ' ಪದವು ಈ ವ್ಯಾಕರಣಾಂಶದ ಉದಾಹರಣೆಯಾಗಿದೆ

ಎ) ಕೃದಂತ ಭಾವನಾಮ ಬಿ)ಕೃದಂತಾವ್ಯಯ ಸಿ)ತದ್ಧಿತಾಂತಭಾವನಾಮ ಡಿ)ಕೃದಂತನಾಮ

೧೨.'ದಿಕ್ಕಿಲ್ಲದೆ' ಪದವು ಈ ಸಂಧಿಗೆ ಉದಾಹರಣೆಯಾಗಿದೆ

ಎ) ಗುಣ ಬಿ) ಲೋಪ ಸಿ)ಆಗಮ ಡಿ) ಆದೇಶ

೧೩.'ಬತ್ತದು' ಪದವು *ಈ ಮಾದರಿಯ ಕ್ರಿಯಾಪದದ ಉದಾಹರಣೆಯಾಗಿದೆ*

*ಎ) ನಿಷೇಧಾರ್ಥಕ ಬಿ)ಸಾಮಾನ್ಯಾರ್ಥಕ ಸಿ) ವಿಧ್ಯರ್ಥಕ ಡಿ) ಸಂಭಾವನಾರ್ಥಕ*

*೧೪. 'ಮೇಲೊಂದು' ಪದವು ಈ ಸಂಧಿಗೆ ಉದಾಹರಣೆಯಾಗಿದೆ*

*ಎ) ಗುಣ ಬಿ) ಆದೇಶ ಸಿ) ಲೋಪ ಡಿ) ಆಗಮ*

**೧. ಬಿ)ಜೋಧ ೨.ಸಿ)ಲೋಪ ೩.ಎ)ಗುಣವಾಚಕ ೪.ಎ)ಜಶ್ತ್ವ ೫. ಸಿ)ಗಮಕ ೬.ಎ)ಅಂಶಿ ೭. ಬಿ)ಆಗಮ ೮.ಸಿ)ತದ್ಧಿತಾಂತ ಭಾವನಾಮ ೯.ಸಿ)ಚತುರ್ಥಿ ೧೦. ಬಿ)ಹೂಸ್ತ್ಯ ೧೧.ಎ)ಕೃದಂತಭಾವನಾಮ ೧೨. ಬಿ)ಲೋಪ ೧೩. ಎ)ನಿಷೇಧಾರ್ಥಕ ೧೪.ಸಿ)ಲೋಪ**

********************************************************************